prajavani.net | prajavani
ಬುಧವಾರ, ಫೆಬ್ರುವರಿ 25, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 56 | ಪುಟ 16
www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಮೂನಿ ಅರ್ಧಶತಕ

ಆಸ್ಟ್ರೇಲಿಯಾದ ಬೆತ್ ಮೂನಿ (76;79ಎ) ಅವರು ಮಂಗಳವಾರ ಭಾರತ ವಿರುದ್ಧದ ಏಕದಿನ ಪಂದ್ಯದಲ್ಲಿ ಅರ್ಧಶತಕ ದಾಖಲಿಸಿದರು. ಆಸ್ಟ್ರೇಲಿಯಾ ಆರು ವಿಕೆಟ್‌ಗಳಿಂದ ಗೆದ್ದಿತು

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ ಸ್ಕ್ಯಾನ್ ಮಾಡಿ

ಸೆನ್ಸೆಕ್ಸ್ 82,225 | ನಿಫ್ಟಿ 25,424 | $/₹ 90.95 | ಚಿನ್ನ (Std. 10g) ₹1,66,600 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹2,80,100 (ಬೆಂಗಳೂರು)

ನೇಮಕಾತಿಗಾಗಿ ಭುಗಿಲೆದ್ದ ಆಕ್ರೋಶ

ಸಾವಿರಾರು ಉದ್ಯೋಗಾಕಾಂಕ್ಷಿಗಳಿಂದ ಧಾರವಾಡದಲ್ಲಿ ಭಾರಿ ಪ್ರತಿಭಟನೆ

ಅಧಿಕ ಖಾಲಿ ಹುದ್ದೆಗಳಿರುವ ಇಲಾಖೆಗಳು	
ಶಾಲಾ ಶಿಕ್ಷಣ	79,694
ಆರೋಗ್ಯ ಮತ್ತು ವೈದ್ಯಕೀಯ	37,572
ಒಳಾಡಳಿತ	28,188
ಉನ್ನತ ಶಿಕ್ಷಣ	13,599
ಹಿಂದುಳಿದ ವರ್ಗ	11,020
ಕಂದಾಯ	10,867
ಗ್ರಾಮೀಣಾಭಿವೃದ್ಧಿ	10,504
ಇತರೆ ಇಲಾಖೆಗಳು	93,437
ಒಟ್ಟು	2,84,881

ಪ್ರಜಾವಾಣಿ ವಾರ್ತೆ

ಧಾರವಾಡ: ಸರ್ಕಾರದ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆಗಳ ಭರ್ತಿಗೆ ಕೂಡಲೇ ಅಧಿಸೂಚನೆ ಪ್ರಕಟಿಸುವಂತೆ ಆಗ್ರಹಿಸಿ ಅಖಿಲ ಕರ್ನಾಟಕ ರಾಜ್ಯ ವಿದ್ಯಾರ್ಥಿಗಳ ಸಂಘಟನೆ (ಅಕ್ಸಾ) ನೇತೃತ್ವದಲ್ಲಿ ಮಂಗಳವಾರ ಇಲ್ಲಿ ಸಾವಿರಾರು ಸಂಖ್ಯೆಯಲ್ಲಿ ಉದ್ಯೋಗಾಕಾಂಕ್ಷಿಗಳು ಬೃಹತ್ ಪ್ರತಿಭಟನೆ ನಡೆಸಿದರು.

ರಾಜ್ಯ ಸರ್ಕಾರದ ವಿರುದ್ಧ ತೀವ್ರ ಆಕ್ರೋಶ ವ್ಯಕ್ತಪಡಿಸಿದ ಪ್ರತಿಭಟನಕಾರರು, ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ಮತ್ತು ಸಚಿವರ ಚಿತ್ರಗಳನ್ನು ದಹಿಸಿದರು. ಬಿಜೆಪಿ ಸಂಸದರು, ಶಾಸಕರ ಚಿತ್ರಗಳಿದ್ದ ಬ್ಯಾನರ್‌ಗಳನ್ನು ಹರಿದು ಹಾಕಿದರು.

‘ಭ್ರಷ್ಟಾಚಾರ ಮುಕ್ತವಾಗಿ ನೇಮಕಾತಿ ನಡೆಸಿ’, ‘ಯುವಜನರಿಗೆ ಕೆಲಸ ಕೊಡಿ’ ಪ್ರತಿಭಟನೆಗೆ ದನಿಗೂಡಿಸಿ ಸೇರಿದ್ದ ವಿದ್ಯಾರ್ಥಿಗಳು, ಯುವಜನರು ಘೋಷಣೆಗಳನ್ನು ಕೂಗಿದರು.

ಬೆಳಿಗ್ಗೆ 10ರಿಂದ ಸಂಜೆ 5ರವರೆಗೆ ಪ್ರತಿಭಟನೆ ನಡೆಯಿತು. ಬಹುತೇಕ ಕಡೆ ವಾಹನಗಳ ಸಂಚಾರಕ್ಕೆ ಅಡ್ಡಿಯಾಯಿತು. ಬೇಡಿಕೆ ಈಡೇರುವವರೆಗೆ ಪ್ರತಿಭಟನೆ ಹಿಂಪಡೆಯಲ್ಲ ಎಂದು ಪ್ರತಿಭಟನಕಾರರು ಘೋಷಿಸಿದರು. ಜುಬಿಲಿ ವೃತ್ತದಲ್ಲಿ ಪೊಲೀಸರು ಗುಂಪು ಚದುರಿಸಲು ಲಾಠಿ ಬೀಸಿದರು.

ಶ್ರೀನಗರ ವೃತ್ತದಿಂದ ಬೆಳಿಗ್ಗೆ 10.15ಕ್ಕೆ ‘ಅಕ್ಸಾ’ ಅಧ್ಯಕ್ಷ ಕಾಂತಕುಮಾರ್ ನೇತೃತ್ವದಲ್ಲಿ ಆರಂಭಗೊಂಡ ಮೆರವಣಿಗೆ ಜಯನಗರ ವೃತ್ತಕ್ಕೆ ತಲುಪಿದಾಗ, ಹೋರಾಟದ ಗೀತೆಗಳನ್ನು ಹಾಡಲಾಯಿತು. ಅಲ್ಲಲ್ಲಿ ಕೆಲವರು ನೀರಿನ ಬಾಟಲಿ, ಚಪ್ಪಲಿ, ಭಿತ್ತಿಪತ್ರಗಳನ್ನು ತೂರಿದರು.

> ರಾಜ್ಯದಲ್ಲಿ 2.84 ಲಕ್ಷ ಸರ್ಕಾರಿ ಹುದ್ದೆಗಳು ಖಾಲಿ ಇವೆ. 50 ಸಾವಿರ ಹುದ್ದೆಗಳ ನೇಮಕಾತಿಗೆ ಹಣಕಾಸು ಇಲಾಖೆ ಅನುಮೋದಿಸಿದೆ. ಅಧಿಸೂಚನೆ ಹೊರಡಿಸದಿದ್ದರೆ ಬೆಂಗಳೂರಿಗೆ ಪಾದಯಾತ್ರೆ ಹಮ್ಮಿಕೊಳ್ಳುತ್ತೇವೆ
> **ಕಾಂತಕುಮಾರ್**, ಅಧ್ಯಕ್ಷ, ಅಕ್ಸಾ

ಬಿಜೆಪಿ ನಾಯಕರಿಗೆ ‘ಗೋ ಬ್ಯಾಕ್’: ಬಿಜೆಪಿ ಬೆಂಬಲದೊಂದಿಗೆ ಪ್ರತಿಭಟನೆ ನಡೆಯಿತು. ಆದರೆ, ಜಯನಗರ ವೃತ್ತಕ್ಕೆ ಬಂದ ವಿಧಾನ ಮಂಡಲ ಉಭಯ ಸದನಗಳ ವಿರೋಧ ಪಕ್ಷದ ನಾಯಕರಾದ ಆರ್. ಅಶೋಕ, ಛಲವಾದಿ ನಾರಾಯಣ ಸ್ವಾಮಿ, ವಿಧಾನಸಭೆ ವಿರೋಧಪಕ್ಷದ ಉಪ ನಾಯಕ ಅರವಿಂದ ಬೆಲ್ಲದ ಅವರು ಭಾಷಣ ಮಾಡಲು ಅವಕಾಶ ನೀಡದೇ ‘ಗೋ ಬ್ಯಾಕ್’ ಎಂದು ಪ್ರತಿಭಟನಕಾರರು ಘೋಷಣೆ ಕೂಗಿದರು.

ಜಯನಗರ ವೃತ್ತದಿಂದ ಪ್ರತಿಭಟನಕಾರರ ಒಂದು ಗುಂಪು ಜುಬಿಲಿ ವೃತ್ತದತ್ತ ಸಾಗಿದರೆ, ಮತ್ತೊಂದು ಗುಂಪು ವೇದಿಕೆ ಕಾರ್ಯಕ್ರಮ ಆಯೋಜನೆ ಗೊಂಡಿದ್ದ ಮಿಚಿಗನ್ ಕಾಂಪೌಂಡ್ ಉದ್ಯಾನಕ್ಕೆ ಸಾಗಿತು.

▸7

ಧಾರವಾಡದ ಜುಬಿಲಿ ವೃತ್ತದಲ್ಲಿ ನಡೆದ ಪ್ರತಿಭಟನೆಯಲ್ಲಿ ಅಕ್ಸಾ ಅಧ್ಯಕ್ಷ ಕಾಂತಕುಮಾರ್ ಮಾತನಾಡಿದರು ಚಿತ್ರ: ಬಿ.ಎಂ.ಕೇದಾರನಾಥ

ನೇಮಕಾತಿಗೆ ಆಗ್ರಹಿಸಿ 6 ತಿಂಗಳಿನಿಂದ ಹೋರಾಟ

ಖಾಲಿ ಹುದ್ದೆಗಳಿಗೆ ನೇಮಕಾತಿ ನಡೆಸಲು ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿ ವಿದ್ಯಾರ್ಥಿಗಳು, ಯುವಜನರು ಕಳೆದ ವರ್ಷ ಸೆಪ್ಟೆಂಬರ್ 25ರಂದೂ ಬೃಹತ್ ಪ್ರತಿಭಟನೆ ಕೈಗೊಂಡಿದ್ದರು.

‘ಅಕ್ಸಾ’ ಸಂಘಟನೆ ನೇತೃತ್ವದಲ್ಲಿ ಮತ್ತೆ ಡಿಸೆಂಬರ್ 8ರಂದು ಪ್ರತಿಭಟನೆಗೆ ಮುಂದಾಗಿದ್ದಾಗ ಪೊಲೀಸರು ಅನುಮತಿ ನೀಡಿರಲಿಲ್ಲ. ಸಂಘಟನೆಯ ಮುಖಂಡರು ನ್ಯಾಯಾಲಯದ ಮೆಟ್ಟಿಲು ಏರಿದ್ದರು. ಪೊಲೀಸರು ಅನುಮತಿ ನಿರಾಕರಿಸಿದರೂ ಎಐಯುಟಿಯುಸಿ ಸೇರಿ ವಿವಿಧ ಸಂಘಟನೆಗಳ ನೇತೃತ್ವದಲ್ಲಿ ಡಿಸೆಂಬರ್ 10ರಂದು ಪ್ರತಿಭಟನೆ ನಡೆದಿತ್ತು. ಆಗ ಪೊಲೀಸರು ಕೆಲವರನ್ನು ವಶಕ್ಕೆ ಪಡೆದು, ನಂತರ ಬಿಡುಗಡೆ ಮಾಡಿದ್ದರು.

> ಒಳ ಮೀಸಲಾತಿ ಕಾರಣದಿಂದ ನೇಮಕಾತಿಗಳನ್ನು ತಾತ್ಕಾಲಿಕವಾಗಿ ನಿಲ್ಲಿಸಬೇಕಾಯಿತು. ಹುದ್ದೆಗಳನ್ನು ತುಂಬುವ ಪ್ರಕ್ರಿಯೆ ನಡೆಯುತ್ತಿದೆ. ಎರಡೂವರೆ ವರ್ಷದಲ್ಲಿ 40 ಸಾವಿರಕ್ಕೂ ಹೆಚ್ಚು ನೇಮಕಾತಿ ಮಾಡಲಾಗಿದೆ. ಉಳಿದ ಹುದ್ದೆಗಳನ್ನು ಪಾರದರ್ಶಕವಾಗಿ ಕಾಲಮಿತಿ ಒಳಗೆ ಭರ್ತಿ ಮಾಡಲಾಗುವುದು
> **ಸಿದ್ದರಾಮಯ್ಯ**, ಮುಖ್ಯಮಂತ್ರಿ

> ಸರ್ಕಾರದಲ್ಲಿ ಖಾಲಿ ಇರುವ 2.84 ಲಕ್ಷ ಹುದ್ದೆಗಳನ್ನು ಭರ್ತಿ ಮಾಡದಿದ್ದರೂ ಸಂಪುಟ ದರ್ಜೆಯ ಹುದ್ದೆಗಳು ಮಾತ್ರ ವೇಗವಾಗಿ ಭರ್ತಿಯಾಗುತ್ತಿವೆ. ಇದು ಕಾಂಗ್ರೆಸ್ ಆಡಳಿತದ ವೈಖರಿ
> **ಎಚ್.ಡಿ.ಕುಮಾರಸ್ವಾಮಿ**, ಕೇಂದ್ರ ಸಚಿವ

> ಯುವ ಜನರು ಎರಡೂವರೆ ವರ್ಷಗಳಿಂದ ಕಣ್ಣೀರು ಹಾಕುತ್ತಿದ್ದಾರೆ. ಉದ್ಯೋಗ ಕೇಳಿದವರ ಮೇಲೆ ಕಳೆದ ಬಾರಿ ಲಾಠಿ ರುಚಿ ತೋರಿಸಿದಿರಿ. ಯುವ ಜನರ ಜೀವನದ ಜತೆ ಚೆಲ್ಲಾಟ ನಿಲ್ಲಿಸಿ
> **ಬಿ.ವೈ.ವಿಜಯೇಂದ್ರ**, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ

ತಕ್ಷಣವೇ ಸಿಗಲಿದೆ ಮ್ಯುಟೇಷನ್ ಪ್ರತಿ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಮನೆಯಲ್ಲಿ ಕುಳಿತೇ ಅರ್ಜಿ, ಏಳನೇ ದಿನಕ್ಕೆ ಖಾತೆ ಬದಲಾವಣೆ
- ಶೇ 98 ರಷ್ಟು ಖಾತೆ ಬದಲಾವಣೆ ಸ್ವಯಂಚಾಲಿತ

ಬೆಂಗಳೂರು: ಕೃಷಿ ಭೂಮಿ ಸೇರಿದಂತೆ ಯಾವುದೇ ಸ್ವತ್ತಿಗೆ ಸ್ವಯಂ ಚಾಲಿತವಾಗಿ ಮ್ಯುಟೇಷನ್ ಪಡೆಯಬಹುದಾದ ಹೊಸ ವ್ಯವಸ್ಥೆಗೆ ಕಂದಾಯ ಸಚಿವ ಕೃಷ್ಣಬೈರೇಗೌಡ ಅವರು ಮಂಗಳವಾರ ಚಾಲನೆ ನೀಡಿದರು.

ಎಲ್ಲ 7 ದಿನಗಳ ಮತ್ತು 15 ದಿನಗಳ ನೋಟಿಸ್ ಅವಧಿ ಹೊಂದಿರುವ ಮ್ಯುಟೇಷನ್‌ಗಳನ್ನು ನೋಟಿಸ್ ಅವಧಿ ಮುಕ್ತಾಯವಾದ ನಂತರ ಮಾನವ ಹಸ್ತಕ್ಷೇಪವಿಲ್ಲದೆ ಸ್ವಯಂ ಚಾಲಿತ ತಂತ್ರಾಂಶದ ಮೂಲಕ ಸರ್ವರ್ ಸಹಿ ಇರುವ ಮ್ಯುಟೇಷನ್ ಪಡೆಯಬಹುದಾಗಿದೆ. ಇದರಿಂದಾಗಿ ಕ್ರಯ, ವಿಭಾಗ, ದಾನ, ಪೌತಿ, ಉಯಿಲುಗಳ ಮ್ಯುಟೇಷನ್ ಸ್ವಯಂಚಾಲಿತವಾಗಿ ಪಡೆಯಬಹುದು.

ಒಂದು ವೇಳೆ 7 ಕೆಲಸದ ದಿನಗಳು ಅಥವಾ 15 ಕೆಲಸದ ದಿನಗಳ ನೋಟಿಸ್ ಅವಧಿಯೊಳಗೆ ಕಂದಾಯ ನಿರೀಕ್ಷಕರು (ಸರ್ಕಾರಿ ಆಕ್ಷೇಪ) ಅಥವಾ ಸಾರ್ವಜನಿಕರು ತಕರಾರು ಸಲ್ಲಿಸಿದರೆ, ಅಂತಹ ಮ್ಯುಟೇಷನ್‌ಗಳನ್ನು ಪೂರ್ಣಗೊಳಿಸದೆ, ಆರ್‌ಸಿಸಿಎಂಎಸ್ ತಂತ್ರಾಂಶದ ಮೂಲಕ ತಹಶೀಲ್ದಾರ್ ನ್ಯಾಯಾಲಯಕ್ಕೆ ಪ್ರಕರಣವನ್ನು ವರ್ಗಾಯಿಸಲಾಗುತ್ತದೆ. ತಹಶೀಲ್ದಾರರ ನಿರ್ಧಾರದಂತೆ ಮುಂದಿನ ಕ್ರಮ ಕೈಗೊಳ್ಳಲಾಗುತ್ತದೆ.

ಈ ಹಿಂದೆ ಮ್ಯುಟೇಷನ್‌ಗಳಿಗೆ ಆಕ್ಷೇಪಣೆ ಇದ್ದಲ್ಲಿ ಅಥವಾ ಅನುಮೋದನೆ ನೀಡಬೇಕಾದಲ್ಲಿ, ರಾಜಸ್ವ ನಿರೀಕ್ಷಕರು ಖುದ್ದಾಗಿ ತಾಲ್ಲೂಕು ಕಚೇರಿಗಳಿಗೆ ಬಂದು ಸಲ್ಲಿಸಬೇಕಾಗಿತ್ತು. ಈಗ ರಾಜಸ್ವ ನಿರೀಕ್ಷಕರಿಗೆ ಲಾಗಿನ್ ನೀಡಿದ್ದು, ಯಾವುದೇ ಸ್ಥಳದಿಂದ ಆಕ್ಷೇಪಣೆ ಸಲ್ಲಿಸಲು ತಂತ್ರಾಂಶದಲ್ಲಿ ಅವಕಾಶ ನೀಡಲಾಗಿದೆ.

ಜನಪರ ಆಡಳಿತದ ಮತ್ತೊಂದು ಹೆಜ್ಜೆ: ಈ ಕುರಿತು ಮಾತನಾಡಿದ ಸಚಿವ ಕೃಷ್ಣ ಬೈರೇಗೌಡ, ‘ಈ ಹೊಸ ವ್ಯವಸ್ಥೆಯಿಂದ ಜನಪರ ಮತ್ತು ಸರಳ ಆಡಳಿತವನ್ನು ಸಾರ್ವಜನಿಕರ ಮನೆ ಬಾಗಿಲಿಗೇ ತಲುಪಿಸಬೇಕು ಎಂಬ ಸರ್ಕಾರದ ಉದ್ದೇಶ ಈಡೇರಿದೆ’ ಎಂದು ಹೇಳಿದರು.

▸7

ನ್ಯಾಯಾಂಗ ಅಧಿಕಾರಿಗಳ ನಿಯೋಜನೆಗೆ ಅನುಮತಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಪಶ್ಚಿಮ ಬಂಗಾಳದಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಯ (ಎಸ್‌ಐಆರ್) ಭಾಗವಾಗಿ ಸಲ್ಲಿಕೆಯಾಗಿರುವ 50 ಲಕ್ಷ ದೂರುಗಳು ಮತ್ತು ಆಕ್ಷೇಪಗಳ ವಿಚಾರಣೆಗಾಗಿ ಸಿವಿಲ್ ನ್ಯಾಯಾಧೀಶರನ್ನು ನಿಯೋಜಿಸಲು ಕಲ್ಕತ್ತ ಹೈಕೋರ್ಟ್‌ಗೆ ಸುಪ್ರೀಂ ಕೋರ್ಟ್ ಮಂಗಳವಾರ ಅನುಮತಿ ನೀಡಿದೆ.

ಜಾರ್ಖಂಡ್ ಮತ್ತು ಒಡಿಶಾದ ನ್ಯಾಯಾಂಗ ಅಧಿಕಾರಿಗಳ ಸೇವೆಯನ್ನೂ ಬಳಸಿಕೊಳ್ಳಬಹುದು ಎಂದೂ ಕೋರ್ಟ್ ತಿಳಿಸಿದೆ. ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಮತ್ತು ನ್ಯಾಯಮೂರ್ತಿಗಳಾದ ಜಾಯ್‌ಮಾಲ್ಯಾ ಬಾಗ್ಚಿ ಮತ್ತು ವಿಪುಲ್ ಎಂ.ಪಂಚೋಲಿ ಅವರನ್ನು ಒಳಗೊಂಡ ನ್ಯಾಯಪೀಠವು ಫೆ. 28ರಂದು ಮತದಾರರ ಅಂತಿಮ ಪಟ್ಟಿಯನ್ನು ಪ್ರಕಟಿಸಲು ಚುನಾವಣಾ ಆಯೋಗಕ್ಕೆ ಅನುಮತಿ ನೀಡಿತು.

▸5

ಯುವ ಕಾಂಗ್ರೆಸ್ ಅಧ್ಯಕ್ಷ ಚಿಬ್ ಬಂಧನ

ನವದೆಹಲಿ (ಪಿಟಿಐ): ಎ.ಐ ಶೃಂಗಸಭೆಯ ‘ಎಕ್ಸ್‌ಪೋ’ ನಡೆಯುತ್ತಿದ್ದ ಸಭಾಂಗಣದಲ್ಲಿ ಇತ್ತೀಚೆಗೆ ಪ್ರತಿಭಟನೆ ನಡೆಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಯುವ ಕಾಂಗ್ರೆಸ್ ಘಟಕದ ಅಧ್ಯಕ್ಷ ಉದಯ್ ಭಾನು ಚಿಬ್ ಅವರನ್ನು ದೆಹಲಿ ಪೊಲೀಸರು ಮಂಗಳವಾರ ಬಂಧಿಸಿದ್ದಾರೆ.

▸11

ಚಿನಕುರುಳಿ ಪ್ರಕಾಶ್ ಶೆಟ್ಟಿ

ಹಾಲು ಪ್ರೋತ್ಸಾಹಧನ ₹7ಕ್ಕೆ: ಪ್ರಸ್ತಾವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಾಲು ಉತ್ಪಾದಕರಿಗೆ ನೀಡುತ್ತಿರುವ ಪ್ರೋತ್ಸಾಹಧನವನ್ನು ಪ್ರತಿ ಲೀಟರ್‌ಗೆ ₹5 ರಿಂದ ₹7ಕ್ಕೆ ಹೆಚ್ಚಿಸಬೇಕು ಎಂದು ಕರ್ನಾಟಕ ಹಾಲು ಮಹಾಮಂಡಲ (ಕೆಎಂಎಫ್) ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಿದೆ.

ಬೆಳಗಾವಿಯಲ್ಲಿ ಡಿಸೆಂಬರ್‌ನಲ್ಲಿ ನಡೆದ ಅಧಿವೇಶನದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರೋತ್ಸಾಹಧನ ಏರಿಸುವುದಾಗಿ ಘೋಷಿಸಿದ್ದರೂ ಜಾರಿಯಾಗಿಲ್ಲ. ಬಜೆಟ್‌ನಲ್ಲಿ ಪ್ರಕಟಿಸಿ ಜಾರಿಗೊಳಿಸುವ ನಿರೀಕ್ಷೆ ಇದೆ.

ರಾಜ್ಯದಲ್ಲಿ ಹಾಲಿನ ಉತ್ಪಾದನೆ ಪ್ರಮಾಣ ಗಣನೀಯವಾಗಿ ಏರಿಕೆಯಾಗಿದ್ದು, ಪ್ರತಿನಿತ್ಯ 1 ಕೋಟಿ ಲೀಟರ್ ಹಾಲನ್ನು ಕೆಎಂಎಫ್ ಸಂಗ್ರಹ ಮಾಡುತ್ತಿದೆ. ಪ್ರೋತ್ಸಾಹಧನ ಏರಿಕೆಯಿಂದ ಹಾಲಿನ ಉತ್ಪಾದನೆ ಪ್ರಮಾಣವನ್ನು ಇನ್ನಷ್ಟು ಹೆಚ್ಚಿಸುವ ಗುರಿಯನ್ನು ಮಹಾಮಂಡಲ ಇಟ್ಟುಕೊಂಡಿದೆ.

₹730 ಕೋಟಿ ನೆರವು: ‘ನಮ್ಮ ಸರ್ಕಾರ ಪ್ರತಿ ಲೀಟರ್ ಹಾಲಿಗೆ ₹3 ಏರಿಕೆ ಮಾಡಿತ್ತು. ಸಹಾಯಧನ ಮೊತ್ತವನ್ನು ₹400 ಹೆಚ್ಚಳ ಮಾಡಿತ್ತು. ಇದನ್ನು ನೇರವಾಗಿ ರೈತರ ಖಾತೆಗೆ ವರ್ಗ ಮಾಡುತ್ತಿದ್ದೇವೆ. ಮೇವಿನ ದರ, ಪಶು ಆಹಾರ ಸಹಿತ ಇತರೆ ಉತ್ಪನ್ನಗಳ ದರ ಏರಿಕೆಯಿಂದ ಪ್ರೋತ್ಸಾಹಧನ ಹೆಚ್ಚಿಸುವ ಬೇಡಿಕೆ ಇದೆ. ಚುನಾವಣೆ ಪ್ರಣಾಳಿಕೆಯಲ್ಲಿ ಘೋಷಿಸಿದಂತೆ ಪ್ರೋತ್ಸಾಹಧನ ₹7ಕ್ಕೆ ಹೆಚ್ಚಳ ಮಾಡುತ್ತೇವೆ’ ಎಂದು ಸಿದ್ದರಾಮಯ್ಯ ಹೇಳಿದ್ದರು.

ಕರ್ನಾಟಕದಲ್ಲಿ ಸದ್ಯ 16 ಹಾಲು ಒಕ್ಕೂಟಗಳ ವ್ಯಾಪ್ತಿಯ 9 ಲಕ್ಷ ರೈತರು ನಿತ್ಯ ಹಾಲು ಪ್ರೋತ್ಸಾಹಧನ ಪಡೆಯುತ್ತಿದ್ದಾರೆ. ಪ್ರತಿ ವರ್ಷ ₹1,900 ಕೋಟಿಯನ್ನು ರೈತರ ಖಾತೆಗೆ ನೇರವಾಗಿ ವರ್ಗಾಯಿಸಲಾಗುತ್ತಿದೆ. ಪ್ರತಿ ಲೀಟರ್‌ಗೆ ₹2 ಏರಿಕೆಯಾದರೆ ವರ್ಷಕ್ಕೆ ₹730 ಕೋಟಿಯಷ್ಟು ಹೆಚ್ಚಿನ ಮೊತ್ತವನ್ನು ಬೊಕ್ಕಸದಿಂದ ಭರಿಸಬೇಕಾಗುತ್ತದೆ. ರೈತರಿಗೆ ಸದ್ಯ ಪ್ರತಿ ಲೀಟರ್‌ಗೆ ₹38 ವರೆಗೂ ದರ ಸಿಗುತ್ತಿದೆ.

‘ಬಜೆಟ್ ಪೂರ್ವಭಾವಿ ಸಭೆಯಲ್ಲಿ ಪ್ರೋತ್ಸಾಹಧನ ಏರಿಕೆ ಪ್ರಸ್ತಾವವನ್ನು ಸಲ್ಲಿಸಲಾಗಿದೆ. ಇದಕ್ಕೆ ಪೂರಕವಾಗಿ ಸ್ಪಂದನೆಯೂ ಸಿಕ್ಕಿದೆ’ ಎಂದು ಕೆಎಂಎಫ್ ವ್ಯವಸ್ಥಾಪಕ ನಿರ್ದೇಶಕ ಬಿ.ಶಿವಸ್ವಾಮಿ ತಿಳಿಸಿದರು.

ಕೇರಳ ಶೀಘ್ರದಲ್ಲೇ ಆಗಲಿದೆ ‘ಕೇರಳಂ’

ಪ್ರಜಾವಾಣಿ ವಾರ್ತೆ

ನವದೆಹಲಿ: ಕೇರಳ ಶೀಘ್ರದಲ್ಲೇ ‘ಕೇರಳಂ’ ಆಗಲಿದೆ. ರಾಜ್ಯದ ಮರುನಾಮಕರಣ ಪ್ರಕ್ರಿಯೆಗೆ ಕೇಂದ್ರ ಸರ್ಕಾರ ಮಂಗಳವಾರ ಚಾಲನೆ ನೀಡಿದೆ.

ಕೇರಳ ಸೇರಿದಂತೆ ಪಂಚ ರಾಜ್ಯಗಳ ಚುನಾವಣಾ ವೇಳಾಪಟ್ಟಿ ಪ್ರಕಟಕ್ಕೆ ತಿಂಗಳು ಉಳಿದಿರುವಾಗ, ದಕ್ಷಿಣದ ರಾಜ್ಯದ ಹೆಸರು ಬದಲಾವಣೆಯ ನಿರ್ಧಾರವನ್ನು ಪ್ರಧಾನಿ ನರೇಂದ್ರ ಮೋದಿ ಅಧ್ಯಕ್ಷತೆಯಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ತೆಗೆದುಕೊಳ್ಳಲಾಯಿತು. ಪ್ರಧಾನಿಯವರ ಹೊಸ ಕಚೇರಿ ‘ಸೇವಾ ತೀರ್ಥ’ದಲ್ಲಿ ಮೊದಲ ಸಂಪುಟ ಸಭೆ ನಡೆಯಿತು.

ಗುಂಪು ಹಲ್ಲೆ; ವಿದ್ಯಾರ್ಥಿ ಸಾವು

7 ಬಾಲಕರು ವಶಕ್ಕೆ; ಹಲ್ಲೆ ವೇಳೆ ಗಾಂಜಾ ಸೇವಿಸಿದ್ದ ಶಂಕೆ

ಪ್ರಜಾವಾಣಿ ವಾರ್ತೆ

ಸಂಕೇತ್

ಶಿವಮೊಗ್ಗ: ಕ್ರಿಕೆಟ್ ಆಟದ ವಿಚಾರಕ್ಕೆ ಸಂಬಂಧಿಸಿದಂತೆ ಸಹಪಾಠಿ ಜೊತೆ ಗುಂಪೊಂದು ಜಗಳಕ್ಕೆ ಬಂದಾಗ ಬಿಡಿಸಲು ಹೋದ ಸಂಕೇತ್ (15) ಎಂಬ ಹತ್ತನೇ ತರಗತಿ ವಿದ್ಯಾರ್ಥಿ ಹಲ್ಲೆಗೊಳಗಾಗಿ ಮೃತಪಟ್ಟಿರುವ ಘಟನೆ ನಗರದ ಹೊರ ವಲಯದ ಊರಗಡೂರಿನಲ್ಲಿ ನಡೆದಿದೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಕಾನೂನು ಸಂಘರ್ಷಕ್ಕೆ ಒಳಗಾದ ಏಳು ಮಂದಿ ಬಾಲಕರನ್ನು ಇಲ್ಲಿನ ತುಂಗಾ ನಗರ ಠಾಣೆ ಪೊಲೀಸರು ವಶಕ್ಕೆ ಪಡೆದಿದ್ದಾರೆ ಎಂದು ಎಸ್ಪಿ ಬಿ.ನಿಖಿಲ್ ‘ಪ್ರಜಾವಾಣಿ’ಗೆ ತಿಳಿಸಿದ್ದಾರೆ.

ಊರಗಡೂರು ಪಕ್ಕದ ಸೂಳೆಬೈಲಿನ ದುರ್ಗಮ್ಮನ ಬೀದಿ ನಿವಾಸಿ ಸಂಕೇತ್, ಎಸ್ಸೆಸ್ಸೆಲ್ಸಿ ಪರೀಕ್ಷೆ ಕಾರಣದಿಂದ ಸೋಮವಾರ ರಾತ್ರಿ ಶಾಲೆಯಲ್ಲಿ ವಿಶೇಷ ತರಗತಿ ಮುಗಿಸಿ ಸ್ನೇಹಿತನ ಜೊತೆ ಮರಳುತ್ತಿದ್ದಾಗ ಘಟನೆ ನಡೆದಿದೆ.

ಎರಡು ದಿನದ ಹಿಂದೆ ಕ್ರಿಕೆಟ್ ಟೂರ್ನಿ ವೇಳೆ ನಡೆದಿದ್ದ ಜಗಳ ಪ್ರಸ್ತಾಪಿಸಿದ್ದ ಗುಂಪು ಸ್ನೇಹಿತನ ಮೇಲೆ ಹಲ್ಲೆಗೆ ಮುಂದಾಗಿದ್ದು, ಜಗಳ ಬಿಡಿಸಲು ಹೋದ ಸಂಕೇತ್ ಮೇಲೂ ಹಲ್ಲೆ ನಡೆಸಿತ್ತು. ಎದೆಯ ಬಳಿ ಬಿದ್ದ ಪೆಟ್ಟಿನಿಂದ ಆತ ಕುಸಿದುಬಿದ್ದಿದ್ದ. ಪಾಲಕರು ಬಂದು ಆಸ್ಪತ್ರೆಗೆ ಕರೆದೊಯ್ಯುವಾಗ ಸಾವಿಗೀಡಾಗಿದ್ದಾನೆ.

ಹಲ್ಲೆಯಿಂದ ಸಂಕೇತ್‌ನ ಸ್ನೇಹಿತನೂ ಗಾಯಗೊಂಡಿದ್ದಾನೆ. ಮೆಗ್ಗಾನ್ ಆಸ್ಪತ್ರೆಯಲ್ಲಿ ಸಂಕೇತ್‌ನ ಶವ ಪರೀಕ್ಷೆ ನಡೆಸಿ ಮಂಗಳವಾರ ಮೆರವಣಿಗೆಯಲ್ಲಿ ಊರಿಗೆ ಶವ ಕೊಂಡೊಯ್ಯಲಾಯಿತು. ಈ ವೇಳೆ ಬಿಗುವಿನ ಸ್ಥಿತಿ ಇತ್ತು.

ಏಳು ಬಾಲಕರು ವಶಕ್ಕೆ: ‘ಕ್ರಿಕೆಟ್ ಆಟ ಕುರಿತ ವೈಮನಸ್ಯ ಹಲ್ಲೆಗೆ ಕಾರಣ. ವಶಕ್ಕೆ ಪಡೆದಿರುವ ಬಾಲಕರು ಸಂಕೇತ್ ಓದುತ್ತಿದ್ದ ಶಾಲೆಯ ಹಳೆಯ ವಿದ್ಯಾರ್ಥಿಗಳು. ಎಲ್ಲ ಶಾಲೆ ಬಿಟ್ಟಿದ್ದಾರೆ’ ಎಂದು ಎಸ್‌ಪಿ ಹೇಳಿದರು.

‘ಗಲಾಟೆ ನಡೆದಿದ್ದ ಸಂದರ್ಭದಲ್ಲಿ ಕೆಲ ಬಾಲಕರು ಗಾಂಜಾ ಸೇವಿಸಿರುವ ಶಂಕೆ ಇದೆ. ಅವರ ರಕ್ತದ ಮಾದರಿಯನ್ನು ಸಂಗ್ರಹಿಸಿ ಪರೀಕ್ಷೆಗೆ ಕಳುಹಿಸಲಾಗಿದೆ’ ಎಂದೂ ಪ್ರತಿಕ್ರಿಯಿಸಿದರು.

ರಸ್ತೆ ತಡೆದು ಪ್ರತಿಭಟನೆ; ಪರಿಹಾರ ಘೋಷಣೆ

ಮೃತ ಬಾಲಕನ ಕುಟುಂಬಕ್ಕೆ ಪರಿಹಾರ ಕೊಡಬೇಕು, ಆ ಪ್ರದೇಶದಲ್ಲಿ ಗಾಂಜಾ ಹಾವಳಿ ತಡೆಗೆ ಆಗ್ರಹಿಸಿ ಸ್ಥಳೀಯರು ಊರಗಡೂರು– ಮತ್ತೂರು ರಸ್ತೆಯಲ್ಲಿ ಪ್ರತಿಭಟಿಸಿದರು.

ಶಾಸಕ ಎಸ್.ಎನ್.ಚನ್ನಬಸಪ್ಪ, ಮಾಜಿ ಡಿಸಿಎಂ ಕೆ.ಎಸ್.ಈಶ್ವರಪ್ಪ ಬೆಂಬಲ ವ್ಯಕ್ತಪಡಿಸಿದರು.

ಸ್ಥಳಕ್ಕೆ ಬಂದ ಜಿಲ್ಲಾಧಿಕಾರಿ ಪ್ರಭುಲಿಂಗ ಕವಳಿಕಟ್ಟಿ, ಬಾಲಕನ ಕುಟುಂಬಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ₹10 ಲಕ್ಷ, ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ₹5 ಲಕ್ಷ ಪರಿಹಾರ ಘೋಷಿಸಿರುವ ಬಗ್ಗೆ ಮಾಹಿತಿ ನೀಡಿದರು. ನಂತರ ಪ್ರತಿಭಟನೆ ಹಿಂಪಡೆಯಲಾಯಿತು.

ಮುಖ್ಯಾಂಶಗಳು
- ಶಿವಮೊಗ್ಗದ ಊರಗಡೂರಿನಲ್ಲಿ ಘಟನೆ
- ಸಂಕೇತ್ ಸ್ನೇಹಿತನಿಗೂ ಗಾಯ

ಇ.ಸಿ–ಎಸ್‌ಇಸಿ: ಸಮನ್ವಯಕ್ಕೆ ನಿರ್ಧಾರ

ನವದೆಹಲಿ (ಪಿಟಿಐ): ಲೋಕಸಭೆ ಮತ್ತು ವಿಧಾನಸಭೆ ಚುನಾವಣೆಗಳಿಗೆ ಸಂಬಂಧಿಸಿದ ಕಾನೂನುಗಳೊಂದಿಗೆ ಸ್ಥಳೀಯ ಸಂಸ್ಥೆ ಚುನಾವಣೆಗಳಿಗೆ ಸಂಬಂಧಿಸಿದ ಕಾನೂನುಗಳನ್ನು ಸಮನ್ವಯಗೊಳಿಸುವ ಸಂಬಂಧ ಜತೆಯಾಗಿ ಕೆಲಸ ಮಾಡಲು ಚುನಾವಣಾ ಆಯೋಗ (ಇ.ಸಿ) ಹಾಗೂ ವಿವಿಧ ರಾಜ್ಯಗಳ ಚುನಾವಣಾ ಆಯೋಗಗಳು (ಎಸ್‌ಇಸಿ) ನಿರ್ಧರಿಸಿವೆ.

ಮಂಗಳವಾರ ಇಲ್ಲಿ ನಡೆದ ಮುಖ್ಯ ಚುನಾವಣಾ ಆಯುಕ್ತರ ಮತ್ತು ವಿವಿಧ ರಾಜ್ಯಗಳ ಚುನಾವಣಾ ಆಯುಕ್ತರ ದುಂಡು ಮೇಜಿನ ಸಮ್ಮೇಳನದಲ್ಲಿ ಈ ಕುರಿತ ಘೋಷಣೆ ಅಂಗೀಕರಿಸಲಾಯಿತು.

‘ರಾಷ್ಟ್ರೀಯ ಮತ್ತು ಸಾಂವಿಧಾನಿಕ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ದೇಶದಾದ್ಯಂತ ಎಲ್ಲಾ ರಾಜ್ಯಗಳ ಚುನಾವಣಾ ಆಯೋಗಗಳ ಜತೆ ಸಮನ್ವಯದಿಂದ ಕೆಲಸ ಮಾಡಲು ನಿರ್ಧರಿಸಲಾಗಿದೆ. ಇಸಿಐನೆಟ್, ಇವಿಎಂಗಳು ಮತ್ತು ಮತದಾರರ ಪಟ್ಟಿಗಳ ಹಂಚಿಕೆಯೂ ಇದರಲ್ಲಿ ಸೇರಿವೆ’ ಎಂದು ಘೋಷಣೆಯಲ್ಲಿ ಹೇಳಲಾಗಿದೆ.

ಜ್ಞಾನೇಶ್ ಕುಮಾರ್

‘ಪಂಚಾಯತ್‌ಗಳು ಮತ್ತು ಇತರ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಿಗೆ ಸಂಬಂಧಿಸಿದ ಕಾನೂನುಗಳನ್ನು ಸಂಸತ್ತು ಮತ್ತು ರಾಜ್ಯ ಶಾಸಕಾಂಗಗಳ ಚುನಾವಣೆಗಳಿಗೆ ಸಂಬಂಧಿಸಿದ ಕಾನೂನುಗಳೊಂದಿಗೆ ‘ಸಮನ್ವಯಗೊಳಿಸಲು’ ಇ.ಸಿ ಮತ್ತು ಎಸ್‌ಇಸಿಗಳು ಒಟ್ಟಾಗಿ ಕೆಲಸ ಮಾಡಲಿವೆ’ ಎಂದು ಹೇಳಿದೆ.

▸3C

ಎಚ್‌ಪಿವಿ ಲಸಿಕೆ ಅಭಿಯಾನ ಶೀಘ್ರ

ಗರ್ಭಕಂಠದ ಕ್ಯಾನ್ಸರ್ ತಡೆಗೆ ಕೇಂದ್ರ ಸರ್ಕಾರದಿಂದ ಕ್ರಮ

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: 14 ವರ್ಷದ ಹೆಣ್ಣುಮಕ್ಕಳಿಗೆ ಎಚ್‌ಪಿವಿ ಲಸಿಕೆ (ಗರ್ಭಕಂಠದ ಕ್ಯಾನ್ಸರ್ ತಡೆಯಲು) ನೀಡುವ ವಿಶೇಷ ಅಭಿಯಾನವನ್ನು ಕೇಂದ್ರ ಸರ್ಕಾರವು ಶೀಘ್ರದಲ್ಲಿಯೇ ಆರಂಭಿಸಲಿದೆ ಎಂದು ಅಧಿಕೃತ ಮೂಲಗಳು ತಿಳಿಸಿವೆ.

ಪ್ರತಿವರ್ಷ ಎಲ್ಲ ಸಾಮಾಜಿಕ–ಆರ್ಥಿಕ ವರ್ಗದ 1.15 ಕೋಟಿ ಹೆಣ್ಣುಮಕ್ಕಳಿಗೆ ಲಸಿಕೆಯನ್ನು ಉಚಿತವಾಗಿ ನೀಡಲಾಗುವುದು ಎಂದು ಮಾಹಿತಿ ನೀಡಿವೆ.

ಭಾರತೀಯ ಮಹಿಳೆಯರಲ್ಲಿ ಅತಿ ಹೆಚ್ಚಾಗಿ ಕಂಡುಬರುವ ಕ್ಯಾನ್ಸರ್‌ಗಳಲ್ಲಿ ಗರ್ಭಕಂಠದ ಕ್ಯಾನ್ಸರ್ ಪ್ರಮಾಣ ಎರಡನೆಯದಾಗಿದೆ. ಹೆಣ್ಣುಮಕ್ಕಳನ್ನು ಇದರ ಕಬಂಧಬಾಹುವಿನಿಂದ ರಕ್ಷಿಸುವ ಉದ್ದೇಶದಿಂದ ವರ್ಷಗಟ್ಟಲೆ ಲಸಿಕೆಯ ಪರೀಕ್ಷೆ ನಡೆಸಿದ್ದ ಕೇಂದ್ರ ಸರ್ಕಾರ, ಈ ವಾರದಿಂದಲೇ ರಾಷ್ಟ್ರದಾದ್ಯಂತ ಲಸಿಕೆ ಅಭಿಯಾನ ಆರಂಭಿಸಲು ಮುಂದಾಗಿದೆ.

ಇದು ವಿಶೇಷ ಅಭಿಯಾನವಾಗಿದ್ದು, ಸಾರ್ವತ್ರಿಕ ಲಸಿಕೆ ಕಾರ್ಯಕ್ರಮದ ಭಾಗ ಅಲ್ಲ. ಮೆರ್ಕ್ ಕಂಪನಿಯ ಗಾರ್ಡಸಿಲ್ ಲಸಿಕೆಯನ್ನು ಪೂರೈಸಲಾಗುತ್ತದೆ.

ಮುಖ್ಯಾಂಶಗಳು
- ಮೆರ್ಕ್ ಕಂಪನಿಯ ಗಾರ್ಡಸಿಲ್ ಲಸಿಕೆ ಪೂರೈಕೆ
- ವಾರ್ಷಿಕ 1.15 ಕೋಟಿ ಹೆಣ್ಣುಮಕ್ಕಳಿಗೆ ವಿತರಣೆ

ಜನನ ಪ್ರಮಾಣಪತ್ರ, ಆಧಾರ್ ಅಥವಾ ಪಡಿತರ ಚೀಟಿಯಂತಹ ಸರ್ಕಾರಿ ಗುರುತಿನ ಚೀಟಿಯ ಮೇಲೆ ನಮೂದಾಗಿರುವ ಜನ್ಮ ದಿನಾಂಕದ ಆಧಾರದಲ್ಲಿ ವಯಸ್ಸನ್ನು ನಿರ್ಧರಿಸಿ ಲಸಿಕೆಯನ್ನು ವಿತರಿಸಲಾಗುತ್ತದೆ.

ಈ ಲಸಿಕೆಯು ಜಗತ್ತಿನಾದ್ಯಂತ ವ್ಯಾಪಕವಾಗಿ ಸಂಶೋಧನೆಗೆ ಒಳಪಟ್ಟಿದ್ದು, ಶೇ 93–100ರಷ್ಟು ಪರಿಣಾಮಕಾರಿಯಾಗಿ ಕ್ಯಾನ್ಸರ್ ತಡೆಗಟ್ಟುತ್ತದೆ ಎಂದು ದೃಢಪಟ್ಟಿದೆ.

‘ಶಿಫಾರಸು ಮಾಡಲಾದ ನಿರ್ದಿಷ್ಟ ವಯೋಮಾನದ ಹೆಣ್ಣುಮಕ್ಕಳಿಗೆ ಈ ಲಸಿಕೆ ನೀಡಿದಲ್ಲಿ ಗರ್ಭಕಂಠ ಕ್ಯಾನ್ಸರ್‌ನಿಂದ ದೀರ್ಘಕಾಲದವರೆಗೆ ರಕ್ಷಣೆ ಪಡೆಯಬಹುದು ಎಂದು ಜಾಗತಿಕ ಮತ್ತು ಭಾರತೀಯ ವೈಜ್ಞಾನಿಕ ಸಾಕ್ಷ್ಯಗಳು ದೃಢಪಡಿಸಿವೆ’ ಎಂದು ಮೂಲಗಳು ತಿಳಿಸಿವೆ.

ಈ ಲಸಿಕೆ ವಿತರಣೆಗೆ 2006ರಲ್ಲಿ ಪರವಾನಗಿ ಲಭಿಸಿದ್ದು, ಈವರೆಗೆ ಜಗತ್ತಿನಾದ್ಯಂತ 50 ಕೋಟಿ ಡೋಸ್ ಪೂರೈಕೆ ಮಾಡಲಾಗಿದೆ. ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು 2024ರ ಬಜೆಟ್ ಭಾಷಣದಲ್ಲಿ ಎಚ್‌ಪಿವಿ ಲಸಿಕೆ ಅಭಿಯಾನದ ಬಗ್ಗೆ ಘೋಷಣೆ ಮಾಡಿದ್ದರು.

ಅಂಕಿ ಅಂಶಗಳು

80,000 ಭಾರತದಲ್ಲಿ ಪ್ರತಿ ವರ್ಷ ಪತ್ತೆಯಾಗುವ ಗರ್ಭಕಂಠದ ಕ್ಯಾನ್ಸರ್ ಪ್ರಕರಣಗಳು

42,000 ಗರ್ಭಕಂಠದ ಕ್ಯಾನ್ಸರ್‌ನಿಂದ ಪ್ರತಿವರ್ಷ ಮೃತಪಡುವವರು

ಮಾತನಾಡುವಾಗ ನಾಲಗೆ ಮೇಲೆ ಹತೋಟಿ ಇರಲಿ ಎಂದು ಹೇಳಿದ ನ್ಯಾಯಾಲಯ

ನಟ ರಣವೀರ್‌ಗೆ ಹೈಕೋರ್ಟ್ ತರಾಟೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನೀವು ರಣವೀರ್ ಸಿಂಗ್ ಅಥವಾ ಸೂಪರ್ ಸ್ಟಾರ್ ಇರಬಹುದು. ಆದರೆ, ಸಾರ್ವಜನಿಕರ ಮುಂದೆ ನಿಂತು ಮಾತನಾಡುವಾಗ ನಾಲಗೆ ಮೇಲೆ ಹತೋಟಿ ಇಟ್ಟುಕೊಂಡಿರಬೇಕು. ನೆದರು ತಪ್ಪಿ ಆಡಿದ ಹಗುರ ಮಾತಿಗೆ ಕ್ಷಮೆ ಕೇಳಿದ್ದೇನೆ ಎಂದಾಕ್ಷಣ ಅದು ಮಾಸಿ ಹೋಗುವುದಿಲ್ಲ. ತಪ್ಪನ್ನು ಮನ್ನಿಸಿದಂತಾ ಗುವುದಿಲ್ಲ. ಜನರ ಮನಸ್ಸಿನಿಂದ ನೆನಪುಗಳನ್ನು ಅಳಿಸಬಹುದು. ಆದರೆ ಇಂಟರ್‌ನೆಟ್‌ನಿಂದ ಅಳಿಸಲಾಗದು ಎಂಬುದನ್ನು ಮರೆಯಬೇಡಿ...!

‘ನನ್ನ ವಿರುದ್ಧ ನಗರದ ಮ್ಯಾಜಿಸ್ಟ್ರೇಟ್ ಕೋರ್ಟ್‌ನಲ್ಲಿ ದಾಖಲಾಗಿರುವ ಖಾಸಗಿ ದೂರು ಮತ್ತು ಹೈಗ್ರೌಂಡ್ಸ್ ಠಾಣೆ ಪೊಲೀಸರು ದಾಖಲಿಸಿರುವ ಎಫ್‌ಐಆರ್ ರದ್ದುಪಡಿಸಬೇಕು’ ಎಂದು ಕೋರಿ ಬಾಲಿವುಡ್ ನಟ ರಣವೀರ್ ಸಿಂಗ್ (41) ಸಲ್ಲಿಸಿರುವ ಕ್ರಿಮಿನಲ್ ಅರ್ಜಿಯನ್ನು ಮಂಗಳವಾರ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರು ಅರ್ಜಿದಾರ ರಣವೀರ್ ಸಿಂಗ್ ಅವರನ್ನು ಹಿಗ್ಗಾಮುಗ್ಗಾ ತರಾಟೆಗೆ ತೆಗೆದುಕೊಂಡ ಪರಿಯಿದು.

> ರಣವೀರ್ ಬುದ್ಧಿಪೂರ್ವಕವಾಗಿ ಘೋರ ಅಜ್ಞಾನದಿಂದ ಚೇಷ್ಟೆಯ ಮಾತನಾಡಿದ್ದಾರೆ. ಜನರ ಧಾರ್ಮಿಕ ಸಂವೇದನೆಗಳ ಮೇಲೆ ಸವಾರಿ ಸಲ್ಲದು
> **ನ್ಯಾ.ಎಂ.ನಾಗಪ್ರಸನ್ನ**

‘ನೀವು ಸೂಪರ್ ಸ್ಟಾರ್ ಆಗಿದ್ದರೇನಂತೆ? ಕಾನೂನಿಗೆ ಮಿಗಿಲಾದವರೇನೂ ಅಲ್ಲ. ದೈವವನ್ನು ದೆವ್ವ ಎನ್ನಲಾಗದು. ಇನ್ನೊಬ್ಬರ ಭಾವನೆಗೆ ಘಾಸಿ ಮಾಡುವ ಅಧಿಕಾರ ನಿಮಗಿಲ್ಲ. ಚಾಮುಂಡಿ, ಕರಾವಳಿ ಭಾಗದ ಜನರ ಪಾಲಿನ ಪವಿತ್ರ ದೈವಾರಾಧನೆ. ರಿಷಬ್ ಶೆಟ್ಟಿ ದೇವತೆ ಚಾಮುಂಡಿಯ ಪಾತ್ರವನ್ನು ನಿಭಾಯಿಸಿದ್ದಾರೆ. ರಿಷಬ್ ಅವರನ್ನು ಮೆಚ್ಚಿ ಮಾತಾಡುವ ಜೊತೆಗೆ ನೀವು ಅವರ ನಟನೆಯನ್ನು ಮಹಿಳಾ ದೆವ್ವ ಎಂದು ಅಣಕಿಸಿದ್ದೀರಿ. ಇವೆಲ್ಲಾ ನಿಮಗೆ ಗೊತ್ತಿಲ್ಲದೆ ಮಾತಾಡಿದ್ದೀರಿ ಎಂದರೂ, ಜನರ ಮೇಲೆ ಪ್ರಭಾವ ಬೀರಬಲ್ಲ ನಟ ನೀವು. ನಾನೇನೇ ಮಾತಾಡಿದರೆ ಜನರ ಮನಸ್ಸಿನಲ್ಲಿ ಬೇರೂರುತ್ತದೆ ಎಂಬುದರ ಅರಿವು ನಿಮಗಿರಬೇಕಿತ್ತು. ಜವಾಬ್ದಾರಿ ಮೆರೆಯಬೇಕಿತ್ತು. ಯಾರೇ ಆಗಲಿ ಧಾರ್ಮಿಕ ಭಾವನೆಗಳಿಗೆ ನೋವುಂಟು ಮಾಡುವ ಕೃತ್ಯಕ್ಕೆ ದಯೆ ತೋರಿಸಲು ಆಗದು’ ಎಂದು ನ್ಯಾಯಮೂರ್ತಿ ಅವರು ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

ರಣವೀರ್ ಪರ ಪದಾಂಕಿತ ಹಿರಿಯ ವಕೀಲ ಸಜನ್ ಪೂವಯ್ಯ, ‘ಅರ್ಜಿದಾರರು ಉದ್ದೇಶಪೂರ್ವಕವಾಗಿ ಈ ಹೇಳಿಕೆ ನೀಡಿಲ್ಲ. ಈಗಾಗಲೇ ಅವರು ತಾವಾಡಿದ ಆಕ್ಷೇಪಾರ್ಹ ಮಾತುಗಳಿಗೆ ಕ್ಷಮೆ ಕೋರಿದ್ದಾರೆ. ಆಗಿರುವ ಪ್ರಮಾದ ಸರಿಪಡಿಸಲು ಸಿದ್ಧರಿದ್ದಾರೆ’ ಎಂದರು

▸2

ದೈವವನ್ನು ದೆವ್ವ ಎಂದ ಆರೋಪ



ರಣವೀರ್ ಸಿಂಗ್

ಗೋವಾದಲ್ಲಿ 2025ರ ನವೆಂಬರ್ 28ರಂದು ‘ಭಾರತೀಯ ಅಂತರಾಷ್ಟ್ರೀಯ ಚಲನಚಿತ್ರೋತ್ಸವ’ದ ಸಮಾರೋಪ ಸಮಾರಂಭ (ಐಎಫ್‌ಎಫ್‌ಐ) ಜರುಗಿತ್ತು. ಈ ಸಂದರ್ಭದಲ್ಲಿ ರಣವೀರ್ ಸಿಂಗ್ ಅವರು, ‘ಕಾಂತಾರ ಚಾಪ್ಟರ್-1’ ಕುರಿತು ಮಾತನಾಡಿದ್ದರು.

‘ಪಂಜುರ್ಲಿ, ಗುಳಿಗ ದೈವಗಳ ದೈವೀಕ ಅಭಿವ್ಯಕ್ತಿಯನ್ನು ಒರಟು, ಹಾಸ್ಯಮಯ ಮತ್ತು ಅವಹೇಳನಕಾರಿ ರೀತಿಯಲ್ಲಿ ಅಣಕಿಸಿದ್ದಾರೆ. ಚಾಮುಂಡಿ ದೈವವನ್ನು ಹೆಣ್ಣು ದೆವ್ವ ಎಂದು ಕರೆದು ಅಪಮಾನ ಮಾಡಿದ್ದಾರೆ’ ಎಂದು ನಗರದ ವಕೀಲ ಪ್ರಶಾಂತ್ ಮೆಥಲ್ 1ನೇ ಹೆಚ್ಚುವರಿ ಚೀಫ್ ಜ್ಯುಡಿಷಿಯಲ್ ಮ್ಯಾಜಿಸ್ಟ್ರೇಟ್ (ಸಿಜೆಎಂ) ನ್ಯಾಯಾಲಯದಲ್ಲಿ ಖಾಸಗಿ ದೂರು ದಾಖಲಿಸಿದ್ದರು.

ದೂರಿನ ವಿಚಾರಣೆ ನಡೆಸಿದ್ದ ಸಿಜೆಎಂ ನ್ಯಾಯಾಲಯ ತನಿಖೆ ನಡೆಸುವಂತೆ 2026ರ ಜನವರಿ 23ರಂದು ಪೊಲೀಸರಿಗೆ ನಿರ್ದೇಶಿಸಿತ್ತು. ಇದರನ್ವಯ ಹೈಗ್ರೌಂಡ್ಸ್ ಠಾಣಾ ಪೊಲೀಸರು ಎಫ್‌ಐಆರ್ ದಾಖಲಿಸಿದ್ದಾರೆ. ವಿಚಾರಣೆಗೆ ಹಾಜರಾಗಲು ರಣವೀರ್ ಸಿಂಗ್ ಅವರಿಗೆ ನೋಟಿಸ್ ಜಾರಿಗೊಳಿಸಲಾಗಿದೆ.

ಮಾರ್ಚ್ 4ಕ್ಕೆ ಪ್ರತಿಭಟನೆ

ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ವ್ಯಾಪ್ತಿಯಲ್ಲಿ ಕಸ ಸಂಗ್ರಹಿಸುವ ಲೋಡರ್ಸ್, ವಾಹನ ಚಾಲಕರು, ಸಹಾಯಕರ ಸೇವೆಯನ್ನು ಕಾಯಂಗೊಳಿಸುವಂತೆ ಆಗ್ರಹಿಸಿ, ಮಾರ್ಚ್ 4 ರಂದು ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು ಎಂದು ನವಕರ್ನಾಟಕ ನಿರ್ಮಾಣ ಆಂದೋಲನ ತಿಳಿಸಿದೆ.

ಮಂಗಳವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಆಂದೋಲನದ ಮುಖಂಡರಾದ ಕೋಡಿಹಳ್ಳಿ ಚಂದ್ರಶೇಖರ್, ಮಾರಸಂದ್ರ ಮುನಿಯಪ್ಪ, ಆರ್. ಮೋಹನರಾಜ್, 'ಜಿಬಿಎ ವ್ಯಾಪ್ತಿಯಲ್ಲಿ ಕಸ ಸಾಗಣೆಗೆ, ಕಸ ಸಂಗ್ರಹಿಸುವ ಲೋಡರ್ಸ್, ಕ್ಲೀನರ್ಸ್, ಕಸದ ವಾಹನ ಚಲಾಯಿಸುವ ಚಾಲಕರು ಗುತ್ತಿಗೆ ಪದ್ಧತಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಇವರೆಲ್ಲರ ಸೇವೆಯನ್ನೂ ಕಾಯಂಗೊಳಿಸಬೇಕು' ಎಂದು ತಿಳಿಸಿದರು.

'ಈ ಸ್ವಚ್ಛತಾ ಸಿಬ್ಬಂದಿಗೆ ಮಾಸ್ಕ್, ಗ್ಲೌಸ್, ಬೂಟ್ ಸೇರಿದಂತೆ ಯಾವುದೇ ರೀತಿಯ ಸೌಲಭ್ಯಗಳನ್ನು ನೀಡುತ್ತಿಲ್ಲ. ಇದರ ಜೊತೆಗೆ ಇಎಸ್ಐ ಸೌಲಭ್ಯ ಇಲ್ಲ, ಕನಿಷ್ಠ ವೇತನವನ್ನು ನೀಡುತ್ತಿಲ್ಲ. ರಾಜ್ಯ ಸರ್ಕಾರ ಕೂಡಲೇ ಇವರನ್ನು ಕಾಯಂಗೊಳಿಸಿ, ಆಧುನಿಕ ಜೀತಪದ್ಧತಿಯಿಂದ ಮುಕ್ತಗೊಳಿಸಬೇಕು' ಎಂದರು.

ರಾಷ್ಟ್ರೀಯ ಭಾವೈಕ್ಯ ಶಿಬಿರ ಉದ್ಘಾಟನೆ

ಡಾ. ಮನಮೋಹನ ಸಿಂಗ್ ಬೆಂಗಳೂರು ನಗರ ವಿ.ವಿ.ಯಲ್ಲಿ ಕಾರ್ಯಕ್ರಮ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- 15 ವಿ.ವಿಗಳ ಎನ್ಎಸ್ಎಸ್ ಸ್ವಯಂಸೇವಕರು ಭಾಗಿ
- ಒಂದು ವಾರ ನಡೆಯಲಿರುವ ಶಿಬಿರ
- ಭಾವೈಕ್ಯ, ರಾಷ್ಟ್ರೀಯ ಸಮಗ್ರತೆ ರಕ್ಷಿಸುವ ಉದ್ದೇಶ

ಡಾ. ಮನಮೋಹನ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯದ ಎನ್ಎಸ್ಎಸ್ ಕೋಶದ ಆಶ್ರಯದಲ್ಲಿ ಏರ್ಪಡಿಸಿರುವ ರಾಷ್ಟ್ರೀಯ ಭಾವೈಕ್ಯ ಶಿಬಿರದ ಉದ್ಘಾಟನಾ ಸಮಾರಂಭದ ವೇಳೆ ಕಲಾತಂಡಗಳು ನೃತ್ಯ ಪ್ರದರ್ಶಿಸಿದವು.

ಬೆಂಗಳೂರು: ರಾಷ್ಟ್ರ ನಿರ್ಮಾಣ ಕಾರ್ಯದಲ್ಲಿ ಯುವ ಶಕ್ತಿಯ ಪಾತ್ರ ಅತಿಮುಖ್ಯವಾಗಿದ್ದು, ಜ್ಞಾನ ಮತ್ತು ಕೌಶಲದ ಜೊತೆಗೆ ಸಮಾಜ ಸೇವೆಯ ಮನೋಭಾವ ರೂಢಿಸಿಕೊಳ್ಳಬೇಕು ಎಂದು ಕುಲಪತಿ ಪ್ರೊ.ಕೆ.ರಮೇಶ್ ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ಡಾ. ಮನಮೋಹನ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯದ ಎನ್.ಎಸ್.ಎಸ್. ಕೋಶದ ಆಶ್ರಯದಲ್ಲಿ ಏರ್ಪಡಿಸಿರುವ ಒಂದು ವಾರ ಅವಧಿಯ ರಾಷ್ಟ್ರೀಯ ಭಾವೈಕ್ಯ ಶಿಬಿರದ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಅನೇಕ ಜಾತಿ, ಧರ್ಮ, ಭಾಷೆ ಮತ್ತು ಸಂಸ್ಕೃತಿಗಳ ಮಹಾಸಂಗಮವಾದ ದೇಶದಲ್ಲಿ ರಾಷ್ಟ್ರೀಯ ಸಮಗ್ರತೆಯನ್ನು ಸದಾ ಸಂರಕ್ಷಿಸುವ ಮಹತ್ವದ ಹೊಣೆಗಾರಿಕೆ ದೇಶದ ಯುವ ಪೀಳಿಗೆಯ ಮೇಲಿದೆ ಎಂದು ಅವರು ಪ್ರತಿಪಾದಿಸಿದರು.

ಶಿಬಿರ ಉದ್ಘಾಟಿಸಿ ಮಾತನಾಡಿದ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಆಯುಕ್ತ ಆರ್. ಚೇತನ್, ಕೋಮುವಾದ ಮತ್ತು ಪ್ರಾದೇಶಿಕ ಅಸಮತೋಲನದ ಸವಾಲುಗಳನ್ನು ನಿಭಾಯಿಸುವ ಮೂಲಕ ಭಾವೈಕ್ಯತೆ ಕಾಪಾಡಬೇಕಾದ ಅಗತ್ಯವನ್ನು ಒತ್ತಿ ಹೇಳಿದರು.

ರಾಜ್ಯ ಎನ್.ಎಸ್.ಎಸ್. ಅಧಿಕಾರಿಗಳಾದ ಪ್ರತಾಪ್ ಲಿಂಗಯ್ಯ ಮಾತನಾಡಿ, 'ಕೇವಲ 40 ಸಾವಿರ ಸ್ವಯಂಸೇವಕರ ಪಡೆಯೊಂದಿಗೆ ಪ್ರಾರಂಭವಾದ ಎನ್.ಎಸ್.ಎಸ್. ಇದೀಗ 45 ಲಕ್ಷಕ್ಕೂ ಅಧಿಕ ಕಾರ್ಯಕರ್ತರ ಬೃಹತ್ ಸಂಘಟನೆಯಾಗಿ ಬೆಳೆದಿದ್ದು, ರಾಷ್ಟ್ರ ನಿರ್ಮಾಣದಲ್ಲಿ ಮಹತ್ತದ ಪಾತ್ರ ವಹಿಸುತ್ತಿದೆ' ಎಂದು ವಿವರಿಸಿದರು.

ವಿಶ್ವವಿದ್ಯಾನಿಲಯದ ಕುಲಸಚಿವ ಎನ್.ವಿಜಯ್ ಜೋಸೆಫ್ ಶಿಬಿರದ ಉದ್ದೇಶಗಳನ್ನು ವಿವರಿಸಿದರು. ಎನ್.ಎಸ್.ಎಸ್. ಪ್ರಾದೇಶಿಕ ನಿರ್ದೇಶಕ ಗಿರ್ಧರ್ ಉಪಾಧ್ಯಾಯ್, ಕುಲಸಚಿವ (ಮೌಲ್ಯಮಾಪನ) ಪ್ರೊ.ರಮೇಶ್. ಬಿ. ಕುಡೇನಟ್ಟಿ, ವಿತ್ತಾಧಿಕಾರಿ ಎಂ.ವಿ. ವಿಜಯಲಕ್ಷ್ಮಿ, ಸಿಂಡಿಕೇಟ್ ಸದಸ್ಯರಾದ ಡಾ.ಬಿ.ಆರ್.ಸುಪ್ರೀತ್, ಕೆ.ಪಿ.ಪಾಟೀಲ್ ಮತ್ತು ಫಾದರ್ ಫ್ರಾನ್ಸಿಸ್ ಉಪಸ್ಥಿತರಿದ್ದರು. ಎನ್.ಎಸ್.ಎಸ್. ಸಂಯೋಜಕ ಡಾ.ಬಿ.ಜಿ.ಗೋವಿಂದೇಗೌಡ ಅವರು ವಂದಿಸಿದರು.

ದೇಶದ ವಿವಿಧ ರಾಜ್ಯಗಳ 15ಕ್ಕೂ ಹೆಚ್ಚು ವಿಶ್ವವಿದ್ಯಾನಿಲಯಗಳಿಂದ ಎನ್.ಎಸ್.ಎಸ್. ಸ್ವಯಂಸೇವಕರು ಶಿಬಿರದಲ್ಲಿ ಪಾಲ್ಗೊಂಡಿದ್ದಾರೆ.

ಸುದ್ದಿ 2 ನಿಮಿಷ

ಹೆಚ್ಚುವರಿ ರಾಜಧನಕ್ಕೆ ವಿರೋಧ

ಬೆಂಗಳೂರು: ರಾಜ್ಯ ಸರ್ಕಾರ ಗಣಿ ಮಾಲೀಕರಿಂದ ಹೆಚ್ಚುವರಿ ರಾಜಧನ ವಸೂಲಿ ಮಾಡುತ್ತಿರುವುದು ಖಂಡನೀಯ. ಸಚಿವ ಸಂಪುಟ ಉಪಸಮಿತಿಯ ತೀರ್ಮಾನದಂತೆ ಒಂದು ಬಾರಿ ಇತ್ಯರ್ಥ (ಒಟಿಎಸ್) ನಿರ್ಧಾರದ ಮೂಲಕ ಗುತ್ತಿಗೆದಾರರಿಗೆ ಕೊಟ್ಟಂತಹ ರೂಪಾಯಿ ದರದ ವಿಧಿಸುತ್ತಿದೆ ಎಂದು ಕರ್ನಾಟಕ ರಾಜ್ಯ ಕಲ್ಲುಗಣಿ ಮತ್ತು ಸ್ಟೋನ್ ಕ್ರಷರ್ ಮಾಲೀಕರ ಒಕ್ಕೂಟ ಆರೋಪಿಸಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಒಕ್ಕೂಟದ ಅಧ್ಯಕ್ಷ ಡಿ.ಸಿದ್ದರಾಜು, 'ನಮ್ಮ ನ್ಯಾಯಯುತ ಬೇಡಿಕೆಗಳನ್ನು ಈಡೇರಿಸದಿದ್ದರೆ ಕಲ್ಲುಗಣಿಗಾರಿಕೆ ಬಂದ್ ಮಾಡಲಾಗುತ್ತದೆ. ಸರ್ಕಾರಕ್ಕೆ ಆಗಾಗಲೇ ರಾಜಧನ ಸಂಪೂರ್ಣವಾಗಿ ಪಾವತಿಸಲಾಗಿದೆ. ಇದನ್ನು ತಕ್ಷಣವೇ ನಿಲ್ಲಿಸಬೇಕು' ಎಂದರು.

ಅಪಾರ್ಟ್‌ಮೆಂಟ್‌ಗೆ ಸರ್ಕಾರಿ ಜಾಗದಲ್ಲಿ ದಾರಿ: ಆರೋಪ

ಕೆ.ಆರ್.ಪುರ: ಅಪಾರ್ಟ್‌ಮೆಂಟ್‌ಗೆ ಸರ್ಕಾರಿ ಜಾಗದಲ್ಲಿ ರಸ್ತೆ ಸಂಪರ್ಕ ಕಲ್ಪಿಸಲು ಜಿಲ್ಲಾಧಿಕಾರಿಯವರು ಮಾಡಿರುವ ಆದೇಶವನ್ನು ರದ್ದುಗೊಳಿಸಿ, ಸರ್ಕಾರಿ ಭೂಮಿಯನ್ನು ಸಾರ್ವಜನಿಕರ ಉಪಯೋಗಕ್ಕೆ ಮೀಸಲಿಡಬೇಕು ಎಂದು ದೊಡ್ಡಗುಬ್ಬಿ ಗ್ರಾಮಸ್ಥರು ಒತ್ತಾಯಿಸಿದರು.

'ಬೆಂಗಳೂರು ಪೂರ್ವ ತಾಲ್ಲೂಕಿನ ಬಿದರಹಳ್ಳಿ ಹೋಬಳಿಯ ದೊಡ್ಡಗುಬ್ಬಿ ಗ್ರಾಮದ ಸರ್ವೆ ನಂಬರ್ 14ರಲ್ಲಿ 7 ಗುಂಟೆ ಸರ್ಕಾರಿ ಜಮೀನು ಇದೆ. ಈ ಜಮೀನಿಗೆ ಹೊಂದಿಕೊಂಡಿರುವ ಸರ್ವೆ ನಂಬರ್ 12/10 ಹಾಗೂ 12/11ರಲ್ಲಿ ಅಪಾರ್ಟ್‌ಮೆಂಟ್ ನಿರ್ಮಿಸಲು ಉದ್ದೇಶಿಸಿ, 2021ರಲ್ಲಿ ಭೂ ಪರಿವರ್ತನೆ ಕೂಡ ಮಾಡಲಾಗಿದೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

'ಅಧಿಕಾರಿಗಳು ಭೂ ಮಾಫಿಯಾದವರೊಂದಿಗೆ ಶಾಮಿಲಾಗಿದ್ದಾರೆ' ಎಂದು ದೊಡ್ಡಗುಬ್ಬಿ ಗ್ರಾಮಸ್ಥ ಎನ್. ಚಂದ್ರಶೇಖರ್ ದೂರಿದರು.

ಅಧಿಕಾರಿಗಳ ವಿರುದ್ಧ ಸೂಕ್ತ ಕ್ರಮ ಜರುಗಿಸಬೇಕು ಎಂದು ದೊಡ್ಡಗುಬ್ಬಿ ನಿವಾಸಿ ಜಗದೀಶ್ ಆಗ್ರಹಿಸಿದರು.

ಅಪಘಾತ: ಕೂಲಿ ಕಾರ್ಮಿಕರಿಗೆ ಗಾಯ

ಚಿಕ್ಕಬಳ್ಳಾಪುರ: ಆಲೂಗಡ್ಡೆ ತುಂಬಿಕೊಂಡು ಚಿಕ್ಕಬಳ್ಳಾಪುರದಿಂದ ಶಿಡ್ಲಘಟ್ಟ ಕಡೆ ಸಾಗುತ್ತಿದ್ದ ಕ್ಯಾಂಟರ್ ನಾಯನಹಳ್ಳಿ ಬಳಿ ಎದುರಿಗೆ ಬಂದ ಗೂಡ್ಸ್ ವಾಹನಕ್ಕೆ ಡಿಕ್ಕಿಯಾಗಿದೆ. ಮಂಗಳವಾರ ರಾತ್ರಿ 7ರ ಸುಮಾರಿಗೆ ಅಪಘಾತ ಸಂಭವಿಸಿದೆ.

ಗೂಡ್ಸ್ ವಾಹನದಲ್ಲಿದ್ದ 10 ಕೂಲಿ ಕಾರ್ಮಿಕರು ಗಾಯಗೊಂಡಿದ್ದಾರೆ. ಕೂಲಿ ಕಾರ್ಮಿಕರು ಅಜ್ಜವಾರ ಮತ್ತು ಗುಂಡ್ಲಗುರ್ಕಿಯವರಾಗಿದ್ದಾರೆ. ಜಂಗಮಕೋಟೆ ಬಳಿ ಶುಂಠಿ ಹೊಲದ ಕೆಲಸಕ್ಕೆ ತೆರಳಿ ವಾಪಸ್ಸಾಗುತ್ತಿದ್ದರು.

ಅಂಗನವಾಡಿ: ಸ್ವಾತಂತ್ರ್ಯ ಉದ್ಯಾನದಲ್ಲಿ ನಾಳೆ ಹೋರಾಟ

ಬೆಂಗಳೂರು: ಚುನಾವಣೆ ಸಂದರ್ಭದಲ್ಲಿ ನೀಡಿದ್ದ ಭರವಸೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಅಂಗನವಾಡಿ ನೌಕರರ ಸಂಘದಿಂದ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಫೆಬ್ರುವರಿ 26ರಂದು ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ.

'ಗೌರವಧನ ಮಾಸಿಕ ₹15,000ಕ್ಕೆ ಹೆಚ್ಚಳ ಹಾಗೂ ನಿವೃತ್ತಿ ಪರಿಹಾರ ₹2 ಲಕ್ಷ ನೀಡುವುದಾಗಿ 2026-27ನೇ ಸಾಲಿನ ಬಜೆಟ್‌ನಲ್ಲಿ ಘೋಷಣೆ ಮಾಡುವಂತೆ ಒತ್ತಾಯಿಸಿ ಎಐಯುಟಿಯುಸಿ ಸಂಯೋಜಿತ ಕರ್ನಾಟಕ ರಾಜ್ಯ ಸಂಯುಕ್ತ ಅಂಗನವಾಡಿ ನೌಕರರ ಸಂಘದಿಂದ ಪ್ರತಿಭಟನೆ ನಡೆಸಲಾಗುವುದು' ಎಂದು ಸಂಘದ ರಾಜ್ಯ ಘಟಕದ ಅಧ್ಯಕ್ಷ ಕೆ.ಸೋಮಶೇಖರ್ ಯಾದಗಿರಿ, ಕಾರ್ಯದರ್ಶಿ ಎಂ.ಉಮಾದೇವಿ ತಿಳಿಸಿದ್ದಾರೆ.

ನಿವೃತ್ತಿಯಾದ ಎಲ್ಲ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರಿಗೆ ಸುಪ್ರೀಂ ಕೋರ್ಟ್ ಆದೇಶದಂತೆ ಗ್ರ್ಯಾಚುಟಿ ನೀಡುವ ಜತೆಗೆ ನಿರ್ಬಂಧಗಳನ್ನು ತೆಗೆದು ಹಾಕಬೇಕು. ಅಂಗನವಾಡಿ ನೌಕರರನ್ನು ಗುಜರಾತ್ ಹೈಕೋರ್ಟ್ ಆದೇಶದಂತೆ ಸರ್ಕಾರಿ ನೌಕರರೆಂದು ಪರಿಗಣಿಸಬೇಕು ಎಂದು ಒತ್ತಾಯಿಸಿದ್ದಾರೆ.

ಸಮಸ್ಯೆಯನ್ನು ಬಗೆಹರಿಸಿ ಸರಳವಾಗಿ ನಿವೃತ್ತಿ ಪರಿಹಾರದ ಹಣ ಸಿಗುವಂತೆ ಸೂಕ್ತ ಕ್ರಮವಹಿಸಬೇಕು. ನೌಕರರನ್ನು ಸರ್ಕಾರದ ಪಿಂಚಣಿ ಯೋಜನೆಗೆ ಒಳಪಡಿಸಬೇಕು. ಅಲ್ಲಿಯವರೆಗೂ ನಿವೃತ್ತಿ ಪರಿಹಾರದ ಇಡುಗಂಟು ₹5 ಲಕ್ಷ ನಿಗದಿ ಮಾಡಬೇಕು. ಸೇವಾ ಹಿರಿತನ ಆಧರಿಸಿ ಶೇ 50ರಷ್ಟು ಹುದ್ದೆಗಳನ್ನು ಬಡ್ತಿ ಮೂಲಕ ಹಾಗೂ ಮೆರಿಟ್ ಆಧರಿಸಿ ಶೇ 50ರಷ್ಟು ಹುದ್ದೆಗಳ ಭರ್ತಿಗೆ ಕ್ರಮಕೈಗೊಳ್ಳಬೇಕು ಎಂದು ಆಗ್ರಹಿಸಿದ್ದಾರೆ.

ಐಸಿಡಿಎಸ್ ಹೊರತುಪಡಿಸಿ ಇತರ ಇಲಾಖೆಗಳ ಹೆಚ್ಚುವರಿ ಕೆಲಸ ನೀಡಬಾರದು. ಪ್ರತಿ ತಿಂಗಳು 5ರೊಳಗೆ ಮಾಸಿಕ ವೇತನ ಪಾವತಿ ಮಾಡಬೇಕು. ಖಾಲಿ ಇರುವ ಸಹಾಯಕಿಯರ ಹುದ್ದೆಗಳನ್ನು ಭರ್ತಿ ಮಾಡಬೇಕು. ಮಾತೃ ವಂದನಾ, ಭಾಗ್ಯಲಕ್ಷ್ಮಿ ಯೋಜನೆಯ ಕೆಲಸಗಳಿಗೆ ಹೆಚ್ಚುವರಿ ಗೌರವಧನ ನೀಡಬೇಕು ಎಂದು ಕೋರಿದ್ದಾರೆ.

ನಟ ರಣವೀರ್‌ಗೆ ಹೈಕೋರ್ಟ್ ತರಾಟೆ

ಒಂದನೇ ಪುಟದಿಂದ

ವಾದ ಆಲಿಸಿದ ನ್ಯಾಯಪೀಠ, 'ರಣವೀರ್ ತನಿಖೆಗೆ ಸಹಕರಿಸಬೇಕು ಎಂಬ ಷರತ್ತಿನೊಂದಿಗೆ ಮುಂದಿನ ವಿಚಾರಣೆವರೆಗೂ ಪ್ರಾಸಿಕ್ಯೂಷನ್ ರಣವೀರ್ ವಿರುದ್ಧ ಆತುರದ ಕ್ರಮಕ್ಕೆ ಮುಂದಾಗಬಾರದು' ಎಂದು ಆದೇಶಿಸಿತು. ಪ್ರತಿವಾದಿಗಳಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ, ಅರ್ಜಿಗೆ ಸಂಬಂಧಿಸಿದಂತೆ ಆಕ್ಷೇಪಣೆ ಸಲ್ಲಿಸಲು ರಾಜ್ಯ ಹೆಚ್ಚುವರಿ ಪ್ರಾಸಿಕ್ಯೂಟರ್ ಬಿ.ಎನ್.ಜಗದೀಶ್ ಅವರಿಗೆ ನಿರ್ದೇಶಿಸಿತು. ವಿಚಾರಣೆಯನ್ನು ಮಾರ್ಚ್ 2ಕ್ಕೆ ಮುಂದೂಡಲಾಗಿದೆ. ರಣವೀರ್ ಪರ ಹೈಕೋರ್ಟ್ ವಕೀಲ ಮನು ಪ್ರಭಾಕರ್ ಕುಲಕರ್ಣಿ ವಕಾಲತ್ತು ವಹಿಸಿದ್ದಾರೆ.

ಕದಳಿ ವೇದಿಕೆಯಿಂದ ಗೀತಾ ಮಹದೇವಪ್ರಸಾದ್‌ಗೆ ಪ್ರಶಸ್ತಿ ಪ್ರದಾನ

ಮನುಷ್ಯತ್ವ ಎಲ್ಲೆಡೆ ಮಾಯ: ಸುನೀಲ್ ಶಾಸ್ತ್ರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಎಲ್ಲ ಕ್ಷೇತ್ರದಲ್ಲೂ ಮನುಷ್ಯತ್ವ ಮಾಯವಾಗುತ್ತಿದ್ದು, ರಾಜಕೀಯ ಕ್ಷೇತ್ರವೂ ಇದರಿಂದ ಹೊರತಾಗಿಲ್ಲ' ಎಂದು ಲಾಲ್ ಬಹದ್ದೂರ್ ಶಾಸ್ತ್ರಿ ಅವರ ಪುತ್ರ ಸುನೀಲ್ ಶಾಸ್ತ್ರಿ ಬೇಸರ ವ್ಯಕ್ತಪಡಿಸಿದರು.

ಕದಳಿ ಮಹಿಳಾ ವೇದಿಕೆ, ಬೆಂಗಳೂರು ನಗರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು ಜಂಟಿಯಾಗಿ ನಯನ ಸಭಾಂಗಣದಲ್ಲಿ ಮಂಗಳವಾರ ಆಯೋಜಿಸಿದ್ದ ಕದಳಿ ಪ್ರಶಸ್ತಿ ಪ್ರದಾನ ಹಾಗೂ ಪ್ರಶಸ್ತಿ ಪುರಸ್ಕೃತರ ಸನ್ಮಾನ ಸಮಾರಂಭದಲ್ಲಿ ಅವರು ಮಾತನಾಡಿದರು.

'ನನ್ನ ತಂದೆಯವರು ಬದುಕಿನುದ್ದಕ್ಕೂ ಪ್ರಾಮಾಣಿಕತೆ, ಸತ್ಯದೊಂದಿಗೆ ಬದುಕಿದರು. ಅದನ್ನು ನಮಗೂ ಹೇಳಿಕೊಟ್ಟು, ಯಾವಾಗಲೂ ಸತ್ಯವನ್ನೇ ಹೇಳಿ ಎಂದು ತಿಳಿಸಿಕೊಟ್ಟರು. ಜೈ ಜವಾನ್, ಜೈ ಕಿಸಾನ್ ಎನ್ನುವುದು ಅವರ ಪ್ರಮುಖ ಘೋಷ ವಾಕ್ಯವಾಗಿತ್ತು. ಈಗ ಇವರೆಡರ ಜೊತೆಗೆ ಜೈ ಇನ್ಸಾನ್ (ಜೈ ಮಾನವ) ಕೂಡ ಸೇರಿಸುವಂತಹ ಸ್ಥಿತಿ ನಿರ್ಮಾಣವಾಗಿದೆ' ಎಂದು ಹೇಳಿದರು.

'ಬಾಲಕನಿದ್ದಾಗ ತಂದೆಯವರನ್ನು ಭೇಟಿ ಮಾಡಲು ಪ್ರಯತ್ನಿಸಿದಾಗ ಅವರು ನಮಗೆ ಸಿಗುತ್ತಿರಲಿಲ್ಲ. ಸಿಟ್ಟುಗೊಂಡರೆ ನಗುವೇ ಅವರ ಉತ್ತರವಾಗುತ್ತಿತ್ತು. ನನಗೆ ಆರು ಮಕ್ಕಳು, ಕುಟುಂಬವೇ ಸರ್ವಸ್ವವಲ್ಲ. ಇಡೀ ದೇಶವೇ ನನ್ನ ಕುಟುಂಬ ಎಂದು ಅವರು ಹೇಳುತ್ತಿದ್ದರು. ಅವರ ಈ ಉತ್ತರ ನನ್ನಲ್ಲಿ ಬದಲಾವಣೆಗೂ ಕಾರಣವಾಯಿತು' ಎಂದು ನೆನಪಿಸಿಕೊಂಡರು.

ಅತಿಥಿಯಾಗಿದ್ದ ವಿಮರ್ಶಕಿ ಎಂ.ಎಸ್.ಆಶಾದೇವಿ ಮಾತನಾಡಿ, 'ಲಾಲ್ ಬಹದ್ದೂರ್ ಶಾಸ್ತ್ರಿ ಅವರು ನಡೆದಂತೆ ನುಡಿದವರು. ಈ ಕಾರಣದಿಂದಲೇ ಅವರನ್ನು ಉನ್ನತ ಸ್ಥಾನದಲ್ಲಿ ನೋಡುತ್ತೇವೆ. ಇಂತಹ ಸನ್ನಿವೇಶ ಕರ್ನಾಟಕದಲ್ಲಿ 12ನೇ ಶತಮಾನದಲ್ಲಿಯೇ ಇತ್ತು. ಬಸವಣ್ಣ, ಅಕ್ಕಮಹಾದೇವಿ ಅವರ ಬದುಕು, ವಚನಗಳು ಪ್ರೇರಣೆ ನೀಡಿದವು' ಎಂದು ಹೇಳಿದರು.

ಆತ್ಮಸಾಕ್ಷಿಗೆ ಅನುಗುಣವಾಗಿ ಬದುಕಿ ಅಕ್ಕಮಹಾದೇವಿ ಮಾದರಿಯನ್ನು ಬಿಟ್ಟು ಹೋಗಿದ್ದಾರೆ. ಮಹಿಳೆಯರು ಕೌಟುಂಬಿಕ ದೌರ್ಜನ್ಯಗಳನ್ನು ಎದುರಿಸುತ್ತಲೇ ನೋವು ಉಣ್ಣುವ ಬದಲು ಪರಿವರ್ತನೆಗೆ ಮುಂದಾಗಬೇಕು. ಕೋಮುವಾದದ ಕಾಯಿಲೆಗೆ ಮಹಿಳೆಯರಲ್ಲಿ ಮಾತ್ರ ಪರಿಹಾರವಿದೆ ಎಂದು ತಿಳಿಸಿದರು.

ಪ್ರಶಸ್ತಿ ಪ್ರದಾನ: ಮಾಜಿ ಸಚಿವೆ ಗೀತಾ ಮಹದೇವಪ್ರಸಾದ್ ಅವರಿಗೆ ಕದಳಿ ಪ್ರಶಸ್ತಿಯನ್ನು ಪ್ರದಾನ ಮಾಡಲಾಯಿತು. ಪದ್ಮಶ್ರೀ ಪ್ರಶಸ್ತಿಗೆ ಆಯ್ಕೆಯಾಗಿರುವ ಸಮಾಜ ಸೇವಕಿ ಎಸ್.ಜಿ.ಸುಶೀಲಮ್ಮ, ಗೌರವ ಡಾಕ್ಟರೇಟ್ ಪಡೆದ ನಿವೃತ್ತ ಡಿಜಿಪಿ ಎಲ್.ರೇವಣ್ಣಸಿದ್ದಯ್ಯ, ನಿವೃತ್ತ ಐಎಎಸ್ ಅಧಿಕಾರಿ ಸಿ.ಸೋಮಶೇಖರ್ ಅವರನ್ನು ಸನ್ಮಾನಿಸಲಾಯಿತು.

ಕದಳಿ ಮಹಿಳಾ ವೇದಿಕೆ, ಶರಣ ಸಾಹಿತ್ಯ ಪರಿಷತ್ತು ಆಯೋಜಿಸಿದ ಕಾರ್ಯಕ್ರಮದಲ್ಲಿ ಗೀತಾ ಮಹಾದೇವ ಪ್ರಸಾದ್ ಅವರಿಗೆ ಪ್ರಶಸ್ತಿ ನೀಡಿ ಗೌರವಿಸಲಾಯಿತು ಪದ್ಮಶ್ರೀ ಪ್ರಶಸ್ತಿ ಪಡೆದ ಎಸ್.ಜಿ. ಸುಶೀಲಮ್ಮ ಅವರನ್ನು ಗೌರವಿಸಲಾಯಿತು. ಎಂ.ಎಸ್. ಆಶಾದೇವಿ ಗೊ.ರು. ಚನ್ನಬಸಪ್ಪ, ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಕೆ.ವಿ. ನಾಗರಾಜಮೂರ್ತಿ, ಭಾರತದ ಎರಡನೇ ಪ್ರಧಾನಿ ಲಾಲ್ ಬಹದ್ದೂರ್ ಶಾಸ್ತ್ರಿಯವರ ಪುತ್ರ ಸುನಿಲ್ ಶಾಸ್ತ್ರಿ, ಎಲ್. ರೇವಣಸಿದ್ಧಯ್ಯ, ಸಿ. ಸೋಮಶೇಖರ್, ಪ್ರಮೀಳಾ ಗರಡಿ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

3M ಇಂಡಿಯಾ ಲಿಮಿಟೆಡ್
CIN: L31300KA1987PLC013543
ನೋಂದಾಯಿತ ಕಚೇರಿ: ಪ್ಲಾಟ್ ನಂ. 48-51, ಇಲೆಕ್ಟ್ರಾನಿಕ್ ಸಿಟಿ, ಹೊಸೂರು ರಸ್ತೆ, ಬೆಂಗಳೂರು – 560100 ದೂರವಾಣಿ: 080-22231414,
ಇ-ಮೇಲ್: investorhelpdesk.in@mmm.com, ವೆಬ್‌ಸೈಟ್: www.3m.com.in

ಅಂಚೆ ಮತದಾನದ ಸೂಚನೆ ಮತ್ತು ಇ-ವೋಟಿಂಗ್ ಬಗ್ಗೆ ಮಾಹಿತಿ

ಕಂಪನಿಗಳ ಕಾಯಿದೆ, 2013ರ ("ಕಾಯಿದೆ") ಕಲಮು 110, ಕಂಪನಿಗಳ (ಆಡಳಿತ ಮತ್ತು ನಿರ್ವಹಣೆ) ನಿಯಮಾವಳಿ, 2014 ('ನಿಯಮಾವಳಿ') ನಿಯಮಗಳು 20 ಮತ್ತು 22, ಮತ್ತು ಸದರಿ ಕಾಯಿದೆ ಮತ್ತು ನಿಯಮಾವಳಿಯಲ್ಲಿರುವ ಅನ್ವಯವಾಗುವ ಇತರ ಯಾವುದೇ ನಿಬಂಧನೆಗಳು, ಮತ್ತು ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯವು ಹೊರಡಿಸಿರುವ ಈ ಸಾಮಾನ್ಯ ಸುತ್ತೋಲೆಗಳನ್ನು ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯವು ಹೊರಡಿಸಿರುವ ಇತರ ಸಂಬಂಧಿತ ಸುತ್ತೋಲೆಗಳ ದಿನಾಂಕ 22, ಸೆಪ್ಟೆಂಬರ್, 2025 ರ ಸಾಮಾನ್ಯ ಸುತ್ತೋಲೆ ಸಂಖ್ಯೆ 03/2025 ಒಳಗೊಂಡಂತೆ ("ಎಮ್‌ಸಿಎ ಸುತ್ತೋಲೆಗಳು") ಜೊತೆ ಓದಿಕೊಂಡಂತೆ, ಭಾರತೀಯ ಸೆಕ್ಯುರಿಟೀಸ್ ಮತ್ತು ಎಕ್ಸ್‌ಚೇಂಜ್ ಬೋರ್ಡ್ (ಲಿಸ್ಟಿಂಗ್ ಬಾಧ್ಯತೆಗಳು ಮತ್ತು ಬಹಿರಂಗಪಡಿಸಬೇಕಾದ ಅಗತ್ಯತೆಗಳು) ನಿಬಂಧನೆಗಳು, 2015 ('ಲಿಸ್ಟಿಂಗ್ ನಿಬಂಧನೆಗಳು') ನಿಬಂಧನೆ 44, ಭಾರತೀಯ ಕಂಪನಿ ಸೆಕ್ರೆಟರಿಗಳ ಸಂಸ್ಥೆಯು ಸಾಮಾನ್ಯ ಸಭೆಗಳ ಕುರಿತಂತೆ ಹೊರಡಿಸಿರುವ ಸೆಕ್ರೆಟೇರಿಯಲ್ ಸ್ಟಾಂಡರ್ಡ್ (ಎಸ್‌ಎಸ್-2) ಮತ್ತು ಅನ್ವಯವಾಗುವಂತಹ ಇತರೆ ಕಾನೂನುಗಳು, ನಿಯಮಾವಳಿ ಮತ್ತು ನಿಬಂಧನೆಗಳು (ಸದ್ಯದಲ್ಲಿ ಚಾಲ್ತಿಯಲ್ಲಿರುವ ಮತ್ತು ಕಾಲ-ಕಾಲಕ್ಕೆ ಮಾರ್ಪಾಡಾಗಿರುವಂತಹ ಯಾವುದೇ ಶಾಸನಬದ್ಧ ಮಾರ್ಪಾಡುಗಳು ಅಥವಾ ಅದರ ಇತರ ಮರು-ಅಧಿನಿಯಮನಗಳೂ ಸೇರುತ್ತವೆ) ಜೊತೆಗೆ ಓದಿಕೊಂಡ ಪ್ರಕಾರ, 3ಎಮ್ ಇಂಡಿಯಾ ಲಿಮಿಟೆಡ್ (ಕಂಪನಿ) ಫೆಬ್ರವರಿ 12, 2026 ದಿನಾಂಕದ ಅಂಚೆ ಮತದಾನ ಸೂಚನೆಯಲ್ಲಿ ಹೇಳಿರುವಂತಹ ನಿರ್ಣಯಗಳ, ಜೊತೆಗೆ ಇಲ್ಲಿ ಕೆಳಗೆ ಹೇಳಿರುವಂತಹ ವಿಷಯಗಳಿಗೆ ಸಂಬಂಧಿಸಿದಂತಹ ವಿವರಣಾತ್ಮಕ ಹೇಳಿಕೆಯ ಮೇಲೆ, ಅಂಚೆ ಮತದಾನದ (ಇ-ವೋಟಿಂಗ್) ಮೂಲಕ, ತನ್ನ ಸದಸ್ಯರ ಅನುಮೋದನೆಯನ್ನು ಕೋರುತ್ತಿದೆ ಎಂಬುದಾಗಿ ಈ ಮೂಲಕ ಸೂಚನೆಯನ್ನು ಕೊಡಲಾಗುತ್ತಿದೆ:

1. ಶ್ರೀ ದ್ವಾರಕನಾಥ್ ರಂಗನಾಥ್ ಮಾವಿನಕೆರೆ (DIN: 07565125) ಅವರನ್ನು ಕಂಪನಿಯ ಕಾರ್ಯನಿರ್ವಾಹಕೇತರ ಮತ್ತು ಸ್ವತಂತ್ರ ನಿರ್ದೇಶಕರನ್ನಾಗಿ ನೇಮಿಸುವುದು.
2. ಶ್ರೀ ಅಸೀಮ್ ಕುಲದೀಪ್ ಜೋಶಿ (DIN: 07504624) ಅವರನ್ನು ಕಂಪನಿಯ ನಿರ್ದೇಶಕರನ್ನಾಗಿ ನೇಮಿಸುವುದು.
3. ಶ್ರೀ ಅಸೀಮ್ ಕುಲದೀಪ್ ಜೋಶಿ (DIN: 07504624) ಅವರನ್ನು ಕಂಪನಿಯ ವ್ಯವಸ್ಥಾಪಕ ನಿರ್ದೇಶಕರನ್ನಾಗಿ ನೇಮಿಸುವುದು ಮತ್ತು ವೇತನ ಪಾವತಿ.
4. 3M ಕಂಪನಿ, USA ಜೊತೆಗಿನ ಮಹತ್ವದ ಸಂಬಂಧಿತ ಪಕ್ಷ ವ್ಯವಹಾರಗಳಿಗೆ ಅನುಮೋದನೆ.
5. 3M ಕಂಪನಿ, USA ಗೆ ಪಾವತಿಸುವ ರಾಯಲ್ಟಿ ಮೊತ್ತದ ಅನುಮೋದನೆ.
6. 3M ಇನ್ನೋವೇಶನ್ ಸಿಂಗಾಪುರ್ ಪ್ರೈವೇಟ್ ಲಿಮಿಟೆಡ್ ಜೊತೆಗಿನ ಮಹತ್ವದ ಸಂಬಂಧಿತ ಪಕ್ಷ ವ್ಯವಹಾರಗಳಿಗೆ ಅನುಮೋದನೆ.

ಎಲ್ಲ ಸದಸ್ಯರಿಗೂ ಈ ಮೂಲಕ ತಿಳಿಸುವುದೇನೆಂದರೆ:

1. ಯಾವೆಲ್ಲ ಸದಸ್ಯರು ತಮ್ಮ ಇಮೇಲ್ ವಿಳಾಸಗಳನ್ನು ಕಂಪನಿ ಅಥವಾ ಡಿಪಾಸಿಟರಿ ಪಾರ್ಟಿಸಿಪೆಂಟರು ಅಥವಾ ಕಂಪನಿಯ ರಿಜಿಸ್ಟ್ರಾರ್ ಹಾಗೂ ಷೇರು ವರ್ಗಾವಣೆ ಏಜೆಂಟರಾದ ಕೆಫಿನ್ ಟೆಕ್ನಾಲಜೀಸ್ ಲಿಮಿಟೆಡ್ (ಕೆಫಿನ್) ಜೊತೆ ನೋಂದಾಯಿಸಿಕೊಂಡಿರುವರೋ ಮತ್ತು ಷೇರುಗಳ ಪಾವತಿಸಿದ ಮೌಲ್ಯವನ್ನು ಮತ್ತು ಸದಸ್ಯರ ಮತದಾನದ ಹಕ್ಕುಗಳನ್ನು ನಿರ್ಧರಿಸಲು ಅಂತಿಮ ದಿನವೂ ಆದ **ಫೆಬ್ರವರಿ 13, 2026** ರಂದು ಯಾವ ಸದಸ್ಯರ ಹೆಸರುಗಳು ಸದಸ್ಯರ/ಫಲಾನುಭವಿ ಯಜಮಾನರ ರಿಜಿಸ್ಟರಿನಲ್ಲಿ ಅಥವಾ ನ್ಯಾಷನಲ್ ಸೆಕ್ಯುರಿಟಿಸ್ ಡಿಪಾಸಿಟರಿ ಲಿಮಿಟೆಡ್ (NSDL) ಮತ್ತು ಸೆಂಟ್ರಲ್ ಡಿಪಾಸಿಟರಿ ಸರ್ವೀಸಸ್ (ಇಂಡಿಯಾ) ಲಿಮಿಟೆಡ್ (CDSL) ದಾಖಲೆಗಳಲ್ಲಿ ಇರುವುದೋ ಅಂತಹವರಿಗೆ ಕಂಪನಿಯು ಅಂಚೆ ಮತದಾನ ಸೂಚನೆಯನ್ನು ಜೊತೆಗೆ ಇ-ವೋಟಿಂಗ್ ಕುರಿತಂತೆ ಸೂಚನೆಗಳನ್ನು **ಫೆಬ್ರವರಿ 24, 2026** ರಂದು ಇ-ಮೇಲ್ ಮೂಲಕ ಮಾತ್ರವೇ ಕಳುಹಿಸಿದೆ. ಮೇಲೆ ಉಲ್ಲೇಖಿಸಿರುವ ಎಮ್.ಸಿ.ಎ. ಸುತ್ತೋಲೆಗಳ ಪ್ರಕಾರ ಅಂಚೆ ಮತದಾನದ ಸೂಚನೆಯ ಭೌತಿಕ ಪ್ರತಿಗಳನ್ನು ಕಳುಹಿಸುವ ಅಗತ್ಯತೆ ಇರುವುದಿಲ್ಲ.
2. ಮೇಲೆ ಹೇಳಿರುವಂತಹ ದಾಖಲೆಗಳು ಕಂಪನಿಯ ವೆಬ್‌ಸೈಟ್ https://www.3mindia.in/3M/en_IN/company-in/about-3m/financial-facts-local/, ಕೆಫಿನ್ ವೆಬ್‌ಸೈಟ್ https://evoting.kfintech.com/ ಮತ್ತು ಬಿಎಸ್‌ಇ ಲಿಮಿಟೆಡ್‌ನ ವೆಬ್‌ಸೈಟ್ www.bseindia.com ಮತ್ತು ನ್ಯಾಷನಲ್ ಸ್ಟಾಕ್ ಎಕ್ಸ್‌ಚೇಂಜ್ ಆಫ್ ಇಂಡಿಯಾ ಲಿಮಿಟೆಡ್‌ನ ವೆಬ್‌ಸೈಟ್ www.nseindia.com ಗಳಲ್ಲಿಯೂ ಲಭ್ಯವಿವೆ. ಯಾರು ಅಂತಿಮ ದಿನಾಂಕದಂದು ಸದಸ್ಯರಾಗಿಲ್ಲವೋ ಅಂತಹವರು ಈ ಸೂಚನೆಯನ್ನು ಮಾಹಿತಿಗಾಗಿ ಮಾತ್ರವೇ ಎಂದು ತಿಳಿಯಬೇಕು. ಮತ್ತೂ, ಎಮ್‌ಸಿಎ ಸುತ್ತೋಲೆಗಳ ಪ್ರಕಾರ ಈ ಅಂಚೆ ಮತದಾನಕ್ಕೆ, ಸದಸ್ಯರಿಗೆ ಅಂಚೆ ಮತದಾನದ ಸೂಚನೆ ಮತ್ತು ಅಂಚೆ ಮತದಾನದ ನಮೂನೆಗಳ ಭೌತಿಕ ಪ್ರತಿ ಮತ್ತು ಪ್ರೀ-ಪೇಯ್ಡ್ ಬಿಸಿನೆಸ್ ರಿಪ್ಲೈ ಲಕೋಟೆ ಗಳನ್ನು ಕಳುಹಿಸಿಲ್ಲ.
3. ಯಾವ ಸದಸ್ಯರು ತಮ್ಮ ಇ-ಮೇಲ್ ವಿಳಾಸಗಳನ್ನು ನೋಂದಾಯಿಸಿಕೊಂಡಿಲ್ಲವೋ ಮತ್ತು ಆ ಕಾರಣವಾಗಿ ಅಂಚೆ ಮತದಾನದ ಸೂಚನೆ ಮತ್ತು ಇ-ಮತದಾನದ ಸೂಚನೆಗಳನ್ನು ಅವರಿಗೆ ಕಳುಹಿಸಲಾಗಿಲ್ಲವೋ ಅಂತಹವರು ಅದಕ್ಕಾಗಿ ತಮ್ಮ ಇ-ಮೇಲ್ ವಿಳಾಸ ಮತ್ತು ಮೊಬೈಲ್ ನಂಬರುಗಳನ್ನು ಕಂಪನಿಯ ರಿಜಿಸ್ಟ್ರಾರ್ ಮತ್ತು ಷೇರು ವರ್ಗಾವಣೆ ಏಜೆಂಟರಾದ ಕೆಫಿನ್ ನೊಂದಿಗೆ ತಾತ್ಕಾಲಿಕವಾಗಿ ನೋಂದಾಯಿಸಿಕೊಳ್ಳಬಹುದು. ಇದಕ್ಕಾಗಿ ಅವರು https://ris.kfintech.com/clientservices/postalballot/ ಮೇಲೆ ಕ್ಲಿಕ್ಕಿಸಿದರೆ ಸಾಕು. ಸದಸ್ಯರು ದಯವಿಟ್ಟು ಅದರಲ್ಲಿರುವ ಮಾರ್ಗದರ್ಶನಗಳನ್ನು ಅನುಸರಿಸುತ್ತ ಇ-ಮೇಲ್ ವಿಳಾಸ ಮತ್ತು ಮೊಬೈಲ್ ನಂಬರುಗಳನ್ನು ದಾಖಲಿಸಿ ಸೂಚನೆಯ ಸಾಫ್ಟ್ ಪ್ರತಿ ಮತ್ತು ಇ-ಮತದಾನದ ಬಗೆಗಿನ ಸೂಚನೆಗಳು ಜೊತೆಗೆ ಯೂಸರ್ ಐಡಿ ಹಾಗೂ ಪಾಸ್‌ವರ್ಡ್‌ಗಳನ್ನು ಪಡೆದುಕೊಳ್ಳಬೇಕೆಂದು ವಿನಂತಿಸಿಕೊಳ್ಳುತ್ತೇವೆ. ಏನಾದರೂ ಪ್ರಶ್ನೆಗಳಿದ್ದರೆ ಈ ವಿಳಾಸಕ್ಕೆ ಬರೆಯಬಹುದು: einward.ris@kfintach.com.
4. ಕಂಪನಿಗಳ ಅಧಿನಿಯಮ, 2013ರ ಕಲಮು 108 ಮತ್ತು ಕಂಪನಿಗಳ (ಆಡಳಿತ ಮತ್ತು ನಿರ್ವಹಣೆ) ನಿಯಮಾವಳಿ, 2014 ನಿಯಮ 20 ಮತ್ತು ಸೆಬಿ (ಲಿಸ್ಟಿಂಗ್ ಬಾಧ್ಯತೆಗಳು ಮತ್ತು ಬಹಿರಂಗಪಡಿಸುವ ಅಗತ್ಯತೆಗಳು) ನಿಬಂಧನೆಗಳು, 2015 ನಿಬಂಧನೆ 44 ಅನ್ವಯ ತನ್ನ ಸದಸ್ಯರಿಗೆ ಇ-ವೋಟಿಂಗ್ ಸೌಲಭ್ಯವನ್ನು ಒದಗಿಸಲು ಕಂಪನಿಯು ಹರ್ಷಿಸುತ್ತಿದೆ. ಇ-ಮತದಾನ ಸೌಲಭ್ಯವನ್ನು ಒದಗಿಸಲು ಕಂಪನಿಯು ಕೆಫಿನ್ ಕಂಪನಿಯನ್ನು ನೇಮಕಮಾಡಿಕೊಂಡಿದೆ ಮತ್ತು ಅಂಚೆ ಮತದಾನ ಪ್ರಕ್ರಿಯೆಯನ್ನು ನ್ಯಾಯಯುತವಾಗಿ ಹಾಗೂ ಪಾರದರ್ಶಕವಾಗಿ ನಡೆಸುವ ಸಲುವಾಗಿ ಶ್ರೀ ವಿಜಯಕೃಷ್ಣ ಕೆ.ಟಿ., ವೃತ್ತಿಪರ ಕಂಪನಿ ಸೆಕ್ರೆಟರಿ, ಇವರನ್ನು ಸೂಕ್ಷ್ಮ ಪರಿಶೀಲಕರನ್ನಾಗಿ ನೇಮಿಸಿಕೊಂಡಿದೆ.
5. ಸದಸ್ಯರು ಇ-ವೋಟಿಂಗ್ ಸೌಲಭ್ಯದ ಮೂಲಕ ತಮ್ಮ ಮತದಾನದ ಹಕ್ಕುಗಳನ್ನು ಚಲಾಯಿಸುವ ಆಯ್ಕೆಯನ್ನು ಮಾಡಿಕೊಳ್ಳಬಹುದು. ಇ-ವೋಟಿಂಗ್ ಪ್ರಕ್ರಿಯೆಯ ವಿವರಗಳನ್ನು ಅಂಚೆ ಮತದಾನದ ಸೂಚನೆಯಲ್ಲಿ ನೀಡಲಾಗಿದೆ. ಮತದಾನವು ಇ-ಮತದಾನದ ಮೂಲಕ **ಫೆಬ್ರವರಿ 25, 2026 ರಂದು ಬೆಳಗ್ಗೆ 09.00ಕ್ಕೆ (ಭಾ.ಕಾ.) ಪ್ರಾರಂಭವಾಗಿ ಮಾರ್ಚ್ 26, 2026 ರಂದು ಸಂಜೆ 05.00ಕ್ಕೆ (ಭಾ.ಕಾ.)** ಮುಕ್ತಾಯಗೊಳ್ಳುತ್ತದೆ. ಸದಸ್ಯರು ಈ ಅವಧಿಯಲ್ಲೇ ತಮ್ಮ ಮತಗಳನ್ನು ಚಲಾಯಿಸಬೇಕೆಂದು ಕೋರುತ್ತೇವೆ. ಮೇಲೆ ಹೇಳಿದ ದಿನಾಂಕ ಮತ್ತು ಸಮಯದ ನಂತರ ಕೆಫಿನ್, ಇ-ಮತದಾನ ಸೌಲಭ್ಯವನ್ನು ಸ್ಥಗಿತಗೊಳಿಸುತ್ತದೆ. ಬಳಿಕ ಸದಸ್ಯರು ಮತ ಚಲಾಯಿಸಲು ಸಾಧ್ಯವಿಲ್ಲ. ಸದಸ್ಯರು ಒಮ್ಮೆ ಮತವನ್ನು ದೃಢಪಡಿಸಿದ ನಂತರ ಮತ್ತೆ ಅದನ್ನು ಬದಲಾಯಿಸಲು ಅವಕಾಶವಿರುವುದಿಲ್ಲ.
6. ಅಂಚೆ ಮತದಾನದ ಫಲಿತಾಂಶಗಳನ್ನು ಕೆಲಸದ 2 (ಎರಡು) ದಿನಗಳಲ್ಲಿ ಪ್ರಕಟಿಸಲಾಗುವುದು.. ಅಗತ್ಯವಿರುವ ಬಹುಮತದೊಂದಿಗೆ ನಿರ್ಣಯವು ಅಂಗೀಕಾರವಾದರೆ ಅದು, ಕಂಪನಿಯು ಇ-ವೋಟಿಂಗ್‌ಗಾಗಿ ನಿಗದಿಪಡಿಸಿರುವ ಕೊನೆಯ ದಿನಾಂಕ ಎಂದರೆ **ಮಾರ್ಚ್ 26, 2026** ರಂದು ಅಂಗೀಕಾರವಾಗಿದೆ ಎಂದು ಪರಿಗಣಿಸಲಾಗುವುದು. ಅಂಚೆ ಮತದಾನದ ಫಲಿತಾಂಶಗಳು ಮತ್ತು ಸೂಕ್ಷ್ಮ ಪರಿಶೀಲಕರ ವರದಿಗಳನ್ನು ಕಂಪನಿಯ ವೆಬ್‌ಸೈಟ್ https://www.3mindia.in/3M/en_IN/company-in/about-3m/financial-facts-local/ ಮತ್ತು ಕೆಫಿನ್ ವೆಬ್‌ಸೈಟ್ https://evoting.kfintech.com/ ಗಳಲ್ಲಿ ಹಾಕಲಾಗುವುದು. ಫಲಿತಾಂಶಗಳನ್ನು ಕಂಪನಿಯ ಇಕ್ವಿಟಿ ಷೇರುಗಳು ಲಿಸ್ಟ್ ಆಗಿರುವ ಬಿಎಸ್‌ಇ ಲಿಮಿಟೆಡ್ ಮತ್ತು ನ್ಯಾಷನಲ್ ಸ್ಟಾಕ್ ಎಕ್ಸ್‌ಚೇಂಜ್ ಆಫ್ ಇಂಡಿಯಾ ಲಿಮಿಟೆಡ್‌ಗಳಿಗೂ ತಿಳಿಸಲಾಗುವುದು.
7. ಭೌತಿಕ ರೂಪದಲ್ಲಿ ಷೇರುಗಳನ್ನು ಹೊಂದಿದ್ದು ತಮ್ಮ ಇಮೇಲ್ ವಿಳಾಸಗಳನ್ನು ಮತ್ತು ಸಂಪರ್ಕ ವಿವರಗಳನ್ನು ದಾಖಲಿಸಿರದ/ನವೀಕರಿಸಿರದಂತಹ ಷೇರುದಾರರು https://ris.kfintech.com/clientservices/mobilereg/mobileemailreg.aspx ಲಿಂಕ್ ಮೇಲೆ ಕ್ಲಿಕ್ಕಿಸಿ ಅಥವಾ ರಿಜಿಸ್ಟ್ರಾರ್ ಮತ್ತು ವರ್ಗಾವಣೆ ಏಜೆಂಟರಿಗೆ ಮನವಿಯನ್ನು ಸಲ್ಲಿಸುವ ಮೂಲಕ ಅವುಗಳನ್ನು ದಾಖಲಿಸಬಹುದು/ನವೀಕರಿಸಬಹುದು. ಏನಾದರೂ ಸಂದೇಹಗಳಿದ್ದರೆ https://evoting.karvy.com ನ ಡೌನ್‌ಲೋಡ್ ವಿಭಾಗದಲ್ಲಿರುವ 'ಷೇರುದಾರರ ಸಾಮಾನ್ಯ ಪ್ರಶ್ನೆಗಳು' (FAQs) ಮತ್ತು 'ಷೇರುದಾರರಿಗಾಗಿ ಇ-ವೋಟಿಂಗ್ ಬಳಕೆದಾರರ ಕೈಪಿಡಿ' ಗಳನ್ನು ನೋಡಬಹುದು ಅಥವಾ ಕೆಳಗೆ ಹೆಸರಿಸಿರುವ ಕಂಪನಿಯ ಅಧಿಕಾರಿಯನ್ನು /ಅದರ ರಿಜಿಸ್ಟ್ರಾರ್ ಮತ್ತು ವರ್ಗಾವಣೆ ಏಜೆಂಟರನ್ನು ಸಂಪರ್ಕಿಸಬಹುದು:

ವಿವರಗಳು	ಕೇಫಿನ್ ಟೆಕ್ನಾಲಾಜೀಸ್ ಲಿಮಿಟೆಡ್	3M ಇಂಡಿಯಾ ಲಿಮಿಟೆಡ್
ವಿಳಾಸ	ಸೆಲೆನಿಯಮ್ ಟವರ್, ಬಿ, ಪ್ಲಾಟ್ 31-32, ಗಾಚಿಬೌಲಿ, ಫೈನಾನ್ಸಿಯಲ್ ಡಿಸ್ಟ್ರಿಕ್ಟ್, ನಾನಕ್ರಮಗುಡ, ಹೈದರಬಾದ್ - 500 032	5ನೇ ಮಹಡಿ ಮಾರ್ಕ್‌ಸ್ಕ್ವೇರ್, 61, ಸೇಂಟ್ ಮಾರ್ಕ್ಸ್ ರಸ್ತೆ, ಬೆಂಗಳೂರು – 560 001.
ಹೆಸರು ಮತ್ತು ಹುದ್ದೆ	ಶ್ರೀ ರಾಜೀವ್ ಕುಮಾರ್ ಡೆಪ್ಯೂಟಿ ಮ್ಯಾನೇಜರ್-ಕಾರ್ಪೊರೇಟ್ ರಿಜಿಸ್ಟ್ರಿ	ಶ್ರೀ ಪ್ರತಾಪ್ ರುದ್ರ ಭುವನಗಿರಿ ಕಂಪನಿ ಸೆಕ್ರೆಟರಿ ಮತ್ತು ಕಂಪ್ಲಯನ್ಸ್ ಆಫೀಸರ್
ದೂರವಾಣಿ	040-6716 1524	080-22231414
ಇ-ಮೇಲ್	rajeev.kr@kfintech.com	investorhelpdesk.in@mmm.com

ನಿರ್ದೇಶಕರ ಮಂಡಳಿಯ ಆದೇಶದ ಮೇರೆಗೆ
3M ಇಂಡಿಯಾ ಲಿಮಿಟೆಡ್‌ನ ಪರವಾಗಿ
ಪ್ರತಾಪ್ ರುದ್ರ ಭುವನಗಿರಿ
ಕಂಪನಿ ಸೆಕ್ರೆಟರಿ ಮತ್ತು ಕಂಪ್ಲಯನ್ಸ್ ಆಫೀಸರ್
ಸ್ಥಳ: ಬೆಂಗಳೂರು
ದಿನಾಂಕ: ಫೆಬ್ರವರಿ 24, 2026

ನೈಋತ್ಯ ರೈಲ್ವೆ
ಟೆಂಡರು ಸೂಚನೆ ಸಂ.: Project-SWR-2x25-SBC-JTJ ದಿನಾಂಕ: 09.02.2026
ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರ	ಅಂದಾಜು ಮೌಲ್ಯ
ನೈಋತ್ಯ ರೈಲ್ವೆಯ ಬೆಂಗಳೂರು ವಿಭಾಗದಲ್ಲಿ 3000 ಮೆಟನ್ ಲೋಡಿಂಗ್ ಗುರಿಯನ್ನು ತಲುಪುವಂತಾಗಲು ಬೆಂಗಳೂರು (ಎಸ್‌ಬಿಸಿ) – ಜೋಲಾರಪೇಟೆ (ಜೆಟಿಜೆ) ಗೆ ಎಲೆಕ್ಟ್ರಿಕ್ ಟ್ರಾಕ್ಷನ್ ಅನ್ನು 1x25 ಕೆವಿ ಯಿಂದ 2x25 ಕೆವಿ ಟ್ರಾಕ್ಷನ್ ವ್ಯವಸ್ಥೆಯ ವರೆಗೆ ಉನ್ನತೀಕರಣಗೊಳಿಸಲು ಟ್ರಾಕ್ಷನ್ ಓವರ್‌ಹೆಡ್ ಉಪಕರಣ (ಓಹೆಚ್‌ಇ) ಯ ವಿನ್ಯಾಸ, ಪೂರೈಕೆ, ಸ್ಥಾಪನೆ, ಪರಿಶೀಲನೆ ಮತ್ತು ಕಾರ್ಯಾರಂಭ.	ರೂ. 1,46,15,06,970.25/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 11.03.2026, 15:00 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ಉಪ ಮುಖ್ಯ ಎಲೆಕ್ಟ್ರಿಕಲ್ ಇಂಜಿನಿಯರ್/ಯೋಜನೆ/ಬೆಂಗಳೂರು
PUB/931/AAMO/PRB/SWR/2025-26
RailOne ಅಪ್ಲಿಕೇಶನ್ ಡೌನ್‌ಲೋಡ್ ಮಾಡಿ. RailOne ಭಾರತೀಯ ರೈಲ್ವೆಯ ಆಲ್-ಇನ್-ಒನ್ ರೈಲ್ವೆ ಅಪ್ಲಿಕೇಶನ್ ಆಗಿದೆ. ಪ್ರಯಾಣಿಕರು ಕಾಯ್ದಿರಿಸಿದ ಟಿಕೆಟ್‌ಗಳು, ಕಾಯ್ದಿರಿಸದ ಟಿಕೆಟ್‌ಗಳು, ಪ್ಲಾಟ್ ಫಾರ್ಮ್ ಟಿಕೆಟ್‌ಗಳು ಮತ್ತು ಸೀಸನ್ ಪಾಸ್‌ಗಳನ್ನು ಬುಕ್ ಮಾಡಬಹುದು, PNR ಸ್ಥಿತಿಯನ್ನು ಪರಿಶೀಲಿಸಬಹುದು, ಆಹಾರವನ್ನು ಆರ್ಡರ್ ಮಾಡಬಹುದು ಮತ್ತು ತಮ್ಮ ಬೆರಳ ತುದಿಯಲ್ಲಿ ಇನ್ನೂ ಅನೇಕ ಸೇವೆಗಳನ್ನು ಪ್ರವೇಶಿಸಬಹುದು. RailOne ಅಪ್ಲಿಕೇಶನ್ ಮೂಲಕ ಕಾಯ್ದಿರಿಸದ ಟಿಕೆಟ್‌ಗಳನ್ನು ಬುಕ್ ಮಾಡಲು ಡಿಜಿಟಲ್ ಪಾವತಿಗಳನ್ನು ಬಳಸಿ ಹಾಗೂ 3% ವರೆಗೆ ರಿಯಾಯಿತಿಯನ್ನು ಆನಂದಿಸಿ.
South Western Railway - SWR | SWRRLY | SWRAILWAYHQ | sw_railways

ಕರ್ನಾಟಕ ಸರ್ಕಾರ
ಶ್ರೀ ವೇಣುಗೋಪಾಲ ಕೃಷ್ಣ ಸ್ವಾಮಿ ದೇವಾಲಯ ಮತ್ತು ಸಮೂಹ ದೇವಾಲಯಗಳು
ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆ
ಕಾರ್ಯನಿರ್ವಾಹಕ ಅಧಿಕಾರಿಗಳ ಕಾರ್ಯಾಲಯ, ಮಲ್ಲೇಶ್ವರಂ, ಬೆಂಗಳೂರು.
ದೂರವಾಣಿ ಸಂಖ್ಯೆ: 080-23313339 Email:samuhadevalya12@gmail.com
ಸಂಖ್ಯೆ: ಕಾ.ನಿ.ಅ/ಸಿಆರ್-31/2025-26 ದಿನಾಂಕ: 25.02.2026
ಸಂಕ್ಷಿಪ್ತ ಟೆಂಡರ್ ಅಧಿಸೂಚನೆ (ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ)
ಬೆಂಗಳೂರು ನಗರ ಮಲ್ಲೇಶ್ವರಂ. ಶ್ರೀ ವೇಣುಗೋಪಾಲ ಕೃಷ್ಣ ಸ್ವಾಮಿ ಮತ್ತು ಸಮೂಹ ದೇವಾಲಯಗಳಲ್ಲಿ ಈ ಕೆಳಕಂಡ ಟೆಂಡರ್‌ಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಪ್ರಕಟಣೆ ಹೊರಡಿಸಲಾಗಿರುತ್ತದೆ. ಟೆಂಡರ್ ಸಲ್ಲಿಸುವ ಟೆಂಡರ್‌ದಾರರು ಹೆಚ್ಚಿನ ಮಾಹಿತಿಗಾಗಿ (https://eproc.karnataka.gov.in) ಅಥವಾ ದೇವಾಲಯದ ದೂರವಾಣಿ ಸಂ: 080-23313339 ಅನ್ನು ಸಂಪರ್ಕಿಸಲು ಕೋರಿದೆ.

ಟೆಂಡರ್‌ನ ಹೆಸರು	ಕಡತ ಸಂಖ್ಯೆ	ಆನ್‌ಲೈನ್ ಮೂಲಕ ಟೆಂಡರ್ ಸಲ್ಲಿಸುವ ದಿನಾಂಕ		ಆನ್‌ಲೈನ್ ಮೂಲಕ ಟೆಂಡರ್ ತೆರೆಯುವ ದಿನಾಂಕ
		ರಿಂದ	ವರೆಗೆ	
ಬೆಂಗಳೂರು ನಗರ ಮಲ್ಲೇಶ್ವರಂ, ಶ್ರೀ ವೇಣುಗೋಪಾಲ ಕೃಷ್ಣ ಸ್ವಾಮಿ. ಮತ್ತು ಸಮೂಹ ದೇವಾಲಯಗಳಿಗೆ ಅವಶ್ಯಕವಾದ ಹುದ್ದೆಗಳ ಸೇವೆಯನ್ನು ಹೊರ ಗುತ್ತಿಗೆ ಆಧಾರದಲ್ಲಿ ಪಡೆಯುವ ಬಗ್ಗೆ	ಕಾ.ನಿ.ಅ/ಸಿಆರ್-31/2025-26	25.02.2026	13.03.2026	16.03.2026

ಸಹಿ/- ಕಾರ್ಯನಿರ್ವಾಹಕ ಅಧಿಕಾರಿಗಳು
ಶ್ರೀ ವೇಣುಗೋಪಾಲ ಕೃಷ್ಣ ಸ್ವಾಮಿ ಮತ್ತು ಸಮೂಹ ದೇವಾಲಯಗಳು, ಮಲ್ಲೇಶ್ವರಂ, ಬೆಂಗಳೂರು
ವಾಸಾಸಂಇ/ವಾಪ್ರ/ಶಿರಡಿ ಸಾಯಿ/5824/2025-26

ಲೋಕೋಪಯೋಗಿ ಇಲಾಖೆ, ತುಮಕೂರು,
ಕ್ರ.ಸಂ:ಕಾಇಂ:ಲೋಇವಿ:ತುಮ:ಸ.ಇಂ-1: ಟೆಂಡರ್ 54:2025-26. ದಿನಾಂಕ: 23-02-2026
ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂ. 54/2025-26 ದಿನಾಂಕ 23-02-2026
ಈ ಕಚೇರಿ ಟೆಂಡರ್ ಪ್ರಕಟಣೆ ಸಂಖ್ಯೆ: **54/2025-26 ದಿನಾಂಕ 23/02/2026** ರಂದು ತುಮಕೂರು ವಿಭಾಗದ ವ್ಯಾಪ್ತಿಯಲ್ಲಿ **ಲೆಕ್ಕ ಶೀರ್ಷಿಕೆ 3054 ನಿರ್ವಹಣೆ ಮತ್ತು 2059 ವಿವಿಧ ಇಲಾಖಾ ಕಟ್ಟಡಗಳ ದುರಸ್ಥಿ/ನಿರ್ವಹಣೆ ಅಡಿಯಲ್ಲಿ ಒಟ್ಟು 03** ಸರ್ವೀಸ್ ಟೆಂಡರ್ ಅನ್ನು KPPP-Portal ಮೂಲಕ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಸದರಿ ಸರ್ವೀಸ್ ಟೆಂಡರ್‌ಗಳಲ್ಲಿ ಟೆಂಡರಿಗಿಟ್ಟ ಗರಿಷ್ಠ ಮೊತ್ತ **ರೂ. 17.98 ಲಕ್ಷಗಳು** ಮತ್ತು ಟೆಂಡರಿಗಿಟ್ಟ ಕನಿಷ್ಠ ಮೊತ್ತ **ರೂ. 2.46 ಲಕ್ಷಗಳು,** ಇ.ಎಂ.ಡಿ ಗರಿಷ್ಠ ಮೊತ್ತ **ರೂ. 22,486/-** ಮತ್ತು ಇ.ಎಂ.ಡಿ ಕನಿಷ್ಠ ಮೊತ್ತ **ರೂ. 6,150/-,** ಸಂಬಂಧಿಸಿದ ವಿಚಾರಣೆ ಮತ್ತು ಸ್ಪಷ್ಟೀಕರಣಗಳಿಗೆ ಕೊನೆ **ದಿನಾಂಕ ಮತ್ತು ವೇಳೆ: 02/03/2026 ರ 17-30 ಗಂಟೆಗೆ,** KPPP-Portal ಮೂಲಕ ಟೆಂಡರ್ ಅನ್ನು **ದಿನಾಂಕ 23/02/2026 ರಿಂದ 03/03/2026 ರ 16.00 ಗಂಟೆವರೆಗೆ** ಪಡೆಯಬಹುದಾಗಿದೆ. ಟೆಂಡರ್ ಅನ್ನು ಸ್ವೀಕರಿಸಲು ಕೊನೆಯ **ದಿನಾಂಕ ಮತ್ತು ವೇಳೆ: 03/03/2026 ರ 16-00 ಗಂಟೆವರೆಗೆ,** ತಾಂತ್ರಿಕ ಬಿಡ್‌ಅನ್ನು ತೆರೆಯುವ **ದಿನಾಂಕ ಮತ್ತು ವೇಳೆ: 04/03/2026 ರ 16-30 ಗಂಟೆಗೆ,** ಆರ್ಥಿಕ ಬಿಡ್‌ಅನ್ನು ತೆರೆಯುವ **ದಿನಾಂಕ ಮತ್ತು ವೇಳೆ: 05/03/2026 ರ 17-00 ಗಂಟೆಗೆ** ಹೆಚ್ಚಿನ ವಿವರಗಳನ್ನು ಸದರಿ ಕಚೇರಿಯಿಂದ ಕಚೇರಿ ವೇಳೆಯಲ್ಲಿ ಪಡೆಯಬಹುದಾಗಿದೆ ಹಾಗೂ ವೆಬ್‌ಸೈಟ್ ಸಂ:https://kppp.karnataka.gov.in ರಲ್ಲಿ ಪಡೆಯಬಹುದಾಗಿದೆ.
ಸೂಚನೆ: ಆರ್ಥಿಕ ವಹಿವಾಟಿನ ಪತ್ರದಲ್ಲಿ ಯು.ಡಿ.ಐ ಸಂಖ್ಯೆಯನ್ನು ನಮೂದಿಸಿಲ್ಲದಿರುವ ಆರ್ಥಿಕ ವಹಿವಾಟನ್ನು ಪರಿಗಣಿಸುವುದಿಲ್ಲ. ಸದರಿ ಟೆಂಡರ್ ಪ್ರಕಟಣೆಯಲ್ಲಿ ಆಗುವಂತಹ ಮುಂದಿನ ಬದಲಾವಣೆಗಳನ್ನು ಹಾಗೂ ಮೀಸಲಾತಿ ನೀಡಿರುವ ಕಾಮಗಾರಿ ವಿವರಗಳನ್ನು ಕೆ.ಪಿ.ಪಿ.ಪಿ ಪೋರ್ಟಲ್‌ನಲ್ಲಿ ನೋಡಿಕೊಳ್ಳುವುದು
ಸಹಿ/- ಕಾರ್ಯಪಾಲಕ ಇಂಜಿನಿಯರ್
ಲೋಕೋಪಯೋಗಿ ಇಲಾಖೆ ವಿಭಾಗ ತುಮಕೂರು.
DIPR/TUM/RO-281/25-26/Oysters

ಕರ್ನಾಟಕ ಸರ್ಕಾರ
ಶ್ರೀ ಸುಗ್ರೀವ ವೆಂಕಟರಮಣ ಸ್ವಾಮಿ ದೇವಾಲಯ,
ಕಾರ್ಯನಿರ್ವಾಹಕ ಅಧಿಕಾರಿ, ಬಳೇಪೇಟೆ, ಬೆಂಗಳೂರು
ದೂರವಾಣಿ: 080-23313339, Email:samuhadevalya12@gmail.com
ಸಂಖ್ಯೆ: ಕಾ.ನಿ.ಅ/ಸಿಆರ್-25/2025-26 ದಿನಾಂಕ:25.02.2026
ಪ್ರಕಟಣೆ
ಬೆಂಗಳೂರು ನಗರ ಬಳೇಪೇಟೆಯಲ್ಲಿರುವ ಶ್ರೀ ಸುಗ್ರೀವ ವೆಂಕಟರಮಣ ಸ್ವಾಮಿ ದೇವಾಲಯಕ್ಕೆ ಸೇರಿದ ಖಾಲಿ ಇರುವ 02 ಅಂಗಡಿಗಳನ್ನು ಪರಿಶಿಷ್ಠ ಜಾತಿಯವರಿಗೆ-01, ಹಾಗೂ ಸಾಮಾನ್ಯ ವರ್ಗದವರಿಗೆ-01 ಗುತ್ತಿಗೆ ನೀಡಲು ಮೀಸಲಾತಿ ನಿಗಧಿಪಡಿಸಿ 5 ವರ್ಷಗಳ ಅವಧಿಗೆ ಪ್ರಸಕ್ತ ಮಾರುಕಟ್ಟೆಯ ದರಕ್ಕನುಗುಣವಾಗಿ ಹಂಚಿಕೆ ಮಾಡುವ ಸಂಬಂಧ ಇ-ಟೆಂಡರ್ ಪ್ರಕಟಣೆಯನ್ನು ಹೊರಡಿಸಲಾಗಿದ್ದು, ಆಸಕ್ತರು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಅರ್ಜಿ ಶುಲ್ಕ ಪಾವತಿಸುವ ಮೂಲಕ **ದಿನಾಂಕ: 25.02.2026** ರಂದು ಅರ್ಜಿಗಳನ್ನು **www.eprock.karnataka.gov.in** ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಡೌನ್‌ಲೋಡ್ ಮಾಡಿಕೊಂಡು **ದಿನಾಂಕ 13.03.2026 ಸಂಜೆ 5.00 ಗಂಟೆಯವರೆಗೆ** ಅರ್ಜಿಗಳನ್ನು ಸಲ್ಲಿಸಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಕಛೇರಿ ದೂರವಾಣಿ ಸಂಖ್ಯೆ **080-23313339** ಅನ್ನು ಸಂಪರ್ಕಿಸಲಾಗಿದೆ ಅಥವಾ ಕಛೇರಿಗೆ ಭೇಟಿ ನೀಡಿ ಹೆಚ್ಚಿನ ವಾಹಿತಿಯನ್ನು ಪಡೆದುಕೊಳ್ಳಬಹುದಾಗಿದೆ.
ಸಹಿ/- ಕಾರ್ಯನಿರ್ವಾಹಕ ಅಧಿಕಾರಿಗಳು
ಶ್ರೀ ಸುಗ್ರೀವ ವೆಂಕಟರಮಣ ಸ್ವಾಮಿ ದೇವಾಲಯ, ಬಳೇಪೇಟೆ, ಬೆಂಗಳೂರು
ವಾಸಾಸಂಇ/ವಾಪ್ರ/5850/ಶಿರಡಿ ಸಾಯಿ/2025-26

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ
'ಜಲಭವನ', ನಂ. 6, 1ನೇ ಘಟ್ಟ, 1ನೇ ಹಂತ, ಬಿಟಿಎಂ ಲೇಔಟ್, ಬನ್ನೇರುಘಟ್ಟ ಮುಖ್ಯರಸ್ತೆ, ಬೆಂಗಳೂರು-560029.
ದೂ: 080-41106508 ಇಮೇಲ್: cekwbbng@gmail.com ವೆಬ್‌ಸೈಟ್: https://kppp.karnataka.gov.in
No. KWB/CAO/AAO-1/Cashier/2025-26/448 Date: 23.02.2026
ಇ-ಹರಾಜಿಗಾಗಿ ಆಹ್ವಾನ ಪ್ರಕಟಣೆ (ಕೆಪಿಪಿಪಿ ಮುಖಾಂತರ ಮಾತ್ರ)
ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ರೂ.500 ಕೋಟಿಗಳ ನಿಶ್ಚಿತ ಠೇವಣಿ ರೂಪದಲ್ಲಿ ನಿಧಿ ಹೂಡಿಕೆಗಾಗಿ ಇ-ಹರಾಜು ಆಹ್ವಾನಿಸಿದೆ.
ಇ-ಹರಾಜು ಪ್ರಕಟಣೆ ಸಂಖ್ಯೆ: KUWSDB/2025-26/AUCTION11

ಕ್ರ.ಸಂ.	ವಿವರಗಳು	ದಿನಾಂಕಗಳು
1	ಇ-ಹರಾಜು ಪ್ರಕಟಣೆ ದಿನಾಂಕ	24-02-2026 ಬೆಳಿಗ್ಗೆ 11.00 ಗಂಟೆಯಿಂದ
2	ಪೂರ್ವ ಬಿಡ್ ಸಭೆ	02-03-2026ರಂದು 11.30 ಗಂಟೆಗೆ ಜಲಭವನ, ಬೆಂಗಳೂರಿನಲ್ಲಿ
3	ಹರಾಜಿನಲ್ಲಿ ಭಾಗವಹಿಸಲು ಆಸಕ್ತಿ ಖಚಿತಪಡಿಸಲು ಕೊನೆಯ ದಿನಾಂಕ ಮತ್ತು ಸಮಯ	05-03-2026 ಸಂಜೆ 4.00 ಗಂಟೆವರೆಗೆ.
4	ನೇರ ಬಿಡ್ಡಿಂಗ್	10-03-2026ರ ಬೆಳಿಗ್ಗೆ 11.00 ರಿಂದ ಸಂಜೆ 4.00 ಗಂಟೆವರೆಗೆ.

ಹೆಚ್ಚಿನ ವಿವರಗಳನ್ನು ಮೇಲಿನ ಕಛೇರಿಯಿಂದ ಮತ್ತು ವೆಬ್‌ಸೈಟ್ : https://kppp.karnataka.gov.in ನಿಂದ ಪಡೆದುಕೊಳ್ಳಬಹುದು.
ಸಹಿ/- ವ್ಯವಸ್ಥಾಪಕ ನಿರ್ದೇಶಕರು
ಕನನೀಸ & ಒಚ ಮಂಡಳಿ, ಬೆಂಗಳೂರು
DIPR/CP/YC/5838/2025-26

ಬೆಂಗಳೂರು ಉತ್ತರ ನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ (ಕ್ಯೂಎ/ಕ್ಯೂಸಿ),
ವಲಯ-2, ರೂಂ ನಂ. 315, 3ನೇ ಮಹಡಿ, ಮಿನಿ ವಿಧಾನಸೌಧ, ಯಲಹಂಕ, ಬೆಂಗಳೂರು – 560064.
ಸಂಖ್ಯೆ:ಕಾಅ/ಕ್ಯೂಎ/ಕ್ಯೂಸಿ/ವ-2/ಬೆಂಉನಪಾ/ಟೆಂಡರ್/07/2025-26 ದಿನಾಂಕ: 24-02-2026
ಅಲ್ಪಾವಧಿ ಟೆಂಡರ್ ಪ್ರಕಟಣೆ – (2ನೇ ಕರೆ)
(ದ್ವಿ-ಲಕೋಟೆ ಪದ್ಧತಿ) (ಜಿಓಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)
ಕಾರ್ಯಪಾಲಕ ಅಭಿಯಂತರರು, ಗುಣಮಟ್ಟ ಭರವಸೆ / ಗುಣಮಟ್ಟ ನಿಯಂತ್ರಣ ವಿಭಾಗ, ವಲಯ-2, ಬೆಂಉನಪಾ, ಬೆಂಗಳೂರು ಇವರು ಈ ಕೆಳಕಂಡ ಕಾಮಗಾರಿಗಳಿಗೆ ಮೇಲ್ವಿಚಾರಣೆ, ಗುಣಮಟ್ಟ ನಿಯಂತ್ರಣ (ಪಿಎಂಸಿ) ಸೇರಿದಂತೆ ಯೋಜನಾ ನಿರ್ವಹಣೆಗೆ ಸಮಾಲೋಚನಾ ಸೇವೆಗಳಿಗಾಗಿ ಇದೇ ವಿಧದ ಕಾಮಗಾರಿಗಳನ್ನು ನಿರ್ವಹಿಸಿರುವ ಆಸಕ್ತ ವ್ಯಕ್ತಿಗಳು / ಸಂಸ್ಥೆಗಳಿಂದ ಪ್ರಸ್ತಾವನೆಗಾಗಿ ಮನವಿ ಆಹ್ವಾನಿಸಿದ್ದಾರೆ.

ಕ್ರ ಸಂ.	ಕಾಮಗಾರಿಯ ಹೆಸರು
1	ಯಲಹಂಕ ಉಪ ವಿಭಾಗದ ವಾರ್ಡ್ ಸಂಖ್ಯೆ. 01 ರ ಬಿ.ಬಿ ರಸ್ತೆಯ ಕೆಂಪೇಗೌಡ ಪ್ರತಿಮೆಯಿಂದ ಕೋಗಿಲು ವೃತ್ತದವರೆಗಿನ ರಸ್ತೆಗಳು ಮತ್ತು ಚರಂಡಿಯ ಸುಧಾರಣೆಗಳ ಕಾಮಗಾರಿಗೆ ಮೇಲ್ವಿಚಾರಣೆ ಹಾಗೂ ಗುಣಮಟ್ಟ ನಿಯಂತ್ರಣ ಸೇರಿದಂತೆ ಪಿಎಂಸಿ ಸೇವೆಗಳನ್ನು ಒದಗಿಸುವುದು. **ಯೋಜನೆಯ ಮೊತ್ತ (ರೂ. ಲಕ್ಷಗಳಲ್ಲಿ): 150.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 3,750/-**
2	ಯಲಹಂಕ ಉಪ ವಿಭಾಗದ ವಾರ್ಡ್ ಸಂಖ್ಯೆ. 04 ರ 'ಬಿ' ಸೆಕ್ಟರ್‌ನ ವಿಶ್ವೇಶ್ವರಯ್ಯ ಉದ್ಯಾನವನ ಸುತ್ತಮುತ್ತ ಪ್ರದೇಶದ ಮುಖ್ಯರಸ್ತೆ ಮತ್ತು ಅಡ್ಡರಸ್ತೆಗಳಲ್ಲಿನ ರಸ್ತೆಗಳು ಮತ್ತು ಚರಂಡಿಯ ಸುಧಾರಣೆಗಳ ಕಾಮಗಾರಿಗೆ ಮೇಲ್ವಿಚಾರಣೆ ಹಾಗೂ ಗುಣಮಟ್ಟ ನಿಯಂತ್ರಣ ಸೇರಿದಂತೆ ಪಿಎಂಸಿ ಸೇವೆಗಳನ್ನು ಒದಗಿಸುವುದು. **ಯೋಜನೆಯ ಮೊತ್ತ (ರೂ. ಲಕ್ಷಗಳಲ್ಲಿ): 150.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 3,750/-**
3	ಯಲಹಂಕ ನ್ಯೂ ಟೌನ್ ಉಪ ವಿಭಾಗದ ವಾರ್ಡ್ ಸಂಖ್ಯೆ. 04 ರ 'ಎ' ಸೆಕ್ಟರ್‌ನ ಬಸವೇಶ್ವರ ಉದ್ಯಾನವನ ಸುತ್ತಮುತ್ತ ಪ್ರದೇಶದ ಮುಖ್ಯರಸ್ತೆ ಮತ್ತು ಅಡ್ಡರಸ್ತೆಗಳಲ್ಲಿನ ರಸ್ತೆಗಳು ಮತ್ತು ಚರಂಡಿಯ ಸುಧಾರಣೆಗಳ ಕಾಮಗಾರಿಗೆ ಮೇಲ್ವಿಚಾರಣೆ ಹಾಗೂ ಗುಣಮಟ್ಟ ನಿಯಂತ್ರಣ ಸೇರಿದಂತೆ ಪಿಎಂಸಿ ಸೇವೆಗಳನ್ನು ಒದಗಿಸುವುದು. **ಯೋಜನೆಯ ಮೊತ್ತ (ರೂ. ಲಕ್ಷಗಳಲ್ಲಿ): 150.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 3,750/-**
4	ಯಲಹಂಕ ಉಪ ವಿಭಾಗದ ವಾರ್ಡ್ ಸಂಖ್ಯೆ. 02, 03, 04 ರಲ್ಲಿ ಉದ್ಯಾನವನ ಮತ್ತು ಆಟದ ಮೈದಾನ ಹಾಗೂ ಜಿಮ್ ಮತ್ತು ಆಟದ ಉಪಕರಣಗಳ ಅಭಿವೃದ್ಧಿ ಕಾಮಗಾರಿಗೆ ಮೇಲ್ವಿಚಾರಣೆ ಹಾಗೂ ಗುಣಮಟ್ಟ ನಿಯಂತ್ರಣ ಸೇರಿದಂತೆ ಪಿಎಂಸಿ ಸೇವೆಗಳನ್ನು ಒದಗಿಸುವುದು. **ಯೋಜನೆಯ ಮೊತ್ತ (ರೂ. ಲಕ್ಷಗಳಲ್ಲಿ): 200.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 4,625/-**

ಟೆಂಡರ್ ವೇಳಾಪಟ್ಟಿ: 1) ಟೆಂಡರ್ ಡಾಕ್ಯೂಮೆಂಟ್‌ನ್ನು ಜಿಓಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: https://kppp.karnataka.gov.in ನಿಂದ ದಿನಾಂಕ: **26-02-2026 ರಂದು ಸಂಜೆ 4.00 ಗಂಟೆಯಿಂದ** ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಬಿಡ್ ಪೂರ್ವಭಾವಿ ಸಭೆ ದಿನಾಂಕ: **02-03-2026 ರಂದು ಬೆಳಿಗ್ಗೆ 11.30 ಗಂಟೆಗೆ ಕಾರ್ಯಪಾಲಕ ಅಭಿಯಂತರರು (ಕ್ಯೂಎ/ಕ್ಯೂಸಿ) ಕಛೇರಿ, ವಲಯ-2, ರೂಂ. ನಂ. 315, 3ನೇ ಮಹಡಿ, ಮಿನಿ ವಿಧಾನಸೌಧ, ಯಲಹಂಕ, ಬೆಂಗಳೂರು – 560064 ಇಲ್ಲಿ ನಡೆಯುವುದು.** 3) ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ: **05-03-2026 ರಂದು ಸಂಜೆ 4.00 ಗಂಟೆವರೆಗೆ.** 4) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: **06-03-2026 ರಂದು ಸಂಜೆ 4.30 ಗಂಟೆಗೆ.** ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಪಡೆಯಬಹುದು.
ಸಹಿ/- ಕಾರ್ಯಪಾಲಕ ಅಭಿಯಂತರರು (ಕ್ಯೂಎ/ಕ್ಯೂಸಿ)
ವಲಯ-2, ಬೆಂಉನಪಾ.

ಪಾಲಿಕೆ ಪ್ರಥಮ ದರ್ಜೆ ಕಾಲೇಜು ಕಟ್ಟಡ ಉದ್ಘಾಟನೆ

‘ಪಾಲಿಕೆ ಶಾಲೆ ಸದುಪಯೋಗವಾಗಲಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರ ಪಾಲಿಕೆಗಳ ಶಾಲಾ–ಕಾಲೇಜುಗಳಲ್ಲಿ ಉತ್ತಮ ಸೌಲಭ್ಯವಿದ್ದು, ವಿದ್ಯಾರ್ಥಿಗಳು ಇವುಗಳ ಸದುಪಯೋಗ ಪಡಿಸಿಕೊಳ್ಳಬೇಕು ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

ಬೆಂಗಳೂರು ಕೇಂದ್ರ ನಗರ ಪಾಲಿಕೆ ವತಿಯಿಂದ ಗಾಂಧಿನಗರ ವಿಧಾನಸಭಾ ಕ್ಷೇತ್ರದ ಮಾಗಡಿ ರಸ್ತೆಯಲ್ಲಿ ನಿರ್ಮಿಸಿರುವ ನಗರ ಪಾಲಿಕೆ ಪ್ರಥಮ ದರ್ಜೆ ಕಾಲೇಜು ಕಟ್ಟಡವನ್ನು ಮಂಗಳವಾರ ಉದ್ಘಾಟಿಸಿ ಅವರು ಮಾತನಾಡಿದರು.

ಬಿ.ಸಿ.ಎ, ಎಂ.ಸಿ.ಎ ಕೋರ್ಸ್‌ಗೆ ಬೇಡಿಕೆ ಸಲ್ಲಿಸಿದ್ದು, ಅಧಿಕಾರಿಗಳು ಅದಕ್ಕೆ ಅನುಮೋದನೆ ನೀಡಿ ಬಡ ವಿದ್ಯಾರ್ಥಿಗಳಿಗೆ ಅನುಕೂಲ ಕಲ್ಪಿಸಲು ಸೂಚಿಸಿದರು.

ಕೇಂದ್ರ ನಗರ ಪಾಲಿಕೆ ಮುಖ್ಯ ಎಂಜಿನಿಯರ್ ವಿಜಯ್ ಕುಮಾರ್ ಹರಿದಾಸ್, ಅಧೀಕ್ಷಕ ಎಂಜಿನಿಯರ್ ಚಂದ್ರಶೇಖರ್, ಕಾರ್ಯಪಾಲಕ ಎಂಜಿನಿಯರ್ ಮಧುಸೂಧನ್, ಶಿಕ್ಷಣ ವಿಭಾಗದ ಅಧಿಕಾರಿಗಳು ಇದ್ದರು.

ಮಾಗಡಿ ರಸ್ತೆಯಲ್ಲಿ ಕೇಂದ್ರ ನಗರ ಪಾಲಿಕೆ ಪ್ರಥಮ ದರ್ಜೆ ಕಾಲೇಜು ಕಟ್ಟಡವನ್ನು ದಿನೇಶ್ ಗುಂಡೂರಾವ್ ಮಂಗಳವಾರ ಉದ್ಘಾಟಿಸಿದರು

₹4 ಕೋಟಿ ವೆಚ್ಚದಲ್ಲಿ ಕಟ್ಟಡ ನಿರ್ಮಾಣ

ಅಮೃತ ನಗರೋತ್ಥಾನ ಯೋಜನೆ ಅಡಿಯಲ್ಲಿ ₹4 ಕೋಟಿ ವೆಚ್ಚದಲ್ಲಿ ಕಟ್ಟಡ ನಿರ್ಮಿಸಲಾಗಿದೆ. ಕಟ್ಟಡ–1ರಲ್ಲಿ 6 ತರಗತಿ ಕೊಠಡಿ, ಶೌಚಾಲಯ ಸೌಲಭ್ಯ ಲಭ್ಯವಿವೆ. ಕಟ್ಟಡ–2ರಲ್ಲಿ 6 ಕೊಠಡಿಗಳು, ಶೌಚಾಲಯಗಳು ಹಾಗೂ ಸೆಲ್ಲರ್ (ಊಟದ ಕೊಠಡಿ) ವ್ಯವಸ್ಥೆ ಕಲ್ಪಿಸಲಾಗಿದೆ ಎಂದು ಸಚಿವರು ಹೇಳಿದರು.

28ರಂದು ‘ಭೂಮಿ ರೈತ’ ಪ್ರಶಸ್ತಿ ಪ್ರದಾನ

ಬೆಂಗಳೂರು: ಭೂಮಿ, ಡಿಜಿಟಲ್ ಕೃಷಿ ವೇದಿಕೆ ನೀಡುವ 2025ನೇ ಸಾಲಿನ ‘ಭೂಮಿ ರೈತ ಪ್ರಶಸ್ತಿ’ಯನ್ನು 120ಕ್ಕೂ ಅಧಿಕ ರೈತರಿಗೆ ಫೆ.28ರಂದು (ಶನಿವಾರ) ರವೀಂದ್ರ ಕಲಾಕ್ಷೇತ್ರದಲ್ಲಿ ನಡೆಯುವ ಸಮಾರಂಭದಲ್ಲಿ ಪ್ರದಾನ ಮಾಡಲಾಗುತ್ತದೆ. ರೈತ ಅಧಿವೇಶನ ನಡೆಯಲಿದೆ’ ಎಂದು ವೇದಿಕೆಯ ಮಾಧ್ಯಮ ಸಲಹೆಗಾರ ಹನುಮೇಶ್ ಕೆ. ಯಾವಗಲ್ ತಿಳಿಸಿದ್ದಾರೆ.

‘ನಗರ ಪ್ರದೇಶದ ಜನರು ಗ್ರಾಮೀಣ ಭಾಗದ ರೈತರಿಗೆ ನೈತಿಕ ಸ್ಥೈರ್ಯ ತುಂಬುವ ಹಾಗೂ ಅನ್ನದಾತನ ಜೊತೆಗೆ ಸದಾ ನಿಲ್ಲುವ ಉದ್ದೇಶದಿಂದ ಐ ಸಪೋರ್ಟ್ ಫಾರ್ಮರ್ ಎಂಬ ವಿಶಿಷ್ಟ ಯೋಜನೆಯನ್ನು ಭೂಮಿ, ಕೃಷಿ ಡಿಜಿಟಲ್ ವೇದಿಕೆ ವತಿಯಿಂದ ಆರಂಭಿಸಲಾಗುತ್ತಿದೆ’ ಎಂದು ವಿವರಿಸಿದ್ದಾರೆ.

‘ಅನ್ನದಾತನೇ ಸೆಲೆಬ್ರಿಟಿ’ ಎಂದು ಸಮಾಜಕ್ಕೆ ಸಾರಿ ಹೇಳುವ ಮೂಲಕ ಯುವ ಜನಾಂಗಕ್ಕೆ ಕೃಷಿ ಕ್ಷೇತ್ರದ ಮಹತ್ವ ತಿಳಿಸುವ ಪ್ರಯತ್ನ ಮಾಡಲಾಗುತ್ತದೆ’ ಎಂದು ತಿಳಿಸಿದ್ದಾರೆ. ಕೃಷಿ ಇಲಾಖೆಯ ನಿರ್ದೇಶಕ ಜಿ.ಟಿ. ಪುತ್ರ, ರಾಜ್ಯ ಕೃಷಿ ಉತ್ಪನ್ನಗಳ ಸಂಸ್ಕರಣೆ ಹಾಗೂ ರಫ್ತು ನಿಗಮದ (ಕೆಪೆಕ್) ವ್ಯವಸ್ಥಾಪಕ ನಿರ್ದೇಶಕ ಸಿ.ಎನ್. ಶಿವಪ್ರಕಾಶ್ ಅವರು ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಭಾಗವಹಿಸಲಿದ್ದಾರೆ ಎಂದರು.

PARAS

‘ವ್ಯವಸ್ಥಿತ ಸ್ಥಳದಲ್ಲಿ ವ್ಯಾಪಾರ ಮಾಡಿ’

ಬೀದಿ ವ್ಯಾಪಾರಿಗಳಿಗೆ ಶಾಸಕ ಎಸ್‌. ಮುನಿರಾಜು ಸಲಹೆ

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: ‘ಕೇಂದ್ರ ಸರ್ಕಾರದ ಯೋಜನೆ ಅಡಿಯಲ್ಲಿ ಬೀದಿ ಬದಿ ವ್ಯಾಪಾರಿಗಳಿಗೆ ಭದ್ರತಾ ಖಾತರಿ ಇಲ್ಲದೆ ₹10 ಸಾವಿರ ಸಹಾಯ ನೀಡಲಾಗುತ್ತದೆ. ಅದಕ್ಕಾಗಿ ವ್ಯಾಪಾರಿಗಳಿಗೆ ಗುರುತಿನ ಚೀಟಿ ನೀಡಲಾಗುತ್ತಿದೆ’ ಎಂದು ಶಾಸಕ ಎಸ್‌.ಮುನಿರಾಜು ತಿಳಿಸಿದರು.

ಬಾಗಲಗುಂಟೆಯ ಜಿಬಿಎ ಕಚೇರಿಯ ಆವರಣದಲ್ಲಿ ಪಿಎಂ ಸ್ವನಿಧಿ ಯೋಜನೆಯ ಆಧಾರದ ಅಡಿಯಲ್ಲಿ ಕ್ಷೇತ್ರದ ಬೀದಿ ಬದಿ ವ್ಯಾಪಾರಿಗಳಿಗೆ ಸರ್ಕಾರದಿಂದ ನೀಡಲಾಗುವ ಗುರುತಿನ ಕಾರ್ಡ್ ನೀಡಿ ಮಾತನಾಡಿದರು.

ಮುಖ್ಯಾಂಶಗಳು
- ಪಿಎಂ ಸ್ವನಿಧಿ ಯೋಜನೆಯ ಅಡಿಯಲ್ಲಿ ಗುರುತಿನ ಚೀಟಿ
- ₹10 ಸಾವಿರ ಧನ ಸಹಾಯಕ್ಕೆ ಅನುವು

‘ಎಲ್ಲೆಂದರಲ್ಲಿ ತಳ್ಳುವ ಗಾಡಿ ನಿಲ್ಲಿಸಿ ವ್ಯಾಪಾರ ಮಾಡುತ್ತಾ ಸಾರ್ವಜನಿಕರಿಗೆ ತೊಂದರೆ ನೀಡಬೇಡಿ. ಸಂಚಾರ ಸಮಸ್ಯೆ, ಅಪಘಾತ ವಾಗುವ ಸ್ಥಳದಲ್ಲಿ ವ್ಯಾಪಾರ ಮಾಡದೆ ವ್ಯವಸ್ಥಿತ ಸ್ಥಳದಲ್ಲಿ ವ್ಯಾಪಾರ ಮಾಡಿ ನಿಮ್ಮ ಬದುಕನ್ನು ರೂಪಿಸಿಕೊಳ್ಳಿ’ ಎಂದು ಸಲಹೆ ನೀಡಿದರು.

‘ಸುಮಾರು ವರ್ಷಗಳಿಂದ ದಾಸರಹಳ್ಳಿ ಮೆಟ್ರೊ ಸೇತುವೆ ಕೆಳಗಡೆ ನೂರಾರು ವ್ಯಾಪಾರಿಗಳು ವ್ಯಾಪಾರ ಮಾಡುತ್ತಾ ಬದುಕು ಕಟ್ಟಿಕೊಂಡಿದ್ದಾರೆ. ಅವರ ಅನುಕೂಲಕ್ಕಾಗಿ 8X10 ಅಡಿ ಶೆಡ್ ವ್ಯವಸ್ಥೆ ಮಾಡಿ, ವಿದ್ಯುತ್ ಸಂಪರ್ಕ ನೀಡಿದರೆ ಪ್ರತಿ ತಿಂಗಳು ಬಾಡಿಗೆ ನೀಡಲು ವ್ಯಾಪಾರಿಗಳು ಮುಂದಾಗಿದ್ದಾರೆ. ಮೆಟ್ರೊ ರೈಲು ನಿಗಮದ ವ್ಯವಸ್ಥಾಪಕ ನಿರ್ದೇಶಕರಿಗೆ ಈ ಬಗ್ಗೆ ಮನವಿ ಮಾಡಿಕೊಳ್ಳಲಾಗಿದೆ’ ಎಂದು ತಿಳಿಸಿದರು.

ಶಾಸಕ ಎಸ್‌ ಮುನಿರಾಜು ಅವರು ಬೀದಿ ಬದಿ ವ್ಯಾಪಾರಿಗಳಿಗೆ ಗುರುತಿನ ಕಾರ್ಡ್ ವಿತರಿಸಿದರು

‘ಒಳಮೀಸಲಾತಿ: ಸರ್ಕಾರದ ಎಡವಟ್ಟು’

ಸುಪ್ರೀಂ ಕೋರ್ಟ್ ನಿರ್ದೇಶನವನ್ನೂ ಗಾಳಿಗೆ ತೂರಲಾಗಿದೆ: ಗೋವಿಂದ ಕಾರಜೋಳ ಆರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಒಳಮೀಸಲಾತಿಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ತೀರ್ಪು ಬಂದು 18 ತಿಂಗಳಾಗಿದೆ. ರಾಜ್ಯದಲ್ಲಿ ಒಳ ಮೀಸಲಾತಿ ಇನ್ನೂ ಜಾರಿ ಆಗಿಲ್ಲ. ಅನುಷ್ಠಾನಕ್ಕೆ ಸರ್ಕಾರ ಆಸಕ್ತಿಯನ್ನೂ ತೋರಿಸುತ್ತಿಲ್ಲ ಎಂದು ಸಂಸದ ಗೋವಿಂದ ಕಾರಜೋಳ ದೂರಿದರು.

ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರನ್ನು ಭೇಟಿ ಮಾಡಿದ ಬಿಜೆಪಿ ನಿಯೋಗ ಈ ಬಗ್ಗೆ ಮನವಿ ಸಲ್ಲಿಸಿದೆ.

ಬಳಿಕ ಮಾತನಾಡಿದ ಕಾರಜೋಳ, ‘ಒಳಮೀಸಲಾತಿ ವಿಚಾರದಲ್ಲಿ ಕಾಂಗ್ರೆಸ್ ಸರ್ಕಾರ ನಿರಂತರವಾಗಿ ಎಡವಟ್ಟುಗಳನ್ನು ಮಾಡುತ್ತಲೇ ಬಂದಿದೆ’ ಎಂದರು.

‘ಸದಾಶಿವ ಆಯೋಗ, ಮಾಧುಸ್ವಾಮಿ ಸಮಿತಿ ಮತ್ತು ನಾಗಮೋಹನದಾಸ್ ಆಯೋಗವು ಅಲೆಮಾರಿ, ಸಣ್ಣಜಾತಿಗಳ ಗುಂಪಿಗೆ ಪ್ರತ್ಯೇಕ ಪ್ರವರ್ಗದಲ್ಲಿ ಶೇ 1ರಷ್ಟು ಮೀಸಲಾತಿ ನೀಡುವಂತೆ ಶಿಫಾರಸು ಮಾಡಿತ್ತು. ಆದರೆ, ಕಾಂಗ್ರೆಸ್ ಸರ್ಕಾರ ಸುಪ್ರೀಂ ಕೋರ್ಟ್ ನಿರ್ದೇಶನವನ್ನು ಗಾಳಿಗೆ ತೂರಿ ಬೇಕಾಬಿಟ್ಟಿಯಾಗಿ ಒಳ ಮೀಸಲಾತಿಯನ್ನು ಜಾರಿ ಮಾಡಲು ಹೋಗಿ ಅಲೆಮಾರಿ ಮತ್ತು ಸಣ್ಣ ಜಾತಿಗಳನ್ನು ಬೀದಿ ಪಾಲು ಮಾಡಿದೆ’ ಎಂದು ಹೇಳಿದರು.

ಎಕೆ, ಎಡಿ, ಎಎ ಸಮಸ್ಯೆಗೂ ಪರಿಹಾರ ಒದಗಿಸಿಲ್ಲ. ಬ್ಯಾಕ್‌ಲಾಗ್ ನೇಮಕಾತಿಯಲ್ಲಿ ರೋಸ್ಟರ್ ರೂಪಿಸುವಲ್ಲಿ ಸರ್ಕಾರ ಸೋತಿದೆ. ಹೀಗಾಗಿ 101 ಜಾತಿಗಳಲ್ಲಿಯೂ ಅಸಮಾಧಾನ ಹೆಪ್ಪುಗಟ್ಟಿದೆ. ಪರಿಶಿಷ್ಟರ ಗುಂಪುಗಳು ಬೀದಿಗಿಳಿದಿವೆ. ಅಲೆಮಾರಿ ಸಮುದಾಯಗಳ ಪ್ರಮುಖರ ಎದುರು ಸ್ವತಃ ಮುಖ್ಯಮಂತ್ರಿಯವರೇ ಇದೊಂದು ರಾಜಕೀಯ ಪ್ರೇರಿತ ನಿರ್ಧಾರ. ಇದರಲ್ಲಿ ಸಾಮಾಜಿಕ ನ್ಯಾಯ ಇಲ್ಲ. ನ್ಯಾಯ ಬೇಕಿದ್ದರೆ ಕೋರ್ಟ್‌ಗೆ ಹೋಗಿ ಎಂದಿದ್ದಾರೆ. ಇದಕ್ಕಿಂತ ದೊಡ್ಡ ದುರಂತ ಯಾವುದಿದೆ ಎಂದು ಅವರು ಪ್ರಶ್ನಿಸಿದರು.

ಸಂಸದ ಗೋವಿಂದ ಕಾರಜೋಳ ನೇತೃತ್ವದ ಬಿಜೆಪಿ ನಿಯೋಗ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರಿಗೆ ಮನವಿ ಸಲ್ಲಿಸಿತು.

ಬ್ಯಾಟರಾಯನಪುರ: ಬಿಜೆಪಿ ಸೇರಿದ ಕಾಂಗ್ರೆಸ್ ಮುಖಂಡರು

ಬೆಂಗಳೂರು: ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರದ ಕೆಂಪಾಪುರ ವಾರ್ಡ್‌ನಲ್ಲಿ ಸ್ಥಳೀಯ ಕಾಂಗ್ರೆಸ್ ಮುಖಂಡರು ಕಾಂಗ್ರೆಸ್ ತೊರೆದು ಬಿಜೆಪಿ ಸೇರಿದರು.

ಬಿಜೆಪಿ ರಾಜ್ಯ ಘಟಕದ ಕಾರ್ಯದರ್ಶಿ ಎಚ್‌.ಸಿ.ತಮ್ಮೇಶ್‌ಗೌಡ ಅವರು ಈ ಸಂದರ್ಭದಲ್ಲಿ ಕೆಂಪಾಪುರ ವಾರ್ಡ್ ಕಾಂಗ್ರೆಸ್ ಅಧ್ಯಕ್ಷ ಟಿ.ರಮೇಶ್, ಹಿಂದುಳಿದ ವರ್ಗಗಳ ಮುಖಂಡ ರಾಜು ಹಾಗೂ ಬೆಂಬಲಿಗರನ್ನು ಪಕ್ಷಕ್ಕೆ ಬರಮಾಡಿಕೊಂಡರು.

ಈ ಸಂದರ್ಭದಲ್ಲಿ ಮಾತನಾಡಿದ ತಮ್ಮೇಶ್‌ಗೌಡ ಅವರು, ‘ಪಕ್ಷದ ಸಂಘಟನೆ ಬಲವರ್ಧನೆಯ ದಿಸೆಯಲ್ಲಿ ಸಿಗುವ ಚಿಕ್ಕ ಅವಕಾಶವನ್ನೂ ಕೈಚೆಲ್ಲದೆ, ಕ್ಷೇತ್ರದಲ್ಲಿ ಬಿಜೆಪಿಗೆ ಸುಭದ್ರ ನೆಲೆ ಕಲ್ಪಿಸುವುದರ ಜತೆಗೆ ಮುಂಬರುವ ಸರಣಿ ಚುನಾವಣೆಗಳಲ್ಲಿ ಪಕ್ಷಕ್ಕೆ ಜಯ ತಂದುಕೊಡುವುದು ನಮ್ಮ ಆದ್ಯತೆ’ ಎಂದು ಹೇಳಿದರು.

ತಂದೆ ಸಾವು: ನೊಂದು ಯುವಕ ಆತ್ಮಹತ್ಯೆ

ಹಾರೋಹಳ್ಳಿ: ತಾಲ್ಲೂಕಿನ ರಸ್ತೆ ಜಕ್ಕಸಂದ್ರ ಸಮೀಪದ ಮರಿಗೌಡನದೊಡ್ಡಿಯ ಯುವಕನೊಬ್ಬ ತಂದೆ ಸಾವಿನಿಂದ ಮನನೊಂದು ಸೋಮವಾರ ರಾತ್ರಿ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾನೆ.

ಮಗನ ಸಾವಿನ ಸುದ್ದಿ ಕೇಳಿದ ಆತನ ತಾಯಿ ಕೂಡ ವಿಷ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿದ್ದಾರೆ. ಆದರೆ, ಅವರು ಅಪಾಯದಿಂದ ಪಾರಾಗಿದ್ದಾರೆ. ಯಡುವನಹಳ್ಳಿ ಬಳಿಯ ಜೈನ್ ಕಾಲೇಜು ಸಮೀಪದ ಮರಕ್ಕೆ ವಿಶಾಲ್ ನೇಣು ಹಾಕಿಕೊಂಡು ಮೃತಪಟ್ಟಿದ್ದಾನೆ. ಕೆಲವು ದಿನಗಳ ಹಿಂದೆ ವಿಶಾಲ್ ತಂದೆಯೂ ನಿಧನರಾಗಿದ್ದರು.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers/ Professors

CAMLIN HIGH School, State Board. 6th 'C' Main, 4th Cross Near 7th Main Bus Stop Hampinagar Bangalore- 560104 080-23301363. Email: camlinschool84@gmail.com. REQUIRES for the academic year 26-27 Coordinator, Student Counselor Teachers for High School. Middle and Primary. Kannada English, Hindi Maths Science, Social Science Drawing Physical Education Computer Science. TCH/ D.ED./ NTT/ MTT. Apply with hand written application OR Send resume. English Medium candidates to apply. Candidates can come to give Demo classes. Bus Driver Security Guard Office Boy Helper Aya.

REQUIRES EXPERIENCED Primary and High School Teachers with B.A / B.Sc., B.Ed / M.A / M.Sc., M.Ed to teach Science, English, Mathematics and Sanskrit. English fluency is must. Walk-in-Interview. Contact Max Muller Public School, Mahalakshmi Layout, B'lore-96. Ph: 23376050. E-mail- maxmullerpublicschool.mlayout@gmail.com

"WANTED REPUTED School and College 1).PUC- Principal, 2).Qualified Teachers, 3).Office Clerks. Contact: 9845042360/ 8095554686"

Om Sai Ram
NEW BALDWIN GROUP OF INSTITUTIONS
(Head office @ Banaswadi)
OUR BRANCHES
SCHOOLS: *BANASWADI *MANDUR *TC PALYA *ANEKAL *ANEKAL TOWN *CHANDAPURA *ATTIBELE *HSR *KODATHI GATE(SARJAPURA) *KOGILU
COLLEGES: *BANASWADI *MANDUR *TC PALYA *ANEKAL TOWN *CHANDAPURA *ATTIBELE
About us: NBGI having 36 years of Excellence in providing quality education to 25k+ students. Our campuses are well facilitated across various locations at Bangalore with 10 schools, 6 PU Colleges, 2 Degree Colleges & upcoming University. We are collaborated with ICSE, CBSE & Cambridge (IGCSE) Boards. We cater to Day schooling and on campus Boarding facilities.
* PRINCIPAL/ VICE-PRINCIPAL/ ACADEMIC COORDINATOR
Post Graduate having 5 to 10 years experience & leadership qualities in reputed institutions with strong communication, decision-making and organizational abilities.
Remuneration: at par with the institutional standard. With additional facilities like food & transport in the gross package.
APPLY IMMEDIATELY
Applying candidates are to mail the updated resume with recent photograph and should clealy specify the Position applied for & Branch opted
Contact : 9886084799 / 7899227591
Mail: hr.centraloffice@newbaldwin.com www.newbaldwininstitutions.org

ARVIND INTERNATIONAL SCHOOL
Affiliated to CBSE, New Delhi (No. 831133)
#14, Kalikanagar, opp. Sowmyakali Temple, Andrahalli Main Road, PSI Post, BANGALORE- 560058
Ph: 9945409738 / 9663930002.
REQUIRES TRAINED EXPERIENCED FACULTY WITH ENGLISH FLUENCY
Teachers for NURSERY/ PRIMARY/ HIGH SCHOOL
Only CBSE experienced teachers are preferred.
Salary is not a constraint for suitable candidates.
Transportation for Teachers from: Magadi Road, Jalahalli Metro Station and Laggere.
Send your resume with recent passport size photo to arvindinterblr@gmail.com within 7 days

SREE VENKATESHWARA ENGLISH SCHOOL #1 V.S Layout Krishnarajapura Bengaluru-560036. WANTED TEACHERS- B.Sc B.Ed (Mathematics, Science) B.A B.Ed (Social English Hindi) TCH D.Ed, B.P.Ed, M.P.Ed B.Lib, Drawing, Clerks Attractive Salary Attend with Original Certificate. Contact: 080-25611873 7411135627 Email: svs.krp.bangalore@gmail.com

PROPERTY
To Place your Classified Ads Contact
9845114560

Wanted

IMMEDIATE HIRING. N B REALTY- BUSINESS DEVELOPMENT EXECUTIVES, REAL ESTATE AGENTS, FRESHERS, AND STUDENTS CAN APPLY. MAKE UP TO 35,000 PER MONTH TO *3,50,000 PER MONTH. APPLY TODAY! Send your Email ID, Phone Number & Location to WhatsApp: [+91 6366950134]

1) REQUIRE Male A) Depo Manager and B) Accounts Person with Tally Invoicing Knowledge at Yeshwantpur RMC Yard from Nearby Area's Contact: 9341211718, 8217551818

General

"RDBS HAS JOBS IN Investment (properties,shares MF`etc)`for Admn Executive, B.com`and Office Manager Age-20, 50`years Experience upto-3`& 25`years, Languages: kannada,English essential, Tamil,Hindi desirable,2`&`4 wheeler essential near`Nexus`mall koramangala. mahesh24239@gmail.com Contact: 9342816060/ 080-25532216

Marketing & Sales

WANTED MARKETING Manager, Tele Marketing and Marketing Executives for reputed Real Estate to sell Plots and Farm Land. Preferably experience candidates. Call: 9845041912

WANTED SALE'S EXECUTIVES experienced in industrial products selling with two wheeler Contact; AMIT INDUSTRIES. 9739826852

Accounts & Finance

WANTED DIRECT Appointment Ladies FOR Accounts (Married) B.Com with Tally Knowledge Around Jayanagar & Kanakapura Harohalli: 9980921763/ 9632201671

Graphic Designers

WANTED GRAPHIC DESIGNER/ DTP OPERATOR. Experience in CorelDRAW, Kannada, English Typing'skills, Fresher's can also apply. 9845597155. enquiry@spoorthiads.com

WANTED MALE Graphic Designer (Corel Draw Photoshop Illustrator) Pvt Ltd Company around Rajajinagar Contact: 9108458798/ 9845579620

PERSONAL

Change of Name

I, NEHA MURALIDHAR DESHPANDE W/o.Sandeep Patil R/a.Flat.#302 #99,Lakven Pride Poorna PragnaNagar Uttarahalli Subramanyapura Post Bengaluru 560061 have changed my`Name to NEHA DESHPANDE vide`affidavit Dated:24.2.2026 before`Notary B.GopalaKrishna Bengaluru.

I, C.R.BALAKRISHNAN, residing at 31AG, Asset Gardenia, R.Narayanapura, Ramagondanahalli-Borewell Road, Ramagondanahalli, Whitefield, Bengaluru, 560066 have changed my name to Balakrishnan Chittor Rajagopal for all purposes

PUBLIC NOTICE

ಸಾರ್ವಜನಿಕ ಸೂಚನೆ

ತಾರೀಕು : 24, ಫೆಬ್ರವರಿ, 2026
ಜಾರಿಗೊಳಿಸಿದವರು: ಸುಹಾಗ್ ರೆಸಿಡೆನ್ಸಿ ವೆಲ್ಫೇರ್ ಅಸೋಸಿಯೇಷನ್
ವಿಳಾಸ: ಸುದ್ದಗುಂಟೆ ಪಾಳ್ಯ, ಸಿ.ವಿ. ರಾಮನ್ ನಗರ ಪೋಸ್ಟ್, ಬೆಂಗಳೂರು -560093
ಅಧಿಕೃತ ಸಹಿ: ಅರುಣ್ ಕುಮಾರ್ ಮೈತಿ, ಸೆಕ್ರೆಟರಿ

ಸುಹಾಗ್ ರೆಸಿಡೆನ್ಸಿ ವೆಲ್ಫೇರ್ ಅಸೋಸಿಯೇಷನ್ ರವರು, 06.12.2025 ರಂದು ತಶ್ಮಿತ ಮುತ್ತಣ್ಣ, ಸುಪ್ರೀಂ ಕೋರ್ಟ್ ವಕೀಲರ ಮೂಲಕ ಮೆಸರ್ಸ್ ರಿಲಯನ್ಸ್ ಇನ್ಫೋಕಾಮ್ ಲಿಮಿಟೆಡ್ ಮತ್ತು ಮೆಸರ್ಸ್ ರಿಲಯನ್ಸ್ ಇನ್ಫ್ರಾಟೆಲ್ ಲಿಮಿಟೆಡ್‌ಗೆ ಕಾನೂನು ನೋಟಿಸ್ ಜಾರಿ ಮಾಡಿ, ಕಟ್ಟಡದ ಮೇಲೆ ತ್ಯಜಿಸಲ್ಪಟ್ಟ ಟೆಲಿಕಾಂ ಟವರ್ ರಚನೆಯನ್ನು ತಕ್ಷಣ ತೆಗೆದುಹಾಕಬೇಕು ಮತ್ತು ಬಾಕಿ ಬಾಡಿಗೆ ಪಾವತಿಸಬೇಕೆಂದು ಒತ್ತಾಯಿಸಿದೆ.

ದಿನಾಂಕ 31.05.2003 ರ ಲೀಸ್ ಒಪ್ಪಂದವು, 11.09.2018ರಲ್ಲಿ ಪುನರ್ ಪರಿಶೀಲಿಸಲ್ಪಟ್ಟ ಪ್ರಕಾರ, ಬೆಂಗಳೂರು-560093 ರ ಸಿ.ವಿ. ರಾಮನ್ ನಗರದ ಸುದ್ದಗುಂಟೆ ಪಾಳ್ಯದಲ್ಲಿರುವ ಸುಹಾಗ್ ರೆಸಿಡೆನ್ಸಿ ಕಟ್ಟಡದ ಮೇಲ್ಛಾವಣಿ ಮತ್ತು ನೆಲಮಾಳಿಗೆಯ ಪ್ರದೇಶದಲ್ಲಿ ಟೆಲಿಕಾಂ ಟವರ್ ಅನ್ನು ಸ್ಥಾಪಿಸಲು ಮತ್ತು ನಿರ್ವಹಿಸಲು ರಿಲಯನ್ಸ್ ಇನ್ಫ್ರಾಟೆಲ್ ಲಿಮಿಟೆಡ್‌ಗೆ ಅನುಮತಿ ನೀಡಲಾಗಿದ್ದು, ಮಾಸಿಕ ಬಾಡಿಗೆ ರೂ. 32,000/- ಯಾಗಿ ನಿಗದಿಯಾಗಿತ್ತು.

ಪ್ರಮುಖ ವಿವರಗಳು:
- ಈ ಟವರ್ 2021 ರಿಂದ ಕಾರ್ಯನಿರ್ವಹಿಸುತ್ತಿಲ್ಲ ಮತ್ತು ಸಂಪರ್ಕ ಕಡಿತಗೊಂಡಿದೆ, ಕೊನೆಯ ಬಾಡಿಗೆ ಪಾವತಿ 20,891/- 30.03.2022 ರಂದು ಸ್ವೀಕರಿಸಲಾಗಿದೆ.
- ಏಪ್ರಿಲ್ 2022 ರಿಂದ ಡಿಸೆಂಬರ್ 2025 ರ ಅವಧಿಗೆ (45 ತಿಂಗಳುಗಳು) ಬಾಡಿಗೆ ಬಾಕಿ 32,000/- ಪ್ರತಿ ತಿಂಗಳು, ಒಟ್ಟು 14,40,000/- (ಹದಿನಾಲ್ಕು ಲಕ್ಷದ ನಲವತ್ತು ಸಾವಿರ ರೂಪಾಯಿಗಳು ಮಾತ್ರ) ಜೊತೆಗೆ ಬಡ್ಡಿ, ಜೊತೆಗೆ 11.09.2018 ರಿಂದ ಬಾಕಿ ಇರುವ ಹೆಚ್ಚುವರಿ ಬಾಕಿಗಳು.
- ಪುನರಾವರ್ತಿತ ಜ್ಞಾಪನೆಗಳು, ಇಮೇಲ್‌ಗಳು (ದಿನಾಂಕ 18.02.2023, 20.02.2023, 13.04.2023) ಮತ್ತು 18.02.2023 ರಂದು ನೀಡಿದ ಇಮೇಲ್ ಮೂಲಕ, 3-4 ತಿಂಗಳೊಳಗೆ ಟವರ್ ಅನ್ನು ಕೆಡವುದಾಗಿ ಭರವಸೆ ನೀಡಿದ್ದರೂ, ಸಂಬಂಧಪಟ್ಟ ರಿಲಯನ್ಸ್ ಸಂಸ್ಥೆಗಳು ಯಾವುದೇ ಕ್ರಮ ಕೈಗೊಂಡಿಲ್ಲ.

ಎಲ್ಲ ಆಸಕ್ತ ಪಕ್ಷಗಳಿಗೆ ಸೂಚನೆ:
ಮೆಸರ್ಸ್ ರಿಲಯನ್ಸ್ ಇನ್ಫೋಕಾಮ್ ಲಿಮಿಟೆಡ್ (ನೋಂದಣಿ ಕಚೇರಿ: ಅವದೇಶ್ ಹೌಸ್, 3ನೇ ಅಂತರ್, ಪ್ರೀತಂ ನಗರ, ಎಲ್ಲಿಸ್ ಬ್ರಿಡ್ಜ್, ಅಹಮದಾಬಾದ್- 380006, ಗುಜರಾತ್) ಮತ್ತು ಮೆಸರ್ಸ್ ರಿಲಯನ್ಸ್ ಇನ್ಫ್ರಾಟೆಲ್ ಲಿಮಿಟೆಡ್ (ಕಚೇರಿಗಳು: ಆರ್ ಕಾಮ್‌ಹೌಸ್, 8ನೇ ಮೈಲ್, ಹೆಸರಘಟ್ಟ ಕ್ರಾಸ್, ಎನ್‌ಎಚ್- 4, ಟಿ ದಾಸರಹಳ್ಳಿ, ಬೆಂಗಳೂರು-560057; 125, ಕನಿಂಗ್‌ಹ್ಯಾಮ್ ರೋಡ್, ಅಬ್‌ಶಾಟ್ ಲೇಔಟ್, ವಸಂತ್ ನಗರ, ಬೆಂಗಳೂರು, ಕರ್ನಾಟಕ 560001; 39/14, ಸರ್ಜಾಪುರ - ಮಾರತ್‌ಹಳ್ಳಿ ರೋಡ್, ಇಬ್ಬಲೂರು, ಬೆಳ್ಳಂದೂರು, ಬೆಂಗಳೂರು, ಕರ್ನಾಟಕ 560102; ಮತ್ತು 54, ಎಚ್‌ಎಂ ಟವರ್ಸ್, 4ನೇ ಅಂತರ್, ಮೆಗ್ರಾತ್ ರೋಡ್ ಜಂಕ್ಷನ್, ಬ್ರಿಗೇಡ್ ರೋಡ್, ಅಶೋಕ್ ನಗರ, ಬೆಂಗಳೂರು-560001) ಸೇರಿದಂತೆ ಎಲ್ಲರಿಗೂ ಇಲ್ಲಿ ಸೂಚಿಸಲಾಗಿದೆ:
- ಎಲ್ಲಾ ಬಾಡಿಗೆ ಹಾಗೂ ಪರಿಹಾರದ ಬಾಕಿಗಳನ್ನು ತಕ್ಷಣ, 15 ದಿನಗಳೊಳಗೆ ಪಾವತಿಸಬೇಕು.
- ಸಂಪೂರ್ಣ ಟವರ್ ರಚನೆಯನ್ನು ಹಾಗೂ ಉಪಕರಣಗಳನ್ನು ಆವರಣದಿಂದ ತಕ್ಷಣವೇ ತೆಗೆಯತಕ್ಕದ್ದು.

ಅನುಪಾಲನೆ ವಿಫಲತೆಯ ಪರಿಣಾಮಗಳು:
ಅನುಪಾಲನೆ ಮಾಡದಿದ್ದರೆ ಅಸೋಸಿಯೇಷನ್ ಈ ಕೆಳಗಿನ ಕ್ರಮಗಳನ್ನು ತೆಗೆದುಕೊಳ್ಳುತ್ತದೆ:
➤ ಮುಂದಿನ ಸೂಚನೆ ನೀಡದೆ ಟವರ್ ರಚನೆಯನ್ನು ತೆಗೆದುಹಾಕುವುದು ಮತ್ತು ಉಪಕರಣಗಳನ್ನು ಕಿತ್ತುಹಾಕುವುದು.
➤ ಟವರ್ ಹಾಗೂ ಉಪಕರಣಗಳ ಮಾರಾಟ/ವಿತರಣೆಯಿಂದ ಬಂದ ಹಣವನ್ನು ಬಾಕಿಗಳಿಗೆ ಸ್ವೀಕರಿಸುವುದು, ಹೆಚ್ಚಿನ ಬಾಕಿಗಳು, ಹಾನಿ ಮತ್ತು ಒಪ್ಪಂದ ಭಂಗದ ಕಾನೂನು ಹಕ್ಕುಗಳಿಗೆ ಪ್ರತಿರೋಧ/ಪೂರ್ವಗ್ರಹವಿಲ್ಲದೆ.

ಈ ಸಾರ್ವಜನಿಕ ಸೂಚನೆಯು ಸಂಬಂಧಪಟ್ಟ ಎಲ್ಲಾ ಪಕ್ಷಗಳಿಗೆ ಅಂತಿಮ ಸೂಚನೆಯಾಗಿ ಕಾರ್ಯನಿರ್ವಹಿಸುತ್ತದೆ. ನಿವಾಸಿಗಳು, ಪಾಲುದಾರರು ಮತ್ತು ಸಾರ್ವಜನಿಕರಿಗೆ ಈ ಸಂಗತಿಗಳ ಬಗ್ಗೆ ತಿಳಿಸಲಾಗಿದೆ. ತಕ್ಷಣ ಕ್ರಮ ಕೈಗೊಳ್ಳಲು ವಿಫಲವಾದರೆ ಅಗತ್ಯವಾದ ಕಾನೂನು ಕ್ರಮಗಳನ್ನು ತೆಗೆದುಗೊಳ್ಳಲಾಗುವುದು.

ಸಂಪರ್ಕ: ಅರುಣ್ ಕುಮಾರ್ ಮೇಟಿ, ಕಾರ್ಯದರ್ಶಿ,
ಸುಹಾಗ್ ರೆಸಿಡೆನ್ಸಿ ವೆಲ್ಫೇರ್ ಅಸೋಸಿಯೇಷನ್, ಫೋನ್: +91-9449340557,
ಇಮೇಲ್: aaku1910@gmail.com ಅಡ್ವೋಕೇಟ್: ತಶ್ಮಿತ ಮುತ್ತಣ್ಣ,
ಫೋನ್: +91-8105370031, ಇಮೇಲ್: thashmitha.muthanna1@gmail.com,
ಕಚೇರಿ: ಎ-449, ಡಿಫೆನ್ಸ್ ಕಾಲನಿ, ನವ ದೆಹಲಿ-110024

Accessories available there on

REAL ESTATE SELLING

Industrial & Factory

Out-Station

INDUSTRIAL PROPERTY FOR SALE OR LEASE
60 gunthas (1.5 Acres) K.I.A.D.B. HONAGA Industrial Area, Honaga, Belagavi, Karnataka. Clear title, protected boundries, water tank, bore well, toilet facility, 150 KVA connection (HT Line),500 KVA transformer # 30 ft Road at one side.. Directly connected to Puna-Bangalore highway.(400 mtr from NH4)
CONTACT NO:- MOB :- 9448274014

Peenya

SALE 20 Acres Industrial Zone Land, 100 feet Road. Suitable for Industry/ Warehouse/ Commercial. 9141326819

Intl Airport Road

SALE RED CATEGORY Industrial Land & Building in AP Hindupur APIIC allotted Suitable for Chemical, Pharma, Organic, Fertilisers Manufacturers. 20000sft, 41500sft, 135000sft clear titles. Call Verna Developers, Barton Centre, MG Road. 9916310226.

Villas/Bunglows

East

4 BHK independent villa, gated community, 5 bathrooms, beautifully maintained, contact 7674928555

CONNECT

ಕರ್ನಾಟಕದ ಅತಿ ದೊಡ್ಡ OG ಸೀರೆ ಉತ್ಸವ 2.0
100000+ ಸೀರೆಗಳು 10,000+ವಿನ್ಯಾಸ 1000+ವಿಧಗಳು
MYSORE SILKS Weaver's OG Seere Utsava By Sulakshmi Silks
ನೇರ ನೇಕಾರರಿಂದ ಕನಿಷ್ಠ ಬೆಲೆಯ ಖಾತರಿ
100 ವರ್ಷಗಳ ವಿಶ್ವಾಸಾರ್ಹ ಪರಂಪರೆ
SULAKSHMI SILKS
18ನೇ ಯಿಂದ 28ನೇ ಫೆಬ್ರವರಿ 2026
11 AM TO 9 PM
SIGNATURE SILK SAREE COLLECTIONS
• ಶುದ್ಧ ಮೈಸೂರು ಸಿಲ್ಕ್ • ಕಾಂಜೀವರಂ • ಪಟೋಲ
• ಬನಾರಸ್ • ಉಪ್ಪಾದ • ಪೈಹಾನಿ • ಚಂದೇರಿ • ಗದ್ವಾಲ್,
• ಇಳಕಲ್ • ಪೋಚಂಪಲ್ಲಿ • ಭಾಗಲ್ಪುರ್ • ಇಕತ್ • ಆರ್ನಿ
• ಜಮಧಾನಿ • ಮುಗ • ಕ್ರೇಪ್ • ಗಜ್ಜಿ • ಬಂಧನಿ
• ಕಾಟನ್ ಕ್ಲಾಸಿಕ್ಸ್ • ಬೆಂಗಳೂರು ಸಿಲ್ಕ್ ಮತ್ತು ಇತರೆ.
ಶ್ರೀ ಸೂರ್ಯೋದಯ ಕಲ್ಯಾಣ ಮಂಟಪ
ವೆಸ್ಟ್ ಆಫ್ ಕಾರ್ಡ್ ರೋಡ್, ವಿಜಯನಗರ
99727 18898 | 96631 27606
93531 38343 | 98863 06643

RENTAL PROPERTIES

Accommodation Available

Industrial And Factory

WAREHOUSE FOR LEASE, in KIADB Allotted Corner Plot, 50000 sqft, Facing 150 ft Rd, 500mts from STRR, 300mts from the Brigade WTC Devanahalli, 20mins from Kempegowda International Airport. Ct: 9677403235

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

BUSINESS

Business to Business

Business

ಚಿನ್ನವನ್ನು ಸಾಲಕ್ಕೆ ಹಾಕಬೇಕೇ?
ಚಿಂತೆಪಡಬೇಡಿ, ಮಾರಾಟಕ್ಕೆ ನಾವು ಸಹಾಯ ಮಾಡುತ್ತೇವೆ.
ಹಳೆಯ ಚಿನ್ನದ ಆಭರಣಗಳನ್ನು ಹೆಚ್ಚಿನ ಬೆಲೆಗೆ ಸ್ವೀಕರಿಸಲಾಗುತ್ತದೆ...
ತಕ್ಷಣ ಹಣ
ಸಿ ಜೆ ಗೋಲ್ಡ್ ಚಿನ್ನದ ಕಂಪನಿ
ಬೊಮ್ಮನಹಳ್ಳಿ – ಬೆಂಗಳೂರು
Call: 88844 57700
Email:cjgoldblr@gmail.com

Financial Services

LOAN AGAINST CREDIT CARDS. INSTANT PAYMENT. APPLY THROUGH LINK. SARAKKI LOANS, 9663676464

Hotel & Restaurant

WELL FURNISHED Restaurant with well equipped kitchen & Everything in 1000 Sft area for SALE or RENT in Posh Vijaya Bank Layout, Bannerghatta Road. Lease Agreement Transferable. For Details Call: 9900001954

Business Offers

Machinery & Tools

PLANT FOR Sale. 20ltr Packaged Drinking water ISI Company with vehicle. 600 cans currently selling. 10 years lease cum rent. 9535088153.

TOURS & TRAVEL

Travel

8 DAYS Kshmir Vaishnodevi. 13 Days Chardham Yatra. 7 Days Kashi Ayodhya. 7 Days Amarnath Yatra. Nandi Holidays Banglore Mob: 9740228186, 9035513332

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

DH Classifieds
DECCAN HERALD
More value, more impact
RECRUITMENT
ಪ್ರಜಾವಾಣಿ
BOOK YOUR JOB ADS IN DH ALL KARNATAKA + PRAJAVANI BENGALURU CITY ON WEDNESDAY + SUNDAY
www.dhclassifieds.com BOOK NOW
@ 2481/-* FOR 15 WORDS
For more details contact:
+91 9845114560 | +91 9900428036 | +91 9731810277 | +91 9886213331 | 080- 45557163/164
JOB opportunities
* Conditions apply

‘ಕ್ವಾಂಟಮ್ ತಂತ್ರಜ್ಞಾನದ ಅಭಿವೃದ್ಧಿಗೆ ಸಹಕಾರ ಅಗತ್ಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಜಾಗತಿಕ ಅಭಿವೃದ್ಧಿ ಮುನ್ನಡೆಸುವ ಪ್ರಮುಖ ಒಕ್ಕೂಟವಾಗಿರುವ ‘ಬ್ರಿಕ್ಸ್’ ರಾಷ್ಟ್ರಗಳು ಕ್ವಾಂಟಮ್ ತಂತ್ರಜ್ಞಾನದ ಅಭಿವೃದ್ಧಿಗೆ ಪರಸ್ಪರ ಸಹಕಾರಕ್ಕೆ ಮುಂದಾಗಬೇಕು’ ಎಂದು ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎನ್.ಎಸ್. ಬೋಸರಾಜು ಹೇಳಿದರು.

ತಮ್ಮನ್ನು ಭೇಟಿಯಾದ ಬ್ರೆಜಿಲ್‌ನ ಸಾರ್ವಜನಿಕ ಸೇವೆಗಳ ನಿರ್ವಹಣೆ ಮತ್ತು ನಾವೀನ್ಯತಾ ಸಚಿವೆ ಎಸ್ತರ್ ಡ್ವೆಕ್ ನೇತೃತ್ವದ ನಿಯೋಗದ ಜೊತೆ ಅವರು ಮಂಗಳವಾರ ಸಭೆ ನಡೆಸಿದರು.

‘ಬ್ರಿಕ್ಸ್ ಸದಸ್ಯರಾಗಿ ನಾವು ಕೃಷಿ, ಔಷಧ ಸಂಶೋಧನೆ, ಜಲಸಂಪನ್ಮೂಲ ನಿರ್ವಹಣೆ, ಹವಾಮಾನ ಮುನ್ಸೂಚನೆ ಮತ್ತು ಪ್ರವಾಹ ನಿರ್ವಹಣೆಯನ್ನು ಸುಧಾರಿಸಲು ಕ್ವಾಂಟಮ್ ತಂತ್ರಜ್ಞಾನ ಬಳಸುವ ನಿಟ್ಟಿನಲ್ಲಿ ಒಟ್ಟಾಗಿ ಕೆಲಸ ಮಾಡಬೇಕು’ ಎಂದು ತಿಳಿಸಿದರು.

‘ಕ್ವಾಂಟಮ್ ಇನ್ನೋವೇಶನ್ ಫಂಡ್’ ಘೋಷಣೆ ಮತ್ತು ‘ಕ್ವಾಂಟಮ್ ಸಿಟಿ’ ಅಭಿವೃದ್ಧಿಯೊಂದಿಗೆ ಕರ್ನಾಟಕವು ದೇಶಕ್ಕೇ ಮಾದರಿಯಾಗಿದೆ. 2035ರ ವೇಳೆಗೆ 20 ಬಿಲಿಯನ್ ಯುಎಸ್ ಡಾಲರ್ ಮೌಲ್ಯದ ಕ್ವಾಂಟಮ್ ಆರ್ಥಿಕತೆ ಸೃಷ್ಟಿಸುವುದು, 2 ಲಕ್ಷ ಉದ್ಯೋಗ ಸೃಷ್ಟಿಸುವುದು ನಮ್ಮ ಗುರಿ’ ಎಂದರು.

ನೀಟ್ ಪಾಸ್ ಆಗುವಂತೆ ಒತ್ತಡ: ತಂದೆ ಕೊಂದ ಪುತ್ರ

ಲಖನೌ: ನೀಟ್ ಪರೀಕ್ಷೆಯಲ್ಲಿ ಪಾಸಾಗುವಂತೆ ಒತ್ತಡ ಹೇರಿದ್ದಕ್ಕೆ 21 ವರ್ಷದ ಯುವಕನೊಬ್ಬ ತನ್ನ ತಂದೆಯನ್ನೇ ಕೊಂದು, ಮೃತದೇಹವನ್ನು ತುಂಡರಿಸಿದ ಭೀಕರ ಘಟನೆ ಉತ್ತರಪ್ರದೇಶದ ಆಶಿಯಾನಾ ಎಂಬಲ್ಲಿ ನಡೆದಿದೆ.

ಮೃತ ವ್ಯಕ್ತಿಯನ್ನು ಮಾನವೇಂದ್ರ ಸಿಂಗ್ ಹಾಗೂ ಆರೋಪಿ ಯುವಕನನ್ನು ಪ್ರತಾಪ್ ಸಿಂಗ್ ಎಂದು ಗುರುತಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಪ್ರತಾಪ್ ಈ ಹಿಂದೆಯೂ ಎರಡು ಬಾರಿ ನೀಟ್ ಪರೀಕ್ಷೆ ಬರೆದಿದ್ದ. ಆದರೆ, ಉತ್ತೀರ್ಣನಾಗಿರಲಿಲ್ಲ. ಇದೇ ವಿಚಾರವಾಗಿ ಕಳೆದ ಶುಕ್ರವಾರ ತಂದೆ–ಮಗನ ನಡುವೆ ವಾಗ್ವಾದ ನಡೆಯಿತು. ಮಗನ ಮೇಲೆ ಕೋಪಗೊಂಡಿದ್ದ ಮಾನವೇಂದ್ರ, ಪ್ರತಾಪ್‌ನ ತಲೆಗೆ ಬಂದೂಕು ಇಟ್ಟು ಬೆದರಿಸಿದ್ದರು. ಈ ವೇಳೆ ತಂದೆಯ ಕೈಯಲ್ಲಿದ್ದ ಬಂದೂಕು ಕಸಿದ ಪ್ರತಾಪ್, ಅವರನ್ನೇ ಗುಂಡಿಟ್ಟು ಕೊಂದ ಎಂದು ಹೇಳಿದ್ದಾರೆ.

‘ತನ್ನ ತಂದೆ ಕಾಣೆಯಾಗಿದ್ದು, ಈ ಬಗ್ಗೆ ಪೊಲೀಸರಿಗೆ ದೂರು ನೀಡಿರುವುದಾಗಿ ಅಕ್ಕಪಕ್ಕದವರಿಗೆ ಹೇಳಿದ್ದ ಪ್ರತಾಪ್, ಬಳಿಕ ಪೊಲೀಸರು ಹಾಗೂ ನೆರೆಯವರ ಪ್ರಶ್ನೆಗಳಿಗೆ ಹೆದರಿ, ತನ್ನ ತಂದೆಯ ಸ್ನೇಹಿತರೊಬ್ಬರಿಗೆ ಕರೆ ಮಾಡಿದ. ತಾನೇ ಕೊಲೆ ಮಾಡಿರುವ ವಿಚಾರವನ್ನು ಅವರಲ್ಲಿ ಒಪ್ಪಿಕೊಂಡ’ ಎಂದು ಮಾಹಿತಿ ನೀಡಿದ್ದಾರೆ.

ಸಹೋದರಿಯ ಕಣ್ಣೆದುರೇ ಕೃತ್ಯ: ಘಟನೆಯ ಸಂದರ್ಭದಲ್ಲಿ ಪ್ರತಾಪ್‌ನ ಕಿರಿಯ ಸಹೋದರಿಯು ಮನೆಯ ಬೇರೊಂದು ಕೊಠಡಿಯಲ್ಲಿದ್ದರು. ಗುಂಡಿನ ಸದ್ದು ಕೇಳಿ ಹೊರಬಂದ ಅವರನ್ನೂ ಕೊಲ್ಲುವುದಾಗಿ ಬೆದರಿಸಿದ ಪ್ರತಾಪ್, ಆಕೆಯನ್ನು 4 ದಿನ ಕೊಠಡಿಯಲ್ಲಿ ಕೂಡಿಹಾಕಿದ್ದ. ಈ ಅವಧಿಯಲ್ಲಿ ಮಾನವೇಂದ್ರ ಅವರ ದೇಹವನ್ನು ತುಂಡರಿಸಿ ಬಿಸಾಡಿದ್ದಾನೆ. ಮೃತದೇಹದ ಮುಂಡದ ಭಾಗವನ್ನು ಡ್ರಮ್ ಒಂದರಲ್ಲಿ ಆ್ಯಸಿಡ್ ಮತ್ತು ಸಿಮೆಂಟ್ ಹಾಕಿ ಮುಚ್ಚಿಡಲು ಯೋಜಿಸಿ ಡ್ರಮ್ ಕೂಡ ತಂದಿದ್ದ ಎಂದೂ ಪೊಲೀಸರು ಮಾಹಿತಿ ನೀಡಿದ್ದಾರೆ.

ಬೆಂಕಿ ಅವಘಡ: 6 ಮಕ್ಕಳ ಸಾವು

ಮೀರಠ್ (ಪಿಟಿಐ): ಮೀರಠ್‌ನ ಲಿಸಾಡಿ ಗೇಟ್ ಪ್ರದೇಶದ ಮನೆಯೊಂದರಲ್ಲಿ ಶಾರ್ಟ್ ಸರ್ಕೀಟ್‌ನಿಂದಾಗಿ ಸಂಭವಿಸಿದ ಬೆಂಕಿ ಅಪಘಾತದಲ್ಲಿ, ನಾಲ್ಕು ತಿಂಗಳ ಅವಳಿ ನವಜಾತ ಶಿಶುಗಳು, 4ರಿಂದ 12 ವರ್ಷದೊಳಗಿನ ಮೂವರು ಮಕ್ಕಳು ಸೇರಿ ಒಂದೇ ಕುಟುಂಬದ ಆರು ಸದಸ್ಯರು ಮೃತಪಟ್ಟಿದ್ದಾರೆ.

ಸೋಮವಾರ ರಾತ್ರಿ ಇಕ್ಬಾಲ್ ಅಹ್ಮದ್ ಅವರ ಮನೆಯಲ್ಲಿ ಬೆಂಕಿ ಕಾಣಿಸಿಕೊಂಡಿದ್ದು, ಈ ವೇಳೆ ಮನೆಯ ಹೆಚ್ಚಿನ ಪುರುಷರು ರಂಜಾನ್‌ನ ನಮಾಜ್‌ಗಾಗಿ ಹೊರಗೆ ಹೋಗಿದ್ದರು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಆನ್‌ಲೈನ್ ಉಡುಪು ವ್ಯವಹಾರದಲ್ಲಿ ತೊಡಗಿದ್ದ ಕುಟುಂಬದ ಮೂರು ಅಂತಸ್ತಿನ ಮನೆಯ ನೆಲ ಮಹಡಿಯಲ್ಲಿ ಬಟ್ಟೆಗಳನ್ನು ಸಂಗ್ರಹಿಸಲಾಗಿತ್ತು. ಇದರಿಂದಾಗಿ ಬೆಂಕಿ ವೇಗವಾಗಿ ಹರಡಿತು ಎಂದು ಪೊಲೀಸರು ತಿಳಿಸಿದ್ದಾರೆ.

7 ಸದಸ್ಯರು ಅನರ್ಹ

ಪ್ರಜಾವಾಣಿ ವಾರ್ತೆ

ನೆಲಮಂಗಲ: ನಗರಸಭೆ ಅಧ್ಯಕ್ಷ, ಉಪಾಧ್ಯಕ್ಷರ ಚುನಾವಣೆಯಲ್ಲಿ ಪಕ್ಷದ ವಿಪ್ ಉಲ್ಲಂಘಿಸಿ ಮತ ಚಲಾಯಿಸಿದ ಏಳು ಸದಸ್ಯರನ್ನು ಜಿಲ್ಲಾ ಚುನಾವಣಾಧಿಕಾರಿ ಎ.ಬಿ. ಬಸವರಾಜು ಅವರು ಫೆ.24ರಂದು ಅನರ್ಹಗೊಳಿಸಿದ್ದಾರೆ.

ನೆಲಮಂಗಲ ನಗರಸಭೆ

ನಗರಸಭೆ ಅಧ್ಯಕ್ಷ, ಉಪಾಧ್ಯಕ್ಷರ ಹುದ್ದೆಗೆ 2025ರ ಫೆಬ್ರುವರಿ 13ರಂದು ನಡೆದ ಚುನಾವಣೆಯಲ್ಲಿ, ಜೆಡಿಎಸ್ ಚಿಹ್ನೆ ಅಡಿ ಸದಸ್ಯರಾಗಿ ಆಯ್ಕೆಯಾಗಿದ್ದ ಸದಸ್ಯರು ಪಕ್ಷವು ಜಾರಿಗೊಳಿಸಿದ್ದ ವಿಪ್ ಉಲ್ಲಂಘಿಸಿದ್ದರು. ಜೆಡಿಎಸ್ ಪಕ್ಷದ ಅಭ್ಯರ್ಥಿಗಳಿಗೆ ಮತ ಚಲಾಯಿಸದೆ ಕಾಂಗ್ರೆಸ್ ಅಭ್ಯರ್ಥಿಗಳಿಗೆ ಮತ ಚಲಾಯಿಸಿ ಚುನಾವಣಾ ಅಕ್ರಮ ಎಸಗಿರುತ್ತಾರೆ ಎಂದು ಆರೋಪಿಸಿ ಜೆಡಿಎಸ್ ಜಿಲ್ಲಾ ಘಟಕದ ಅಧ್ಯಕ್ಷ ಬಿ.ಮುನೇಗೌಡ ಅವರು 2025ರ ಮಾರ್ಚ್ 3ರಂದು ಪಕ್ಷಾಂತರ ನಿಷೇಧ ಕಾಯ್ದೆಯ ಸೆಕ್ಷನ್ 3 ಮತ್ತು 4ರ ಅಡಿ ಪೌರಾಯುಕ್ತರಿಗೆ ದೂರು ಸಲ್ಲಿಸಿದ್ದರು.

ಪೌರಾಯುಕ್ತರಿಂದ ಅರ್ಜಿ ಸ್ವೀಕರಿಸಿದ ಜಿಲ್ಲಾಧಿಕಾರಿಯವರ ನ್ಯಾಯಾಲಯ, ವಾದಿ ಪ್ರತಿವಾದಿಗಳಿಗೆ ವಾದ ಮಂಡಿಸಲು ಅವಕಾಶ ನೀಡಿತ್ತು. ಕರ್ನಾಟಕ ಸ್ಥಳೀಯ ಸಂಸ್ಥೆಗಳ (ಪಕ್ಷಾಂತರ ನಿಷೇಧ) ಕಾಯ್ದೆಯ 1987 ಸೆಕ್ಷನ್ 4(2)(III) ರನ್ವಯ ಸದಸ್ಯರನ್ನು ಅನರ್ಹಗೊಳಿಸಿ ಆದೇಶಿಸಿದರು.

ಅನರ್ಹರಾದವರು: ಜಿ.ಆನಂದ್– ಪ್ರಸ್ತುತ ಉಪಾಧ್ಯಕ್ಷ, ಶಾರದಾ ಉಮೇಶ್, ದಾಕ್ಷಾಯಣಿ ರವಿಕುಮಾರ್, ಬಿ.ಪದ್ಮನಾಭ ಸ್ಥಾಯಿ ಸಮಿತಿ ಅಧ್ಯಕ್ಷ, ಭಾರತಿಬಾಯಿ, ನರಸಿಂಹಮೂರ್ತಿ, ಲತಾ ಹೆಮಂತಕುಮಾರ್.

‘ತಂತ್ರಜ್ಞಾನ, ಡಿಜಿಟಲ್ ವ್ಯವಸ್ಥೆ: ರಾಜ್ಯ ಮುಂಚೂಣಿ’

ಪ್ರಜಾವಾಣಿ ವಾರ್ತೆ

ಯಲಹಂಕ: ‘ರಾಜ್ಯವು ತಂತ್ರಜ್ಞಾನ ಮತ್ತು ಡಿಜಿಟಲ್ ವ್ಯವಸ್ಥೆಯ ಅಭಿವೃದ್ಧಿಯಲ್ಲಿ ಗಮನಾರ್ಹ ಕೊಡುಗೆಯನ್ನು ನೀಡುತ್ತಿದ್ದು, ಮಾಹಿತಿ ತಂತ್ರಜ್ಞಾನ, ಸಕ್ರಿಯ ಸೇವೆಗಳು, ಎಲೆಕ್ಟ್ರಾನಿಕ್ಸ್ ಯಂತ್ರೋಪಕರಣಗಳು, ಏರೋಸ್ಪೇಸ್ ಹಾಗೂ ಜೈವಿಕ ತಂತ್ರಜ್ಞಾನದಂತಹ ಕ್ಷೇತ್ರಗಳಲ್ಲಿ ಮುಂಚೂಣಿಯಲ್ಲಿದೆ’ ಎಂದು ರಾಜ್ಯಪಾಲ ಥಾವರಚಂದ್ ಗೆಹಲೋತ್ ಹೇಳಿದರು.

ವ್ಯಾಪ್ಸ್ ಟೆಕ್ನೋಸಾಫ್ಟ್ ಸಂಸ್ಥೆಯ ರಜತ ಮಹೋತ್ಸವ ಸಮಾರಂಭದಲ್ಲಿ ಮಾತನಾಡಿದ ಅವರು, ‘ವ್ಯಾಪ್ಸ್ ಟೆಕ್ನೋಸಾಫ್ಟ್‌ನ 25 ವರ್ಷದ ಪಯಣವು ನಿರಂತರ ಕಠಿಣ ಪರಿಶ್ರಮ, ನಾವೀನ್ಯ, ಗುಣಮಟ್ಟ ಮತ್ತು ನಂಬಿಕೆಯ ಸಂಕೇತವಾಗಿದೆ. ಶಿಕ್ಷಣ ಮತ್ತು ತಂತ್ರಜ್ಞಾನ ಎಂಬ ರಾಷ್ಟ್ರ ನಿರ್ಮಾಣದ ಸೂಕ್ಷ್ಮ ಕ್ಷೇತ್ರಗಳಲ್ಲಿ ಈ ಸೇವೆಯು ಕೇವಲ ಕಾರ್ಪೊರೇಟ್ ಸಾಧನೆಯಲ್ಲ, ಅದು ಭಾರತದ ಅಭಿವೃದ್ಧಿ ಪ್ರಯಾಣಕ್ಕೆ ಮಹತ್ವದ ಕೊಡುಗೆಯಾಗಿದೆ’ ಎಂದರು.

ಸಾಧಕರಾದ ಸಾಯಿ ಪ್ರಕಾಶ್, ಬ್ರಿಗೇಡಿಯರ್ ಬಿ.ಎಂ.ಕಾರ್ಯಪ್ಪ, ಎನ್.ತಿಪ್ಪೇಸ್ವಾಮಿ, ಪ್ರಭಾಕರ ಕೋರೆ, ಸತ್ಯರೂಪ್ ಸಿದ್ಧಾಂತ ಅವರನ್ನು ಸನ್ಮಾನಿಸಲಾಯಿತು. ಥಾವರಚಂದ್ ಗೆಹಲೋತ್, ಬಿ.ಎಸ್. ಪಾಟೀಲ, ನಿರ್ಮಲಾನಂದನಾಥ ಸ್ವಾಮೀಜಿ, ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಇದ್ದಾರೆ

‘ಪ್ರಸ್ತುತ ಯುಗವು ವೈಜ್ಞಾನಿಕ ಪ್ರಗತಿ, ಡಿಜಿಟಲ್ ಕ್ರಾಂತಿ ಮತ್ತು ಜ್ಞಾನಾಧಾರಿತ ಆರ್ಥಿಕತೆಯಿಂದ ಗುರುತಿಸಲ್ಪಟ್ಟಿದೆ. ಇಂತಹ ಪರಿವರ್ತನಾತ್ಮಕ ಕಾಲಘಟ್ಟದಲ್ಲಿ ಶೈಕ್ಷಣಿಕ ಹಾಗೂ ಐಟಿ ವಲಯಗಳಲ್ಲಿ ಸಕಾರಾತ್ಮಕ ಬದಲಾವಣೆಯನ್ನು ತರಲು ಈ ಸಂಸ್ಥೆಯು ಶ್ರಮಿಸುತ್ತಿದೆ’ ಎಂದು ತಿಳಿಸಿದರು.

ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್.ಪಾಟೀಲ್ ಮಾತನಾಡಿ, ‘ಸಾಫ್ಟ್‌ವೇರ್ ಕ್ಷೇತ್ರದ ಜೊತೆಗೆ ಕೃತಕ ಬುದ್ಧಿಮತ್ತೆ ತಂತ್ರಜ್ಞಾನದಲ್ಲಿಯೂ ಸಂಸ್ಥೆ ಸಾಧನೆ ಮಾಡುತ್ತಿರುವುದು ಶ್ಲಾಘನೀಯ’ ಎಂದರು.

ವ್ಯಾಪ್ಸ್ ಟೆಕ್ನಾಲಜೀಸ್ ಲಿಮಿಟೆಡ್‌ನ ಮುಖ್ಯಸ್ಥ ಆರ್.ಸಿದ್ದೇಶ್ ಕುಮಾರ್ ಮಾತನಾಡಿ, ‘ಎಐ-ವ್ಯಾಪ್ ಎಂಬ ಕೃತಕ ಬುದ್ಧಿಮತ್ತೆ ತಂತ್ರಜ್ಞಾನವನ್ನು ಸಂಸ್ಥೆಯಲ್ಲಿ ಅಭಿವೃದ್ಧಿಪಡಿಸಲಾಗುತ್ತಿದೆ. 2009ರಲ್ಲಿ ಆರಂಭವಾದ ಸಂಸ್ಥೆಯು ಹಲವು ಕ್ಷೇತ್ರಗಳಲ್ಲಿ ತನ್ನದೇ ಆದ ಗುರುತು ಮೂಡಿಸಿದೆ’ ಎಂದರು.

ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷ ನಿರ್ಮಲಾನಂದ ನಾಥ ಸ್ವಾಮೀಜಿ, ಸುತ್ತೂರಿನ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಕೆಎಲ್ಇ ಸಂಸ್ಥೆಗಳ ಅಧ್ಯಕ್ಷ ಪ್ರಭಾಕರ್ ಕೋರೆ, ಹಿರಿಯ ನಿರ್ದೇಶಕ ಸಾಯಿ ಪ್ರಕಾಶ್ ಉಪಸ್ಥಿತರಿದ್ದರು.

AUTHORISED DEALERSHIPS: BANGALORE: Kathriguppe: APPLE SUZUKI, Ph: 080-26697070/ 8080, 8884446504/08/02, **BTM Layout:** APPLE SUZUKI, Ph: 8884446512, **Kanakapura Road:** APPLE SUZUKI, Ph: 8884446503, **RR Nagar:** APPLE SUZUKI, Ph: 8884446502, **Old Airport Road(Domlur):** ARYAN SUZUKI, Ph: 9739969996, **Whitefield:** ARYAN SUZUKI, Ph: 9739969995, **K. R. Puram:** ARYAN SUZUKI,Ph: 9739949998, **Mahadevpura:** ARYAN SUZUKI, Ph: 9739929996, **Hoodi:** ARYAN SUZUKI –Bike Zone, Ph: 08047470000/8073783992, **KH Road:** AVANISH SUZUKI - 9591931113, **KH Road:** AVANISH SUZUKI BIKEZONE-9900879000, **Vijaynagar:** AVANISH SUZUKI, Ph: 8971900111, 8197800222, **Kengeri:** AVANISH SUZUKI, Ph: 8197900111, 9108945333, **Nagarbhavi:** AVANISH SUZUKI, Ph: 9606988444/ 9148233644, **Banaswadi:** BHOJANNA SUZUKI, Ph: 9148656565, **Bellary Road:** MEGHAVATH SUZUKI, Ph: 9632899459, **M G Road:** MEGHDOOTH SUZUKI, Ph: 9513533384, **HBR Layout:** MEGHDOOTH SUZUKI: Ph: 9513533374., **Hosur Road:** NINESTAR SUZUKI, Ph: 9019023333, **HSR Layout:** NINESTAR SUZUKI, Ph: 9019023333, **Bannerghatta Road:** NINESTAR SUZUKI, Ph: 9019023333, **Koramangala:** ORION SUZUKI, Ph: 080-25524747, 9535081055, **JP NAGAR:** ORION SUZUKI, Ph: 96060 37441. **Rajaji Nagar:** SAPTAGIRI SUZUKI, Ph: 8123754163, **Mathikere:** SAPTAGIRI SUZUKI, Ph: 8123754136, **T. Dasarahalli, Tumkur Road:** SAPTAGIRI SUZUKI, Ph: 8123754150, **Basaweshwara Nagar:** SAPTAGIRI SUZUKI, Ph: 8123754127, **Sheshadripuram:** SAPTAGIRI SUZUKI, Ph: 8123754171, **Kottigepalya:** SAPTAGIRI SUZUKI, Ph: 8123754131, **Nelamangala:** SAPTAGIRI SUZUKI, Ph: 8123754142, **Vasanthnagar:** VALUE SUZUKI, Ph: 9845906084/ 9108258679, **Yelhanka:** HONNASIRI SUZUKI, Ph: 9945004047, **Basavanagudi:** ADVAITH SUZUKI, Ph: 9880741841, **HOSAKOTE:** DAIVIK SUZUKI, 9449046049, 7899366585,

ಮೇಕೆದಾಟು: ಹೊಸ ಅಧ್ಯಯನಕ್ಕೆ ತೀರ್ಮಾನ

67.16 ಟಿಎಂಸಿ ಅಡಿ ನೀರು ಸಂಗ್ರಹ: ಡಿಪಿಆರ್ ಪರಿಶೀಲಿಸಿದ ಕೇಂದ್ರ ಜಲ ಆಯೋಗ

• ಮಂಜುನಾಥ ಹೆಬ್ಬಾರ್

ನವದೆಹಲಿ: ಮೇಕೆದಾಟು ಸಮತೋಲನ ಜಲಾಶಯ ಯೋಜನೆ ಕುರಿತು ಕೇಂದ್ರ ಜಲ ಆಯೋಗವು (ಸಿಡಬ್ಲ್ಯುಸಿ) ಕೆಲವೊಂದು ಅವಲೋಕನಗಳನ್ನು ಮಾಡಿರುವ ಕಾರಣದಿಂದ ಹೊಸ ಅಧ್ಯಯನ ಹಾಗೂ ಸಮೀಕ್ಷೆ ನಡೆಸಲು ಕಾವೇರಿ ನೀರಾವರಿ ನಿಗಮವು ತೀರ್ಮಾನಿಸಿದೆ.

ರಾಜ್ಯ ಸರ್ಕಾರ ಸಲ್ಲಿರುವ ವಿಸ್ತೃತ ಯೋಜನಾ ವರದಿಯ (ಡಿಪಿಆರ್) ಪರಿಶೀಲನೆ ನಡೆಸಿರುವ ಜಲ ಆಯೋಗವು ಭೂ ತಾಂತ್ರಿಕ ತನಿಖೆಗಳ ಕುರಿತು ಅವಲೋಕನಗಳನ್ನು ಮಾಡಿದೆ ಹಾಗೂ ಹೊಸ ಅಧ್ಯಯನಗಳನ್ನು ನಡೆಸುವಂತೆ ಈಚೆಗೆ ನಿರ್ದೇಶನ ನೀಡಿತ್ತು.

ಈ ಯೋಜನೆಯಡಿ 67.16 ಟಿಎಂಸಿ ಅಡಿ ನೀರು ಸಂಗ್ರಹಿಸಲು ಸಮತೋಲನ ಜಲಾಶಯ ನಿರ್ಮಿಸಲಾಗುತ್ತದೆ. ಜತೆಗೆ, ಸೇತುವೆ, ಭೂಗತ ವಿದ್ಯುತ್ ಕೇಂದ್ರ ಹಾಗೂ ಸುರಂಗ ನಿರ್ಮಾಣ ಮಾಡಲಾಗುತ್ತದೆ. ಜಲಾಶಯದ ಮುಂಭಾಗದಲ್ಲಿ 4.75 ಟಿಎಂಸಿ ಅಡಿ ಕುಡಿಯುವ ನೀರು ಮೇಲೆತ್ತಲು ಜಾಕ್‌ವೆಲ್ ಕಮ್ ಪಂಪ್‌ಹೌಸ್ ನಿರ್ಮಾಣವನ್ನೂ ಒಳಗೊಂಡಿದೆ. ಯೋಜನೆಗೆ ನದಿ ಭಾಗದ 1,130 ಹೆಕ್ಟೇರ್ ಸೇರಿದಂತೆ 5,267 ಹೆಕ್ಟೇರ್ ಅರಣ್ಯ ಹಾಗೂ ಕಂದಾಯ ಭೂಮಿ ಬಳಕೆಯಾಗಲಿದೆ. ಜಲಾಶಯ ನಿರ್ಮಾಣದಿಂದಾಗಿ ಮಡಿವಾಳ, ಕೊಂಗೆದೊಡ್ಡಿ, ಸಂಗಮ, ಬೊಮ್ಮಸಂದ್ರ ಹಾಗೂ ಮುತ್ತತ್ತಿ ಗ್ರಾಮಗಳು ಮುಳುಗಡೆಯಾಗಲಿವೆ.

3,946 ಹೆಕ್ಟೇರ್‌ನಲ್ಲಿ ಮರಗಳ ಎಣಿಕೆ: ಕಾವೇರಿ ವನ್ಯಜೀವಿ ಅಭಯಾರಣ್ಯವು ದಕ್ಷಿಣ ಭಾರತದ ಕುರುಚಲು ಕಾಡುಗಳು, ಬಿದಿರಿನ ಕಾಡುಗಳು ಮತ್ತು ನಿತ್ಯಹರಿದ್ವರ್ಣ ಶೋಲಾ ಸೇರಿದಂತೆ ಐದು ವಿಧದ ಕಾಡುಗಳನ್ನು ಒಳಗೊಂಡಿದೆ. ಯೋಜನಾ ಪ್ರದೇಶದ ಪ್ರತಿ ಹೆಕ್ಟೇರ್‌ನಲ್ಲಿ 300–400 ಮರಗಳು ಇರಬಹುದು ಎಂದು ಅಂದಾಜಿಸಲಾಗಿದೆ. ಪ್ರಮಾಣಿತ ಮಾದರಿ ವಿಧಾನಗಳನ್ನು ಅಳವಡಿಸಿಕೊಂಡು 3,946 ಹೆಕ್ಟೇರ್‌ನಲ್ಲಿ ಮರಗಳ ಎಣಿಕೆ ನಡೆಸಲಾಗುತ್ತದೆ. ಕಾಡುಪ್ರಾಣಿಗಳಿಗೆ ತೊಂದರೆಯಾಗದಂತೆ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಂಡು ಅಧ್ಯಯನ ಹಾಗೂ ಸಮೀಕ್ಷೆ ನಡೆಸಲಾಗುವುದು ಎಂದು ಕಾವೇರಿ ನೀರಾವರಿ ನಿಗಮ ಸ್ಪಷ್ಟಪಡಿಸಿದೆ.

ಯೋಜನೆಗೆ ಬೇಕಿರುವ ಜಾಗ (ಹೆಕ್ಟೇರ್‌ಗಳಲ್ಲಿ)

ಜಿಲ್ಲೆ	ಅರಣ್ಯ ಜಾಗ	ಕಂದಾಯ ಜಾಗ
ಬೆಂಗಳೂರು ದಕ್ಷಿಣ	2,163	181.27
ಮಂಡ್ಯ	1,010.66	8.99
ಚಾಮರಾಜನಗರ	1,902.89	-
ಒಟ್ಟು	5,077	190.26

ಯಾವ ವಿಷಯಗಳಲ್ಲಿ ಅಧ್ಯಯನ

- ಭೂತಾಂತ್ರಿಕ ಅಧ್ಯಯನ: ಅರಣ್ಯ ತಿರುವು ಪ್ರಸ್ತಾವದ ಭಾಗವಾಗಿ ಕಲ್ಲಿನ ಕಂಬಗಳನ್ನು ಬಳಸಿಕೊಂಡು ಎಫ್‌ಆರ್‌ಎಲ್ ಗಡಿ ಗುರುತಿಸುವಿಕೆ
- ಅರಣ್ಯ ತಿರುವು ಪ್ರಸ್ತಾವದ ಭಾಗವಾಗಿ ಮರಗಳ ಎಣಿಕೆ
- ವನ್ಯಜೀವಿ ಸಂರಕ್ಷಣಾ ಯೋಜನೆಯ ಭಾಗವಾಗಿ ಜೀವವೈವಿಧ್ಯಗಳ ಮೇಲಾಗುವ ಪರಿಣಾಮಗಳ ಅಧ್ಯಯನ
- ಪರಿಸರ ಪರಿಣಾಮದ ಅಧ್ಯಯನದ ಭಾಗವಾಗಿ ಮೂಲ ದತ್ತಾಂಶ ಸಂಗ್ರಹ

ಸಮೀಕ್ಷೆಯಿಂದ ಉಂಟಾಗುವ ಸಮಸ್ಯೆಗಳು

- ಆವಾಸಸ್ಥಾನ ನಾಶ: ಭೂತಾಂತ್ರಿಕ ಅಧ್ಯಯನದಿಂದಾಗಿ ದಟ್ಟವಾದ ಸಸ್ಯವರ್ಗ ನಾಶವಾಗಲಿದೆ.
- ಜನರ ಓಡಾಟ, ಡ್ರಿಲ್ಲಿಂಗ್ ರಿಗ್‌ಗಳಿಂದ ಶಬ್ದ ಮತ್ತು ಕಂಪನ, ವಾಹನಗಳ ಸಂಚಾರದಿಂದಾಗಿ ಕಾಡು ಪ್ರಾಣಿಗಳಿಗೆ ತೊಂದರೆ ಉಂಟಾಗಲಿದೆ.
- ಕೊರೆಯುವ ಚಟುವಟಿಕೆಗಳಿಂದ ಮಣ್ಣಿನ ಸವೆತ ಹೆಚ್ಚಾಗಲಿದೆ. ಭಾರೀ ಮಳೆಯೊಂದಿಗೆ ಮಾಲಿನ್ಯಕಾರಕಗಳು ಜಲಚರ ಪರಿಸರ ವ್ಯವಸ್ಥೆಗಳಿಗೆ ಪ್ರವೇಶಿಸಲು ಕಾರಣವಾಗಬಹುದು. ಇದು ಸೂಕ್ಷ್ಮ ಪ್ರಭೇದಗಳ ಮೇಲೆ ಪರಿಣಾಮ ಬೀರುತ್ತದೆ.
- ವನ್ಯಜೀವಿ ಅಭಯಾರಣ್ಯಗಳ ಒಳಗೆ ಕಾಂಕ್ರೀಟ್ ಕಂಬಗಳ ಬಳಸುವುದರಿಂದ ಪ್ರಾಣಿಗಳ ಸುರಕ್ಷತೆ ಮತ್ತು ಆವಾಸಸ್ಥಾನದ ಸಮಗ್ರತೆಗೆ ದೀರ್ಘಕಾಲೀನ ಅಪಾಯಗಳನ್ನು ಒಡ್ಡುತ್ತದೆ.

ಸಮೀಕ್ಷೆಗೂ ವನ್ಯಜೀವಿ ಮಂಡಳಿ ಒಪ್ಪಿಗೆ ಬೇಕು

ಅಭಯಾರಣ್ಯದಲ್ಲಿ ಹೊಸ ಅಧ್ಯಯನ ಹಾಗೂ ಸಮೀಕ್ಷೆ ನಡೆಸಲು ರಾಷ್ಟ್ರೀಯ ವನ್ಯಜೀವಿ ಮಂಡಳಿಯ ಒಪ್ಪಿಗೆ ಅಗತ್ಯ. ಮೇಕೆದಾಟು ಯೋಜನೆಯ ಸಮೀಕ್ಷೆ ನಡೆಸಲು ಅನುಮತಿ ನೀಡುವಂತೆ ಕೋರಿ ಕಾವೇರಿ ನೀರಾವರಿ ನಿಗಮವು ಪಿಸಿಸಿಎಫ್ (ವನ್ಯಜೀವಿ) ಮೂಲಕ ಕೇಂದ್ರ ಅರಣ್ಯ ಸಚಿವಾಲಯಕ್ಕೆ ಫೆಬ್ರುವರಿ 4ರಂದು ಪ್ರಸ್ತಾವ ಸಲ್ಲಿಸಿದೆ.

ಸುದ್ದಿ 2 ನಿಮಿಷ

‘ಕಾಂಗ್ರೆಸ್: ಹೆಚ್ಚಿದ ಕಮಿಷನ್’

ತುಮಕೂರು: ಹಿಂದಿನ ಬಿಜೆಪಿ ಸರ್ಕಾರಕ್ಕಿಂತ ಈಗಿನ ಕಾಂಗ್ರೆಸ್ ಸರ್ಕಾರದಲ್ಲಿ ಕಮಿಷನ್ ದಂಧೆ ಹೆಚ್ಚಾಗಿದೆ ಎಂದು ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷ ಆರ್.ಮಂಜುನಾಥ್ ಮಂಗಳವಾರ ಆರೋಪಿಸಿದರು.

ಬಹುತೇಕ ಇಲಾಖೆಗಳಲ್ಲಿ ಜ್ಯೇಷ್ಠತೆ ಆಧಾರದ ಮೇಲೆ ಬಿಲ್ ಹಣ ಬಿಡುಗಡೆ ಮಾಡುತ್ತಿಲ್ಲ. ಸಂಘದ ಹಿಂದಿನ ಅಧ್ಯಕ್ಷರು ಕಮಿಷನ್ ಬಗ್ಗೆ ಹೇಳಿದ್ದರಿಂದ ಗುತ್ತಿಗೆದಾರರು ಸಮಸ್ಯೆ ಎದುರಿಸಬೇಕಾಯಿತು. ಸತ್ಯ ಹೇಳಿದ್ದರಿಂದ ಸರ್ಕಾರ ಕಿರುಕುಳ ನೀಡುವುದು ಹೆಚ್ಚಾಗಿದೆ ಎಂದು ಪತ್ರಿಕಾಗೋಷ್ಠಿಯಲ್ಲಿ ಹೇಳಿದರು. ಬಾಕಿ ಬಿಡುಗಡೆಗೆ ಆಗ್ರಹಿಸಿ ಮಾರ್ಚ್ 6ರಂದು ಬೆಂಗಳೂರಿನಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದರು.

‘ಕೌಶಲ ಯೋಜನೆಗೆ ಒತ್ತು’

ಪೀಣ್ಯ ದಾಸರಹಳ್ಳಿ: ‘ಭವಿಷ್ಯದ ತಂತ್ರಜ್ಞಾನ ಆಧಾರಿತ ಕೌಶಲಕ್ಕೆ ಒತ್ತು ನೀಡುವ 2047ರ ವಿಕಸಿತ ಭಾರತದ ಕಲ್ಪನೆಯೊಂದಿಗೆ ಈ ಬಾರಿ ಕೇಂದ್ರ ಬಜೆಟ್ ಮಂಡಿಸಲಾಗಿದೆ’ ಎಂದು ಕೇಂದ್ರ ಗ್ರಾಹಕ ವ್ಯವಹಾರ, ಆಹಾರ ಮತ್ತು ಸಾರ್ವಜನಿಕ ವಿತರಣೆ ಸಚಿವ ಪ್ರಲ್ಹಾದ ಜೋಶಿ ತಿಳಿಸಿದರು.

ಪೀಣ್ಯ ಕೈಗಾರಿಕಾ ಸಂಘದ ಸಭಾಂಗಣದಲ್ಲಿ ಸೋಮವಾರ ಆಯೋಜಿಸಲಾಗಿದ್ದ ಕೇಂದ್ರ ಬಜೆಟ್ ಕುರಿತ ಸಂವಾದ ಸಭೆಯಲ್ಲಿ ಅವರು ಮಾತನಾಡಿದರು.

ದೇಶದ ಮೂರು ಕಡೆ ದೊಡ್ಡ ಕೆಮಿಕಲ್ ಪಾರ್ಕ್ ನಿರ್ಮಿಸಲಾಗುತ್ತಿದೆ. ಆತ್ಮ ನಿರ್ಭರತೆಯ ಮೂಲಕ ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳಿಗೆ ಪ್ರೋತ್ಸಾಹ ನೀಡಲಾಗಿದೆ’ ಎಂದು ಹೇಳಿದರು.

ಕೇಂದ್ರ ಕಾರ್ಮಿಕ, ಉದ್ಯೋಗ ಖಾತೆ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ಮಾತನಾಡಿ, ‘ನಮ್ಮ ಕೈಗಾರಿಕೆಗಳ ಮುಂದಿನ ಭವಿಷ್ಯ ಎಐ, ರೋಬೊ ತಂತ್ರಜ್ಞಾನದಲ್ಲಿ ಇರಲಿದೆ. ವಿಕಸಿತ ಭಾರತ ರೋಜಗಾರ್ ಯೋಜನೆ ಅಡಿ ಉದ್ಯೋಗ ಕಲ್ಪಿಸುವ ಪ್ರಯತ್ನವೂ ಆರಂಭವಾಗಿದೆ’ ಎಂದು ತಿಳಿಸಿದರು.

ಶಾಸಕ ಎಸ್.ಮುನಿರಾಜು ಮಾತನಾಡಿ, 'ಪ್ರಧಾನಿ ಮೋದಿ ಅವರ ಪರಿಕಲ್ಪನೆಯ ಮೇಕ್ ಇನ್ ಇಂಡಿಯಾ ಅಡಿ ಮಧ್ಯಮ, ಸಣ್ಣ ಕೈಗಾರಿಕೆಗಳಿಗೆ ಪ್ರೋತ್ಸಾಹ ನೀಡಲಾಗಿದೆ. ನನ್ನ ಕ್ಷೇತ್ರದಲ್ಲಿ ಹೆಚ್ಚು ಭಾಗ ಕೈಗಾರಿಕಾ ಪ್ರದೇಶವಿದ್ದು ಸಮಸ್ಯೆಗಳನ್ನು ಕೇಂದ್ರ ಸಚಿವರ ಗಮನಕ್ಕೆ ತಂದು ಬಗೆಹರಿಸಲು ಶ್ರಮಿಸುತ್ತೇನೆ' ಎಂದು ತಿಳಿಸಿದರು.

ಪೀಣ್ಯ ಕೈಗಾರಿಕಾ ಸಂಘದ ಅಧ್ಯಕ್ಷ ಡಿ.ಪಿ. ದಾನಪ್ಪ ಅವರು ಕೇಂದ್ರ ಸಚಿವರಿಗೆ ಬೇಡಿಕೆಗಳ ಮನವಿ ಸಲ್ಲಿಸಿದರು. ಹಿರಿಯ ಉಪಾಧ್ಯಕ್ಷ ಪಾಟೀಲ್ ಡಿ.ಎಚ್, ಉಪಾಧ್ಯಕ್ಷ ಚಂದ್ರಶೇಖರ್, ಜಂಟಿ ಕಾರ್ಯದರ್ಶಿ ಬಿ. ತಿಮ್ಮಯ್ಯ, ಖಜಾಂಚಿ ಎ.ಪಿ.ಸೆಲ್ವಕುಮಾರ್, ಜಂಟಿ ಖಜಾಂಚಿ ಎಂ.ಆರ್.ರಂಗಸ್ವಾಮಿ, ಗೌರವ ಕಾರ್ಯದರ್ಶಿ ಬಿ. ಬೀರಪ್ಪ ಇದ್ದರು.

ಚಿತ್ರಾವಳಿ

ನಗರದಲ್ಲಿ ಒಆರ್‌ಡಿಐ ಆಯೋಜಿಸಿದ್ದ ರೇಸ್ ಫಾರ್ 7 ಓಟಕ್ಕೆ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಚಾಲನೆ ನೀಡಿದರು

ನಗರದ ಇಂಟರ್ ನ್ಯಾಷನಲ್ ಸ್ಕೂಲ್ ಆಫ್ ಮ್ಯಾನೇಜ್‌ಮೆಂಟ್ ಎಕ್ಸಲೆನ್ಸ್ (ಐಎಸ್‌ಎಂಇ) ಆಯೋಜಿಸಿದ್ದ ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ ಎಚ್‌ಆರ್‌ಡಿ ನೆಟ್‌ವರ್ಕ್‌ನ ಸಹಸಂಸ್ಥಾಪಕ ಟಿ.ವಿ. ರಾವ್ ಅವರಿಗೆ ಜೀವಮಾನ ಸಾಧನೆ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಐಎಸ್‌ಎಂಇ ಸಂಸ್ಥಾಪಕ ನಿತಿನ್ ಗಾರ್ಗ್, ನಿರ್ದೇಶಕಿ ಪಲ್ಲವಿ ಗಾರ್ಗ್ ಇದ್ದರು

ಬಜೆಟ್: ಅಭಿವೃದ್ಧಿಗೆ ಒತ್ತು ನೀಡಿ

‘ಮೇಲ್ಸೇತುವೆ ವಿಸ್ತರಿಸಿ’

ಎಂ.ಎಸ್. ನಗರ ವಾರ್ಡ್‌ನ ಬಾಣಸವಾಡಿ ಮುಖ್ಯರಸ್ತೆಯ ಮುಕುಂದ ರಂಗಮಂದಿರದ ಬಳಿ ಇರುವ ಮೇಲ್ಸೇತುವೆಯನ್ನು ವಿಸ್ತರಿಸುವ ಕುರಿತು ಈ ಬಾರಿಯ ಬಜೆಟ್‌ನಲ್ಲಿ ಘೋಷಿಸಬೇಕು. ಸದ್ಯ ಈ ಮೇಲ್ಸೇತುವೆ ಕಿರಿದಾಗಿದೆ. ಇದರಿಂದ ಸಂಚಾರ ದಟ್ಟಣೆ ಆಗುತ್ತಿದೆ. ಇದನ್ನು ವಿಸ್ತರಿಸುವ ಮೂಲಕ ಸಂಚಾರ ದಟ್ಟಣೆ ಸಮಸ್ಯೆಗೆ ಪರಿಹಾರ ಕಲ್ಪಿಸಿ, ಸುಗಮ ಸಂಚಾರಕ್ಕೆ ಅವಕಾಶ ಮಾಡಿಕೊಡಬೇಕು.

ಇ.ಎಸ್. ಮುನಿರತ್ನಂ, ಎಚ್‌ಆರ್‌ಬಿಆರ್ ಲೇಔಟ್

‘ಹದಗೆಟ್ಟ ರಸ್ತೆಗಳ ದುರಸ್ತಿಗೊಳಿಸಿ’

ಬೆಂಗಳೂರು ನಗರದ ಜೀವನ ಮಟ್ಟವನ್ನು ಸುಗಮಗೊಳಿಸಲು ಹದಗೆಟ್ಟ ರಸ್ತೆಗಳನ್ನು, ಪಾದಚಾರಿ ಮಾರ್ಗಗಳನ್ನು ಸರಿಪಡಿಸಬೇಕು. ಅರ್ಧಕ್ಕೆ ನಿಂತಿರುವ ಮೇಲ್ಸೇತುವೆಗಳ ಕಾಮಗಾರಿಗಳನ್ನು ಪೂರ್ಣಗೊಳಿಸಬೇಕು. ಮೆಟ್ರೊ ಕಾಮಗಾರಿಗೆ ವೇಗ ನೀಡಬೇಕು. ಕಸದ ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸಬೇಕು. ನಗರದಲ್ಲಿ ಜನಸಂಖ್ಯೆ ಹೆಚ್ಚಾದಂತೆ ಅಪರಾಧ ಪ್ರಕರಣಗಳು ಹೆಚ್ಚುತ್ತಿರುವುದರಿಂದ ಪೊಲೀಸ್ ಇಲಾಖೆಗೆ ಹೆಚ್ಚಿನ ಮೂಲಸೌಕರ್ಯ ನೀಡಬೇಕು. ಕಾವೇರಿ ನೀರಿನ ಸೌಕರ್ಯ ಎಲ್ಲ ಮನೆಗಳಿಗೆ ವಿಸ್ತರಿಸಬೇಕು. ವಾಹನ ನಿಲುಗಡೆಗೆ ಬಹುಮಹಡಿ ಕಟ್ಟಡಗಳ ಸಂಖ್ಯೆ ಹೆಚ್ಚಿಸಬೇಕು.

ಎಂ.ಎನ್. ಬಸವರಾಜು, ರಾಜರಾಜೇಶ್ವರಿ ನಗರ

‘ಮಾತೃ ಭಾಷೆಗೆ ಆದ್ಯತೆ ನೀಡಿ’

ಮುಂಬರುವ ಬಜೆಟ್‌ನಲ್ಲಿ ಮಾತೃ ಭಾಷೆಯ ಪ್ರಚಾರ ಮಾಡಲು ಆದ್ಯತೆ ನೀಡಬೇಕು. ಬೆಂಗಳೂರು ನಗರದ ಎಲ್ಲ ಅಂಗಡಿಗಳು, ಐಟಿ ಕಂಪನಿಗಳು ಹಾಗೂ ಸರ್ಕಾರಿ ಕಚೇರಿಗಳಲ್ಲಿ ಕನ್ನಡ ಭಾಷೆಯ ಬಳಕೆಯನ್ನು ಉತ್ತೇಜಿಸಬೇಕು. ಈ ಕುರಿತು ಸಮಗ್ರ ಯೋಜನೆ ರೂಪಿಸಿ, ಅದನ್ನು ಅನುಷ್ಠಾನಗೊಳಿಸಬೇಕು. ಬೆಂಗಳೂರಿನಲ್ಲಿ ವಲಸಿಗರ ಸಂಖ್ಯೆ ಹೆಚ್ಚಾಗಿದ್ದು, ಅವರಿಗೂ ಕನ್ನಡ ಕಲಿಸುವ ಕೆಲಸವನ್ನು ಸರ್ಕಾರ ಮಾಡಬೇಕು.

ವಿ. ನಾಗರಾಜು, ರಾಜಾಜಿನಗರ

‘ಸಾರ್ವಜನಿಕ ಸಾರಿಗೆ ಉತ್ತೇಜಿಸಿ’

ಬೆಂಗಳೂರು ನಗರದಲ್ಲಿ ಸಾರ್ವಜನಿಕ ಸಾರಿಗೆಯನ್ನು ಉತ್ತೇಜಿಸಬೇಕು. ಮೆಟ್ರೊ ಮಾರ್ಗಗಳ ಅಭಿವೃದ್ಧಿಗೆ ಹೆಚ್ಚು ಅನುದಾನ ನೀಡಬೇಕು. ನಗರದ ಎಲ್ಲ ರಸ್ತೆಗಳನ್ನು ವೈಟ್ ಟಾಪಿಂಗ್ ಮಾಡಲು ಕ್ರಮ ಕೈಗೊಳ್ಳಬೇಕು. ಸಾರ್ವಜನಿಕ ಶೌಚಾಲಯಗಳ ಸಂಖ್ಯೆ ಹೆಚ್ಚಿಸಬೇಕು. ಪಾದಚಾರಿ ಮಾರ್ಗಗಳನ್ನು ಎತ್ತರಿಸಬೇಕು. ಇದರಿಂದ ಪಾದಚಾರಿ ಮಾರ್ಗಗಳಲ್ಲಿ ದ್ವಿಚಕ್ರ ವಾಹನ ಸಂಚಾರಕ್ಕೆ ಕಡಿವಾಣ ಹಾಕಬಹುದು.

ಆನಂದ್ ಕುಮಾರ್, ಕುರುಬರಹಳ್ಳಿ

‘ಪಾದಚಾರಿ ಮಾರ್ಗ, ರಸ್ತೆ ಅಭಿವೃದ್ಧಿಪಡಿಸಿ’

ಬೆಂಗಳೂರು ನಗರದಲ್ಲಿ ದಿನದಿಂದ ದಿನಕ್ಕೆ ಜನಸಂಖ್ಯೆ ಹೆಚ್ಚಾಗುತ್ತಿದೆ. ಆದ್ದರಿಂದ ಇಲ್ಲಿನ ರಸ್ತೆ ಹಾಗೂ ಪಾದಚಾರಿ ಮಾರ್ಗಗಳನ್ನು ಅಭಿವೃದ್ಧಿಪಡಿಸಬೇಕು. ಆದರೆ ಪಾದಚಾರಿ ಮಾರ್ಗಗಳನ್ನು ಬೀದಿ ಬದಿ ವ್ಯಾಪಾರಿಗಳು ಅಕ್ರಮಿಸಿಕೊಂಡಿದ್ದಾರೆ. ಇದರಿಂದ ಸಾರ್ವಜನಿಕರು ರಸ್ತೆಯಲ್ಲಿ ಓಡಾಡುವ ಪರಿಸ್ಥಿತಿ ಎದುರಾಗಿದೆ. ಬೀದಿ ಬದಿ ವ್ಯಾಪಾರಿಗಳಿಗೆ ವ್ಯಾಪಾರ ಮಾಡಲು ನಿರ್ದಿಷ್ಟ ಜಾಗ ನೀಡಬೇಕು.

ಸಿ. ಶಾಂತಕುಮಾರ್ ಎಸ್.ಆರ್.ನಗರ

‘ಮಳೆಗಾಲದ ಬವಣೆ ನೀಗಿಸಿ’

ಪ್ರತಿವರ್ಷ ಮಳೆಗಾಲ ಬಂತೆಂದರೆ ಬೆಂಗಳೂರಿನ ತಗ್ಗು ಪ್ರದೇಶಗಳು ಕೆರೆಯಂತಾಗಿ ಮನೆಗಳಿಗೆ ನೀರು ನುಗ್ಗುತ್ತದೆ. ನಗರದ ಅನೇಕ ಕೆರೆಗಳು, ರಾಜಕಾಲುವೆಗಳನ್ನು ಒತ್ತುವರಿ ಮಾಡಲಾಗಿದೆ. ಇದರಿಂದ ಮಳೆಗಾಲದ ಸಂದರ್ಭದಲ್ಲಿ ಸ್ಥಳೀಯ ನಿವಾಸಿಗಳಿಗೆ ಹೆಚ್ಚು ತೊಂದರೆ ಆಗುತ್ತಿದೆ. ಆದ್ದರಿಂದ ಮಳೆಗಾಲದಲ್ಲಿ ಸಮಸ್ಯೆ ಎದುರಿಸುವ ಬಡಾವಣೆಗಳನ್ನು ಗುರುತಿಸಿ, ಶಾಶ್ವತ ಪರಿಹಾರ ಕಲ್ಪಿಸಬೇಕು.

ಡಿ. ಪ್ರಸನ್ನಕುಮಾರ್, ಜೀವನ್‌ಭಿಮಾನಗರ

ಬಜೆಟ್ ನಿರೀಕ್ಷೆ ನೀವೂ ಬರೆಯಿರಿ

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಾರ್ಚ್ 6ರಂದು ಬಜೆಟ್ ಮಂಡಿಸಲಿದ್ದಾರೆ. ಮೆಟ್ರೊ, ಸುರಂಗ ರಸ್ತೆ, ಮೇಲ್ಸೇತುವೆಗಳ ನಿರ್ಮಾಣ, ರಸ್ತೆ, ಶೌಚಾಲಯ, ಪಾದಚಾರಿ ಮಾರ್ಗಗಳ ಅಭಿವೃದ್ಧಿ ಸೇರಿದಂತೆ ರಾಜಧಾನಿಯಲ್ಲಿ ಮೂಲಸೌಕರ್ಯಗಳನ್ನು ಕಲ್ಪಿಸಿಕೊಡಲು ಹೆಚ್ಚಿನ ಅನುದಾನದ ಅಗತ್ಯವಿದೆ.

ಜೀವನಮಟ್ಟವನ್ನು ಸುಗಮಗೊಳಿಸಲು ಸರ್ಕಾರ ಬಜೆಟ್‌ನಲ್ಲಿ ಯಾವುದಕ್ಕೆ ಆದ್ಯತೆ ನೀಡಬೇಕು. ತಮ್ಮ ನಿರೀಕ್ಷೆಗಳು ಏನು ಎಂಬುದನ್ನು ಜನರು ಹಂಚಿಕೊಳ್ಳಬಹುದು. 50 ಪದಗಳಿಗೆ ಮೀರದಂತೆ ಬರೆದು, ಭಾವಚಿತ್ರ ಸಮೇತ ಕಳುಹಿಸಬೇಕು.

ವಾಟ್ಸ್‌ಆ್ಯಪ್ ಸಂಖ್ಯೆ: **9606038256**

ಕೋಲ್ಕತ್ತ ರೇಸ್

ಗೋಲ್ಡ್ ಎಂಪೈರ್ ಗೆಲ್ಲುವ ನಿರೀಕ್ಷೆ

ಕೋಲ್ಕತ್ತ ಸೆಂಟ್ ಲೆಗರ್ ಬುಧವಾರದ ಕೋಲ್ಕತ್ತ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಗೋಲ್ಡ್ ಎಂಪೈರ್ ಗೆಲ್ಲುವ ನಿರೀಕ್ಷೆ ಇದೆ. ಮಧ್ಯಾಹ್ನ 2:00ಕ್ಕೆ ಆರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಎ ವಿಂಕ್ ಅನ್ಡ್ ಸ್ಮೈಲ್ 6, ಡೈಮಂಡ್ ಗೋಲ್ಡ್ 7, ಅಸ್ಟ್ರಾಲ್ ಗೋಲ್ಡ್ 1
2ನೇ ರೇಸ್: ಸಿಗಾರ್ ಗೆಲಾಕ್ಸಿ 2, ಕಂಜೂರರ್ 1, ಕ್ಯಾಶ್ ಆ್ಯನ್ ರನ್ 3
3ನೇ ರೇಸ್: ಮರ್ಲೆಟ್ 4, ಎಲೆನೋರ 5, ಫೇಬಲ್ 6
4ನೇ ರೇಸ್: ಸುಪ್ರೀಂ ಫಾಂಟಸಿ 4, ಗ್ರೆನೊಬಲ್ 1, ಮಾರ್ಕೋಲಿನಿ 6
5ನೇ ರೇಸ್: ಕೋಟರ್ಡೊ 8, ಸರ್ ವಿನ್‌ಸ್ಟನ್ 11, ಕೆಷ 10
6ನೇ ರೇಸ್: ಗೋಲ್ಡ್ ಎಂಪೈರ್ 3, ಅರೈವ್ಡ್ 1, ಸೂಪರ್‌ಸ್ಟಾರ್ 4
7ನೇ ರೇಸ್: ಹರ್ಮೋಡ್ 8, ವಿಕ್ಟೋರಿಯಸ್ ಒಮೆನ್ 1, ಗಾರ್ಡನ್ 4

ಉತ್ತಮ ಬೆಟ್: ಸುಪ್ರೀಂ ಫಾಂಟಸಿ

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5,6,7

ಇ.ಸಿ–ಎಸ್‌ಇಸಿ: ಸಮನ್ವಯಕ್ಕೆ ನಿರ್ಧಾರ

ಒಂದನೇ ಪುಟದಿಂದ...

ದೋಷರಹಿತ ಮತದಾರರ ಪಟ್ಟಿ ಸಿದ್ಧಪಡಿಸುವುದು ಪ್ರಜಾಪ್ರಭುತ್ವದ ಮೂಲಾಧಾರವಾಗಿದೆ ಮತ್ತು ಎಲ್ಲ ಚುನಾವಣೆಗಳನ್ನು ಪಾರದರ್ಶಕವಾಗಿ ನಡೆಸುವುದು ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಬಲಪಡಿಸುತ್ತದೆ ಎಂಬುದನ್ನು ಸಮ್ಮೇಳನದಲ್ಲಿ ಪಾಲ್ಗೊಂಡ ಎಲ್ಲರೂ ಒಪ್ಪಿಕೊಂಡರು.

27 ವರ್ಷಗಳ ಬಿಡುವಿನ ಬಳಿಕ ನಡೆದ ದುಂಡು ಮೇಜಿನ ಸಮ್ಮೇಳನದಲ್ಲಿ ಮಾತನಾಡಿದ ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್, ‘ಕೇಂದ್ರ ಮತ್ತು ರಾಜ್ಯ ಚುನಾವಣಾ ಆಯೋಗಗಳು ಮತದಾರರನ್ನು ಗಮನದಲ್ಲಿಟ್ಟುಕೊಂಡು ಒಟ್ಟಾಗಿ ಕೆಲಸ ಮಾಡಬೇಕು’ ಎಂದರು.

ರಾಷ್ಟ್ರಪತಿ, ಉಪರಾಷ್ಟ್ರಪತಿ, ಲೋಕಸಭೆ, ರಾಜ್ಯಸಭೆ ಮತ್ತು ರಾಜ್ಯ ವಿಧಾನಸಭೆಗಳಿಗೆ ಚುನಾವಣೆ ನಡೆಸುವ ಜವಾಬ್ದಾರಿಯು ಚುನಾವಣಾ ಆಯೋಗದ್ದಾಗಿದ್ದರೆ, ರಾಜ್ಯ ಚುನಾವಣಾ ಆಯೋಗಗಳು ಪಂಚಾಯತ್ ಮತ್ತು ಇತರ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆಸುತ್ತವೆ.

70 ಸ್ಥಳಗಳಲ್ಲಿ ಬೀದಿ ನಾಯಿಗೆ ಆಹಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೀದಿ ನಾಯಿಗಳಿಗೆ ಆಹಾರ ನೀಡಲು ನಿರ್ದಿಷ್ಟ ಸ್ಥಳಗಳನ್ನು ಗುರುತಿಸಿರುವ ಬೆಂಗಳೂರು ಉತ್ತರ ನಗರ ಪಾಲಿಕೆ, ಅಲ್ಲಿ ಸೂಚನಾ ಫಲಕ ಅಳವಡಿಸಿದೆ.

ಬೀದಿ ನಾಯಿಗಳ ಮಾನವೀಯ ನಿರ್ವಹಣೆ, ಸಾರ್ವಜನಿಕ ಆರೋಗ್ಯ ರಕ್ಷಣೆ ಹಾಗೂ ಪರಿಸರ ಸ್ವಚ್ಛತೆಯನ್ನು ಸಮನ್ವಯಗೊಳಿಸುವ ಉದ್ದೇಶದಿಂದ ಪಾಲಿಕೆಯ ಪ್ರಾಣಿ ಕಲ್ಯಾಣ ವಿಭಾಗವು 70 ನಿರ್ದಿಷ್ಟ ಸ್ಥಳಗಳನ್ನು ಗುರುತಿಸಿದೆ. ಇವುಗಳನ್ನು, ಬೀದಿ ನಾಯಿಗಳಿಗೆ ಆಹಾರ ನೀಡುವ ಅಧಿಕೃತ ಜಾಗ ಎಂದು ಘೋಷಿಸಿ, ಸೂಚನಾ ಫಲಕಗಳನ್ನು ಅಳವಡಿಸಲಾಗಿದೆ ಎಂದು ಆಯುಕ್ತ ಪೊಮ್ಮಲ ಸುನೀಲ್‌ಕುಮಾರ್ ತಿಳಿಸಿದರು.

ಸುಪ್ರೀಂ ಕೋರ್ಟ್ ಮಾರ್ಗಸೂಚಿ, ಪ್ರಾಣಿ ಕ್ರೂರತೆ ನಿವಾರಣೆ ಕಾಯ್ದೆ–1960 ಹಾಗೂ ಪ್ರಾಣಿ ಜನನ ನಿಯಂತ್ರಣ (ಎಬಿಸಿ) ನಿಯಮಾವಳಿಗಳ ಅನ್ವಯ ಸಾರ್ವಜನಿಕರಿಗೆ ಯಾವುದೇ ತೊಂದರೆ ಆಗದಂತೆ ವ್ಯವಸ್ಥಿತ ಹಾಗೂ ನಿಯಂತ್ರಿತ ರೀತಿಯಲ್ಲಿ ಆಹಾರ ನೀಡುವ ವ್ಯವಸ್ಥೆಯನ್ನು ರೂಪಿಸುವ ಸಲುವಾಗಿ ಈ ಕ್ರಮ ಕೈಗೊಳ್ಳಲಾಗಿದೆ ಎಂದರು.

ಆಹಾರವನ್ನು ಗುರುತಿಸಿದ ಸ್ಥಳಗಳಲ್ಲೇ ನೀಡಬೇಕು. ಮುಖ್ಯ ರಸ್ತೆಗಳು, ಆಸ್ಪತ್ರೆಗಳು, ಶಾಲೆಗಳು ಹಾಗೂ ಜನಸಂದಣಿ ಪ್ರದೇಶಗಳಲ್ಲಿ ಆಹಾರ ನೀಡಬಾರದು. ಆಹಾರ ನೀಡಿದ ನಂತರ ಸ್ಥಳವನ್ನು ಸ್ವಚ್ಛವಾಗಿಡುವುದು ಆಹಾರ ನೀಡುವವರ ಜವಾಬ್ದಾರಿಯಾಗಿದೆ. ನಾಯಿಗಳಿಗೆ ಹಾನಿ ಮಾಡುವುದು ಅಥವಾ ಕಿರುಕುಳ ನೀಡುವುದು ಕಾನೂನುಬಾಹಿರವಾಗಿದೆ. ಸಾರ್ವಜನಿಕ ಸುರಕ್ಷತೆ ಕಾಪಾಡುವಂತೆ ಶಿಸ್ತಿನಿಂದ ಆಹಾರ ನೀಡಬೇಕು ಎಂದು ಸೂಚಿಸಲಾಗಿದೆ. ದೂರುಗಳಿದ್ದರೆ ಸಹಾಯವಾಣಿ: 1533 ಸಂಪರ್ಕಿಸಬಹುದು ಎಂದರು.

‘ಅಲ್-ಫಾಜ್’ ಹೋಟೆಲ್‌ಗೆ ದಂಡ

ಬೆಂಗಳೂರು: ಹೊಸಗುರಪ್ಪನಪಾಳ್ಯದಲ್ಲಿರುವ ‘ಅಲ್-ಫಾಜ್’ ಹೋಟೆಲ್ ಮೇಲೆ ದಾಳಿ ನಡೆಸಿದ ದಕ್ಷಿಣ ನಗರ ಪಾಲಿಕೆ ಅಧಿಕಾರಿಗಳು, ಹೋಟೆಲ್ ಆವರಣದಲ್ಲಿ ಶುಚಿತ್ವ ಕಾಪಾಡದೆ ಇರುವುದು ಮತ್ತು ನಿಯಮಗಳ ಉಲ್ಲಂಘನೆಗಾಗಿ ₹75 ಸಾವಿರ ದಂಡ ವಿಧಿಸಿದ್ದಾರೆ.

ನೈರ್ಮಲ್ಯ ಕಾಪಾಡುವ ನಿಟ್ಟಿನಲ್ಲಿ ಪಾಲಿಕೆಯ ಘನತ್ಯಾಜ್ಯ ನಿರ್ವಹಣಾ ಅಧಿಕಾರಿಗಳು ಕಾರ್ಯಾಚರಣೆ ನಡೆಸುತ್ತಿದ್ದಾರೆ. ಹೋಟೆಲ್ ಆವರಣದಲ್ಲಿ ಸರಿಯಾದ ನೈರ್ಮಲ್ಯ ಕಾಪಾಡದಿರುವುದು. ಹಸಿ ಮತ್ತು ಒಣ ಕಸವನ್ನು ವಿಂಗಡಿಸದೆ ನಿಯಮ ಉಲ್ಲಂಘಿಸಿರುವುದು. ಸರ್ಕಾರದಿಂದ ನಿಷೇಧಿಸಲಾಗಿರುವ ಏಕಬಳಕೆಯ ಪ್ಲಾಸ್ಟಿಕ್ ಬಳಸಿರುವುದು ದಾಳಿಯ ಸಂದರ್ಭದಲ್ಲಿ ಕಂಡುಬಂದಿತು. ನಿಯಮಗಳನ್ನು ಪಾಲಿಸದಿದ್ದರೆ ಮುಂಬರುವ ದಿನಗಳಲ್ಲಿ ಇನ್ನಷ್ಟು ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಪಾಲಿಕೆಯ ಅಧಿಕಾರಿಗಳು ಎಚ್ಚರಿಕೆ ನೀಡಿದರು.

ಕಸದ ರಾಶಿ

ಪ್ರಜಾವಾಣಿ ಚಿತ್ರ: **ಕಿಶೋರ್ ಕುಮಾರ್ ಬೋಳಾರ್**

ಕೆ.ಆರ್. ಮಾರುಕಟ್ಟೆ ಬಳಿ ಇರುವ ಎಸ್.ಜೆ.ಪಿ. ಉದ್ಯಾನ ಮುಂಭಾಗದ ಪಾದಚಾರಿ ಮಾರ್ಗದಲ್ಲಿ ರಾಶಿಗಟ್ಟಲೇ ತ್ಯಾಜ್ಯ ತಂದು ಸುರಿಯಲಾಗಿದೆ

ಕಾವೇರಿ ನೀರು ಪೂರೈಕೆಯಲ್ಲಿ ನಾಳೆ ವ್ಯತ್ಯಯ

ಬೆಂಗಳೂರು: ನಗರದ ವಿವಿಧ ಬಡಾವಣೆಗಳಲ್ಲಿ ಫೆ.26ರ ಬೆಳಿಗ್ಗೆ 6ರಿಂದ ಫೆ. 27ರ ಬೆಳಿಗ್ಗೆ 6ರವರೆಗೆ ನೀರು ಪೂರೈಕೆಯಲ್ಲಿ ವ್ಯತ್ಯಯ ವಾಗಲಿದೆ ಎಂದು ಬೆಂಗಳೂರು ಜಲಮಂಡಳಿ ತಿಳಿಸಿದೆ.

ಮಂಡಳಿ ವತಿಯಿಂದ ಕಾವೇರಿ ಐದನೇ ಹಂತದ ಗೊಟ್ಟಿಗೆರೆ ಜಲಸಂಗ್ರಹಗಾರದ ಸಮೀಪ ಇಎಂಎಫ್ ಮೀಟರ್‌ಗಳನ್ನು ಅಳವಡಿಸುವ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುತ್ತಿದೆ. ಆದ್ದರಿಂದ ನೀರು ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಎಂದು ಜಲಮಂಡಳಿ ಅಧ್ಯಕ್ಷ ಡಾ.ವಿ.ರಾಮ್ ಪ್ರಸಾತ್ ಮನೋಹರ್ ತಿಳಿಸಿದ್ದಾರೆ.

ವ್ಯತ್ಯಯವಾಗುವ ಪ್ರದೇಶಗಳು: ವೈಟ್‌ಫೀಲ್ಡ್, ನೆಲ್ಲೂರಹಳ್ಳಿ, ಸಿದ್ದಾಪುರ, ನಾಗೊಂಡನಹಳ್ಳಿ, ರಾಮಗೊಂಡನಹಳ್ಳಿ, ಚನ್ನಸಂದ್ರ, ಹೂಡಿ, ಗರುಡಾಚಾರ್ ಪಾಳ್ಯ, ದೊಡ್ಡನೆಕ್ಕುಂದಿ, ಮುನ್ನೇನಕೊಳಾಲು, ಕುಮಾರಸ್ವಾಮಿ ಬಡಾವಣೆ, ಪೂರ್ಣಪ್ರಜ್ಞ ಲೇಔಟ್, ಬನಶಂಕರಿ, ಕೊಲ್ಲಹಳ್ಳಿ, ಅಂಜನಾಪುರ, ಗೊಟ್ಟಿಗೆರೆ, ಬೇಗೂರು, ಕೋಡಿಚಿಕ್ಕನಹಳ್ಳಿ, ಕೂಡ್ಲು, ಕಾಡುಗೋಡಿ ಹಾಗೂ ಸುತ್ತಮುತ್ತಲಿನ ಪ್ರದೇಶಗಳು.

ಕೆ.ಆರ್‌ಪುರ ಸಮೀಪದ ವೈಟ್‌ಫೀಲ್ಡ್‌ನ ವಿಜಯನಗರದಲ್ಲಿರುವ ಡಾ.ಬಿ.ಆರ್‌ಅಂಬೇಡ್ಕರ್ ಉಚಿತ ಕ್ಯಾಂಟಿನ್‌ಗೆ ಅಂಬೇಡ್ಕರ್ ಮೊಮ್ಮಗ ಹಾಗೂ ರಿಪಬ್ಲಿಕನ್ ಸೇನಾ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಆನಂದ್ ರಾಜ್ ಅಂಬೇಡ್ಕರ್ ಭೇಟಿ ನೀಡಿ, ನಾಗರಿಕರಿಗೆ ಊಟ ಬಡಿಸಿದರು. ಭೀಮ್ ಪ್ರಜಾ ಸಂಘದ ರಾಜ್ಯಾಧ್ಯಕ್ಷ ವೈಟ್‌ಫೀಲ್ಡ್ ಮುರುಗೇಶ್, ಕನ್ನಲ್ಲಿ ಕೃಷ್ಣಪ್ಪ, ಹರೀಶ್ ರೆಡ್ಡಿ, ಜಬಿ, ಹುಸೇನ್, ರಮೇಶ್, ರಾಜಣ್ಣ, ಬಿ.ಕೃಷ್ಣಪ್ಪ ಉಪಸ್ಥಿತರಿದ್ದರು

ಗ್ರಾಮೀಣ ವಿದ್ಯಾರ್ಥಿಗಳಿಗೆ ವಿಜ್ಞಾನ ತಂತ್ರಜ್ಞಾನ ಕಲಿಕೆಗೆ ಸಹಕಾರಿ

ಸರ್ಕಾರಿ ಶಾಲೆಯಲ್ಲಿ ಎ.ಐ ಪ್ರಯೋಗಾಲಯ

ಪ್ರಜಾವಾಣಿ ವಾರ್ತೆ

ದೊಡ್ಡಬಳ್ಳಾಪುರ: ತಾಲ್ಲೂಕಿನ ಕಂಟನಕುಂಟೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳಲ್ಲಿ ವಿಜ್ಞಾನ, ತಂತ್ರಜ್ಞಾನ ಮತ್ತು ಕೃತಕ ಬುದ್ಧಿಮತ್ತೆ ತಂತ್ರಜ್ಞಾನದ ಅರಿವು ಬೆಳೆಸುವ ಉದ್ದೇಶದಿಂದ ನಿರ್ಮಿಸಲಾಗಿರುವ ಸ್ಟೆಮ್.ಎಐ ಪ್ರಯೋಗಾಲಯಕ್ಕೆ ಮಂಗಳವಾರ ಚಾಲನೆ ನೀಡಲಾಯಿತು.

ಬೆಂಗಳೂರಿನ ಚೆರಿಷ್ ಟ್ರಸ್ಟ್ ಸಂಸ್ಥಾಪಕ ಮೈಖಲ್ ಡೇಸಾ ಮಾತನಾಡಿ, ‘ಜಾಗತಿಕ ಸವಾಲುಗಳಿಗೆ ಗ್ರಾಮೀಣ ವಿದ್ಯಾರ್ಥಿಗಳನ್ನು ಸಜ್ಜುಗೊಳಿಸುವ ದಿಸೆಯಲ್ಲಿ ಗ್ರಾಮೀಣ ಮಕ್ಕಳಿಗೆ ತಂತ್ರಜ್ಞಾನಾಧಾರಿತ ಶಿಕ್ಷಣ ನೀಡುವ ಅಗತ್ಯವಿದೆ’ ಎಂದು ಹೇಳಿದರು.

ಸ್ಟೆಮ್ ಮತ್ತು ಎಐ ಆಧಾರಿತ ಶಿಕ್ಷಣವು ವಿದ್ಯಾರ್ಥಿಗಳಲ್ಲಿ ಸಮಸ್ಯೆ ಪರಿಹಾರ ಕೌಶಲ್ಯ, ಸೃಜನಶೀಲತೆ ಹಾಗೂ ಭವಿಷ್ಯದ ತಂತ್ರಜ್ಞಾನಾಧಾರಿತ ಉದ್ಯೋಗಗಳಿಗೆ ಅಗತ್ಯ ಸಾಮರ್ಥ್ಯಗಳನ್ನು ಬೆಳೆಸುತ್ತದೆ. ಶಿಕ್ಷಣ ಮತ್ತು ಕಾರ್ಯಪಡೆ ಅಭಿವೃದ್ಧಿಗೆ ಅಂತರಶಿಸ್ತೀಯ ವಿಧಾನ ಪ್ರತಿನಿಧಿಸುವ ಸ್ಟೆಮ್ (ವಿಜ್ಞಾನ, ತಂತ್ರಜ್ಞಾನ, ಎಂಜಿನಿಯರಿಂಗ್ ಮತ್ತು ಗಣಿತ) ಮತ್ತು ಎ.ಐ(ಕೃತಕ ಬುದ್ಧಿಮತ್ತೆ) ಇಂದು ನಾವೀನ್ಯತೆ, ವಿಮರ್ಶಾತ್ಮಕ ಚಿಂತನೆ ಮತ್ತು ಸಮಸ್ಯೆಗಳ ಪರಿಹಾರದ ಮೇಲೆ ಕೇಂದ್ರೀಕೃತವಾಗಿದೆ. ಇದು ತಾಂತ್ರಿಕ ವೃತ್ತಿಜೀವನಕ್ಕೆ ವಿದ್ಯಾರ್ಥಿಗಳನ್ನು ಸಿದ್ಧಪಡಿಸಲು, ಜಾಗತಿಕ, ಆರ್ಥಿಕ, ಸ್ಪರ್ಧಾತ್ಮಕತೆಗೆ ಅಗತ್ಯ ಕೌಶಲ್ಯಗಳನ್ನು ಬೆಳೆಸಲು ಸಹಕಾರಿಯಾಗಲಿದೆ ಎಂದರು.

ಸಿ.ಎಸ್.ಆರ್ ಮುಖ್ಯಸ್ಥೆ ಸಮೀತಾ ಮನೋಹರನ್ ಮಾತನಾಡಿ, ಸ್ಟೆಮ್.ಎಐ ಪ್ರಯೋಗಾಲಯಗಳನ್ನು ದೊಡ್ಡಬಳ್ಳಾಪುರ ತಾಲ್ಲೂಕಿನ ಕಂಟನಕುಂಟೆ, ಚಿಕ್ಕಹೆಜ್ಜಾಜಿ, ಆರೂಢಿ ಹಾಗೂ ಮೇಳೇಕೋಟೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಎ.ಎನ್.ಎಸ್.ಆರ್ ಫೌಂಡೇಶನ್ ಬೆಂಬಲದೊಂದಿಗೆ ಸ್ಥಾಪಿಸಲ್ಪಟ್ಟಿವೆ. ಗ್ರಾಮೀಣ ವಿದ್ಯಾರ್ಥಿಗಳಿಗೆ ಮೂಲ ಕೋಡಿಂಗ್, ಎಐ ಪರಿಚಯ, ವಿನ್ಯಾಸ ಚಿಂತನೆ ಹಾಗೂ ವಿಜ್ಞಾನ ಪ್ರಾಯೋಗಿಕ ಚಟುವಟಿಕೆಗಳ ಮೂಲಕ ಕೈಚಳಕದ ಕಲಿಕೆ ಅವಕಾಶ ಒದಗಿಸಲಿವೆ ಎಂದರು.

ಚೆರಿಷ್ ಟ್ರಸ್ಟ್ ಅಧ್ಯಕ್ಷ ಸಂಜೀವ್ ಷಣ್ಮುಗಂ, ಟ್ರಸ್ಟಿ ಅನಿತಾ ಸಿಂಗ್, ಡಾ.ಕ್ಯಾರೋಲಿನ್ ಕ್ಯಾಮರನ್, ಶಾಲೆ ಮುಖ್ಯ ಶಿಕ್ಷಕಿ ಮಂಜುಳಾ, ಸರ್ಕಾರಿ ನೌಕರರ ಸಂಘದ ತಾಲ್ಲೂಕು ಘಟಕದ ಅಧ್ಯಕ್ಷ ಎಂ.ಎಸ್.ರಾಜಶೇಖರ್, ಕಾರ್ಯದರ್ಶಿ ವಿ.ಧನಂಜಯ, ಶಿಕ್ಷಣ ಸಂಯೋಜಕ ಆಂಜಿನಪ್ಪ, ಮಧು, ರಾಮಚಂದ್ರ, ಸಿ.ಆರ್.ಪಿ ವೆಂಕಟೇಶಮೂರ್ತಿ, ವಿವಿಧ ಶಿಕ್ಷಕರ ಸಂಘದ ಪದಾಧಿಕಾರಿ ಎ.ವಿ.ಚಂದ್ರಪ್ಪ, ಜೈ ಕುಮಾರ್, ಸಿದ್ದಗಂಗಯ್ಯ, ಎಂ.ಜಿ. ಶ್ರೀನಿವಾಸ್, ಚೆರಿಷ್ ತಂಡದ ಸುರೇಶ್, ಆತ್ಮಜ, ಸ್ಫೂರ್ತಿ, ಕೃತಿಕ್, ಶಾಂತ, ಎಎನ್‌ಎಸ್‌ಆರ್ ಫೌಂಡೇಶನ್ ಗ್ಯಾನ್ಪ್ರೊ ತಂಡದ ಡಾ.ಸುಪ್ರೀತ್ ಕಿತ್ತನಕೆರೆ, ಕೃತಿಕಾ, ಅಶೋಕ್, ಭೀಮರಾವ್ ವಿ. ಕುಲಕರ್ಣಿ, ವಾಸುಕಿ ಶೆನೋಯ್, ವಿಕಾಸ್ ತಿವಾರಿ, ಶಿಕ್ಷಕ ಮಲ್ಲಿಕಾರ್ಜುನರೆಡ್ಡಿ, ಆಂಜಿನಪ್ಪ ಇದ್ದರು.

ದೊಡ್ಡಬಳ್ಳಾಪುರ ತಾಲ್ಲೂಕಿನ ಕಂಟನಕುಂಟೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಸ್ಟೆಮ್.ಎಐ ಪ್ರಯೋಗಾಲಯ ನಿರ್ಮಿಸಿಕೊಟ್ಟ ದಾನಿಗಳು

ಸಂಶೋಧನೆಗೆ ಹೆಚ್ಚಿನ ಮಹತ್ವ

ಇಂದಿನ ತಂತ್ರಜ್ಞಾನ ಯುಗದಲ್ಲಿ ಸಂಶೋಧನೆಗಳಿಗೆ ಹೆಚ್ಚಿನ ಪ್ರಾಶಸ್ತ್ಯವಿದೆ. ಹೀಗಾಗಿ ವಿದ್ಯಾರ್ಥಿಗಳು ವಿಜ್ಞಾನ ಮತ್ತು ತಂತ್ರಜ್ಞಾನದ ವಿಷಯಗಳಲ್ಲಿ ಹೆಚ್ಚಿನ ಆಸಕ್ತಿ ಬೆಳೆಸಿಕೊಂಡು ಹೊಸ ಆವಿಷ್ಕಾರಗಳನ್ನು ಮಾಡಬೇಕು. ಇದರಿಂದ ಉತ್ತಮ ಭವಿಷ್ಯ ರೂಪಿಸಿಕೊಳ್ಳಬಹುದು ಎಂದು ಕ್ಷೇತ್ರ ಸಮನ್ವಯಾಧಿಕಾರಿ ಆರ್. ನಾರಾಯಣಸ್ವಾಮಿ ತಿಳಿಸಿದರು.

ಬೃಹತ್ ವಂಚನೆ ಜಾಲ: ಇಬ್ಬರ ಸೆರೆ

ಬಂಧಿತರಿಂದ 31 ಲ್ಯಾಪ್‌ಟಾಪ್ 13 ಮೊಬೈಲ್ ಫೋನ್, 16 ಸಿಮ್ ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡಿದರೆ ಲಾಭಾಂಶ ನೀಡುವುದಾಗಿ 'ಕಾಲ್ ಸೆಂಟರ್' ಸೋಗಿನಲ್ಲಿ ಕರೆ ಮಾಡಿ ವಂಚಿಸುತ್ತಿದ್ದ ಬೃಹತ್ ಜಾಲವನ್ನು ಪತ್ತೆ ಹಚ್ಚಿರುವ 'ಸೈಬರ್ ಕಮಾಂಡ್ ಸೆಂಟರ್' ಅಧಿಕಾರಿಗಳು, ಹೊರರಾಜ್ಯದ ಇಬ್ಬರನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಗುಜರಾತ್‌ನ ಕುಮಾವತ್ ಯೋಗೇಶ್ ಅಮರರಾಮ್ ಹಾಗೂ ದೆಹಲಿಯ ಇಮ್ರಾನ್ ಬಂಧಿತರು.

ಬಂಧಿತರಿಂದ 31 ಲ್ಯಾಪ್‌ಟಾಪ್, 13 ಮೊಬೈಲ್ ಫೋನ್ ಹಾಗೂ 16 ಸಿಮ್, ಮಲ್ಟಿವೇವ್ ಬ್ಯುಸಿನೆಸ್ ಪ್ರೈವೇಟ್ ಲಿಮಿಟೆಡ್ ಹೆಸರಿನಲ್ಲಿದ್ದ ಲೆಟರ್ ಹೆಡ್ ಜಪ್ತಿ ಮಾಡಲಾಗಿದೆ ಎಂದು ಮೂಲಗಳು ತಿಳಿಸಿವೆ.

ಜಯನಗರದ ಎರಡನೇ ಮುಖ್ಯ ರಸ್ತೆಯ ಎಂಟನೇ ಬ್ಲಾಕ್‌ನಲ್ಲಿ ಕುಮಾವತ್ ಯೋಗೇಶ್ ಅಮರರಾಮ್ ಅವರು ನೆಲಸಿದ್ದರೆ, ಬಿಟಿಎಂ ಎರಡನೇ ಹಂತದ ಬಾಡಿಗೆ ಮನೆಯಲ್ಲಿ ಇಮ್ರಾನ್ ನೆಲಸಿದ್ದರು.

ಕೇಂದ್ರ ವಿಭಾಗದ ಸೈಬರ್ ಅಪರಾಧ ಠಾಣೆಯಲ್ಲಿ ಭಾರತೀಯ ನ್ಯಾಯ ಸಂಹಿತೆಯ ಸೆಕ್ಷನ್ 318(4) ಹಾಗೂ ಮಾಹಿತಿ ತಂತ್ರಜ್ಞಾನ ಕಾಯ್ದೆಯ ಸೆಕ್ಷನ್ 66(ಡಿ) ಅಡಿ ಪ್ರಕರಣ ದಾಖಲಾಗಿತ್ತು. ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡಿದರೆ ಹೆಚ್ಚಿನ ಲಾಭಾಂಶ ನೀಡಲಾಗುವುದು ಎಂದು ಹೇಳಿ ಆರೋಪಿಗಳು ವಂಚನೆ ಮಾಡುತ್ತಿದ್ದರು.

ಜಯನಗರದ 9ನೇ ಬ್ಲಾಕ್‌ನ 26ನೇ ಮುಖ್ಯರಸ್ತೆಯ ಅಂಜನಾದ್ರಿ ಅವೆನ್ಯೂ ಕಟ್ಟಡದ ಮೂರನೇ ಮಹಡಿಯಲ್ಲಿ ಮಲ್ಟಿವೇವ್ ಬ್ಯುಸಿನೆಸ್ ಪ್ರೈವೇಟ್ ಲಿಮಿಟೆಡ್ ಹೆಸರಿನಲ್ಲಿ ಆರೋಪಿಗಳು ಕಂಪನಿ ತೆರೆದಿದ್ದರು. ಆ ಕಂಪನಿಯನ್ನು ಪತ್ತೆಹಚ್ಚಿ ಆರೋಪಿಗಳನ್ನು ಬಂಧಿಸಲಾಯಿತು ಎಂದು ಪೊಲೀಸರು ಹೇಳಿದರು.

ಮುಖ್ಯಾಂಶಗಳು

- ದೆಹಲಿ ಹಾಗೂ ಗುಜರಾತ್‌ನ ಆರೋಪಿಗಳ ಕೃತ್ಯ
- ಷೇರು ಮಾರುಕಟ್ಟೆಯಲ್ಲಿ ಹೂಡಿಕೆಯ ಆಮಿಷವೊಡ್ಡಿ ವಂಚನೆ

ಬಂಧಿತ ಆರೋಪಿಗಳಾದ ಕುಮಾವತ್ ಯೋಗೇಶ್ ಅಮರರಾಮ್ ಹಾಗೂ ಇಮ್ರಾನ್

ಹೊರ ರಾಜ್ಯದ ಸಿಬ್ಬಂದಿ ನೇಮಕ: '15 ರಾಜ್ಯಗಳ 'ಕಸ್ಟಮರ್ ಕೇರ್ ಎಕ್ಸಿಕ್ಯೂಟಿವ್'ಗಳನ್ನು ಆರೋಪಿಗಳು ಕೆಲಸಕ್ಕೆ ನೇಮಿಸಿಕೊಂಡಿದ್ದರು. 'ಕಸ್ಟಮರ್ ಕೇರ್ ಎಕ್ಸಿಕ್ಯೂಟಿವ್'ಗಳು ಕಾಲ್ ಸೆಂಟರ್ ಸೋಗಿನಲ್ಲಿ ಸಾರ್ವಜನಿಕರಿಗೆ ಕರೆ ಮಾಡಿ, ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡಿದರೆ ಹೆಚ್ಚಿನ ಲಾಭಾಂಶ ಬರಲಿದೆ ಎಂದು ನಂಬಿಕೆ ಬರುವಂತೆ ಮಾತನಾಡುತ್ತಿದ್ದರು. ಬಳಿಕ, ಸಾರ್ವಜನಿಕರ ವೈಯಕ್ತಿಕ ಮಾಹಿತಿ ಪಡೆದುಕೊಳ್ಳುತ್ತಿದ್ದರು. ಅಲ್ಲದೇ ಬ್ಯಾಂಕ್ ಖಾತೆಯ ವಿವರ ನೀಡಿ ಅದಕ್ಕೆ ಹಣವನ್ನು ವರ್ಗಾವಣೆ ಮಾಡಿಸಿಕೊಳ್ಳುತ್ತಿದ್ದರು. ಹಣ ವರ್ಗಾವಣೆಯಾದ ಕೆಲವೇ ಕ್ಷಣಗಳಲ್ಲಿ ಮೊಬೈಲ್ ಸ್ವಿಚ್ ಆಫ್ ಮಾಡಿಕೊಳ್ಳುತ್ತಿದ್ದರು' ಎಂದು ಸೈಬರ್ ಅಪರಾಧ ಠಾಣೆಯ ಮೂಲಗಳು ತಿಳಿಸಿವೆ.

'ಹಣ ಕಳೆದುಕೊಂಡವರ ಪೈಕಿ ಕೆಲವರು ನೀಡಿದ ದೂರಿನ ಆಧಾರದ ಮೇಲೆ ತನಿಖೆ ಆರಂಭಿಸಲಾಯಿತು. ದೂರುದಾರರಿಗೆ ಬಂದ ದೂರವಾಣಿ ಕರೆ ವಿವರಗಳ ಪರಿಶೀಲನೆ ನಡೆಸಿದಾಗ ಲೊಕೇಷನ್ ಬಿಟಿಎಂ ಲೇಔಟ್ ತೋರಿಸುತ್ತಿತ್ತು. ಆರೋಪಿಗಳು ಸಿಮ್ ಬಳಸಿದ್ದ ಮೊಬೈಲ್‌ನ ಐಎಂಇಐ ಸಂಖ್ಯೆ ಪತ್ತೆ ಮಾಡಲಾಯಿತು. ಐಎಂಇಐಗೆ ಲಿಂಕ್ ಆಗಿರುವ ಇ-ಮೇಲ್ ಐಡಿ ಪತ್ತೆಹಚ್ಚಿದಾಗ ಆರೋಪಿಗಳ ಸುಳಿವು ಲಭಿಸಿತ್ತು' ಎಂದು ಅಧಿಕಾರಿಯೊಬ್ಬರು ತಿಳಿಸಿದರು.

'ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡಿದ್ದವರ ಮಾಹಿತಿಯನ್ನು ಆರೋಪಿಗಳು ಗೂಗಲ್‌ನಿಂದ ಕಲೆಹಾಕುತ್ತಿದ್ದರು. ಹೊರ ರಾಜ್ಯದವರ ಬ್ಯಾಂಕ್ ಖಾತೆಗಳ ವಿವರ ಪಡೆದುಕೊಳ್ಳುತ್ತಿದ್ದರು. ಕೊಳೆಗೇರಿ ನಿವಾಸಿಗಳ ಹೆಸರಿನಲ್ಲಿ ಸಿಮ್ ಖರೀದಿಸುತ್ತಿದ್ದರು. ಬ್ಯಾಂಕ್ ವಿವರ ನೀಡಿದವರು ಹಾಗೂ ಸಿಮ್ ಖರೀದಿಗೆ ನೆರವಾದವರಿಗೆ ಕಮಿಷನ್ ನೀಡುತ್ತಿದ್ದರು' ಎಂದು ಮೂಲಗಳು ಹೇಳಿವೆ.

'ವಂಚನೆಯಿಂದ ಬಂದ ಹಣವನ್ನು ನಕಲಿ ಬ್ಯಾಂಕ್ (ಮ್ಯೂಲ್ ಅಕೌಂಟ್) ಖಾತೆಗಳಿಗೆ ಆರೋಪಿಗಳು ವರ್ಗಾವಣೆ ಮಾಡಿಕೊಳ್ಳುತ್ತಿದ್ದರು. ಬಳಿಕ ಸಹಚರರ ಮೂಲಕ ಎಟಿಎಂ ಮೂಲಕ ಹಣ ಡ್ರಾ ಮಾಡಿಕೊಳ್ಳುತ್ತಿದ್ದರು ಎಂಬುದು ತನಿಖೆಯಿಂದ ಗೊತ್ತಾಗಿದೆ' ಎಂದು ಮೂಲಗಳು ತಿಳಿಸಿವೆ.

ಸೈಬರ್ ಕಮಾಂಡ್ ಸೆಂಟರ್‌ನ ಡಿಜಿಪಿ ಪ್ರಣವ್ ಮೊಹಂತಿ ಅವರ ನೇತೃತ್ವದಲ್ಲಿ ಈ ಕಾರ್ಯಾಚರಣೆ ನಡೆಸಲಾಗಿದೆ.

ವಿಮಾನ ನಿಲ್ದಾಣದಲ್ಲಿ ₹2.8 ಕೋಟಿ ಮೌಲ್ಯದ ಡ್ರಗ್ಸ್ ಜಪ್ತಿ

ದೇವನಹಳ್ಳಿಯ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಕಾರ್ಯಾಚರಣೆ ನಡೆಸಿದ ಕಸ್ಟಮ್ಸ್ ಅಧಿಕಾರಿಗಳು, ₹2.8 ಕೋಟಿ ಮೌಲ್ಯದ ಹೈಡ್ರೋಪೋನಿಕ್ ಗಾಂಜಾವನ್ನು ಜಪ್ತಿ ಮಾಡಿದ್ದಾರೆ.

ಬ್ಯಾಂಕಾಕ್‌ನಿಂದ ಬಂದಿದ್ದ ಪ್ರಯಾಣಿಕನ ಲಗೇಜ್ ಬ್ಯಾಗ್ ಪರಿಶೀಲನೆ ವೇಳೆ ಸುಮಾರು 8 ಕೆ.ಜಿ ಹೈಡ್ರೋಪೋನಿಕ್ ಗಾಂಜಾ ಪತ್ತೆಯಾಗಿದೆ. ಇದರ ಅಂದಾಜು ಮೌಲ್ಯ ₹2.8 ಕೋಟಿ ಎಂದು ಮೂಲಗಳು ತಿಳಿಸಿವೆ.

ಇನ್ನೊಂದು ಪ್ರಕರಣದಲ್ಲಿ ಹಾಂಕಾಂಗ್‌ನಿಂದ ಬಂದಿದ್ದ ಪ್ರಯಾಣಿಕನ ಬಳಿ 900 ಗ್ರಾಂ ಗಾಂಜಾ ಪತ್ತೆಯಾಗಿದ್ದು, ಇದರ ಮೌಲ್ಯ ಸುಮಾರು ₹31.5 ಲಕ್ಷವೆಂದು ಅಂದಾಜಿಸಲಾಗಿದೆ. ಗಾಂಜಾವನ್ನು ಲಗೇಜ್ ಬ್ಯಾಗ್‌ನಲ್ಲಿ ಅಡಗಿಸಿಟ್ಟುಕೊಂಡು ಇಬ್ಬರೂ ಪ್ರಯಾಣಿಕರು ವಿದೇಶದಿಂದ ವಿಮಾನದ ಮೂಲಕ ಬಂದಿದ್ದರು ಎಂದು ಅಧಿಕಾರಿಗಳು ತಿಳಿಸಿದರು.

ಆರೋಪಿಗಳ ವಿರುದ್ಧ ಎನ್‌ಡಿಪಿಎಸ್ ಕಾಯ್ದೆ ಅಡಿ ಪ್ರಕರಣ ದಾಖಲು ಮಾಡಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ಖಚಿತ ಮಾಹಿತಿ ಆಧರಿಸಿ ವಿಮಾನ ನಿಲ್ದಾಣದ ಭದ್ರತಾ ಸಿಬ್ಬಂದಿ ಮತ್ತು ಕಸ್ಟಮ್ಸ್ ಅಧಿಕಾರಿಗಳು ಜಂಟಿ ಕಾರ್ಯಾಚರಣೆ ನಡೆಸಿದ್ದರು ಎಂದು ಗೊತ್ತಾಗಿದೆ.

ಕೆನರಾ ಬ್ಯಾಂಕ್ ದರೋಡೆಗೆ ಯತ್ನ: ಆರೋಪಿ ಸೆರೆ

ಕೆನರಾ ಬ್ಯಾಂಕ್‌ನ ಶೇಷಾದ್ರಿಪುರ ಶಾಖೆಯಲ್ಲಿ ದರೋಡೆಗೆ ಯತ್ನಿಸಿದ್ದ ಆರೋಪಿ ಹಸನ್ ಅಬ್ದುಲ್ ಸಾಬ್ (36) ಅವರನ್ನು ಶೇಷಾದ್ರಿಪುರ ಠಾಣೆಯ ಪೊಲೀಸರು ಮಂಗಳವಾರ ಬಂಧಿಸಿದ್ದಾರೆ.

ಧಾರವಾಡ ಜಿಲ್ಲೆಯ ಕೋಳಿವಾಡದ ಹಸನ್ ಅಬ್ದುಲ್ ಸಾಬ್ ಅವರು ಶೇಷಾದ್ರಿಪುರದ ಗಿರಿ ಕಾಲೊನಿಯಲ್ಲಿ ನೆಲಸಿದ್ದರು.

ಸೋಮವಾರ ನಸುಕಿನ ವೇಳೆ ಬ್ಯಾಂಕ್‌ನ ಕಿಟಕಿಯ ಗ್ರಿಲ್ ಕತ್ತರಿಸಿ ಒಳಕ್ಕೆ ನುಗ್ಗಿದ್ದರು. ಒಳಗೆ ಬರುತ್ತಿದ್ದಂತೆಯೇ ಬ್ಯಾಂಕ್ ಸೈರನ್ ಮೊಳಗಿತ್ತು. ಅದರಿಂದ ಭಯಗೊಂಡು ಪರಾರಿ ಆಗಿದ್ದರು.

ಸೋಮವಾರ ಬೆಳಿಗ್ಗೆ 9.30ರ ಸುಮಾರಿಗೆ ಬ್ಯಾಂಕ್ ಉದ್ಯೋಗಿಗಳು ಕೆಲಸಕ್ಕೆ ಬಂದಾಗ ದರೋಡೆಗೆ ಯತ್ನಿಸಿರುವುದು ಗೊತ್ತಾಗಿತ್ತು ಎಂದು ಪೊಲೀಸರು ಹೇಳಿದರು.

ಹಸನ್

'ಆರೋಪಿ ಹಸನ್ ಅಬ್ದುಲ್ ಸಾಬ್ ಅವರು ಸಾಲ ಮಾಡಿಕೊಂಡಿದ್ದರು. ಸಾಲ ತೀರಿಸಲು ಬ್ಯಾಂಕ್ ದರೋಡೆಗೆ ಯತ್ನಿಸಿದ್ದರು ಎಂಬುದು ವಿಚಾರಣೆ ವೇಳೆ ಗೊತ್ತಾಗಿದೆ' ಎಂದು ಮೂಲಗಳು ಹೇಳಿವೆ.

'ಶೇಷಾದ್ರಿಪುರ ಠಾಣಾ ವ್ಯಾಪ್ತಿಯ ಬ್ಯಾಂಕ್ ಹಾಗೂ ಹಲಸೂರು ಗೇಟ್ ಠಾಣಾ ವ್ಯಾಪ್ತಿಯ ಎಟಿಎಂ ದರೋಡೆಗೆ ಯತ್ನಿಸಿದ್ದ ಘಟನೆಗೆ ಸಂಬಂಧಿಸಿದಂತೆ ಎರಡು ಪ್ರತ್ಯೇಕ ಪ್ರಕರಣಗಳು ದಾಖಲಾಗಿದ್ದವು. ತನಿಖೆಗೆ ಐದು ವಿಶೇಷ ಪೊಲೀಸ್ ತಂಡಗಳನ್ನು ರಚಿಸಲಾಗಿತ್ತು. ಘಟನೆ ನಡೆದ 24 ತಾಸಿನಲ್ಲಿಯೇ ಆರೋಪಿಯನ್ನು ಪತ್ತೆಹಚ್ಚಿ ಬಂಧಿಸಲಾಗಿದೆ. ಆರೋಪಿ ಈ ಹಿಂದೆ ಯಾವುದಾದರೂ ಕೃತ್ಯದಲ್ಲಿ ಭಾಗಿಯಾಗಿದ್ದರೆ ಎಂಬುದನ್ನೂ ಪರಿಶೀಲಿಸಲಾಗುತ್ತಿದೆ' ಎಂದು ಪೊಲೀಸರು ಹೇಳಿದರು.

ಹಾರ್ನ್ ವಿಚಾರಕ್ಕೆ ಗಲಾಟೆ ಯುವಕನ ಮೇಲೆ ಹಲ್ಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಸ್ತೆಯಲ್ಲಿ ನಡೆದು ಹೋಗುತ್ತಿದ್ದ ವ್ಯಕ್ತಿಯೊಬ್ಬರ ಮೇಲೆ ಹಲ್ಲೆ ನಡೆಸಿದ್ದ ಯುವಕನನ್ನು ಕೆಂಗೇರಿ ಠಾಣೆಯ ಪೊಲೀಸರು ಬಂಧಿಸಿದ್ದಾರೆ. ಕೆಂಗೇರಿ ಸಮೀಪದ ನಾಗದೇವನಹಳ್ಳಿಯಲ್ಲಿ ಘಟನೆ ನಡೆದಿದೆ. ಆರೋಪಿಯ ವಿರುದ್ಧ ರೌಡಿಶೀಟ್ ತೆರೆಯಲು ಸಿದ್ಧತೆ ನಡೆಸಲಾಗಿದೆ.

ನವೀನ್ ಬಂಧಿತ ಆರೋಪಿ.

ಹಾರ್ನ್ ಮಾಡಿದ್ದನ್ನು ಪ್ರಶ್ನಿಸಿದ್ದಕ್ಕೆ ನಂಜುಂಡಪ್ಪ (55) ಅವರ ಮೇಲೆ ನವೀನ್ ಅವರು ಹಲ್ಲೆ ನಡೆಸಿದ್ದರು. ಸಿಸಿಟಿವಿ ಕ್ಯಾಮೆರಾದಲ್ಲಿ ದೃಶ್ಯ ಸೆರೆ ಆಗಿತ್ತು. ಹಲ್ಲೆಗೊಳಗಾದ ನಂಜುಂಡಪ್ಪ ಅವರು ನೀಡಿರುವ ದೂರಿನ ಮೇಲೆ ನವೀನ್ ಅವರನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

'ಫೆಬ್ರುವರಿ 22ರಂದು ಸಂಜೆ 5.20ರ ಸುಮಾರಿಗೆ ನಾಗದೇವನಹಳ್ಳಿಯ ಆರ್.ಆರ್. ಲೇಔಟ್‌ನ ರಸ್ತೆಯಲ್ಲಿ ನಂಜುಂಡಪ್ಪ ಅವರು ನಡೆದುಕೊಂಡು ಹೋಗುತ್ತಿದ್ದರು. ಈ ವೇಳೆ ಹಿಂದಿನಿಂದ ಕಾರಿನಲ್ಲಿ ಬಂದ ನವೀನ್ ಅವರು ಮನೆ ಮುಂದೆ ಕಾರು ನಿಲ್ಲಿಸಲು ಪದೇ ಪದೆ ಹಾರ್ನ್ ಮಾಡಿದ್ದ, ಕಾರು ಮುಂದೆ ಹೋಗಬಹುದೆಂದು ಭಾವಿಸಿದ್ದ ನಂಜುಂಡಪ್ಪ ಅವರು 'ರಸ್ತೆಯಲ್ಲಿ ಸಾಕಷ್ಟು ಜಾಗವಿದೆ ಅಲ್ಲವೇ? ಮುಂದಕ್ಕೆ ಹೋಗಿ' ಎಂದು ನವೀನ್‌ಗೆ ಹೇಳಿದ್ದರು. ಆಗ ಕಾರಿನಿಂದ ಇಳಿದ ಆರೋಪಿ, ನಂಜುಂಡಪ್ಪ ಅವರಿಗೆ ಅವಾಚ್ಯ ಶಬ್ದಗಳಿಂದ ನಿಂದಿಸಿದ್ದ. ತಕ್ಷಣ ನವೀನ್‌ನ ತಾಯಿ ಬಂದು ಮಗನನ್ನು ಸಮಾಧಾನಪಡಿಸಲು ಯತ್ನಿಸಿದ್ದರು. ಆದರೂ ಸಮಾಧಾನವಾಗದ ನವೀನ್ ಅವರು ನಂಜುಂಡಪ್ಪ ಅವರ ಮೇಲೆ ಹಿಗ್ಗಾಮುಗ್ಗಾ ಹಲ್ಲೆ ನಡೆಸಿದ್ದ. ಬಳಿಕ ಸ್ಥಳಕ್ಕೆ ಬಂದ ಸ್ಥಳೀಯರು, ಜಗಳ ಬಿಡಿಸಿ ಕಳುಹಿಸಿದ್ದರು' ಎಂದು ಸೈಬರ್ ಪೊಲೀಸರು ಹೇಳಿದರು.

'ನಂಜುಂಡಪ್ಪ ಅವರು ನೀಡಿದ ದೂರಿನ ಮೇಲೆ ಪ್ರಕರಣ ದಾಖಲಿಸಿಕೊಂಡು ಆರೋಪಿಯನ್ನು ಬಂಧಿಸಿ, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಆರೋಪಿಯ ವಿರುದ್ಧ ಈ ಹಿಂದೆ ಜ್ಞಾನಭಾರತಿ ಪೊಲೀಸ್ ಠಾಣೆಯಲ್ಲಿ ಕೊಲೆ ಪ್ರಕರಣ ದಾಖಲಾಗಿತ್ತು. ಹಾಸನ ಠಾಣೆಯಲ್ಲೂ ಒಂದು ಪ್ರಕರಣ ದಾಖಲಾಗಿದೆ. ಆರೋಪಿಯು ಜನರಿಗೆ ಭಯ ಹುಟ್ಟಿಸುವಂತಹ ಕೆಲಸಗಳಲ್ಲಿ ಭಾಗಿಯಾಗುತ್ತಿದ್ದ ಎಂಬುದು ಗೊತ್ತಾಗಿದೆ. ನವೀನ್ ವಿರುದ್ಧ ರೌಡಿಶೀಟ್ ತೆರೆಯಲು ಸೂಚನೆ ನೀಡಲಾಗಿದೆ' ಎಂದು ನೈರುತ್ಯ ವಿಭಾಗದ ಡಿಸಿಪಿ ಅನಿತಾ ಬಿ.ಹದ್ದಣ್ಣನವರ್ ಹೇಳಿದರು.

ಗಲಾಟೆಯ ದೃಶ್ಯ

ವಿಚಾರಣೆಗೆ ನಟ ದರ್ಶನ್ ಹಾಜರು

ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದ ಆರೋಪಿಗಳಾದ ನಟ ದರ್ಶನ್, ಪವಿತ್ರಾಗೌಡ ಸೇರಿದಂತೆ ಇತರೆ ಆರೋಪಿಗಳು ವಿಡಿಯೊ ಕಾನ್ಫರೆನ್ಸ್ ಮೂಲಕ ಮಂಗಳವಾರ ನ್ಯಾಯಾಲಯದ ವಿಚಾರಣೆಗೆ ಹಾಜರಾಗಿದ್ದರು.

ಪ್ರಕರಣದಲ್ಲಿ ವೆಂಕಟೇಶ್ ಎಂಬ ಸಾಕ್ಷಿದಾರನನ್ನು ವಿಚಾರಣೆ ನಡೆಸಿ, ಹೇಳಿಕೆ ದಾಖಲಿಸಿಕೊಳ್ಳಲಾಯಿತು. ನಂತರ ಇತರೆ ಇಬ್ಬರು ಸಾಕ್ಷಿದಾರರನ್ನು ವಿಚಾರಣೆಗೆ ಕರೆಸಲು ಸಮನ್ಸ್ ಜಾರಿ ಮಾಡಲಾಯಿತು. ಪ್ರಕರಣದ ವಿಚಾರಣೆಯನ್ನು ನ್ಯಾಯಾಲಯವು ಮಾರ್ಚ್ 2ಕ್ಕೆ ಮುಂದೂಡಿದೆ.

ಪ್ರಮಾಣ ಪತ್ರ ಸಲ್ಲಿಸಲು ಸೂಚನೆ: 'ಬೇರೆಡೆ ಮೊಬೈಲ್ ಜಪ್ತಿ ಮಾಡಿ, ಠಾಣೆಯಲ್ಲಿ ಜಪ್ತಿ ಮಾಡಿದ್ದಾಗಿ ತನಿಖಾಧಿಕಾರಿಗಳು ಹೇಳಿದ್ದಾರೆ. ಠಾಣೆ ಭೇಟಿಗೆ ಅವಕಾಶ ನೀಡಬೇಕು' ಎಂದು ಪ್ರಕರಣದ 3ನೇ ಆರೋಪಿ ಪವನ್ ಪರ ವಕೀಲ ಡಿ.ಎಸ್. ಸುಧನ್ವ ಕೋರಿದರು.

ಅದಕ್ಕೆ ನ್ಯಾಯಾಧೀಶರು, ಪೊಲೀಸ್ ಠಾಣೆ ಸಾರ್ವಜನಿಕ ಸ್ಥಳ ಆಗಿದ್ದು, ಅಲ್ಲಿ ಯಾರು ಬೇಕಾದರೂ ಭೇಟಿ ಮಾಡಬಹುದು ಎಂದರು.

'ಸಹೋದ್ಯೋಗಿಯೊಬ್ಬರು ಸೋಮವಾರ ಠಾಣೆಗೆ ಹೋಗಿದ್ದರು. ಪೊಲೀಸ್ ಅಧಿಕಾರಿಗಳು ಒಳಗೆ ಬಿಟ್ಟಿಲ್ಲ. ಹಿರಿಯ ಅಧಿಕಾರಿಗಳ ಸೂಚನೆ ಇರುವುದರಿಂದ ಪ್ರವೇಶ ನಿರಾಕರಿಸಲಾಗಿದೆ ಎಂದಿದ್ದಾರೆ. ಆದ್ದರಿಂದ ಠಾಣೆಗೆ ಭೇಟಿ ನೀಡಲು ಅವಕಾಶ ನೀಡಿ' ಎಂದು ಸುಧನ್ವ ಅವರು ಕೋರಿದರು.

ಬಳಿಕ ನ್ಯಾಯಾಧೀಶರು, ಈ ಬಗ್ಗೆ ಪ್ರಮಾಣ ಪತ್ರ ಸಲ್ಲಿಸಲು ಸೂಚಿಸಿದರು.

ಅಜೀಂ ಪ್ರೇಮ್‌ಜೀ ವಿ.ವಿ: ಎಬಿವಿಪಿ ಕಾರ್ಯಕರ್ತರ ಪ್ರತಿಭಟನೆ

ವಿ.ವಿ ನಾಮಫಲಕಕ್ಕೆ ಮಸಿ: ಆಕ್ರೋಶ

ಪ್ರಜಾವಾಣಿ ವಾರ್ತೆ

ಸರ್ಜಾಪುರ (ಆನೇಕಲ್): ಸರ್ಜಾಪುರ ಸಮೀಪದ ಬೂರಗುಂಟೆ ಗ್ರಾಮದಲ್ಲಿರುವ ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದಲ್ಲಿ ದೇಶ ವಿರೋಧಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ ಎಂದು ಆರೋಪಿಸಿ, ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ (ಎಬಿವಿಪಿ) ಕಾರ್ಯಕರ್ತರು, ವಿಶ್ವವಿದ್ಯಾಲಯದ ಆವರಣದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿದರು.

ಎಬಿವಿಪಿ ಪ್ರತಿಭಟನೆಯಿಂದ ವಿಶ್ವವಿದ್ಯಾಲಯದ ಆವರಣದಲ್ಲಿ ಕೆಲಹೊತ್ತು ಬಿಗುವಿನ ಪರಿಸ್ಥಿತಿ ನಿರ್ಮಾಣವಾಗಿತ್ತು.

ವಿಶ್ವವಿದ್ಯಾಲಯದ ಆವರಣದಲ್ಲಿ 50ಕ್ಕೂ ಹೆಚ್ಚು ಎಬಿವಿಪಿ ಕಾರ್ಯಕರ್ತರು 'ಭಾರತ್ ಮಾತಾ ಕೀ ಜೈ' ಎಂದು ಘೋಷಣೆಗಳನ್ನು ಕೂಗುತ್ತಾ ಒಳನುಗ್ಗಲು ಪ್ರಯತ್ನಿಸಿದರು. ವಿಶ್ವವಿದ್ಯಾಲಯದ ನಾಮಫಲಕಕ್ಕೆ ಮಸಿ ಬಳಿದು ಆಕ್ರೋಶ ವ್ಯಕ್ತಪಡಿಸಿದರು.

ಅಖಿಲ ಭಾರತೀಯ ವಿದ್ಯಾರ್ಥಿ ಸಂಘವು (ಎಐಎಸ್‌ಎ) ದೇಶವಿರೋಧಿ ಚಿಂತನೆಯ ಕಾರ್ಯಕ್ರಮ ನಡೆಸುತ್ತಿದೆ. ಆ ಕಾರ್ಯಕ್ರಮಗಳಿಗೆ ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯ ವೇದಿಕೆ ಕಲ್ಪಿಸುತ್ತಿದೆ ಎಂದು ಪ್ರತಿಭಟನಕಾರರು ಆಕ್ರೋಶ ಹೊರಹಾಕಿದರು.

ಮಾಹಿತಿ ತಿಳಿದು ಸ್ಥಳಕ್ಕೆ ಬಂದ ಪೊಲೀಸರು, ಪ್ರತಿಭಟನಕಾರರನ್ನು ಸಮಾಧಾನ ಪಡಿಸಲು ಯತ್ನಿಸಿದರೂ ಸಾಧ್ಯವಾಗಲಿಲ್ಲ. ಬಳಿಕ ಪ್ರತಿಭಟನಕಾರರನ್ನು ವಶಕ್ಕೆ ಪಡೆದರು.

ವಿದ್ಯಾಸಂಸ್ಥೆಗಳು ಜ್ಞಾನಾರ್ಜನೆಯ ಕೇಂದ್ರ ಆಗಬೇಕು. ಆದರೆ, ಪ್ರತಿಷ್ಠಿತ ವಿದ್ಯಾಸಂಸ್ಥೆಗಳೇ ದೇಶವಿರೋಧಿ ಚಟುವಟಿಕೆಗಳ ತಾಣವಾಗಿ ನಿರ್ಮಾಣ ಆಗುತ್ತಿವೆ ಎಂದು ಪ್ರತಿಭಟನಕಾರರು ಆಕ್ರೋಶ ಹೊರಹಾಕಿದರು.

ಆನೇಕಲ್ ಪೊಲೀಸ್ ಉಪ ವಿಭಾಗದಿಂದ ಬಿಗಿ ಬಂದೋಬಸ್ತ್ ಏರ್ಪಡಿಸಲಾಗಿತ್ತು.

ಎಬಿವಿಪಿ ಕಾರ್ಯಕರ್ತರ ನಡೆ ಖಂಡಿಸಿ, ಅಖಿಲ ಭಾರತೀಯ ವಿದ್ಯಾರ್ಥಿ ಸಂಘದ (ಎಐಎಸ್‌ಎ) ಸದಸ್ಯರು ಮಂಗಳವಾರ ರಾತ್ರಿ ಪ್ರತಿಭಟನೆ ನಡೆಸಿದರು. ಎಬಿವಿಪಿ ವಿರುದ್ಧ ಆಕ್ರೋಶ ಹೊರಹಾಕಿದರು.

ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದ ನಾಮಫಲಕಕ್ಕೆ ಎಬಿವಿಪಿ ಕಾರ್ಯಕರ್ತರು ಮಸಿ ಬಳಿದರು

17 ಸಾವಿರ ಡಿ.ಎಲ್ ಅಮಾನತು

ಮದ್ಯ ಸೇವಿಸಿ ವಾಹನ ಚಾಲನೆ ಮಾಡುವವರ ಪತ್ತೆಗೆ ವಿಶೇಷ ಕಾರ್ಯಾಚರಣೆ

• ಕೆ.ಎಸ್.ಸುನಿಲ್

ಬೆಂಗಳೂರು: ಸಂಚಾರ ನಿಯಮ ಉಲ್ಲಂಘನೆ ಕುರಿತು ಜಾಗೃತಿಯ ಜೊತೆಯಲ್ಲೇ ಪೊಲೀಸರು 'ದಂಡದ ಅಸ್ತ್ರ' ಬಳಸಿದರೂ ನಗರದಲ್ಲಿ ಮದ್ಯ ಸೇವಿಸಿ ವಾಹನ ಚಾಲನೆ ಮಾಡುವವರ ಸಂಖ್ಯೆ ಹೆಚ್ಚುತ್ತಲೇ ಇದೆ.

2024ರಲ್ಲಿ 23,620 ಪ್ರಕರಣಗಳು ದಾಖಲಾಗಿದ್ದವು. 2025ರಲ್ಲಿ 38,919 ಪ್ರಕರಣಗಳು ದಾಖಲಾಗಿವೆ. ಈ ಪೈಕಿ 17 ಸಾವಿರಕ್ಕೂ ಅಧಿಕ ಚಾಲನಾ ಪರವಾನಗಿಗಳನ್ನು (ಡಿ.ಎಲ್) ತಾತ್ಕಾಲಿಕವಾಗಿ ಅಮಾನತು ಮಾಡಲಾಗಿದೆ.

ಮದ್ಯ ಸೇವನೆ ಮಾಡಿ ವಾಹನ ಚಾಲನೆ ಮಾಡುವವರು ಹಾಗೂ ಗಂಭೀರ ಸ್ವರೂಪದ ಸಂಚಾರ ನಿಯಮಗಳನ್ನು ಉಲ್ಲಂಘಿಸುವವರ ವಿರುದ್ಧ ಸಂಚಾರ ಪೊಲೀಸರು ನಗರದ ವಿವಿಧೆಡೆ ಕಾರ್ಯಾಚರಣೆ ನಡೆಸಿ, ದಂಡ ವಿಧಿಸುತ್ತಿದ್ದಾರೆ.

'ಡ್ರಂಕ್ ಆ್ಯಂಡ್ ಡ್ರೈವ್' ಪ್ರಕರಣಗಳಲ್ಲಿ ತಪ್ಪಿತಸ್ಥರಿಗೆ ₹10 ಸಾವಿರ ದಂಡ ವಿಧಿಸಲಾಗುತ್ತಿದೆ. ದಂಡದ ಹೊರತಾಗಿಯೂ ಚಾಲನಾ ಪರವಾನಗಿ ಅಮಾನತುಗೊಳಿಸುವಂತೆ ಸಂಚಾರ ಪೊಲೀಸರು ಸಂಬಂಧಪಟ್ಟ ಆರ್‌ಟಿಒ ಕಚೇರಿಗೆ ಶಿಫಾರಸು ಮಾಡಿದ್ದಾರೆ. ಒಟ್ಟು 19,500 ಸಾವಿರ ಚಾಲನಾ ಪರವಾನಗಿ (ಡಿಎಲ್) ಅಮಾನತು ಮಾಡುವಂತೆ ಶಿಫಾರಸು ಮಾಡಲಾಗಿದ್ದು, ಈ ಪೈಕಿ 17 ಸಾವಿರ ಚಾಲನಾ ಪರವಾನಗಿ ಅಮಾನತುಗೊಂಡಿವೆ ಎಂದು ಮೂಲಗಳು ಹೇಳಿವೆ.

ನಗರದ 50 ಸಂಚಾರ ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ಅಪಘಾತಗಳನ್ನು ತಡೆಯುವ ನಿಟ್ಟಿನಲ್ಲಿ ಕಾರ್ಯಾಚರಣೆ ಕೈಗೊಂಡಿದ್ದು, 13 ಲಕ್ಷಕ್ಕೂ ಅಧಿಕ ವಾಹನಗಳನ್ನು ತಪಾಸಣೆ ಮಾಡಲಾಗಿದೆ. ಈ ಪೈಕಿ ಮದ್ಯ ಸೇವಿಸಿ ವಾಹನ ಚಲಾಯಿಸಿದ ಚಾಲಕರು, ಸವಾರರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ದ್ವಿಚಕ್ರ ವಾಹನ ಸವಾರರು, ಆಟೊ, ಕಾರು ಚಾಲಕರು, ಶಾಲಾ ವಾಹನ ಚಾಲಕರು, ಖಾಸಗಿ ಬಸ್ ಚಾಲಕರು, ವಾಟರ್ ಟ್ಯಾಂಕರ್ ಚಾಲಕರು ತಪಾಸಣೆ ವೇಳೆ ಮದ್ಯ ಸೇವಿಸಿರುವುದು ದೃಢಪಟ್ಟಿತ್ತು ಎಂದು ಪೊಲೀಸರು ತಿಳಿಸಿದರು.

ಪಾನಮತ್ತ ಚಾಲಕರಿಗೆ ₹10 ಸಾವಿರ ದಂಡ ವಿಧಿಸಲಾಗುತ್ತದೆ. ಮೊದಲ ಬಾರಿಗೆ ಸಿಕ್ಕಿಬಿದ್ದಾಗ ಮೂರು ತಿಂಗಳವರೆಗೆ ಡಿ.ಎಲ್ ಅಮಾನತು ಮಾಡಲಾಗುತ್ತದೆ. ಎರಡನೇ ಬಾರಿಗೆ ಆರು ತಿಂಗಳವರೆಗೆ ಅಮಾನತು ಮಾಡಲಾಗುತ್ತದೆ. ಇದೇ ವೇಳೆ ಪೊಲೀಸರು ವಾಹನವನ್ನು ವಶಕ್ಕೆ ಪಡೆಯುತ್ತಾರೆ.

'ಪಾನಮತ್ತರಾಗಿ ವಾಹನ ಚಲಾಯಿಸಿ, ಪೊಲೀಸರಿಗೆ ಸಿಕ್ಕಿಬಿದ್ದಿರುವ ಹಲವರ ಬಳಿ ಚಾಲನಾ ಪರವಾನಗಿಯೇ ಇರುವುದಿಲ್ಲ. ಹಲವು ಖಾಸಗಿ ಶಾಲಾ ವಾಹನ ಚಾಲಕರು ಕೆಲಸದ ಅವಧಿಯಲ್ಲಿ ಮದ್ಯಪಾನ ಮಾಡಿ ವಾಹನ ಚಲಾಯಿಸುತ್ತಿರುವ ಬಗ್ಗೆ ಪೊಲೀಸರಿಗೆ ಹಲವು ದೂರು ಬಂದಿದ್ದವು. ಹಾಗಾಗಿ ಕಾರ್ಯಾಚರಣೆ ನಡೆಸಿ, ನಗರದ ವಿವಿಧೆಡೆ ಶಾಲಾ ವಾಹನಗಳನ್ನು ತಡೆದು ಚಾಲಕರನ್ನು ತಪಾಸಣೆಗೆ ಒಳಪಡಿಸಿದಾಗ, ಹಲವರು ಮದ್ಯ ಸೇವಿಸಿದ್ದರು' ಎಂದು ಸಂಚಾರ ವಿಭಾಗದ ಅಧಿಕಾರಿಯೊಬ್ಬರು ತಿಳಿಸಿದರು.

'ಮೂರು ಸಾವಿರಕ್ಕೂ ಹೆಚ್ಚು ವಾಹನಗಳನ್ನು ತಪಾಸಣೆಗೆ ಒಳಪಡಿಸಿದಾಗ, 23 ಚಾಲಕರು ಪಾನಮತ್ತರಾಗಿ ಚಾಲನೆ ಮಾಡುತ್ತಿದ್ದುದು ಗೊತ್ತಾಗಿದೆ. ಆ ಚಾಲಕರ ವಿರುದ್ಧ ಪಾನಮತ್ತ ಚಾಲನೆ ಮತ್ತು ಅಜಾಗರೂಕ ಚಾಲನೆ ಆರೋಪದಡಿ ಪ್ರಕರಣ ದಾಖಲಿಸಲಾಗಿದೆ. ತಪಾಸಣೆ ವೇಳೆ ಕಾರ್ಯಕ್ಷಮತೆ ಪ್ರಮಾಣ ಪತ್ರ (ಎಫ್.ಸಿ) ಹೊಂದಿರದ ವಾಹನಗಳನ್ನು ಜಪ್ತಿ ಮಾಡಿ, ಅವುಗಳನ್ನು ಆರ್‌ಟಿಒ ಕಚೇರಿಗಳ ವಶಕ್ಕೆ ಒಪ್ಪಿಸಲಾಗಿದೆ' ಎಂದು ಮಾಹಿತಿ ನೀಡಿದರು.

'ಶಾಲಾ ವಾಹನ ಚಾಲಕರು ಪಾನಮತ್ತರಾಗಿ ವಾಹನ ಚಾಲನೆ ಮಾಡುತ್ತಿದ್ದ ಕುರಿತು ಸಂಬಂಧಪಟ್ಟ ಶಾಲಾ ಮಂಡಳಿಯಿಂದ ಮಾಹಿತಿ ಕೇಳಲಾಗಿದೆ. ಅವರು ಏನು ಮಾಹಿತಿ ನೀಡುತ್ತಾರೆ ಎಂಬುದನ್ನು ಆಧರಿಸಿ, ಸಾರಿಗೆ ಇಲಾಖೆಗೆ ವರದಿ ನೀಡಲಾಗುವುದು. ಕೆಲ ಶಾಲೆಗಳು ಮಕ್ಕಳನ್ನು ಕರೆದೊಯ್ಯಲು ಖಾಸಗಿ ವಾಹನಗಳನ್ನು ಬಳಸುತ್ತಿರುವುದು ಪತ್ತೆಯಾಗಿದೆ. ಈ ಬಗ್ಗೆಯೂ ಸಾರಿಗೆ ಇಲಾಖೆಗೆ ಮಾಹಿತಿ ನೀಡಲಾಗುವುದು' ಎಂದರು.

ರಸ್ತೆ ನಿಯಮ ಪಾಲಿಸಿ

'ಸಂಚಾರ ನಿಯಮ ಕುರಿತು ಜಾಗೃತಿ ಮೂಡಿಸಲಾಗುತ್ತಿದೆ. ಜನರು ಅರ್ಥ ಮಾಡಿಕೊಳ್ಳಬೇಕು. ಮದ್ಯ ಸೇವಿಸಿ ವಾಹನ ಚಾಲನೆ ಮಾಡುವುದರಿಂದ ಅಪಘಾತಗಳು ಸಂಭವಿಸುತ್ತಿವೆ. ಇದಕ್ಕೆ ಕಡಿವಾಣ ಹಾಕಲು ನಗರದ ವಿವಿಧೆಡೆ ಕಾರ್ಯಾಚರಣೆ ತೀವ್ರಗೊಳಿಸಲಾಗಿದೆ. ಹಾಗಾಗಿ, ಪ್ರಕರಣಗಳ ಸಂಖ್ಯೆ ಹೆಚ್ಚಾಗುತ್ತಿದೆ. ಮದ್ಯಪಾನ ಮಾಡಿ ವಾಹನ ಚಾಲನೆಯಿಂದ ಮತ್ತೊಬ್ಬರ ಜೀವಕ್ಕೂ ತೊಂದರೆಯಾಗುತ್ತದೆ. ತಪ್ಪಿತಸ್ಥ ಚಾಲಕರ ಡಿ.ಎಲ್‌ಗಳನ್ನು ಅಮಾನತು ಮಾಡುವಂತೆ ಪ್ರಾದೇಶಿಕ ಸಾರಿಗೆ ಇಲಾಖೆಗೆ ಶಿಫಾರಸು ಮಾಡಲಾಗುತ್ತಿದೆ' ಎಂದು ಸಂಚಾರ ವಿಭಾಗದ ಜಂಟಿ ಪೊಲೀಸ್ ಕಮಿಷನರ್ ಕಾರ್ತಿಕ್ ರೆಡ್ಡಿ 'ಪ್ರಜಾವಾಣಿ'ಗೆ ತಿಳಿಸಿದರು.

ಕಾರ್ತಿಕ್ ರೆಡ್ಡಿ

ಶಾಲಾ ವಾಹನದ ಚಾಲಕರೊಬ್ಬರನ್ನು ತಪಾಸಣೆಗೆ ಒಳಪಡಿಸಿದ ಸಂಚಾರ ಪೊಲೀಸರು

'ಡ್ರಂಕ್ ಆ್ಯಂಡ್ ಡ್ರೈವ್' ಪ್ರಕರಣಗಳು

23,640	38,919	13 ಲಕ್ಷ
2024ರಲ್ಲಿ ದಾಖಲಾದ ಪ್ರಕರಣ	2025ರಲ್ಲಿ ದಾಖಲಾದ ಪ್ರಕರಣ	ಅಂದಾಜು ವಾಹನಗಳ ತಪಾಸಣೆ

ಶೇ 1ರಷ್ಟು ಮೀಸಲಾತಿಗೆ ಒತ್ತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಲೆಮಾರಿ ಸಮುದಾಯಗಳಿಗೆ ಪ್ರತ್ಯೇಕವಾಗಿ ಶೇ 1ರಷ್ಟು ಮೀಸಲಾತಿಯೊಂದಿಗೆ ಪ್ರತ್ಯೇಕ ನಿಗಮ ಹಾಗೂ ಪ್ಯಾಕೇಜ್ ಘೋಷಿಸುವುದು ಸೇರಿ ವಿವಿಧ ಬೇಡಿಕೆ ಈಡೇರಿಸುವಂತೆ ಆಗ್ರಹಿಸಿ ಒಳಮೀಸಲಾತಿ ಜಾರಿ ಹೋರಾಟ ಸಮಿತಿ ನೇತೃತ್ವದಲ್ಲಿ ಜಿಲ್ಲಾಧಿಕಾರಿ ಕಚೇರಿ ಎದುರು ಸೋಮವಾರ ಪ್ರತಿಭಟನೆ ನಡೆಯಿತು.

ಒಳಮೀಸಲಾತಿ ಹೋರಾಟಗಾರರ ವಿರುದ್ಧದ ಎಲ್ಲ ಪ್ರಕರಣ ಹಿಂಪಡೆಯಬೇಕು. ಆದಿ ಜಾಂಬವ, ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮ, ಚರ್ಮ ಕೈಗಾರಿಕಾ ಅಭಿವೃದ್ಧಿ ಮಂಡಳಿಗೆ ತಲಾ ₹2 ಸಾವಿರ ಕೋಟಿ ಅನುದಾನ ನೀಡಬೇಕು ಎಂದು ಆಗ್ರಹಿಸಿದರು.

ನೇರ ನೇಮಕಾತಿ ಜೊತೆಗೆ ಪದೋನ್ನತಿ, ಬ್ಯಾಕ್ ಲಾಗ್ ಸೇರಿ ಎಲ್ಲ ಕ್ಷೇತ್ರಗಳಲ್ಲಿ ಒಳಮೀಸಲಾತಿ ಜಾರಿ ಮಾಡಬೇಕು. ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮಕ್ಕೆ ಐಪಿಡಿ ಸಾಲಪ್ಪ ಅವರ ಹೆಸರಿಡಬೇಕು. ಸಾಲಪ್ಪ ಅವರ ವರದಿ ಅನುಷ್ಠಾನಗೊಳಿಸಬೇಕು. ವಿಶ್ವವಿದ್ಯಾಲಯಗಳನ್ನು ಒಂದು ಘಟಕವನ್ನಾಗಿ ಪರಿಗಣಿಸುವ ನಿರ್ಧಾರವನ್ನು ಕೂಡಲೇ ಕೈ ಬಿಡಬೇಕು ಎಂದು ಮನವಿ ಮಾಡಿದರು.

ಇದೇ ವೇಳೆ ಬೆಂಗಳೂರು ನಗರ ಜಿಲ್ಲಾಧಿಕಾರಿ ಜಗದೀಶ್ ಅವರಿಗೆ ಸಮಿತಿ ಮುಖಂಡ ಬಸವರಾಜ್ ಕೌತಾಳ್ ನೇತೃತ್ವದ ನಿಯೋಗ ಮನವಿ ಸಲ್ಲಿಸಿತು.

ಒಳಮೀಸಲಾತಿ ಜಾರಿ ಹೋರಾಟ ಸಮಿತಿಯ ಪದಾಧಿಕಾರಿಗಳು ಬೆಂಗಳೂರು ನಗರ ಜಿಲ್ಲಾಧಿಕಾರಿ ಜಗದೀಶ್ ಅವರಿಗೆ ಮನವಿ ಸಲ್ಲಿಸಿದರು

₹75 ಲಕ್ಷ ಮೌಲ್ಯದ ಮಾದಕವಸ್ತು ವಶ

ರಾಮನಗರ: ನಗರದಲ್ಲಿ ಮೆಥಾಂಫೆಟಮೈನ್ ಕ್ರಿಸ್ಟಲ್ ಹಾಗೂ ಎಂಡಿಎಂಎ ಮಾತ್ರೆಗಳನ್ನು ಮಾರಾಟ ಮಾಡುತ್ತಿದ್ದ ಜಾಲವನ್ನು ಬೇಧಿಸಿರುವ ಐಜೂರು ಠಾಣೆ ಪೊಲೀಸರು ವಿದೇಶಿ ಪ್ರಜೆ ಸೇರಿದಂತೆ ಇಬ್ಬರನ್ನು ಬಂಧಿಸಿದ್ದಾರೆ.

ಉಗಾಂಡದ ನಾನಾ ಜಾನ್ಸನ್ ಹಾಗೂ ಬೆಂಗಳೂರಿನ ಫಾರೂಕ್ ನಗರದ ಸಾಕಿಲ್ ಪಾಷ ಅಲಿಯಾಸ್ ಸಲ್ಮಾನ್ ಖಾನ್ ಬಂಧಿತರು. ಆರೋಪಿಗಳಿಂದ ₹19 ಲಕ್ಷ ಮೌಲ್ಯದ 190.65 ಗ್ರಾಂ ಎಂಡಿಎಂಎ ಮಾತ್ರೆ, ₹55.90 ಲಕ್ಷ ಮೌಲ್ಯದ 559.34 ಗ್ರಾಂ ಮೆಥಾಂಫೆಟಮೈನ್ ಕ್ರಿಸ್ಟಲ್ ಸೇರಿದಂತೆ ಕಾರು ವಶಪಡಿಸಿಕೊಂಡಿದ್ದಾರೆ.

ನಗರದಲ್ಲಿ ಇಂದು

ನೂತನ ದೇವಾಲಯದ ಪ್ರತಿಷ್ಠಾಪನೆ, ಕುಂಭಾಭಿಷೇಕ ಮಹೋತ್ಸವ: ಬೆಳಿಗ್ಗೆ 6.30ಕ್ಕೆ ಮಂಗಳವಾದ್ಯ ವೇದಪಾರಾಯಣ, ದ್ವಾರ ತೋರಣ, ಧ್ವಜ ಕುಂಭಾರಾಧನೆ, ಆಯೋಜನೆ ಮತ್ತು ಸ್ಥಳ: ಶ್ರೀರುಕ್ಮಿಣಿ ಸತ್ಯಭಾಮ ಸಮೇತ ವೇಣುಗೋಪಾಲಸ್ವಾಮಿ ಆಂಜನೇಯಸ್ವಾಮಿ ಮತ್ತು ಗಣಪತಿಯ ನೂತನ ದೇವಾಲಯ ಹಾಗೂ ಪ್ರತಿಷ್ಠಾಪನಾ ಮಹೋತ್ಸವ, ಅಂಜನಾಪುರ, ಬಿಡಿಎ ಲೇಔಟ್ ಮೂರನೇ ಹಂತ.

'ಜೀವಗೋಳ 2026: ಸುಸ್ಥಿರ ಗ್ರಹಕ್ಕಾಗಿ ವಿಜ್ಞಾನ' ಎಂಬ ರಾಷ್ಟ್ರೀಯ ವಿಜ್ಞಾನ ಸಮ್ಮೇಳನ: ಅಧ್ಯಕ್ಷತೆ: ಬಿ.ಎಸ್. ರಾಗಿಣಿ ನಾರಾಯಣ್, ಅತಿಥಿಗಳು: ಬಿ.ರಮೇಶ್, ಎ.ಎಸ್. ಕಿರಣ್‌ಕುಮಾರ್, ಪಿ. ದಯಾನಂದ್ ಪೈ, ಆಯೋಜನೆ: ಬಿ.ಎಂ.ಎಸ್. ಕಾಲೇಜ್ ಫಾರ್ ವುಮೆನ್, ಸ್ಥಳ: ಬಿ.ಎಂ. ಶ್ರೀನಿವಾಸಯ್ಯ ಸ್ಮಾರಕ ಸಭಾಂಗಣ, ಬಿ.ಎಂ.ಎಸ್. ಕಾಲೇಜ್ ಆಫ್ ಆರ್ಕಿಟೆಕ್ಚರ್, ಬಸವನಗುಡಿ, ಬೆಳಿಗ್ಗೆ 10

ಭಾರತೀಯ ಅಡುಗೆ ಪರಂಪರೆಯನ್ನು ಡಿಜಿಟಲ್ ಶಕ್ತಿಯಿಂದ ಹೊಸ ಆವಿಷ್ಕಾರ: ಅತಿಥಿಗಳು: ಕೆ.ಶ್ಯಾಮ್‌ರಾಜು, ಸುಬ್ರಮಣ್ಯ ಹೊಳ್ಳ, ಅಭಿಷೇಕ್ ಆಜಾದ್, ಪ್ರಮೋದ್ ಪಿ., ಪಿ.ಸಿ.ರಾವ್, ಆಯೋಜನೆ: ಫುಡ್ ಎಕ್ವಿಪ್‌ಮೆಂಟ್ ವರ್ಲ್ಡ್, ಸ್ಥಳ: ಬುದ್ಧ ಜ್ಯೋತಿ ಲೇಔಟ್, ಚಿಕ್ಕಬಿದರಕಲ್ಲು, ಬೆಳಿಗ್ಗೆ 10

ರಾಜ್ಯ ಸರ್ಕಾರಿ ನಿವೃತ್ತ ನೌಕರರ ಹಾಗೂ ಹಿರಿಯ ನಾಗರಿಕರ ಸಮಸ್ಯೆಗಳ ಕುರಿತು ವಿಚಾರ ಸಂಕಿರಣ, 75 ವರ್ಷಕ್ಕೂ ಮೇಲ್ಪಟ್ಟ ನಿವೃತ್ತ ನೌಕರರಿಗೆ ಅಭಿನಂದನಾ ಸಮಾರಂಭ: ಚಿರಂಜೀವ್ ಸಿಂಘ್, ಅಧ್ಯಕ್ಷತೆ: ಎಲ್.ಬೈರಪ್ಪ, ಅತಿಥಿಗಳು: ಸಿ.ಎಸ್. ಷಡಾಕ್ಷರಿ, ಅಶೋಕ, ಅಬ್ದುಲ್ ಖದೀರ್, ಬೆಟ್ಟೇಗೌಡ, ಸಿದ್ದರಾಜು, ಆಯೋಜನೆ: ರಾಜ್ಯ ಸರ್ಕಾರಿ ನಿವೃತ್ತ ನೌಕರರ ಸಂಘ, ಸ್ಥಳ: ರಾಜ್ಯ ಸರ್ಕಾರಿ ನೌಕರರ ಭವನ, ಕಬ್ಬನ್ ಉದ್ಯಾನ, ಬೆಳಿಗ್ಗೆ 10.30

ಹಿಮೋಫಿಲಿಯಾ ರೋಗಿಗಳಿಗೆ ರೋಗ ನಿರೋಧಕ ಚಿಕಿತ್ಸೆ ಮತ್ತು 108 ಆಂಬುಲೆನ್ಸ್ ಸೇವೆಗಳ ಉದ್ಘಾಟನೆ: ಸಿದ್ದರಾಮಯ್ಯ, ಅತಿಥಿಗಳು: ಡಿ.ಕೆ.ಶಿವಕುಮಾರ್, ಬಸವರಾಜ ಹೊರಟ್ಟಿ, ಯು.ಟಿ.ಖಾದರ್, ದಿನೇಶ್ ಗುಂಡೂರಾವ್, ಅಧ್ಯಕ್ಷತೆ: ರಿಜ್ವಾನ್ ಅರ್ಷದ್, ಆಯೋಜನೆ: ಆರೋಗ್ಯ ಇಲಾಖೆ, ಸ್ಥಳ: ಸಿ.ವಿ.ವಿಶ್ವೇಶ್ವರ ಆಡಿಟೋರಿಯಂ ಯು.ಆರ್. ರಾವ್ ಭವನ, ನೆಹರೂ ತಾರಾಲಯ, ರಾಜಭವನ ರಸ್ತೆ, ಬೆಳಿಗ್ಗೆ 11

'ಕುವೆಂಪು ವಿಚಾರ ಕ್ರಾಂತಿ ಸ್ವರೂಪ' ತಿಂಗಳ ಉಪನ್ಯಾಸ: ಬರಗೂರು ರಾಮಚಂದ್ರಪ್ಪ, ಪ್ರಸ್ತಾವ: ಜೆ.ಕರಿಯಪ್ಪ ಮಾಳಿಗೆ, ಅಧ್ಯಕ್ಷತೆ: ಚನ್ನಪ್ಪ ಕಟ್ಟಿ, ಆಯೋಜನೆ ಮತ್ತು ಸ್ಥಳ: ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಆವರಣ, ಮಲ್ಲತ್ತಹಳ್ಳಿ, ಕಲಾಗ್ರಾಮ, ಸಂಜೆ 5

'ಜಿತಂತೇ ಸ್ತೋತ್ರ' ಧಾರ್ಮಿಕ ಪ್ರವಚನ: ರಘೋತ್ತಮಾಚಾರ್ಯ, ಆಯೋಜನೆ ಮತ್ತು ಸ್ಥಳ: ರಾಘವೇಂದ್ರ ಸ್ವಾಮಿ ಮಠ, ಸುಧೀಂದ್ರನಗರ, ಮಲ್ಲೇಶ್ವರ, ಸಂಜೆ 7

ಬೆಂಗಳೂರು ನಗರ ವಿ.ವಿ: ಅಂಗನವಾಡಿ ಡಿಪ್ಲೊಮಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ನಗರ ವಿಶ್ವವಿದ್ಯಾಲಯವು ಅಂಗನವಾಡಿ ಶಿಕ್ಷಣಕ್ಕೆ ಪೂರಕವಾಗಿ 'ಆರಂಭಿಕ ಬಾಲ್ಯದ ಆರೈಕೆ ಮತ್ತು ಶಾಲಾಪೂರ್ವ ಶಿಕ್ಷಣದ ಡಿಪ್ಲೊಮಾ ಕೋರ್ಸ್' ಅನ್ನು (ಡಿಇಸಿಸಿಐಇ) ಆರಂಭಿಸಲಿದೆ.

ಈ ಸಂಬಂಧ ವಿಶ್ವವಿದ್ಯಾಲಯವು ಸಮುದಾಯ ಆಧಾರಿತ ಪುನರ್ವಸತಿ (ಸಿಬಿಆರ್) ದಕ್ಷಿಣ ಏಷಿಯಾ ನೆಟ್‌ವರ್ಕ್ ಎನ್ನುವ ಸ್ವಯಂಸೇವಾ ಸಂಸ್ಥೆ ಜತೆ ಒಪ್ಪಂದ ಮಾಡಿಕೊಂಡಿದೆ. ಈ ಕೋರ್ಸ್ ಆರಂಭಿಸುವ ಮೊದಲ ವಿಶ್ವವಿದ್ಯಾಲಯ ಎನ್ನಿಸಲಿದೆ.

ಸಮಗ್ರ ಶಿಶು ಅಭಿವೃದ್ಧಿ ಯೋಜನೆಯ ಅಂಗನವಾಡಿಗಳಲ್ಲಿ ಮತ್ತು ಇತರೆ ಪೂರ್ವ ಪ್ರಾಥಮಿಕ ಶಾಲೆಗಳಲ್ಲಿ ಕಾರ್ಯನಿರ್ವಹಿಸುವ ಸಿಬ್ಬಂದಿಗೆ ಸೂಕ್ತ ವೃತ್ತಿ ತರಬೇತಿ ಒದಗಿಸಲು ಈ ಕೋರ್ಸ್ ನೆರವಾಗಲಿದೆ.

ಒಂದು ವರ್ಷ ಅವಧಿಯ ಈ ಡಿಪ್ಲೊಮಾ ಕೋರ್ಸ್ ಆನ್‌ಲೈನ್ ಮತ್ತು ಆಫ್‌ಲೈನ್ ಎರಡೂ ಮಾದರಿಯಲ್ಲಿ ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಲಭ್ಯವಿರಲಿದೆ. ಪಿಯುಸಿ ಪೂರೈಸಿದ ಅಭ್ಯರ್ಥಿಗಳು ಈ ಕೋರ್ಸ್ ಸೇರಲು ಅರ್ಹರು.

ಅಂಗನವಾಡಿ ಕಾರ್ಯಕರ್ತರಾಗಿ 3 ವರ್ಷದ ಅನುಭವ ಹೊಂದಿದ್ದರೆ ಎಸ್‌ಎಸ್‌ಎಲ್‌ಸಿ ವಿದ್ಯಾರ್ಹತೆ ಸಾಕಾಗುತ್ತದೆ. ಇದರ ಜೊತೆಗೆ 6 ತಿಂಗಳ ಅವಧಿಯ ಸರ್ಟಿಫಿಕೇಟ್ ಕೋರ್ಸ್ ಸಹ ಲಭ್ಯವಿದೆ.

ಕುಲಪತಿ ಬಿ.ರಮೇಶ್ ಅವರ ಸಮ್ಮುಖದಲ್ಲಿ ಕುಲಸಚಿವ ಎ.ನವೀನ್ ಜೋಸೆಫ್ ಹಾಗೂ ಸಂಸ್ಥೆಯ ಪ್ರಾದೇಶಿಕ ಸಲಹೆಗಾರರಾದ ಇಂದುಮತಿ ರಾವ್ ಅವರು ಒಡಂಬಡಿಕೆಗೆ ಸಹಿ ಹಾಕಿದರು.

ಕೌಶಲ, ಉದ್ಯೋಗ ತರಬೇತಿ ಒಡಂಬಡಿಕೆ: ವಿದ್ಯಾರ್ಥಿಗಳಲ್ಲಿ ಉದ್ಯಮಕ್ಕೆ ಪೂರಕ ಕೌಶಲ, ವೃತ್ತಿಪರ ತರಬೇತಿ ಒದಗಿಸಲು ಒರಾಕಲ್ ಅಕಾಡೆಮಿಯ ಸಹಭಾಗಿತ್ವದ ರೀಚ್ ಮಚ್ ಹೈಯರ್(ಆರ್‌ಎಂಎಚ್) ಪ್ರತಿಷ್ಠಾನದೊಂದಿಗೆ ಬೆಂಗಳೂರು ನಗರ ವಿಶ್ವವಿದ್ಯಾಲಯ ಒಪ್ಪಂದ ಮಾಡಿಕೊಂಡಿದೆ. ಸಂಸ್ಥೆ ಸಿಇಒ ಓ.ಪಿ. ಗೋಯಲ್ ಅವರೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲಾಯಿತು.

ಕಾರ್ಯಕ್ರಮದ ಮೂಲಕ ವಿ.ವಿ ಹಾಗೂ ಸಂಯೋಜಿತ ಕಾಲೇಜುಗಳ ವಿದ್ಯಾರ್ಥಿಗಳಿಗೆ 90 ತಾಸು ತರಬೇತಿ ಒದಗಿಸಲಾಗುವುದು. ಡಿಜಿಟಲ್ ಮತ್ತು ದತ್ತಾಂಶ ಕೌಶಲ್ಯ, ಕೃತಕ ಬುದ್ಧಿಮತ್ತೆ ಮತ್ತು ಭವಿಷ್ಯದ ತಂತ್ರಜ್ಞಾನ ಹಾಗೂ ವೃತ್ತಿಪರ ಸಂವಹನದ ಕುರಿತು ತರಬೇತಿ ನೀಡಲಾಗುತ್ತದೆ.

ಬೆಂಗಳೂರು ನಗರ ವಿಶ್ವವಿದ್ಯಾಲಯದಲ್ಲಿ ಅಂಗನವಾಡಿ ಡಿಪ್ಲೊಮಾ ಕೋರ್ಸ್ ಆರಂಭಿಸುವ ಸಂಬಂಧ ಒಪ್ಪಂದಕ್ಕೆ ಸಹಿ ಹಾಕಲಾಯಿತು. ಕುಲಪತಿ ಬಿ.ರಮೇಶ್, ಕುಲಸಚಿವರಾದ ಎ.ನವೀನ್ ಜೋಸೆಫ್, ರಮೇಶ್ ಕುಡೇನಟ್ಟಿ, ಸಿಬಿಆರ್ ಸಂಸ್ಥೆಯ ಇಂದುಮತಿರಾವ್ ಉಪಸ್ಥಿತರಿದ್ದರು

ಡಿಮೆನ್ಷಿಯಾದಿಂದ ಬಳಲುವವರಿಗೆ ಮನೆಗಳಲ್ಲಿ ಹೆಚ್ಚಿನ ಸುರಕ್ಷತೆ ಒದಗಿಸಲು ಕೃತಕ ಬುದ್ಧಿಮತ್ತೆ ತಂತ್ರಜ್ಞಾನವನ್ನು ಬಳಸಲಾಗುತ್ತಿದೆ. ಕಟ್ಟಡ ನಿರ್ಮಾಣ ಕ್ಷೇತ್ರದಲ್ಲಿ ಈ ಬಗ್ಗೆ ಸಂಶೋಧನೆಗಳು ನಡೆಯುತ್ತಿವೆಯಂತೆ!

ದಂತಚಿಕಿತ್ಸೆಗೆ ಗುಳಿಗೆಯ ಗಳಿಗೆ

• ಎಸ್.ಎನ್.ಹೆಗಡೆ

'ಜಾಸ್ತಿ ಚಾಕಲೇಟ್ ತಿನ್ನಬೇಡ, ಹಲ್ಲುಗಳು ಹಾಳಾಗುತ್ತವೆ' ಎಂಬ ಹಿರಿಯರ ಬುದ್ಧಿಮಾತನ್ನು ಚಿಕ್ಕವರಾಗಿದ್ದಾಗಲೇ ಕೇಳಿದ್ದೇವು. ಆಗ ಅದರಿಂದ ನಮಗೆ ಭಯವೂ ಉಂಟಾಗಿದ್ದಿರಬಹುದು. ತಿನ್ನುವ ಆಹಾರದಲ್ಲಿ ಕ್ಯಾಲ್ಸಿಯಂ ಹಾಗೂ ಕೆಲವು ಜೀವಸತ್ವಗಳ ಕೊರತೆ ಇದ್ದಾಗ ಹಲ್ಲುಗಳು ಬಹುಬೇಗ ಶಿಥಿಲಗೊಂಡು ಹಾಳಾಗುತ್ತವೆ. ಶಿಥಿಲಗೊಂಡ ಹಲ್ಲುಗಳು ಅತೀವ ನೋವಿಗೂ ಕಾರಣವಾಗುತ್ತವೆ. ನೋವಿನಿಂದ ಮುಕ್ತಿ ಪಡೆಯಲು ಅಂತಿಮವಾಗಿ ಹಲ್ಲನ್ನು ಕೀಳಿಸಬೇಕಾಗುತ್ತದೆ. ಬಾಲ್ಯದಲ್ಲಿ ಒಮ್ಮೆ ಹಲ್ಲು ಬಿದ್ದು ಹೊಸ ಹಲ್ಲು ಹುಟ್ಟಿದ ನಂತರ ಯಾವುದೇ ಕಾರಣದಿಂದ ಮತ್ತೆ ಹಲ್ಲು ಬಿದ್ದರೆ ಅಥವಾ ಕೀಳಿಸಿದರೆ ಮತ್ತೆ ಹೊಸ ಹಲ್ಲು ಬೆಳೆಯಲಾರದು. ಹೀಗೆ ಹಲ್ಲನ್ನು ಕಿತ್ತಾಗ ಅಥವಾ ಬಿದ್ದಾಗ ವಸಡಿನ ಆ ಭಾಗದಲ್ಲಿ ಖಾಲಿ ಸ್ಥಳ ಉಳಿದು, ಆಹಾರ ಅಗಿಯುವುದು, ಮಾತನಾಡುವುದು ಮುಂತಾದ ಕ್ರಿಯೆಗಳಿಗೆ ತೊಡಕುಂಟಾಗುತ್ತದೆ. ಮುಖದ ಅಂದವೂ ಕೆಡುತ್ತದೆ. ಆಗ ದಂತವೈದ್ಯರಿಂದ ಕೃತಕ ಹಲ್ಲುಗಳನ್ನು ಕಟ್ಟಿಸಿಕೊಳ್ಳಬೇಕಾಗುತ್ತದೆ. ಕೃತಕ ಹಲ್ಲಿನ ವಸಡುಗಳ ಭಾಗದಲ್ಲಿ ಅಕ್ರಿಲಿಕ್ (ಪಾಲಿಮೀಥೈಲ್ ಮೀಥಕ್ರಿಲೇಟ್) ಎಂಬ ವಸ್ತುವನ್ನು ಬಳಸಲಾಗುತ್ತದೆ. ಹಲ್ಲಿನ ಭಾಗದಲ್ಲಿ ಪಿಂಗಾಣಿ (ಪೋರ್ಸ್‌ಲೈನ್) ಹಲ್ಲುಗಳನ್ನು ಅಥವಾ ಕೋಬಾಲ್ಟ್-ಕ್ರೋಮಿಯಂ ಧಾತುಗಳಿಂದ ತಯಾರಿಸಿದ ಹಲ್ಲುಗಳನ್ನು ಸೇರಿಸಲಾಗುತ್ತದೆ. ಆದರೂ ಈ ಹಲ್ಲಿನ ಸೆಟ್ ನೈಸರ್ಗಿಕ ಹಲ್ಲುಗಳಷ್ಟು ಭದ್ರವಾಗಿರುವುದಿಲ್ಲ. ಕೆಲವೊಮ್ಮೆ ವಸಡಿನ ಭಾಗದಲ್ಲಿ ಒತ್ತುವುದರಿಂದ ಒಳಭಾಗದಲ್ಲಿ ಗಾಯಗಳಾಗಿ ನೋವುಂಟಾಗುವ ಸಾಧ್ಯತೆಯೂ ಇರುತ್ತದೆ.

ಕಳೆದ ಎರಡು ಮೂರು ದಶಕಗಳಿಂದ ಹೆಚ್ಚು ದೃಢವಾದ ಹಲ್ಲುಗಳನ್ನು ಕೃತಕವಾಗಿ ಜೋಡಿಸಲಾಗುತ್ತಿದೆ. ಈ ತಂತ್ರದಲ್ಲಿ ವಸಡಿನ ಒಳಭಾಗದ ದವಡೆ ಮೂಳೆಯನ್ನು ಸ್ವಲ್ಪ ಕೊರೆದು ಟೈಟಾನಿಯಂ ಸ್ಕ್ರೂವನ್ನು ಅಳವಡಿಸಲಾಗುತ್ತದೆ. ಸ್ಕ್ರೂ ಮೂಳೆಯೊಂದಿಗೆ ಬೆರೆತು ಕೃತಕ ಬೇರಿನಲ್ಲಿ ಅದು ಬಲಗೊಳ್ಳಲು ಮೂರು–ನಾಲ್ಕು ತಿಂಗಳು ಕಾಯಬೇಕಾಗುತ್ತದೆ. ಅನಂತರ ಅದರ ಮೇಲೆ ಕಿರೀಟ ಅಥವಾ ಕ್ಯಾಪ್‌ಅನ್ನು (ಅಂದರೆ ಮೇಲ್ಭಾಗದಲ್ಲಿ ಕಾಣುವ ಬಿಳಿಬಣ್ಣದ ಹಲ್ಲು) ಜೋಡಿಸಲಾಗುತ್ತದೆ. ಈ ವಿಧಾನಕ್ಕೆ 'ಡೆಂಟಲ್ ಇಂಪ್ಲಾಂಟೇಷನ್' (ಹಲ್ಲನ್ನು ನಾಟಿ ಮಾಡುವುದು) ಎಂದು ಹೆಸರು. ಈ ವಿಧಾನದಲ್ಲಿ ಹಲ್ಲನ್ನು ನಾಟಿ ಮಾಡುವ ಅವಧಿ ಹಾಗೂ ವೆಚ್ಚ – ಎರಡೂ ಅಧಿಕ.

ವೈದ್ಯಕೀಯ ಕ್ಷೇತ್ರದಲ್ಲಿ ಅನೇಕ ಸಂಶೋಧನೆಗಳು ನಡೆದಿವೆ, ಹೊಸ ತಂತ್ರಗಳ ಆವಿಷ್ಕಾರವೂ ಆಗಿದೆ. ನಾವು ಈಗಾಗಲೇ ಇಂಥ ತಂತ್ರಗಳ ಮೂಲಕ ಆರೋಗ್ಯವನ್ನು ರಕ್ಷಿಸಿಕೊಳ್ಳುತ್ತಿದ್ದೇವೆ. ಹಾಗಾದರೆ ದಂತವೈದ್ಯಕೀಯ ಕ್ಷೇತ್ರದಲ್ಲಿ ಇಂಥ ಆವಿಷ್ಕಾರಗಳು ನಡೆಯುತ್ತಿಲ್ಲವೇ? ಖಂಡಿತ ನಡೆಯುತ್ತಿದೆ. ಇಂದಿನ ವಿಜ್ಞಾನಿಗಳು ಕೃತಕ ಹಲ್ಲುಗಳನ್ನು ನಾಟಿ ಮಾಡುವ ಬದಲು ಮಾನವ ದವಡೆಯಲ್ಲಿ ನಿಜವಾದ ಜೈವಿಕ ಹಲ್ಲುಗಳನ್ನು ಅಳವಡಿಸಲು ಅಥವಾ ಬೆಳೆಸಲು ಮಾರ್ಗಗಳನ್ನು ಕಂಡುಹಿಡಿಯಲು ಪ್ರಯತ್ನಿಸುತ್ತಿದ್ದಾರೆ. ವಿವಿಧ ಸಂಶೋಧನಾ ತಂಡಗಳು ವಿವಿಧ ಬಗೆಯ ಪ್ರಯತ್ನಗಳನ್ನು ನಡೆಸಿದ್ದಾರೆ.

ಲಂಡನ್ನಿನ ಕಿಂಗ್ಸ್ ಕಾಲೇಜಿನ ಪುನರುತ್ಪಾದಕ ದಂತವೈದ್ಯಶಾಸ್ತ್ರದ (ರಿಜನರೇಟೀವ್ ಡೆಂಟಿಸ್ಟ್ರಿ) ಸ್ನಾತಕೋತ್ತರ ಕಾರ್ಯಕ್ರಮದ ನಿರ್ದೇಶಕಿ ಅನಾ ಏಂಜೆಲೋವಾ ವೊಲ್ಪೊನಿ ಅವರ ಸಂಶೋಧನೆಯೊಂದು ಗಮನಾರ್ಹ. ಪ್ರಯೋಗಾಲಯದಲ್ಲಿ ಬೆಳೆದ ಹಲ್ಲುಗಳೊಂದಿಗೆ ಅವರು ಸುಮಾರು ಎರಡು ದಶಕಗಳಿಂದ ಪ್ರಯೋಗವನ್ನು ಮಾಡುತ್ತಿದ್ದಾರೆ. 2013ರಲ್ಲಿ ಅವರು ತಮ್ಮ ಸಂಗಡಿಗರೊಂದಿಗೆ ಮಾನವ ಮತ್ತು ಇಲಿ ಕೋಶಗಳನ್ನು ಮಿಶ್ರಮಾಡಿ ಹಲ್ಲುಗಳನ್ನು ಬೆಳೆಸಲು ಪ್ರಯತ್ನಿಸಿದರು. ಈ ಮಿಶ್ರಕೋಶಗಳನ್ನು ಪ್ರಯೋಗಾಲಯದ ಕೃತಕ ಪರಿಸರದಲ್ಲಿ ಕೃತಕ ಪೋಷಕಾಂಶಗಳನ್ನು ನೀಡಿ ತನ್ಮೂಲಕ ಹಲ್ಲು ಬೆಳೆಸುವ ಪ್ರಯತ್ನ ಅವರದು. ಆರಂಭದ ಹಂತಗಳಲ್ಲಿ ಅವರ ಪ್ರಯತ್ನಗಳು ಫಲಕಾರಿಯಾಗಿಯೂ ಇದ್ದವು. ಈ ಜೀವಕೋಶಗಳಿಂದ ಹಲ್ಲು ಬೆಳೆಯಲಾರಂಭಿಸಿತು. ಆದರೆ ಅದಕ್ಕೆ ಸೂಕ್ತ ಆಕಾರ–ರಚನೆಗಳ ಗಡಸುತನಗಳು ಇರಲಿಲ್ಲ. ಹೀಗೆ ಬೆಳೆಸಿದ ಹಲ್ಲನ್ನು ಮಾನವನ ವಸಡಿನಲ್ಲಿ ಇರಿಸುವ ಪ್ರಯತ್ನವನ್ನು ಮಾಡಿದರು. ಆದರೆ, ಮಾನವಶರೀರದಲ್ಲಿ ಈ ಜೀವಕೋಶಗಳು ಹಲ್ಲನ್ನು ರೂಪಿಸುವುದರಲ್ಲಿ ವಿಫಲವಾದವು.

ಈ ಪ್ರಯೋಗಗಳಲ್ಲಿ ಅವರು ಬಾಯಿಯ ಒಳಭಾಗದಿಂದ ಕೆಲವು ವಯಸ್ಕ ವಸಡುಕೋಶಗಳನ್ನು ಪಡೆದರು. ಈ ಜೀವಕೋಶಗಳನ್ನು ಇಲಿಯ ಭ್ರೂಣದಿಂದ ತೆಗೆದ ಹಲ್ಲಿನ ಪೂರ್ವಜ (ಪ್ರೈಮಾರ್ಡಿಯಲ್) ಜೀವಕೋಶಗಳೊಂದಿಗೆ ಸಂಯೋಜಿಸಿದರು. ಹೀಗೆ ಸಂಯೋಜಿಸಿದ ಎರಡು ಬಗೆಯ ಹಲ್ಲುಗಳು ಒಂದಕ್ಕೊಂದು ಹೊಂದಿಕೊಂಡು ಪ್ರಯೋಗಾಲಯದ ಕೃತಕ ಪರಿಸರದಲ್ಲಿ ಹಲ್ಲನ್ನು ನಿರ್ಮಿಸತೊಡಗಿದವು. ಈ ಬಗೆಯ ಹಲ್ಲಿನ ಬೆಳವಣಿಗೆಗೆ ಹಂದರವೊಂದರ ಅಗತ್ಯವಿತ್ತು. ಆಗ 'ವೊಲ್ಪೊನಿಯವರು ಕೊಲಾಜೆನ್' ಎಂಬ ಪ್ರೊಟೀನ್‌ನಿಂದ ತಯಾರಿಸಿದ ಹಂದರವನ್ನು ಬಳಸಿದರು. ಆದರೆ ಕೊಲಾಜೆನ್‌ನಲ್ಲಿ ನೀರಿನ ಅಂಶ ಕಡಿಮೆ ಇರುವುದರಿಂದ ಅದೂ ಯಶಸ್ವಿಯಾಗಲಿಲ್ಲ.

ವೊಲ್ಪೊನಿಯವರ ಪ್ರಯೋಗಗಳಿಂದ ಪ್ರೇರಿತರಾದ ಅವರ ಡಾಕ್ಟರೇಟ್ ವಿದ್ಯಾರ್ಥಿ ಕ್ಸುಯೆಚೆನ್ ಜಾಂಗ್, ಕೊಲಾಜೆನ್ ಬದಲು ಹೆಚ್ಚಿನ ನೀರಿನ ಅಂಶವಿರುವ ಕೊಲಾಜೆನ್ ಅನ್ನು ಹೋಲುವ ಆದರೆ ಹೆಚ್ಚು ನೀರಿನಂಶವುಳ್ಳ ಪಾಲಿಮರ್ (ಹೈಡ್ರೋಜೆಲ್) ಒಂದನ್ನು ಬಳಸಿದರು. ಇವರು ಮೊದಲು ಇಲಿಯ ಭ್ರೂಣಗಳಿಂದ ಜೀವಕೋಶಗಳನ್ನು ಸಂಗ್ರಹಿಸಿ ನಂತರ ಅವುಗಳನ್ನು ಮಾನವ ವಸಡಿನಿಂದ ಪಡೆದ ಕೋಶಗಳೊಂದಿಗೆ ಬೆರೆಸಿ ಸಣ್ಣ ಕೋಶಗುಳಿಗೆಯನ್ನು ತಯಾರಿಸಿದರು. ಈ ಕೋಶಗುಳಿಗೆಯನ್ನು ಹೈಡ್ರೋಜೆಲ್ ಒಳಗೆ ಚುಚ್ಚಿ ಸುಮಾರು ಎಂಟು ದಿನಗಳವರೆಗೆ ಬೆಳೆಸಿದರು. ಹೈಡ್ರೋಜೆಲ್ ಕವಚದ ಒಳಭಾಗದಲ್ಲಿ ಹಲ್ಲಿನಂತಹ ರಚನೆಗಳು ರೂಪುಗೊಂಡಿದ್ದವು. ಹಲ್ಲಿನ ಈ ಮೂಲರೂಪಗಳನ್ನು ಇಲಿಗಳಿಗೆ ವರ್ಗಾಯಿಸಲಾಯಿತು. ಅಲ್ಲಿ ಅವು ಹಲ್ಲಿನ ಬೇರು ಮತ್ತು ಕಿರೀಟಗಳನ್ನು (ನಾವು ಕಾಣುವ ಹಲ್ಲಿನ ಹೊರಭಾಗ) ತಯಾರಿಸಿದವು.

ಸಂಶೋಧಕರಿಗೆ ಈಗ ಈ ಹಲ್ಲಿನ ಗುಳಿಗೆಗಳನ್ನು ಮಾನವನ ವಸಡಿಗೆ ಹೇಗೆ ಅಳವಡಿಸುವುದು ಎಂಬ ಪ್ರಶ್ನೆ ಎದುರಾಗಿದೆ. ವೊಲ್ಪೋನಿ ಎರಡು ಮಾರ್ಗಗಳನ್ನು ಸೂಚಿಸಿದ್ದಾರೆ. ಮೊದಲನೆಯದು, ಹಾಳಾದ ಹಲ್ಲನ್ನು ಕಿತ್ತು ಅದರ ಕುಳಿಯಲ್ಲಿ ಕೋಶಗುಳಿಗೆಗಳನ್ನು ಸೇರಿಸಿ ಅಲ್ಲಿಯೇ ಅದು ಹಲ್ಲನ್ನು ಬೆಳೆಯುವಂತೆ ಪ್ರಚೋದಿಸುವುದು. ಎರಡನೆಯದು, ಹಲ್ಲುಗಳನ್ನು ಹೊರಭಾಗದಲ್ಲಿಯೇ ಬೆಳೆಸಿ ಅದನ್ನು ಕಿತ್ತ ಹಲ್ಲಿನ ಸ್ಥಳದಲ್ಲಿ ಶಸ್ತ್ರಚಿಕಿತ್ಸೆಯ ಮೂಲಕ ಅಳವಡಿಸುವುದು. ಈ ಎರಡು ವಿಧಾನಗಳಲ್ಲಿ ಯಾವುದು ಸೂಕ್ತ ಎಂಬುದನ್ನು ಇನ್ನೂ ನಿರ್ಣಯಿಸಲು ಸಾಧ್ಯವಾಗಿಲ್ಲ. ಅದಕ್ಕೆ ಇನ್ನೂ ಹಲವು ಬಗೆಯ ಚಿಕಿತ್ಸಕ ಪ್ರಯತ್ನಗಳು (ಕ್ಲಿನಿಕಲ್ ಟ್ರಯಲ್ಸ್) ನಡೆಯಬೇಕು.

ಇತ್ತೀಚೆಗೆ ವಾಷಿಂಗ್ಟನ್ ವಿಶ್ವವಿದ್ಯಾಲಯದಲ್ಲಿ, ಜೀವರಸಾಯನ ವಿಜ್ಞಾನದ ಪ್ರಾಧ್ಯಾಪಕಿ ಮತ್ತು ವಿಶ್ವವಿದ್ಯಾಲಯದ ಇನ್‌ಸ್ಟಿಟ್ಯೂಟ್ ಫಾರ್ ಸ್ಟೆಮ್ ಸೆಲ್ ಮತ್ತು ಪುನರುತ್ಪಾದಕ ಔಷಧಶಾಸ್ತ್ರದ ಸಹಾಯಕ ನಿರ್ದೇಶಕಿ ಹ್ಯಾನೆಲೆ ರುಹೋಲಾ-ಬೇಕರ್ ನೇತೃತ್ವದ ತಂಡವು ಇನ್ನೊಂದು ಹೊಸ ತಂತ್ರವನ್ನು ಅಭಿವೃದ್ಧಿ ಪಡಿಸುವ ಪ್ರಯತ್ನವನ್ನು ನಡೆಸಿದೆ. ಕೋಶ ಗುಳಿಗೆಗಳನ್ನು ತಯಾರಿಸಿ ಆ ಮೂಲಕ ಹಲ್ಲನ್ನು ಬೆಳೆಸುವ ಬದಲು, ಮಾನವಶರೀರದಲ್ಲಿಯೇ ಇರುವ ದಂತತಿರುಳಿನ ಕಾಂಡಕೋಶಗಳನ್ನು (ಸ್ಟೆಮ್ ಸೆಲ್ಸ್ - ಇವು ಬೆಳವಣಿಗೆಯ ಹಂತದಲ್ಲಿಯೇ ಇರುವ ಜೀವಕೋಶಗಳು) ತೆಗೆದು ಪ್ರಯೋಗಾಲಯದ ಕೃತಕ ಪರಿಸರದಲ್ಲಿ ಬೆಳೆಸಿ ಅವುಗಳನ್ನು ವಸಡಿನಲ್ಲಿ ಅಳವಡಿಸುವುದು. ಈ ಪ್ರಯತ್ನಗಳಿಗೆ ಯಶಸ್ಸು ದೊರಕಿದರೆ ದಂತಚಿಕಿತ್ಸೆಗೆ ಹೊಸ ಆಯಾಮ ದೊರಕುತ್ತದೆ ಎಂದು ಊಹಿಸಲಾಗಿದೆ. ❖

ರೆಕ್ಕೆಗಳ ತೆಕ್ಕೆಯಲ್ಲಿ ಡ್ರೋನ್‌ಗಳು

• ಸುಧೀರ ಎಚ್.ಎಸ್.

ನಮ್ಮ ಸುತ್ತಮುತ್ತ ಹಾರಾಡುವ ಹಕ್ಕಿಗಳನ್ನು ನೋಡಿದಾಗ ಅವು ಸುಲಭವಾಗಿ ಗಾಳಿಯಲ್ಲಿ ಹಾರುವುದನ್ನು, ತೇಲುವುದನ್ನು ಕಂಡು ನಲಿಯುತ್ತೇವೆ. ಈ ಹಾರಾಟದ ಹಿಂದೆ ಕೋಟ್ಯಂತರ ವರ್ಷಗಳ ವಿಕಾಸದ ರಹಸ್ಯ ಅಡಗಿದೆ. ಈಗ ಅದೇ ರಹಸ್ಯವನ್ನು ಬಳಸಿಕೊಂಡು ಹೆಚ್ಚು ಶಕ್ತಿಯುತವಾದ ಡ್ರೋನ್‌ಗಳನ್ನು ತಯಾರಿಸಲು ವಿಜ್ಞಾನಿಗಳು ಮುಂದಾಗಿದ್ದಾರೆ.

ಜಾನ್ಸ್ ಹಾಪ್ಕಿನ್ಸ್ ವಿಶ್ವವಿದ್ಯಾಲಯ ಮತ್ತು ನಮ್ಮ ದೇಶದ ಪ್ರತಿಷ್ಠಿತ ಸಂಸ್ಥೆಯಾದ ಮುಂಬೈ ಐಐಟಿಯ ಸಂಶೋಧಕರು ಜಂಟಿಯಾಗಿ ಒಂದು ಅದ್ಭುತ ವಿಷಯವನ್ನು ಪತ್ತೆ ಹಚ್ಚಿದ್ದಾರೆ. ಪಕ್ಷಿಗಳ ರೆಕ್ಕೆಗಳಲ್ಲಿರುವ ಗರಿಗಳು (Feathers) ಒಟ್ಟಾಗಿರುವ ರೆಕ್ಕೆಗಿಂತ ಎರಡು ಪಟ್ಟು ಹೆಚ್ಚು ಎತ್ತುವ ಶಕ್ತಿಯನ್ನು (Lift) ನೀಡಬಲ್ಲವು ಎಂಬುದನ್ನು ಸಂಶೋಧನೆಯೊಂದು ಈಗ ಸಾಬೀತು ಮಾಡಿದೆ.

ಸಾಮಾನ್ಯವಾಗಿ ನಾವು ಬಳಸುವ ಡ್ರೋನ್‌ಗಳು ಪ್ಲಾಸ್ಟಿಕ್ ಅಥವಾ ಲೋಹದ ಒಂದೇ ಅಖಂಡ ರೆಕ್ಕೆಯನ್ನು ಹೊಂದಿರುತ್ತವೆ. ಆದರೆ ಹಕ್ಕಿಗಳ ರೆಕ್ಕೆ ಹಾಗಿರುವುದಿಲ್ಲ. ಅವುಗಳಲ್ಲಿ ನೂರಾರು ಸಣ್ಣ ಸಣ್ಣ ಗರಿಗಳು ಒಂದರ ಮೇಲೊಂದು ಹಂಚಿನ ಮನೆಯ ಮಾಡಿನಂತೆ ಜೋಡಿ ಸಲ್ಪಟ್ಟಿರುತ್ತವೆ. ಹಕ್ಕಿಯು ತನ್ನ ರೆಕ್ಕೆಯನ್ನು ಕೆಳಕ್ಕೆ ಬಡಿಯುವಾಗ (Downstroke), ಈ ಗರಿಗಳೆಲ್ಲವೂ ಒಂದಕ್ಕೊಂದು ಬಿಗಿಯಾಗಿ ಅಂಟಿಕೊಳ್ಳುತ್ತವೆ. ಇದರಿಂದ ಒಂದು ಭದ್ರವಾದ ಮೇಲ್ಮೈ ಸೃಷ್ಟಿಯಾಗಿ, ಗಾಳಿಯನ್ನು ಕೆಳಕ್ಕೆ ತಳ್ಳುವ ಮೂಲಕ ಹಕ್ಕಿ ಮೇಲಕ್ಕೆ ಏರಲು ಸಹಾಯ ಮಾಡುತ್ತದೆ. ಆದರೆ ನಿಜವಾದ ಚಮತ್ಕಾರ ನಡೆಯುವುದು ರೆಕ್ಕೆಯನ್ನು ಮೇಲೆತ್ತಿದಾಗ.

ಹಕ್ಕಿಯು ತನ್ನ ರೆಕ್ಕೆಯನ್ನು ಮೇಲಕ್ಕೆ ಎತ್ತುವ ಸಮಯದಲ್ಲಿ (Upstroke), ಈ ಗರಿಗಳು ಸ್ವಲ್ಪ ಓರೆಯಾಗಿ ಪರಸ್ಪರ ಬೇರ್ಪಡುತ್ತವೆ. ಇದು ಮನೆಯ ಕಿಟಕಿಗಳಲ್ಲಿರುವ 'ವೆಂಟಿಲೇಟರ್' ಅಥವಾ ಕವಾಟದಂತೆ (Check valve) ಕೆಲಸ ಮಾಡುತ್ತದೆ. ಇದರಿಂದ ಗಾಳಿಯು ಗರಿಗಳ ನಡುವಿನ ಸಣ್ಣ ಸಣ್ಣ ಸಂದುಗಳ ಮೂಲಕ ಸುಲಭವಾಗಿ ಹಾದುಹೋಗುತ್ತದೆ. ಇದನ್ನು ವಿಜ್ಞಾನಿಗಳು 'ಬಯಾಸ್ಡ್ ಪಿಚಿಂಗ್' (biased pitching) ಎಂದು ಕರೆಯುತ್ತಾರೆ. ಇದರಿಂದ ಆಗುವ ಲಾಭವೆಂದರೆ, ರೆಕ್ಕೆಯನ್ನು ಮೇಲೆತ್ತುವಾಗ ಎದುರಾಗುವ ಗಾಳಿಯ ಪ್ರತಿರೋಧವು ಗಣನೀಯವಾಗಿ ಕಡಿಮೆಯಾಗುತ್ತದೆ. ಅದೇ ನಮ್ಮ ಡ್ರೋನ್‌ಗಳ ವಿಷಯಕ್ಕೆ ಬಂದರೆ, ಅವುಗಳ ರೆಕ್ಕೆಗಳು ಘನವಾಗಿದ್ದು (Solid), ಮೇಲೆತ್ತುವಾಗ ಗಾಳಿಯನ್ನು ವಿರೋಧಿಸುತ್ತವೆ. ಇದು ಡ್ರೋನ್ ಅನ್ನು ಕೆಳಕ್ಕೆ ಎಳೆಯುವ 'ನಕಾರಾತ್ಮಕ ಲಿಫ್ಟ್' ಅನ್ನು ಸೃಷ್ಟಿಸುತ್ತದೆ; ಜೊತೆಗೆ ಬ್ಯಾಟರಿಶಕ್ತಿಯನ್ನೂ ವ್ಯರ್ಥ ಮಾಡುತ್ತದೆ.

ಈ ವಿದ್ಯಮಾನವನ್ನು ಅಧ್ಯಯನ ಮಾಡಲು ಸಂಶೋಧಕರು 'ವೈಕಾರ್ 3ಡಿ' (ViCar3D) ಎಂಬ ವಿಶೇಷ ಕಂಪ್ಯೂಟರ್ ತಂತ್ರಾಂಶವನ್ನು ಬಳಸಿದ್ದಾರೆ. ಈ ತಂತ್ರಾಂಶವು ಗಾಳಿಯ ಚಲನೆಯನ್ನು ದ್ರವದಂತೆ ಮಾದರಿ ಮಾಡಿ, ರೆಕ್ಕೆಗಳ ಸುತ್ತ ಅದು ಹೇಗೆ ಹರಿಯುತ್ತದೆ ಎಂಬುದನ್ನು ನಿಖರವಾಗಿ ತೋರಿಸುತ್ತದೆ. ಸಂಶೋಧಕರು ಮೂರು ಸಣ್ಣ ಸಣ್ಣ ಪಟ್ಟಿಗಳನ್ನು ಪಕ್ಷಿಯ ಗರಿಗಳಂತೆ ಜೋಡಿಸಿ, ಅವುಗಳ ಉದ್ದ ಮತ್ತು ವಿನ್ಯಾಸವನ್ನು ಬದಲಿಸುತ್ತಾ ನೂರಾರು ಪ್ರಯೋಗಗಳನ್ನು ಮಾಡಿದರು. ಈ ಸಂಕೀರ್ಣವಾದ ದತ್ತಾಂಶವನ್ನು ವಿಶ್ಲೇಷಿಸಲು ಅವರು ಕೃತಕ ಬುದ್ಧಿಮತ್ತೆ (AI) ತಂತ್ರಜ್ಞಾನವನ್ನೂ ಬಳಸಿಕೊಂಡಿದ್ದಾರೆ.



ಈ ಸಂಶೋಧನೆಯಿಂದ ತಿಳಿದುಬಂದ ಮತ್ತೊಂದು ಮುಖ್ಯ ವಿಷಯವೆಂದರೆ, ಮೊದಲ ಗರಿಯಿಂದ ಹೊರಬರುವ ಗಾಳಿಯ ಅಲೆಗಳು ಅದರ ಹಿಂದಿರುವ ಗರಿಗಳು ಇನ್ನೂ ಉತ್ತಮವಾಗಿ ಕೆಲಸ ಮಾಡಲು ಸಹಾಯ ಮಾಡುತ್ತವೆ. ಅಂದರೆ, ರೆಕ್ಕೆಯ ಪ್ರತಿಯೊಂದು ಭಾಗವೂ ಪರಸ್ಪರ ಸಹಕರಿಸುತ್ತಾ ಇಡೀ ಹಾರಾಟವನ್ನು ಸುಲಭವಾಗಿಸುತ್ತವೆ. ಇದರಿಂದಾಗಿ ಅಷ್ಟೇ ಪ್ರಮಾಣದ ಬ್ಯಾಟರಿ ಶಕ್ತಿಯನ್ನು ಬಳಸಿ, ಅಖಂಡ ರೆಕ್ಕೆಗಳಿಗಿಂತ ಎರಡು ಪಟ್ಟು ಹೆಚ್ಚು ತೂಕವನ್ನು ಹೊರುವ ಅಥವಾ ಹೆಚ್ಚು ಕಾಲ ಹಾರುವ ಸಾಮರ್ಥ್ಯವನ್ನು ಈ ಹೊಸ ವಿನ್ಯಾಸದ ಡ್ರೋನ್‌ಗಳು ಪಡೆಯಲಿವೆ.

ನಮ್ಮ ಕರ್ನಾಟಕದಂತಹ ರಾಜ್ಯಗಳಲ್ಲಿ ಡ್ರೋನ್‌ಗಳ ಬಳಕೆ ಇತ್ತೀಚಿನ ದಿನಗಳಲ್ಲಿ ಹೆಚ್ಚುತ್ತಿದೆ. ಕೃಷಿಯಲ್ಲಿ ಔಷಧವನ್ನು ಸಿಂಪಡಿಸಲು, ಅರಣ್ಯ ಪ್ರದೇಶಗಳ ಮೇಲೆ ನಿಗಾ ಇಡಲು ಅಥವಾ ತುರ್ತು ಸಂದರ್ಭಗಳಲ್ಲಿ ಔಷಧಗಳನ್ನು ಪೂರೈಸಲು ನಾವು ಡ್ರೋನ್‌ಗಳನ್ನು ಅವಲಂಬಿಸುತ್ತಿದ್ದೇವೆ. ಆದರೆ ಕಡಿಮೆ ಬ್ಯಾಟರಿಯಲ್ಲಿ ಹೆಚ್ಚು ದೂರ ಕ್ರಮಿಸುವುದು ಮತ್ತು ಹೆಚ್ಚು ತೂಕದ ವಸ್ತುಗಳನ್ನು ಹೊರುವುದು ಇಂದಿನ ಅಗತ್ಯವಾಗಿದೆ.

ಇಷ್ಟಾದರೂ ಈ ಸಂಶೋಧನೆಯು ಸದ್ಯಕ್ಕೆ ಕಂಪ್ಯೂಟರ್ ಸಿಮ್ಯುಲೇಶನ್‌ಗಳಿಗೆ ಸೀಮಿತವಾಗಿದೆ. ನೈಜ ಜಗತ್ತಿನಲ್ಲಿ ಹಕ್ಕಿಗಳ ಗರಿಗಳು ಕೇವಲ ಚಪ್ಪಟೆಯಾದ ಪಟ್ಟಿಗಳಲ್ಲ, ಅವುಗಳು ಬಾಗುವ ಗುಣ ಹೊಂದಿವೆ ಮತ್ತು ಸಂಕೀರ್ಣವಾದ ಮೂರು ಆಯಾಮದ (3D) ರಚನೆಯನ್ನು ಹೊಂದಿವೆ. ಆದ್ದರಿಂದ, ಈ ವಿನ್ಯಾಸವನ್ನು ನಿಜವಾದ ಡ್ರೋನ್‌ಗಳಲ್ಲಿ ಅಳವಡಿಸುವ ಮೊದಲು ಇನ್ನೂ ಅನೇಕ ಪರೀಕ್ಷೆಗಳು ನಡೆಯಬೇಕಿದೆ. ಏನೇ ಆದರೂ ಲಕ್ಷಾಂತರ ವರ್ಷಗಳಿಂದ ಪ್ರಕೃತಿ ತನ್ನಲ್ಲಿ ಅಡಗಿಸಿಟ್ಟುಕೊಂಡಿದ್ದ ಈ ತಂತ್ರಜ್ಞಾನವು ಭವಿಷ್ಯದ ವಾಯುಯಾನ ಕ್ಷೇತ್ರಕ್ಕೆ ಹೊಸ ದಾರಿಯನ್ನು ತೋರಿಸಿದೆ.

ಪ್ರಕೃತಿಯಿಂದ ಸ್ಫೂರ್ತಿ ಪಡೆದು ತಂತ್ರಜ್ಞಾನವನ್ನು ಅಭಿವೃದ್ಧಿ ಪಡಿಸುವ ಈ ವಿಧಾನಕ್ಕೆ 'ಬಯೋಮಿಮಿಕ್ರಿ' (Biomimicry) ಎಂದು ಹೆಸರು. ಒಂದು ಪುಟ್ಟ ಹಕ್ಕಿಯ ರೆಕ್ಕೆಯಲ್ಲಿ ಇಷ್ಟೊಂದು ವಿಜ್ಞಾನ ಅಡಗಿದೆ ಎನ್ನುವುದು ನಿಜಕ್ಕೂ ಅಚ್ಚರಿಯ ಸಂಗತಿ. ಈ ತಂತ್ರಜ್ಞಾನವು ಪೂರ್ಣ ಪ್ರಮಾಣದಲ್ಲಿ ಬಳಕೆಗೆ ಬಂದರೆ, ಮುಂದಿನ ದಿನಗಳಲ್ಲಿ ಆಕಾಶದಲ್ಲಿ ಹಕ್ಕಿಗಳಂತೆ ರೆಕ್ಕೆ ಬಡಿಯುತ್ತಾ ಹಾರುವ ಸಣ್ಣ ರೋಬೋಟಿಕ್ ಡ್ರೋನ್‌ಗಳನ್ನು ನಾವು ನೋಡಬಹುದು. ❖

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ವಿಜ್ಞಾನ

ಪುನರಾವರ್ತನೆ ಮತ್ತು ಮಾದರಿ ಪ್ರಶ್ನೋತ್ತರ–

ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ

1) ಥೈರಾಕ್ಸಿನ್ ಹಾರ್ಮೋನ್ ಸಂಬಂಧಿಸಿದಂತೆ ಕೆಳಗಿನವುಗಳಲ್ಲಿ ತಪ್ಪಾಗಿರುವ ಹೇಳಿಕೆ ಯಾವುದು? (ಮಾರ್ಚ್ 2020)
ಎ) ಇದು ಕೊಬ್ಬಿನ ಚಯಾಪಚಯ ಕ್ರಿಯೆಯನ್ನು ನಿಯಂತ್ರಿಸುತ್ತದೆ.
ಬಿ) ಇದರ ಕೊರತೆಯಿಂದ ಗಳಗಂಡ ರೋಗ ಉಂಟಾಗುತ್ತದೆ.
ಸಿ) ಇದು ಪ್ಯಾರಾಥೈರಾಯ್ಡ್ ಗ್ರಂಥಿಯಿಂದ ಸ್ರವಿಕೆಯಾಗುತ್ತದೆ.
ಡಿ) ಆಹಾರದಲ್ಲಿನ ಅಯೋಡಿನ್ ಇದರ ಉತ್ಪಾದನೆಗೆ ಅಗತ್ಯವಾಗಿದೆ.
ಉತ್ತರ:– (ಸಿ) ಇದು ಪ್ಯಾರಾಥೈರಾಯ್ಡ್ ಗ್ರಂಥಿಯಿಂದ ಸ್ರವಿಕೆಯಾಗುತ್ತದೆ.

2) ವಿದ್ಯುತ್ ಬಲ್ಬಿನಲ್ಲಿರುವ ತಂತುಗಳಲ್ಲಿ ಬಳಸುವ ಲೋಹ ಯಾವುದು? (ಮಾರ್ಚ್ 2021)
ಎ) ಮ್ಯಾಂಗನೀಸ್ ಬಿ) ಟಂಗಸ್ಟನ್
ಸಿ) ನಿಕ್ಕೆಲ್ ಡಿ) ಕ್ರೋಮಿಯಂ
ಉತ್ತರ:– (ಬಿ) ಟಂಗಸ್ಟನ್

3) ಓಮ್(Ohm) ಎಂಬುದು ಇದರ SI ಮಾನವಾಗಿದೆ? (ಮಾರ್ಚ್ 2021)
ಎ) ವಿದ್ಯುತ್ ವಿಭವಾಂತರ ಬಿ) ರೋಧ
ಸಿ) ವಿದ್ಯುತ್ ಪ್ರವಾಹ ಡಿ) ವಿದ್ಯುದಾವೇಶ
ಉತ್ತರ:– (ಬಿ) ರೋಧ

4) ನ್ಯೂಕ್ಲಿಯರ್ ವಿದ್ಯುತ್ ಕ್ರಿಯಾಕಾರಿಯಲ್ಲಿ ಶಕ್ತಿಯ ಮೂಲ ಯಾವುದು? (ಮಾರ್ಚ್ 2021)
ಎ) ನ್ಯೂಕ್ಲೀಯರ್ ವಿದಳನ ಕ್ರಿಯೆ
ಬಿ) ನಿಯಂತ್ರಿತ ಸರಪಣಿ ನ್ಯೂಕ್ಲಿಯರ್ ವಿದಳನ ಕ್ರಿಯೆ
ಸಿ) ಬಹಿರುಷ್ಣಕ ಕ್ರಿಯೆ
ಡಿ) ನ್ಯೂಕ್ಲಿಯರ್ ಸಮ್ಮಿಲನ ಕ್ರಿಯೆ
ಉತ್ತರ:– (ಬಿ) ನಿಯಂತ್ರಿತ ಸರಪಣಿ ನ್ಯೂಕ್ಲಿಯರ್ ವಿದಳನ ಕ್ರಿಯೆ

5) ಬಹುತೇಕ ಆಹಾರದ ಆಕರಗಳಿಗೂ ಕಾರ್ಬನ್ ಆಧಾರಿತವಾಗಿವೆ.. ಈ ಕಾರ್ಬನ್ ಆಕರಗಳ ಸಂಕೀರ್ಣತೆಯ ಆಧಾರದ ಮೇಲೆ ವಿಭಿನ್ನ ಜೀವಿಗಳು, ವಿಭಿನ್ನ ರೀತಿಯ .... ಬಳಸುತ್ತವೆ.
ಎ) ಆಹಾರ ಪ್ರಮಾಣ ,ಬಿ) ಪೋಷಣಾ ವಿಧಾನ
ಸಿ) ಮರಿ ಪರಿಪಾಲನಾ ವಿಧಾನ
ಡಿ) ಮೇಲಿನ ಯಾವುದೂ ಅಲ್ಲ
ಉತ್ತರ:– (ಬಿ) ಪೋಷಣಾ ವಿಧಾನ

6) ಪತನ ಕಿರಣ, ಪತನ ಬಿಂದುವಿನಲ್ಲಿ ಪ್ರತಿಫಲನದ ಮೇಲ್ಮೈಗೆ ಎಳೆದ ಲಂಬ ಮತ್ತು .... ಈ ಮೂರೂ ಒಂದೇ ಸಮತಲದಲ್ಲಿರುತ್ತದೆ.
ಎ) ಪ್ರತಿಫಲಿತ ಧ್ವನಿ ಬಿ) ಪತನ ಕೋನ
ಸಿ) ಪ್ರತಿಧ್ವನಿತ ಶಬ್ದ ಡಿ) ಪ್ರತಿಫಲಿತ ಕಿರಣ
ಉತ್ತರ:– (ಡಿ) ಪ್ರತಿಫಲಿತ ಕಿರಣ

7) ಶ್ವಾಸನಾಳದ ಮೇಲ್ಭಾಗವು .... ಎಂಬ ಸಣ್ಣ ಕೂದಲಿನಂತಹ ರಚನೆಗಳನ್ನು ಹೊಂದಿದೆ, ಇವು ಉಚ್ಛ್ವಾಸದ ಗಾಳಿಯಲ್ಲಿರಬಹುದಾದ ಸೂಕ್ಷ್ಮ ಜೀವಿಗಳು, ಧೂಳು, ಮತ್ತು ಇತರೇ ಹಾನಿಕಾರಕ ಕಣಗಳನ್ನು ತೆಗೆದುಹಾಕಲು ಸಹಾಯ ಮಾಡುತ್ತದೆ. ಧೂಮ್ರಪಾನವು ಈ ಕೂದಲನ್ನು ನಾಶ ಮಾಡುತ್ತದೆ
ಎ) ಸಿಲಿಯಾ(Cilia) ಬಿ) ನ್ಯೂಕ್ಲಿಯಸ್
ಸಿ) ಜಾಕ್‌ರಿ ಡಿ) ಮೇಲಿನ ಯಾವುದೂ ಅಲ್ಲ
ಉತ್ತರ:– ಎ) ಸಿಲಿಯಾ(Cilia)

8) ಪೈರೋವೇಟ್‌ನ ವಿಭಜನೆಯಿಂದ ಕಾರ್ಬನ್ ಡೈ–ಆಕ್ಸೈಡ್, ನೀರು, ಮತ್ತು ಶಕ್ತಿಯ ಬಿಡುಗಡೆಯಾಗುವ ಸ್ಥಳ............
ಎ) ಕೋಶದ್ರವ್ಯ
ಬಿ) ಮೈಟೋ ಕಾಂಡ್ರಿಯಾ ಸಿ) ಕ್ಲೋರೋಪ್ಲಾಸ್ಟ್
ಡಿ) ನ್ಯೂಕ್ಲಿಯಸ್
ಉತ್ತರ:– ಬಿ) ಮೈಟೋಕಾಂಡ್ರಿಯಾ

9) ಈ ಕೆಳಗಿನ ಯಾವ ಗುಂಪು ಅಲೋಹವಾಗಿದೆ?
ಎ) ಕಾರ್ಬನ್, ಗಂಧಕ, ಅಯೋಡಿನ್, ಬ್ರೋಮಿಯಮ್
ಬಿ) ತಾಮ್ರ, ಅಲ್ಯುಮಿನಿಯಂ, ಬ್ರೋಮಿನ್, ಗಂಧಕ
ಸಿ) ಮೆಗ್ನಿಷಿಯಂ, ಸೋಡಿಯಂ, ಗಂಧಕ, ಕಾರ್ಬನ್
ಡಿ) ಸೀಸ, ಸತು, ಗಂಧಕ, ಬ್ರೋಮಿಯಮ್
ಉತ್ತರ:– (ಎ) ಕಾರ್ಬನ್, ಗಂಧಕ, ಅಯೋಡಿನ್, ಬ್ರೋಮಿಯಮ್

10) ಮಾನವನ ಜಠರವು ....ಉತ್ಪಾದಿಸುತ್ತದೆ. ಹಾಗೂ ಅದೂ ಜೀರ್ಣಕ್ರಿಯೆಯಲ್ಲಿ ಸಹಾಯ ಮಾಡುತ್ತದೆ.
ಎ) ಆಮ್ಲಜನಕ ಬಿ) ಸಾರಜನಕ
ಸಿ) ಹೈಡ್ರೋಕ್ಲೋರಿಕ್ ಆಮ್ಲ ಡಿ) ಪೊಟಾಷಿಯಂ ಸಲ್ಫೇಟ್
ಉತ್ತರ:– (ಸಿ) ಹೈಡ್ರೋಕ್ಲೋರಿಕ್ ಆಮ್ಲ

11) ಕೊಟ್ಟಿರುವ ಬೀಜದಳದ ಚಿತ್ರದಲ್ಲಿ ಮತ್ತು ಎಂದು ಗುರುತಿಸಲಾದ ಭಾಗಗಳು ಕ್ರಮವಾಗಿ .... (ಮಾರ್ಚ್ 2020)



ಎ) ಹಣ್ಣು ಕಾಂಡ
ಬಿ) ಪ್ರಥಮ ಕಾಂಡ ಮತ್ತು ಪ್ರಥಮ ಬೇರು
ಸಿ) ದ್ವಿತೀಯ ಬೇರು ಮತ್ತು ಪ್ರಥಮ ಕಾಂಡ
ಡಿ) ಮೊಗ್ಗು ಮತ್ತು ಎಲೆ
ಉತ್ತರ:– (ಬಿ) ಪ್ರಥಮ ಕಾಂಡ ಮತ್ತು ಪ್ರಥಮ ಬೇರು

12) ಶಾರ್ಟ್ ಸರ್ಕ್ಯೂಟ್ ಸಂದರ್ಭದಲ್ಲಿ ಮಂಡಲದಲ್ಲಿನ ವಿದ್ಯುತ್ ಪ್ರವಾಹವು..................
ಎ) ಗಣನೀಯವಾಗಿ ಕಡಿಮೆಯಾಗುತ್ತದೆ.
ಬಿ) ಬಹಳ ಹೆಚ್ಚಾಗಿರುತ್ತದೆ.
ಸಿ) ಒಮ್ಮೆ ಹೆಚ್ಚು ಒಮ್ಮೆ ಕಡಿಮೆ ಆಗುತ್ತದೆ
ಡಿ) ವಿದ್ಯುತ್ ಸ್ಥಿರವಾಗಿರುತ್ತದೆ
ಉತ್ತರ:–(ಬಿ) ಬಹಳ ಹೆಚ್ಚಾಗಿರುತ್ತದೆ.

13) ವಿದ್ಯುತ್ ಬಲ್ಬಿನಲ್ಲಿರುವ ತಂತುಗಳಲ್ಲಿ ಬಳಸುವ ಲೋಹ ಯಾವುದು?
ಎ) ಮ್ಯಾಂಗನೀಸ್ ಬಿ) ಟಂಗಸ್ಟನ್
ಸಿ) ನಿಕ್ಕೆಲ್ ಡಿ) ಕ್ರೋಮಿಯಂ
ಉತ್ತರ:– (ಬಿ) ಟಂಗಸ್ಟನ್

14) ಈ ಕೆಳಗಿನವುಗಳಲ್ಲಿ ಯಾವುದು ಮನುಷ್ಯರಲ್ಲಿ ಹೆಣ್ಣು ಸಂತಾನೋತ್ಪತ್ತಿ ವ್ಯೂಹದ ಭಾಗವಲ್ಲ
ಎ) ಅಂಡಾಶಯ ಬಿ) ಗರ್ಭಕೋಶ
ಸಿ) ವೀರ್ಯನಾಳ ಡಿ) ಅಂಡನಾಳ
ಉತ್ತರ:– (ಸಿ) ವೀರ್ಯನಾಳ

15) ನೇರ ರೇಖೆಯಲ್ಲಿ ನಡೆಯುವುದು, ಬೈಸಿಕಲ್ ಸವಾರಿ, ಒಂದು ಪೆನ್ಸಿಲ್‌ಅನ್ನು ಎತ್ತಿಕೊಳ್ಳುವುದು ಮುಂತಾದ ಚಟುವಟಿಕೆಗಳನ್ನು ಮಾಡಲು ಯಾರ ಅವಶ್ಯಕತೆ ಇದೆ?
ಎ) ಹಿಮ್ಮೆದುಳಿನ ಮೆಡುಲ್ಲ ಬಿ) ಸೈಟೋಕೈನಿನ್
ಸಿ) ಕಾಲುಗಳು ಡಿ) ಹಿಮ್ಮೆದುಳಿನ ಅನುಮಸ್ತಿಷ್ಕ
ಉತ್ತರ:– (ಡಿ) ಹಿಮ್ಮೆದುಳಿನ ಭಾಗವಾದ ಅನುಮಸ್ತಿಷ್ಕ

ಎಸ್‌ಎಸ್‌ಎಲ್‌ಸಿ–ಪಿಯುಸಿ ಪರೀಕ್ಷೆ ದಿಕ್ಸೂಚಿ

ಪಿಯುಸಿ ಪರೀಕ್ಷೆ ದಿಕ್ಸೂಚಿ

CHEMISTRY

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

REVISION : MODEL QUESTIONS

49) Oxidation of ketones involves carbon-carbon bond cleavage. Name the products formed on oxidation of 2, 5-dimethyl hexane-3-one.

Ans: Being unsymmetrical, ketone oxidation occurs on either side of the C = O group giving a mixture of 2-methyl propanoic acid, 3-methyl butanoic acid and propan-2-one.



50) What does the negative sign in the expression $E^0_{Zn^{2+}/Zn} = -0.76$ V means?

Ans: It implies that Zn is more reactive than hydrogen or it is a stronger reducing agent. In a cell containing zinc electrode and standard hydrogen electrode present in two half cells, zinc will be oxidised to Zn^{2+} ions while H^+ ions will get reduced to hydrogen.

51) Define half-life period of a reaction. Write the relationship between half-life period and initial concentration of zero order reaction.

Ans:- The half-life period of a reaction is the time it takes for the concentration of a reactant to decrease to half of its initial value. It is represented by the symbol t1/2

It is directly proportional to the initial concentration of the reactant.

52) Multipale Choice Questions

1. The product/s formed when phenol is treated with excess of bromine water is/are
(i) o-bromophenol (ii) p- bromophenol
(iii) picric acid (iv) 2, 4, 6- tribromophenol
a) only (iii) b) only (iv)
c) both (i) and (ii) d) only (ii)
Ans:- (b) only (iv)

2. Which of the following observation is shown by 2–methylpropan-2-ol with Lucas reagent?
a) Turbidity will be observed after five minutes.
b) No turbidity will be observed at room temperature.
c) Turbidity will be observed immediately.
d) Turbidity will be observed at room temperature but will disappear after five minutes.
Ans:-(c) Turbidity will be observed immediately.

3. The transition metal present in red pigment of blood haemoglobin is
a) cobalt b) nickel
c) iron d) copper.
Ans:- (c) iron

4. The geometry of the complex Fe(CO)5 is
a) octahedral b) tetrahedral
c) trigonal bipyramidal d) square pyramidal
Ans:- (c) trigonal bipyramidal

5. The oxidation state of Fe in $[Fe(CO)_5]$ is
a) + 2 b) 0
c) + 3 d) + 5
Ans:-(b) 0

6. The gases liberated when primary alcohols react with thionyl chloride are
a) SO_2 and H_2 b) H_2 and HCl
c) SO_2 and HCl d) NO_2 and H_2
Ans:- (c) SO_2 and HC

7. Phenol molecule is less stable than phenoxide ion because
a) phenol resonance structures have charge separation but not in phenoxide ion.
b) phenoxide ion resonance structures have charge separation but not in phenol.
c) both Phenoxide ion and phenol resonance structures have charge separation
d) both Phenoxide ion and phenol resonance structures do not have charge separation
Ans:- (a) phenol resonance structures have charge separation but not in phenoxide ion

8. Glycerol is an example for
a) dihydric alcohol b) dihydric phenol
c) trihydric phenol d) trihydric alcohol
Ans:-(d) trihydric alcohol

9. Tollen's reagent is a
a) silver nitrate solution
b) ammonical silver nitrate solution
c) ammonium nitrate solution
d) silver chloride solution
Ans:- (b) ammonical silver nitrate solution

10)



The IUPAC name of 'B' is

(a) 3-methylbutan-2-ol (b) 2-methylbutan-3-ol

(c) 2-methylbutan-2-ol (d) pentan-2-ol.

Ans:(a): 3-methylbutan-2-ol



11. Carboxylic acids exists in dimeric form even in vapour phase due to
a) Hydrogen bond b) peptide bond
c) ionic bond d) metallic bond
Ans: (a) Hydrogen bond

ಚಿಟಿಕೆ ಸುದ್ದಿ

ಪ್ರಚೋದನಕಾರಿ ವಿಡಿಯೊ ಹಂಚಿಕೆ: ಇಬ್ಬರ ಬಂಧನ

ಉಡುಪಿ: ಕುಂದಾಪುರ ಕಂಡ್ಲೂರು ಪೇಟೆಯ ಕಟಿಂಗ್ ಶಾಪ್‌ನಲ್ಲಿ ಬಿಹಾರ ಮೂಲದ ಬಾಲಕ ನೀಡಿದ ಪ್ರಚೋದನಕಾರಿ ಹೇಳಿಕೆಯ ವಿಡಿಯೊ ಹಂಚಿಕೊಂಡ ಆರೋಪದಲ್ಲಿ ಇಬ್ಬರನ್ನು ಪೊಲೀಸರು ಬಂಧಿಸಿದ್ದಾರೆ.

ಶಶಾಂಕ ಭಂಡಾರಿ

ಪ್ರಮೋದ ಡಿಸೋಜ

ಕಾವ್ರಾಡಿ ಗ್ರಾಮದ ಶಶಾಂಕ ಭಂಡಾರಿ (30), ಉದ್ದಿನಮಕ್ಕಿಯ ಪ್ರಮೋದ ಡಿಸೋಜ (25) ಬಂಧಿತರು.

'ಕಾನೂನು ಸಂಘರ್ಷಕ್ಕೊಳಗಾದ ಬಾಲಕನ ಹೇಳಿಕೆಯನ್ನು, ಸಾರ್ವಜನಿಕವಾಗಿ ಪ್ರಚೋದನೆಗೊಳಿಸಿ ಗಲಾಟೆ ಮಾಡುವ ಉದ್ದೇಶದಿಂದ ಆರೋಪಿಗಳು ಜಾಲತಾಣದಲ್ಲಿ ಹಂಚಿಕೊಂಡಿದ್ದಾರೆ' ಎಂದು ಬಾಲಕನ ತಂದೆ ಕುಂದಾಪುರ ಗ್ರಾಮಾಂತರ ಪೊಲೀಸ್ ಠಾಣೆಗೆ ದೂರು ನೀಡಿದ್ದರು.

ಈ ಸಂಬಂಧ ಕಟಿಂಗ್ ಶಾಪ್ ಎದುರುಗಡೆ ಜನರು ಗುಂಪುಗೂಡಿ, ಬೆದರಿಕೆ ಹಾಕಿದ್ದಾರೆ ಎಂದು ಕಟಿಂಗ್ ಶಾಪ್ ಮಾಲೀಕ ಪ್ರತಿದೂರು ನೀಡಿದ್ದಾರೆ. ಪ್ರಕರಣ ದಾಖಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

'ಎಚ್‌ಡಿಕೆ ಭೇಟಿ ರಾಜಕೀಯ ಕಾರಣಕ್ಕೆ ಅಲ್ಲ'

ಬೆಂಗಳೂರು: 'ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರನ್ನು ರಾಜಕೀಯ ಕಾರಣಕ್ಕೆ ನಾನು ಭೇಟಿ ಮಾಡಿಲ್ಲ' ಎಂದು ಗೃಹ ಸಚಿವ ಜಿ. ಪರಮೇಶ್ವರ ಸ್ಪಷ್ಟಪಡಿಸಿದರು.

ನಗರದ ತಾಜ್ ವೆಸ್ಟೆಂಡ್ ಹೋಟೆಲ್‌ನಲ್ಲಿ ಕುಮಾರಸ್ವಾಮಿ ಅವರನ್ನು ಫೆ. 21ರಂದು ಪರಮೇಶ್ವರ ರಹಸ್ಯವಾಗಿ ಭೇಟಿ ಮಾಡಿ ಕೆಲಹೊತ್ತು ಮಾತುಕತೆ ನಡೆಸಿದ್ದು ರಾಜಕೀಯ ವಲಯದಲ್ಲಿ ಚರ್ಚೆಗೆ ಗ್ರಾಸವಾಗಿತ್ತು.

ಈ ಬಗ್ಗೆ ಪ್ರತಿಕ್ರಿಯಿಸಿದ ಪರಮೇಶ್ವರ, 'ಕೈಗಾರಿಕೆ ಕುರಿತಂತೆ ಮಾತುಕತೆ ನಡೆಸಲು ಭೇಟಿ ಮಾಡಿದ್ದೆ. ಈ ಹಿಂದೆ ನಾವು ಒಟ್ಟಾಗಿ ಸರ್ಕಾರ ನಡೆಸಿದವರು. ಭೇಟಿ ಆಗಿರುವುದೇ ತಪ್ಪು ಎನ್ನುವುದು ಸರಿಯಲ್ಲ. ಮೈತ್ರಿ ಸರ್ಕಾರದ ಅವಧಿಯಲ್ಲೂ ನಮ್ಮ ಸಿದ್ಧಾಂತವನ್ನು ನಾವು ಕಾಪಾಡಿಕೊಂಡಿದ್ದೇವೆ. ಅವರ ಸಿದ್ಧಾಂತವನ್ನು ಅವರು ಕಾಪಾಡಿಕೊಂಡಿದ್ದರು' ಎಂದರು.

ಬಂದ್: ಶಾಸಕ, ಸಂಸದರಿಗೆ ತರಾಟೆ

ಪರಿಸರ ಮಾಲಿನ್ಯ: ಕಾರ್ಖಾನೆ ವಿಸ್ತರಣೆ ವಿರೋಧಿಸಿ ಕೊಪ್ಪಳದಲ್ಲಿ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಮಾಲಿನ್ಯ ಖಂಡಿಸಿ ಜಿಲ್ಲೆಯಲ್ಲಿ ಹೋರಾಟ
- ವಿವಿಧ ಮಠಾಧೀಶರು, ರೈತ ನಾಯಕರು ಭಾಗಿ
- ದಿನಪೂರ್ತಿ ವ್ಯಾಪಾರ ವಹಿವಾಟು ಬಂದ್

ಕೊಪ್ಪಳ: ಜಿಲ್ಲಾ ಕೇಂದ್ರದ ಸಮೀಪದಲ್ಲಿ ಅಪಾಯಕಾರಿ ಕಪ್ಪು ಕಣಗಳ ದೂಳಿನಿಂದ ಪರಿಸರ ಮಾಲಿನ್ಯ ಉಂಟು ಮಾಡುತ್ತಿರುವ ಕಾರ್ಖಾನೆಗಳ ವಿಸ್ತರಣೆ ವಿರೋಧಿಸಿ ಮಂಗಳವಾರ ನಡೆದ ಕೊಪ್ಪಳ ಬಂದ್ ವೇಳೆ ಸಾರ್ವಜನಿಕರು ಶಾಸಕ, ಸಂಸದರನ್ನು ತರಾಟೆಗೆ ತೆಗೆದುಕೊಂಡರು.

ಗವಿಮಠ ಬಳಿಯಿಂದ ಅಶೋಕ ವೃತ್ತದ ತನಕ ಮೆರವಣಿಗೆ ನಡೆಯಿತು. ಈ ವೇಳೆ ಶಾಸಕ ರಾಘವೇಂದ್ರ ಹಿಟ್ನಾಳ, ಸಂಸದ ರಾಜಶೇಖರ ಹಿಟ್ನಾಳ, ಮಾಜಿ ಸಂಸದ ಸಂಗಣ್ಣ ಕರಡಿ ಅವರನ್ನು ಜನ ಸುತ್ತುವರಿದು ವಾಗ್ವಾಳಿ ನಡೆಸಿದರು.

'ಮಾಲಿನ್ಯದಿಂದ ಜನ ನಿತ್ಯ ನರಕಯಾತನೆ ಅನುಭವಿಸುವಂತಾಗಿದೆ. ಸದನದಲ್ಲಿ ಈ ಕುರಿತು ಚಕಾರ ಎತ್ತಿಲ್ಲ' ಎಂದು ಶಾಸಕ ಹಿಟ್ನಾಳ ಅವರೊಂದಿಗೆ ವಾಗ್ವಾದ ನಡೆಸಿದರು. ಮಧ್ಯ ಪ್ರವೇಶಿಸಿದ ಪೊಲೀಸರು ಹೋರಾಟ ನಿರತರನ್ನು ಸಮಾಧಾನ ಪಡಿಸಿದರು.

ಶಾಸಕ, ಸಂಸದ, ಮಾಜಿ ಸಂಸದರು ವೇದಿಕೆ ಕಾರ್ಯಕ್ರಮದಲ್ಲಿ ಮಾತನಾಡಲು ವಿರೋಧ ವ್ಯಕ್ತವಾಯಿತು.

'ಜನಪ್ರತಿನಿಧಿಗಳಿಂದಲೇ ಸಮಸ್ಯೆಯಾಗಿದ್ದು, ಅವರು ಮಾತನಾಡುವುದು ಬೇಡ' ಎಂದು ಆಕ್ರೋಶ ಹೊರ ಹಾಕಿದರು.

> ಶಾಸಕರು, ಸಂಸದರು ಪರಿಸರ ಮಾಲಿನ್ಯದ ವಿಚಾರವನ್ನು ಸರ್ಕಾರದ ಗಮನಕ್ಕೆ ತರಬೇಕು. ಇಲ್ಲವಾದರೆ ನಿಮಗೆ ಮತ ಹಾಕುವುದಿಲ್ಲ ಎಂದು ಜನ ಹೇಳುತ್ತಾರೆ
> **ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ,** ಸಾಣೇಹಳ್ಳಿ

'ಸದನದಲ್ಲಿ ಒಮ್ಮೆಯೂ ಮಾತನಾಡದ ಶಾಸಕ ಹಿಟ್ನಾಳ ಕಾರ್ಖಾನೆಗಳ ಪರವಾಗಿ ಇದ್ದಾರೆಯೇ' ಎಂದು ಪ್ರಶ್ನಿಸಿದರು. ಕೊರಳಲ್ಲಿ ಧರಿಸಿರುವ ಹಸಿರು ಟವೆಲ್ ತೆಗೆಯುವಂತೆ ಒತ್ತಾಯಿಸಿದರು.

'ಜನಪ್ರತಿನಿಧಿಗಳನ್ನು ನಾವೇ ಕರೆದಿದ್ದೇವೆ. ಅಗೌರವ ತೋರಬೇಡಿ' ಎಂದು ಬಂದ್ ಪ್ರತಿಭಟನೆ ನೇತೃತ್ವ ವಹಿಸಿದ್ದ ಜಿಲ್ಲಾ ಬಚಾವೋ ಆಂದೋಲನ ಸಮಿತಿ ಮತ್ತು ಪರಿಸರ ಹಿತರಕ್ಷಣಾ ಜಂಟಿ ಕ್ರಿಯಾ ವೇದಿಕೆಯ ಪ್ರಮುಖರು ಬಾಧಿತ ಗ್ರಾಮಗಳ ಜನರನ್ನು ಸಮಾಧಾನಪಡಿಸಿದರೂ ಜನರು ಸುಮ್ಮನಾಗಲಿಲ್ಲ.

ರಾಜ್ಯದ ವಿವಿಧ ಮಠಗಳ ಮಠಾಧೀಶರು ಹಾಗೂ ರೈತ ನಾಯಕರು ಪಾಲ್ಗೊಂಡಿದ್ದರು. ದಿನಪೂರ್ತಿ ವ್ಯಾಪಾರ ವಹಿವಾಟು ಬಂದ್ ಆಗಿತ್ತು. ಬಸ್ ನಿಲ್ದಾಣ ಬಿಕೊ ಎನ್ನುತ್ತಿತ್ತು.

ಕೊಪ್ಪಳ ಬಂದ್ ಮೆರವಣಿಗೆ ವೇಳೆ ಶಾಸಕ, ಸಂಸದರನ್ನು ಜನ ಸುತ್ತುವರಿದು ತರಾಟೆಗೆ ತಗೆದುಕೊಂಡರು
ಪ್ರಜಾವಾಣಿ ಚಿತ್ರ: ಭರತ್ ಕಂದಕೂರ

ಓಎಂಸಿ: ಗಡಿ ಗುರುತಿಗೆ ಮತ್ತೆ ಆರು ವಾರಗಳ ಕಾಲಾವಕಾಶ

ಪ್ರಜಾವಾಣಿ ವಾರ್ತೆ

ನವದೆಹಲಿ: ಓಬಳಾಪುರಂ ಗಣಿ ಕಂಪನಿಯ (ಓಎಂಸಿ) ಗಣಿ ಅಕ್ರಮ ಪ್ರಕರಣಕ್ಕೆ ಸಂಬಂಧಿಸಿ ದಂತೆ ಗುತ್ತಿಗೆ ಪಡೆದ ಪ್ರದೇಶಗಳು ಮತ್ತು ಮೀಸಲು ಅರಣ್ಯ ಪ್ರದೇಶಗಳ ಗಡಿಗಳನ್ನು ಗುರುತಿಸಲು ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಸುಧಾಂಶು ಧುಲಿಯಾ ನೇತೃತ್ವದ ಸಮಿತಿಗೆ ಮತ್ತೆ ಆರು ವಾರಗಳ ಕಾಲಾವಕಾಶವನ್ನು ಸುಪ್ರೀಂ ಕೋರ್ಟ್ ಮಂಗಳವಾರ ನೀಡಿದೆ.

ಓಎಂಸಿ ಗಣಿ ಅಕ್ರಮ ಪ್ರಕರಣದಲ್ಲಿ ವಿವಿಧ ಅರ್ಜಿಗಳ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಹಾಗೂ ನ್ಯಾಯಮೂರ್ತಿ ಜಾಯ್ ಮಲ್ಯ ಬಾಗ್ಚಿ ಅವರ ಪೀಠವು ಸಮಿತಿಯ ಮನವಿಯನ್ನು ಪರಿಗಣಿಸಿತು. 'ಸಮಿತಿಯು ಈಗಾಗಲೇ ತನ್ನ ಕಾರ್ಯ ಆರಂಭಿಸಿದೆ. ಆದರೆ, ತನ್ನ ವರದಿಯನ್ನು ಅಂತಿಮಗೊಳಿಸಲು ಹೆಚ್ಚಿನ ಸಮಯ ಬೇಕಾಗುತ್ತದೆ' ಎಂದು ಮನವಿ ಸಲ್ಲಿಕೆಯಾಗಿತ್ತು.

ಸಮಿತಿಗೆ ನಿಯೋಜಿಸಲಾದ ಜವಾಬ್ದಾರಿಯ ಸ್ವರೂಪ ಪರಿಗಣಿಸಿ ತನ್ನ ವರದಿ ಸಲ್ಲಿಸಲು ಆರು ವಾರಗಳ ಸಮಯ ನೀಡಲು ಒಲವು ತೋರಿದ್ದೇವೆ ಎಂದು ಪೀಠ ಹೇಳಿತು.

ಆಂಧ್ರಪ್ರದೇಶ ಸರ್ಕಾರದ ಪರ ಹಿರಿಯ ವಕೀಲ ಸಿದ್ಧಾರ್ಥ್ ಲೂತ್ರಾ, ಕರ್ನಾಟಕವನ್ನು ಹೆಚ್ಚುವರಿ ಅಡ್ವೊಕೇಟ್ ಜನರಲ್ ನಿಶಾಂತ್ ಪಾಟೀಲ್ ಪ್ರತಿನಿಧಿಸಿದರು.

ನ್ಯಾಯಮೂರ್ತಿ ಧುಲಿಯಾ ನೇತೃತ್ವದ ಸಮಿತಿಯನ್ನು 2025ರ ಸೆಪ್ಟೆಂಬರ್‌ನಲ್ಲಿ ರಚಿಸಿದ್ದ ಸುಪ್ರೀಂ ಕೋರ್ಟ್, ವರದಿ ಸಲ್ಲಿಕೆಗೆ ಮೂರು ತಿಂಗಳ ಕಾಲಾವಕಾಶ ನೀಡಿತ್ತು.

ಓಬಳಾಪುರಂ ಗಣಿ ಕಂಪನಿಯ ಗಣಿ ಗುತ್ತಿಗೆ ಪ್ರದೇಶಗಳನ್ನು ಖರೀದಿಸಿದ್ದ ರಾಜ್ಯದ ಆಗಿನ ಸಚಿವ ಜಿ. ಜನಾರ್ದನ ರೆಡ್ಡಿ ಕುಟುಂಬ, ಅಂತರ ರಾಜ್ಯ ಗಡಿ ಗುರುತುಗಳನ್ನೇ ಸ್ಫೋಟಿಸಿ, ರಾಜ್ಯದ ಭೂಪ್ರದೇಶವನ್ನು ಅತಿಕ್ರಮಿಸಿ ಅಕ್ರಮ ಗಣಿಗಾರಿಕೆ ನಡೆಸಿದ ಆರೋಪ 2007ರಲ್ಲಿ ಕೇಳಿಬಂದಿತ್ತು.ಈ ಕುರಿತು ತನಿಖೆ ನಡೆಸಿದ್ದ ಹಿಂದಿನ ಲೋಕಾಯುಕ್ತ ಎನ್. ಸಂತೋಷ್ ಹೆಗ್ಡೆ ಅವರು ವರದಿ ಸಲ್ಲಿಸಿದ್ದರು. ಸುಪ್ರೀಂ ಕೋರ್ಟ್ ಆದೇಶದಂತೆ ತನಿಖೆ ನಡೆಸಿದ್ದ ಕೇಂದ್ರ ಉನ್ನತಾಧಿಕಾರ ಸಮಿತಿ (ಸಿಇಸಿ), ಅಕ್ರಮ ಗಣಿಗಾರಿಕೆಯಿಂದ ಅಂತರ ರಾಜ್ಯ ಗಡಿ ಗುರುತುಗಳು ನಾಶವಾಗಿರುವುದನ್ನು ದೃಢಪಡಿಸಿತ್ತು.

ಸಿ.ಎಂ ಬದಲು: ಮಹದೇವಪ್ಪಗೆ ಮಾಹಿತಿ

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ವ್ಯಂಗ್ಯ– ಪಕ್ಷದ ತೀರ್ಮಾನ ಅಂತಿಮ

ಪ್ರಜಾವಾಣಿ ವಾರ್ತೆ

ಡಿ.ಕೆ. ಶಿವಕುಮಾರ್

ಬೆಂಗಳೂರು: 'ಮುಖ್ಯಮಂತ್ರಿ ಬದಲಾವಣೆ ವಿಚಾರದ ಬಗ್ಗೆ ನನಗೆ ಮಾಹಿತಿ ಇಲ್ಲ. ಸಚಿವ ಎಚ್.ಸಿ. ಮಹದೇವಪ್ಪ ಅವರೇ ಹೈಕಮಾಂಡ್ ಆಗಿರುವುದರಿಂದ ಅವರಿಗೆ ಹೆಚ್ಚಿನ ಮಾಹಿತಿ ತಿಳಿದಿರಬೇಕು' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ವ್ಯಂಗ್ಯವಾಡಿದರು.

ಸುದ್ದಿಗಾರರ ಪ್ರಶ್ನೆಗಳಿಗೆ ಪ್ರತಿಕ್ರಿಯಿಸಿದ ಅವರು, 'ಹೀಗಾಗಿ, ದಲಿತ ಮುಖ್ಯಮಂತ್ರಿ ವಿಚಾರವನ್ನು ಅವರು ಪ್ರಸ್ತಾಪಿಸಿದ್ದಾರೆ' ಎಂದು ಕೆಣಕಿದರು.

'ಹೈಕಮಾಂಡ್ ನಾಯಕರು ನಿಮ್ಮನ್ನು ಮತ್ತು ಮುಖ್ಯಮಂತ್ರಿ ಅವರನ್ನು ದೆಹಲಿಗೆ ಆಹ್ವಾನಿಸಿದ್ದಾರೆಯೇ' ಎಂಬ ಪ್ರಶ್ನೆಗೆ, 'ನನಗೆ ಯಾವುದೇ ಕರೆ ಬಂದಿಲ್ಲ. ಆದರೆ, ಇಲಾಖೆಗೆ ಸಂಬಂಧಿಸಿದ ಕೆಲಸಗಳ ಮೇಲೆ ನಾನು ದೆಹಲಿಗೆ ಹೋಗಬೇಕಾಗಿದೆ' ಎಂದರು.

'ಕೆಪಿಸಿಸಿ ಅಧ್ಯಕ್ಷರಾಗಿದ್ದರೂ ಸಚಿವರ ಹೇಳಿಕೆಗಳ ಬಗ್ಗೆ ನೀವು ಮೌನವಾಗಿದ್ದೀರಿ' ಎಂದಾಗ, 'ಸಚಿವರು ಮತ್ತು ಶಾಸಕರನ್ನು ನಿಯಂತ್ರಣ ಮಾಡಬೇಕಿರುವುದು ಮುಖ್ಯಮಂತ್ರಿ. ಪಕ್ಷದ ವಿಚಾರವಾಗಿ ದೆಹಲಿಗೆ ಮಾಹಿತಿ ನೀಡುವ ಕೆಲಸವನ್ನು ನಾನು ಮಾಡುತ್ತಿದ್ದೇನೆ' ಎಂದರು.

'ಸತೀಶ ಜಾರಕಿಹೊಳಿ ಅವರು ನಿಮ್ಮ ಜತೆ ಚರ್ಚೆ ಮಾಡಿದ್ದಾರಾ' ಎಂಬ ಪ್ರಶ್ನೆಗೆ, 'ಜಾರಕಿಹೊಳಿ ನನ್ನ ಜತೆ ಕಾರ್ಯಾಧ್ಯಕ್ಷರಾಗಿ ಕೆಲಸ ಮಾಡಿದ್ದಾರೆ. ನಾವು ಸಮಾನ ಮನಸ್ಕರು. ವಾರಕ್ಕೊಮ್ಮೆ ಮಾತನಾಡುತ್ತಿರುತ್ತೇವೆ. ಪಕ್ಷವನ್ನು ಮತ್ತೆ ಅಧಿಕಾರಕ್ಕೆ ತರಲು ನಾವೆಲ್ಲ ಯೋಜನೆ ರೂಪಿಸುತ್ತಿದ್ದೇವೆ' ಎಂದರು.

'ಮೊದಲ ಬಾರಿಗೆ ಆಯ್ಕೆಯಾದ ಶಾಸಕರಲ್ಲಿ ಕನಿಷ್ಠ ಐವರಿಗೆ ಮಂತ್ರಿ ಸ್ಥಾನ ನೀಡಬೇಕು' ಎಂದು ಆಗ್ರಹಿಸಿ ಹೈಕಮಾಂಡ್‌ಗೆ 31 ಶಾಸಕರು ಪತ್ರ ಬರೆದಿರುವ ಬಗ್ಗೆ ಕೇಳಿದಾಗ, 'ನನಗೆ ಆ ಪತ್ರ ತಲುಪಿಲ್ಲ. ಎಲ್ಲರಿಗೂ ಮಂತ್ರಿಯಾಗುವ ಆಸೆ ಇರುತ್ತದೆ. ಮೋದಿ ಅವರು ಶಾಸಕರಾಗದೇ ಮುಖ್ಯಮಂತ್ರಿ ಆಗಲಿಲ್ಲವೇ. ಶಾಸಕರು ಕೇಳುವುದರಲ್ಲಿ ತಪ್ಪೇನೂ ಇಲ್ಲ' ಎಂದರು.

'ಮೊದಲ ಬಾರಿಗೆ ಶಾಸಕರಾದಾಗ ಮಂತ್ರಿಯಾದವರಲ್ಲಿ ನಾನೂ ಒಬ್ಬ. ಹೊಸ ಪೀಳಿಗೆ ಬೆಳೆಯಬೇಕು. ನಾವು ಎಷ್ಟು ದಿನ ಗೂಟ ಹೊಡೆದುಕೊಂಡು ಕುಳಿತುಕೊಳ್ಳಲು ಸಾಧ್ಯ? ಹೊಸಬರು ಸಂಪುಟಕ್ಕೆ ಬರಬೇಕು ಎಂದು ಬೆಂಬಲಿಸುವವರಲ್ಲಿ ನಾನೂ ಇದ್ದೇನೆ. ಈ ಬಗ್ಗೆ ಪಕ್ಷ ತೀರ್ಮಾನ ಮಾಡಲಿದೆ' ಎಂದರು.

ಮಂತ್ರಿಮಂಡಲ ಮಾಡುವೆ ಎಂದಿಲ್ಲ– ಸ್ಪಷ್ಟನೆ

'ನಾನು ಮಂತ್ರಿಮಂಡಲ ರಚನೆ ಮಾಡುತ್ತೇನೆ ಎಂದು ಹೇಳಿಲ್ಲ. ಸಚಿವ ಸಂಪುಟ ವಿಸ್ತರಣೆ ಮಾಡುತ್ತೇನೆ ಎಂದು ಮುಖ್ಯಮಂತ್ರಿ ಹೇಳಿದ್ದಾರೆ' ಎಂದು ಡಿ.ಕೆ. ಶಿವಕುಮಾರ್ ಹೇಳಿದರು.

'ನಿಮ್ಮ ಮಂತ್ರಿಮಂಡಲದಲ್ಲಿ ಹೊಸ ಶಾಸಕರು ಸೇರ್ಪಡೆ ಆಗಲಿದ್ದಾರೆಯೇ' ಎಂದು ಸುದ್ದಿಗಾರರು ಪ್ರಶ್ನಿಸಿದಾಗ, ಅವರು ಮೇಲಿನಂತೆ ಉತ್ತರಿಸಿದರು.

'ಮುಖ್ಯಮಂತ್ರಿ ಅವರು ಸಂಪುಟ ವಿಸ್ತರಣೆ ಮಾಡುವ ಕಾರಣಕ್ಕೆ ಕೆಲವರು ಪತ್ರ ಬರೆಯುತ್ತಾರೆ, ದೆಹಲಿಗೆ ಹೋಗುತ್ತಾರೆ, ಹೊರಗಡೆ ಹೋಗುತ್ತಾರೆ' ಎಂದು ಹೇಳಿದರು.

'ಹೊಸ ಶಾಸಕರ ಬೇಡಿಕೆ ತಪ್ಪೇನೂ ಅಲ್ಲ'

'ಮೊದಲ ಬಾರಿ ಆಯ್ಕೆಯಾಗಿರುವ ಶಾಸಕರ ಬೇಡಿಕೆ ತಪ್ಪೇನೂ ಅಲ್ಲ. ಹೊಸಬರನ್ನು ಸಂಪುಟಕ್ಕೆ ತೆಗೆದುಕೊಳ್ಳುವುದು ಹೈಕಮಾಂಡ್ ಮತ್ತು ಮುಖ್ಯಮಂತ್ರಿಗೆ ಬಿಟ್ಟ ವಿಚಾರ' ಎಂದು ಗೃಹ ಸಚಿವ ಜಿ. ಪರಮೇಶ್ವರ ಹೇಳಿದರು.

'ಪಕ್ಷದಿಂದ ಗೆದ್ದವರೆಲ್ಲ ಸಚಿವರಾಗಲು ಅರ್ಹರಿದ್ದಾರೆ. ಆದರೆ, ಸಂಪುಟದಲ್ಲಿ 33 ಸ್ಥಾನ ಅಷ್ಟೆ ಇದೆ. ಹೊಸಬರೂ ಬೇಕು, ಹಳಬರೂ ಬೇಕು. ಪುನರ್‌ರಚನೆ ಬಗ್ಗೆ ಚರ್ಚೆ ನಡೆಯುತ್ತಿರುವುದರಿಂದ ಶಾಸಕರು ಪತ್ರ ಬರೆದಿರಬಹುದು. ಸಂಪುಟ ಪುನರ್‌ರಚನೆಯಾಗುತ್ತೊ, ನಾಯಕತ್ವ ಬದಲಾವಣೆಯಾಗುತ್ತೊ ಗೊತ್ತಿಲ್ಲ' ಎಂದರು.

ದಲಿತ ಮುಖ್ಯಮಂತ್ರಿ ಕೂಗು ಮತ್ತೆ ಮುಂಚೂಣಿಗೆ ಬಂದಿರುವ ವಿಚಾರವಾಗಿ ಪ್ರತಿಕ್ರಿಯಿಸಿದ ಪರಮೇಶ್ವರ, 'ಈ ವಿಷಯ ಇನ್ನೂ ಹೆಚ್ಚು ಚರ್ಚೆ ಆಗಲಿ. ಅದರಲ್ಲಿ ನನಗೆ ತಪ್ಪು ಕಾಣಿಸುವುದಿಲ್ಲ' ಎಂದರು.

ಬಳ್ಳಾರಿ ನಗರದ ಅಧಿದೇವತೆ ಕನಕ ದುರ್ಗಮ್ಮದೇವಿಯ ಸಿಡಿಬಂಡಿ ರಥೋತ್ಸವ ಮಂಗಳವಾರ ಸಂಜೆ ಸಾವಿರಾರು ಭಕ್ತರ ಜಯಘೋಷಗಳ ನಡುವೆ ವಿಜೃಂಭಣೆಯಿಂದ ನೆರವೇರಿತು ಚಿತ್ರ– ಮುರಳಿಕಾಂತ ರಾವ್

'ಪತ್ರ ಹಳೆಯದು'

ಅಶೋಕ ಮನಗೂಳಿ

ಸಿಂದಗಿ: 'ಸಚಿವ ಸಂಪುಟ ಪುನರ್ ರಚನೆ ಮಾಡುವ ವೇಳೆ ಮೊದಲ ಬಾರಿಗೆ ಗೆದ್ದ 8 ಶಾಸಕರಿಗೆ ಹೊಸಬರಿಗೆ ಅವಕಾಶ ನೀಡಿ ಎಂದು ಒತ್ತಾಯಿಸಿ 31 ಶಾಸಕರು ಕಾಂಗ್ರೆಸ್ ಹೈಕಮಾಂಡ್‌ಗೆ ಬರೆದ ಪತ್ರ ಹಳೆಯದು. ಈ ಪತ್ರಕ್ಕೆ ನಾನೂ ಸಹಿ ಮಾಡಿರುವೆ' ಎಂದು ಸಿಂದಗಿ ಶಾಸಕ ಅಶೋಕ ಮನಗೂಳಿ ತಿಳಿಸಿದರು.

ಉದ್ಯೋಗ ವಾಣಿ

ಭಾರತ್ ಇಲೆಕ್ಟ್ರಾನಿಕ್ಸ್ BHARAT ELECTRONICS QUALITY. TECHNOLOGY. INNOVATION.
ಟೆಕ್ ಪರ್ಫೆಕ್ಟ್ ಸಲ್ಯೂಷನ್ಸ್ ದೇಶದ ರಕ್ಷಣೆಗಾಗಿ
ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್
(ರಕ್ಷಣಾ ಮಂತ್ರಾಲಯದ ಅಧೀನ ಭಾರತ ಸರ್ಕಾರದ ಒಂದು ಉದ್ಯಮ)
(CIN: L32309KA1954GOI000787)

ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್, ಒಂದು ನವರತ್ನ ಕಂಪನಿ ಮತ್ತು ರಕ್ಷಣಾ ಮಂತ್ರಾಲಯದ ಅಧೀನ ಭಾರತದ ಪ್ರಮುಖ ವೃತ್ತಿಪರ ಎಲೆಕ್ಟ್ರಾನಿಕ್ಸ್ ಕಂಪನಿಯ ಎನ್ ಎಸ್ (ಎಸ್ ಮತ್ತು ಸಿ ಎಸ್) ಎಸ್ ಬಿ. ಯು ಗಾಗಿ ಬೆಂಗಳೂರು ಸಂಕೀರ್ಣಕ್ಕೆ ನಿಯುಕ್ತಿಗೊಳಿಸಲು **ಟ್ರಾನ್ಸ್ ಡ್ಯೂಸರ್ಸ ಯೋಜನೆಗಳಿಗೆ ಸಲಹೆಗಾರರ** ಹುದ್ದೆಯ ಅವಶ್ಯಕತೆ ಇದೆ. ಅರ್ಜಿ ಸಲ್ಲಿಸಲು ಇಚ್ಛಿಸುವವರು ವಿವರಣಾತ್ಮಕ ಜಾಹೀರಾತಿಗಾಗಿ, ದಯವಿಟ್ಟು ನಮ್ಮ ಅಧಿಕೃತ ಜಾಲತಾಣ **www.bel-india.in** ನಲ್ಲಿನ CAREERS ಲಿಂಕ್ ಅನ್ನು ವೀಕ್ಷಿಸಿ.
ಸಹಿ/-
ದಿನಾಂಕ : ೨೫.೦೨.೨೦೨೬ ವ್ಯವಸ್ಥಾಪಕರು – ಮಾ. ಸಂ./ನೌಕಾ. ವ್ಯ.
ಹರ್ ಏಕ್ ಕಾಮ್ ದೇಶ್ ಕೆ ನಾಮ್

ವಿಜಯ್ ಸೇಲ್ಸ್ vijay sales
WE ARE HIRING!
Vijay Sales is among India's leading consumer durables retail chains, operating 167 showrooms Pan India.
Join Our Team - Freshers are most Welcome
- FLOOR MANAGERS
- SR.SALES EXECUTIVES
- SALES EXECUTIVES
- CASHIERS

ARE YOU THE ONE WE'RE LOOKING FOR?
PUC or above, with minimum 1-2 years of retail experience and aged between 21-27 years. College and University students are also welcome.

WALK IN FOR AN INTERVIEW
25th Feb, Wednesday, Timing : 12pm - 5pm
Vijay Sales, Rajaji Nagar Showroom, Modi Hospital Road, Opp. Kadamba veg Restaurant, Rajajinagar, Bangalore- 560086.
26th & 27th Feb, Thursday and Friday, Timing : 12pm - 5pm
Vijay Sales (India) Pvt Ltd (Regional Office) Rajatha Plaza Marathahalli Village Old Airport Road, Varthur Hobli Bangalore - 560037
PLEASE BRING YOUR UPDATED RESUME, PASSPORT SIZED PHOTOGRAPH, PANCARD AND AADHAR CARD COPY
Interested candidates can mail their resumes on hrbengaluru@vijaysales.com

Federal Bank

ನಮ್ಮ ತಂಡಕ್ಕೆ ಸೇರಿ!
ನಿಮ್ಮ ವೃತ್ತಿ ಜೀವನವನ್ನು ಹೊಸ ಎತ್ತರಕ್ಕೆ ಕೊಂಡೊಯ್ಯಿರಿ!

ಹುದ್ದೆ	ಅಸೋಸಿಯೇಟ್ ಆಫೀಸರ್ (ಸೇಲ್ಸ್)
ಅರ್ಹತೆ	ಪದವಿ
ವಾರ್ಷಿಕ ವೇತನ	₹6.70 ಲಕ್ಷದವರೆಗೆ
ಕೆಲಸದ ಸ್ಥಳ	ನೇಮಕಾತಿ ಪ್ರಕಟಣೆಯಂತೆ
ಅರ್ಜಿಯ ಕೊನೆಯ ದಿನಾಂಕ	04.03.2026

ಹೆಚ್ಚಿನ ಮಾಹಿತಿಗೆ: federal.bank.in/careers ಅಥವಾ QR ಕೋಡ್ ಸ್ಕ್ಯಾನ್ ಮಾಡಿ

ದೇಗುಲದಿಂದ ಪರಿಶಿಷ್ಟ ಮಹಿಳೆ ಹೊರಕ್ಕೆ: ಅರ್ಚಕ ಬಂಧನ

ಪ್ರಜಾವಾಣಿ ವಾರ್ತೆ

ಕುಣಿಗಲ್ (ತುಮಕೂರು): ದೇವಸ್ಥಾನಕ್ಕೆ ತೆರಳಿದ್ದ ಪರಿಶಿಷ್ಟ ಜಾತಿಯ ಮಹಿಳೆ, ಆಕೆಯ ತಾಯಿ ಮತ್ತು ತಂಗಿಯನ್ನು ದೇವಸ್ಥಾನದ ಅರ್ಚಕ ಮತ್ತಿತರರು ಸೇರಿ ದೇವಸ್ಥಾನದಿಂದ ಹೊರದಬ್ಬಿದ್ದಾರೆ.

ಬೆಂಗಳೂರು–ಮಾಗಡಿ ರಸ್ತೆಯ ಅಂದ್ರಳ್ಳಿ ನಿವಾಸಿ ರೋಜಾ ತನ್ನ ತವರುಮನೆ ಇರುವ ಯಡಿಯೂರು ಹೋಬಳಿ ತಿಗಳರಪಾಳ್ಯ ಗ್ರಾಮಕ್ಕೆ ಮಾರಮ್ಮದೇವಿ ಹಬ್ಬಕ್ಕೆ ಬಂದಿದ್ದರು.

ಸೋಮವಾರ ರಾತ್ರಿ ಗ್ರಾಮದ ವೆಂಕಟರಮಣ ಮೂಡಲಗಿರಿ ದೇವಾಲಯಕ್ಕೆ ತಾಯಿ ಮತ್ತು ತಂಗಿಯನ್ನು ಕರೆದುಕೊಂಡು ಹೋಗಿದ್ದರು.

'ದೇವಸ್ಥಾನದ ಒಳಗೆ ಪ್ರವೇಶಿಸಿದಾಗ ಅರ್ಚಕ ಹನುಮಯ್ಯ, ಗ್ರಾಮದ ಜಯಲಕ್ಷ್ಮಮ್ಮ, ಶ್ರೀನಿವಾಸ್ ಹಾಗೂ ಇತರ 16 ಜನ ಸೇರಿಕೊಂಡು ಹೊರ ಹೋಗುವಂತೆ ನಿಂದಿಸಿದ್ದಾರೆ' ಎಂದು ಮಹಿಳೆ ಅಮೃತೂರು ಠಾಣೆಗೆ ದೂರು ನೀಡಿದ್ದಾರೆ.

'ನೀನು ಕೀಳು ಜಾತಿಯವಳು. ದೇವಸ್ಥಾನದ ಒಳಗೆ ಬರಬಾರದು' ಎಂದು ಜಾತಿ ಹಿಡಿದು ನಿಂದಿಸಿ, ಗಲಾಟೆ ಮಾಡಿ ತಲೆಯ ಕೂದಲು ಹಿಡಿದು ಎಳೆದಾಡಿದರು. ನಂತರ ದೇವಸ್ಥಾನದಿಂದ ಹೊರಗೆ ತಳ್ಳಿದರು' ಎಂದು ದೂರಿನಲ್ಲಿ ಆರೋಪಿಸಿದ್ದಾರೆ. ಪ್ರಕರಣ ದಾಖಲಿಸಿರುವ ಪೊಲೀಸರು ದೇಗುಲದ ಅರ್ಚಕರನ್ನು ಬಂಧಿಸಿದ್ದಾರೆ.

ಯಾಂದಳ್ಳಿಯಲ್ಲೂ ಡ್ರಗ್ಸ್ ಪತ್ತೆ

ಪ್ರಜಾವಾಣಿ ವಾರ್ತೆ

ಮೈಸೂರು: ತಾಲ್ಲೂಕಿನ ಯಾಂದಳ್ಳಿಯ ಸಪ್ತಮಾತೃಕೆ ಬಡಾವಣೆಯಲ್ಲಿರುವ 279ನೇ ನಂಬರಿನ ಮನೆ ಮೇಲೆ ಜಿಲ್ಲೆಯ ದಕ್ಷಿಣ ಪೊಲೀಸ್ ಠಾಣೆಯ ಪೊಲೀಸರು ಜ.30ರಂದು ದಾಳಿ ನಡೆಸಿದ ವೇಳೆ ಪತ್ತೆಯಾಗಿದ್ದ ರಾಸಾಯನಿಕದಲ್ಲಿ ಡ್ರಗ್ಸ್ ಇರುವುದು ಎಫ್‌ಎಸ್‌ಎಲ್ ವರದಿಯಿಂದ ಬೆಳಕಿಗೆ ಬಂದಿದೆ.

'1 ಕೆ.ಜಿ ಒಪಿಎಂ (ಒಪ್ಟಿಮೈಜ್‌ಡ್ ಪ್ಲಾಂಟ್ ಮೆಡಿಯೇಟೆಡ್ ಸೊಲ್ಯೂಶನ್) ಪತ್ತೆಯಾಗಿದೆ. ಉಳಿದ ರಾಸಾಯನಿಕಗಳು ಡ್ರಗ್ಸ್‌ಗೆ ಅಥವಾ ಇತರೆ ವಸ್ತುಗಳ ಉತ್ಪಾದನೆಗಳಿಗೂ ಬಳಸುವ ಸಾಧ್ಯತೆ ಇದೆ. ದಾಸ್ತಾನು ಮಾಡಿದ್ದ ಕಾರಣ, ಬೇರೆಡೆಗೆ ಒಯ್ಯುತ್ತಿದ್ದರೆ ಎಂದು ತನಿಖೆ ನಡೆಯುತ್ತಿದೆ' ಎಂದು ಎಸ್‌ಪಿ ಮಲ್ಲಿಕಾರ್ಜುನ ಬಾಲದಂಡಿ 'ಪ್ರಜಾವಾಣಿ'ಗೆ ತಿಳಿಸಿದರು.

'ಈ ಮನೆಯನ್ನು ಬಾಡಿಗೆಗೆ ಪಡೆದಿದ್ದ ಗಣಪತ್ ಲಾಲ್ ಹಾಗೂ ವಾಸವಿದ್ದ ಮಹೇಂದ್ರ ಇಬ್ಬರನ್ನೂ ಡ್ರಗ್ಸ್ ಮಾರಾಟ ಪ್ರಕರಣದಲ್ಲಿ ಹೊರರಾಜ್ಯದ ಪೊಲೀಸರು ಬಂಧಿಸಿದ್ದಾರೆ. ನ್ಯಾಯಾಲಯದ ಮೂಲಕ ಬಾಡಿ ವಾರಂಟ್ ಪಡೆದು ಅವರನ್ನು ಕಸ್ಟಡಿಗೆ ಪಡೆಯಲು ನಮ್ಮ ಪೊಲೀಸರು ತೆರಳಿದ್ದಾರೆ' ಎಂದರು.

'ನಗರದ ಹೆಬ್ಬಾಳ ಕೈಗಾರಿಕಾ ಪ್ರದೇಶದಲ್ಲಿ ಡ್ರಗ್ಸ್ ತಯಾರಿಸುವ ಅತ್ಯಾಧುನಿಕ ಉಪಕರಣಗಳನ್ನು ಹೊಂದಿರುವ ಪೂರ್ಣ ಪ್ರಮಾಣದ ರಹಸ್ಯ ಪ್ರಯೋಗಾಲಯ ಪತ್ತೆ ಮಾಡಿದ್ದೇವೆ' ಎಂದು ಎನ್‌ಸಿಬಿ ತಂಡವು ತಿಳಿಸಿತ್ತು.

...ನಿಯೋಜನೆಗೆ ಅನುಮತಿ

ಒಂದನೇ ಪುಟದಿಂದ...

ಎಸ್‌ಐಆರ್‌ಗೆ ಸಂಬಂಧಿಸಿದಂತೆ ಪಶ್ಚಿಮ ಬಂಗಾಳ ಸರ್ಕಾರ ಮತ್ತು ಚುನಾವಣಾ ಆಯೋಗ ಎರಡರ ಕಾಳಜಿಯೂ ಸಮಾನವಾಗಿ ಮುಖ್ಯವಾದುದು. ಮತದಾರರ ಪಟ್ಟಿಯ ಪಾವಿತ್ರ್ಯ ಮತ್ತು ಶುದ್ಧತೆ ಖಚಿತಪಡಿಸುವುದು ಮುಖ್ಯ ಎಂದು ಅಭಿಪ್ರಾಯಪಟ್ಟಿತು.

ಕನಿಷ್ಠ ಮೂರು ವರ್ಷ ಅನುಭವವಿರುವ ಸಿವಿಲ್ ನ್ಯಾಯಾಧೀಶರನ್ನು ನೇಮಕ ಮಾಡುವಂತೆ ಕಲ್ಕತ್ತಾ ಹೈಕೋರ್ಟ್‌ಗೆ ಸುಪ್ರೀಂ ಕೋರ್ಟ್ ಸೂಚಿಸಿತು.

'ಕಲ್ಕತ್ತಾ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಗಳ ಪ್ರಕಾರ ಒಬ್ಬ ಅಧಿಕಾರಿ ದಿನಕ್ಕೆ 215 ಪ್ರಕರಣಗಳ ವಿಚಾರಣೆ ನಡೆಸಿದರೂ 50 ಲಕ್ಷ ಅರ್ಜಿಗಳ ವಿಲೇವಾರಿಗೆ 80 ದಿನ ಬೇಕಾಗುತ್ತದೆ. ಹೀಗಾಗಿ ಕ್ಷಿಪ್ರಗತಿಯಲ್ಲಿ ವಿಚಾರಣೆ ಪೂರ್ಣಗೊಳಿಸಲು ಕನಿಷ್ಠ 3 ವರ್ಷ ಅನುಭವವಿರುವ ನ್ಯಾಯಾಂಗ ಅಧಿಕಾರಿಗಳ ಸೇವೆಯನ್ನು ಬಳಸಿಕೊಳ್ಳಬಹುದು. ಹಾಗೆಯೇ ಜಾರ್ಖಂಡ್ ಮತ್ತು ಒಡಿಶಾ ರಾಜ್ಯಗಳ ಹಾಲಿ ಮತ್ತು ನಿವೃತ್ತ ನ್ಯಾಯಾಂಗ ಅಧಿಕಾರಿಗಳ ಸೇವೆಯನ್ನೂ ಬಳಸಿಕೊಳ್ಳಬಹುದು. ಈ ರಾಜ್ಯಗಳ ಹೈಕೋರ್ಟ್ ಮುಖ್ಯನ್ಯಾಯಮೂರ್ತಿ ಅವರಿಗೆ ನಾವೂ ಮನವಿ ಮಾಡುತ್ತೇವೆ' ಎಂದು ನ್ಯಾಯಪೀಠ ಹೇಳಿತು.

ಭವಿಷ್ಯದ ಕೈಗಾರಿಕಾ ಬೆಳವಣಿಗೆ: ವಿಷನ್ ಗ್ರೂಪ್ ಸಭೆ ನಡೆಸಿದ ಎಂ.ಬಿ. ಪಾಟೀಲ

'ರಾಜ್ಯದಲ್ಲಿ ರಕ್ಷಣಾ ಎಲೆಕ್ಟ್ರಾನಿಕ್ಸ್ ಪಾರ್ಕ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕರ್ನಾಟಕವನ್ನು ರಕ್ಷಣಾ ಎಲೆಕ್ಟ್ರಾನಿಕ್ ಉತ್ಪನ್ನಗಳ ಉತ್ಪಾದನೆಯ ರಾಜಧಾನಿ ಮಾಡಲು 200 ಎಕರೆಯಲ್ಲಿ ಪ್ರತ್ಯೇಕ ಪಾರ್ಕ್ ಸ್ಥಾಪಿಸಬೇಕು. 100 ಎಕರೆಯಲ್ಲಿ ಏವಿಯಾನಿಕ್ಸ್ ಮತ್ತು ಸೆನ್ಸರ್ ಪಾರ್ಕ್ ಆರಂಭಿಸಬೇಕೆಂದು ವಿಷನ್ ಗ್ರೂಪ್‌ಗಳ ಸಭೆಯಲ್ಲಿ ಪ್ರಸ್ತಾಪವಾಗಿದೆ' ಎಂದು ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ತಿಳಿಸಿದ್ದಾರೆ.

ವಿವಿಧ ಕೈಗಾರಿಕಾ ವಲಯಗಳ ಭವಿಷ್ಯದ ಹಾದಿ ಹೇಗಿರಬೇಕು ಮತ್ತು ಸರ್ಕಾರ ತೆಗೆದುಕೊಳ್ಳಬೇಕಿರುವ ಕ್ರಮಗಳ ಸ್ವರೂಪ ಹೇಗಿರಬೇಕು ಎಂದು ತಿಳಿದುಕೊಳ್ಳುವ ಉದ್ದೇಶದಿಂದ ಏರೋಸ್ಪೇಸ್ ಮತ್ತು ರಕ್ಷಣೆ, ಮಶೀನ್ ಟೂಲ್ಸ್, ಆಟೋ–ಇ.ವಿ ಮತ್ತು ಪರಿಸರಸ್ನೇಹಿ ಇಂಧನ ವಲಯಗಳ ವಿಷನ್ ಗ್ರೂಪ್‌ಗಳ ಜೊತೆ ಸಚಿವರು ಸಭೆ ನಡೆಸಿದರು.

'ವಿಶೇಷ ಹೂಡಿಕೆ ವಲಯ ಅಸ್ತಿತ್ವಕ್ಕೆ ಬಂದ ನಂತರ ಅವುಗಳನ್ನು ಜಾರಿಗೊಳಿಸಲಾಗುವುದು. ಇದಕ್ಕೆ ಬೇಕಾದ ಜಮೀನಿಗೆ ಯಾವ ತೊಂದರೆಯೂ ಇಲ್ಲ' ಎಂದು ಅವರು ಹೇಳಿದ್ದಾರೆ.

'ವೈಮಾಂತರಿಕ್ಷ ಮತ್ತು ರಕ್ಷಣಾ ಉದ್ಯಮಗಳ ಕ್ಷೇತ್ರದಲ್ಲಿ ಕರ್ನಾಟಕ ಮುಂಚೂಣಿಯಲ್ಲಿದೆ. ಜಪಾನಿನಲ್ಲಿ 2028ರ ಹೊತ್ತಿಗೆ ಸುಝುಕಿ ಮತ್ತು ಟೊಯೊಟಾ ಕಂಪನಿಗಳು ಏರಿಯಲ್ ಟ್ಯಾಕ್ಸಿ ಸೇವೆ ಆರಂಭಿಸುತ್ತಿವೆ. ಅದಕ್ಕೆ ಬೆಂಗಳೂರಿನ ಸಾಸ್ಮೋಸ್ ಕಂಪನಿಯೇ ವಿದ್ಯುತ್ ಸಾಧನ-ಸಲಕರಣೆಗಳನ್ನು ಪೂರೈಸುತ್ತಿದೆ. ನಮ್ಮಲ್ಲೂ ಸಹ 'ಫ್ಲೈ-ಟ್ಯಾಕ್ಸಿ' ಸೇವೆಗೆ ಸಂಬಂಧಿಸಿದಂತೆ ಸಮರ್ಪಕ ನೀತಿ ರೂಪಿಸಿ, ಇಲ್ಲೂ ಅಂತಹ ಸೇವೆಯನ್ನು ಆರಂಭಿಸಬಹುದು ಎಂದು ಉದ್ಯಮಿಗಳು ಹೇಳಿದ್ದಾರೆ. ಇದನ್ನು ಗಂಭೀರವಾಗಿ ಪರಿಶೀಲಿಸಲಾಗುವುದು' ಎಂದೂ ಪಾಟೀಲ ತಿಳಿಸಿದ್ದಾರೆ.

ಖನಿಜ ಭವನದಲ್ಲಿ ಇಡೀ ದಿನ ನಡೆದ ಸಭೆಗಳಲ್ಲಿ ಪ್ರಮುಖ ಉದ್ಯಮಿಗಳು ಹಾಗೂ ಅವರ ಪ್ರತಿನಿಧಿಗಳು ಭಾಗವಹಿಸಿದ್ದರು. ಕೆಲವರು ವರ್ಚುವಲ್ ಮೂಲಕ ಭಾಗವಹಿಸಿದ್ದರು. ಕೈಗಾರಿಕಾ ಇಲಾಖೆ ಪ್ರಧಾನ ಕಾರ್ಯದರ್ಶಿ ಸೆಲ್ವಕುಮಾರ್, ಆಯುಕ್ತೆ ಗುಂಜನ್ ಕೃಷ್ಣ, ಐಕೆಎಫ್ ಸಿಇಒ ಜ್ಯೋತ್ಸ್ನಾ, ಉದ್ಯೋಗ ಮಿತ್ರ ವ್ಯವಸ್ಥಾಪಕ ನಿರ್ದೇಶಕ ದೊಡ್ಡ ಬಸವರಾಜು ಇದ್ದರು.

ಉದ್ಯಮಿಗಳಾದ ಸೆಂಟಮ್ ಎಲೆಕ್ಟ್ರಾನಿಕ್ಸ್ ಸಿಇಒ ಅಪ್ಪಾರಾವ್ ವೆಂಕಟ ಮಲ್ಲವರಪು, ಹನಿವೆಲ್ ಮುಖ್ಯಸ್ಥ ಜೀವೇಶ್ ಗುರುಮೂರ್ತಿ, ಸಾಫ್ರಾನ್ ಸಿಇಒ ಜೆ.ಎಸ್. ಗಾಂವ್ಕರ್, ಎಐಎ ಪ್ರಧಾನ ವ್ಯವಸ್ಥಾಪಕ ಎಸ್. ದ್ವಾರಕಾನಾಥ್, ಸಾಸ್ಮೋಸ್ ಸಂಸ್ಥಾಪಕ ಎಚ್ ಜಿ. ಚಂದ್ರಶೇಖರ್, ಕಾಲಿನ್ಸ್ ಏರೋಸ್ಪೇಸ್ ಉಪಾಧ್ಯಕ್ಷ ಸಮಿತ್ ರೇ ಇದ್ದರು. ಅಲ್ಲದೆ ಗ್ರೀವ್ಸ್ ಎಲೆಕ್ಟ್ರಿಕ್ಸ್ ಉಪಾಧ್ಯಕ್ಷ ಚೇತನ್ ಗೌಡ, ಟೊಯೊಟಾ ಉಪಾಧ್ಯಕ್ಷ ರಮೇಶ್ ರಾವ್, ಪ್ರಧಾನ ವ್ಯವಸ್ಥಾಪಕ ಕಿರಣ್ ಕುಮಾರ್, ಕೈಗಾರಿಕಾ ಪರಿಣತರಾದ ವಿಕ್ರಂ ಸಾಳುಂಕೆ, ಸುರೇಶ್ ಪಾಟೀಲ್, ದಿನೇಶ್ ರಾವ್, ರವಿ ಕುಳದೇಮಠ ಸಭೆಯಲ್ಲಿದ್ದರು.

ಭವಿಷ್ಯದ ಕೈಗಾರಿಕಾ ಬೆಳವಣಿಗೆಗಳ ಕುರಿತು ವಿಷನ್ ಗ್ರೂಪ್ ಪ್ರಮುಖರ ಜತೆ ಎಂ.ಬಿ. ಪಾಟೀಲ ಸಭೆ ನಡೆಸಿದರು

ಕಲ್ಲು ಗಣಿಗಾರಿಕೆಯಿಂದ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುವ ಆತಂಕ

ಮಕ್ಕಳನ್ನು ಶಾಲೆಗೆ ಕಳಿಸದ ಪೋಷಕರು

ಪ್ರಜಾವಾಣಿ ವಾರ್ತೆ

ಕೊಣನೂರು (ಹಾಸನ ಜಿಲ್ಲೆ): 'ಕಲ್ಲುಗಣಿಗಾರಿಕೆಯಿಂದ ಮಕ್ಕಳ ಆರೋಗ್ಯದ ಮೇಲೆ ದುಷ್ಪರಿಣಾಮ ಆಗಲಿದೆ' ಎಂದು ಇಲ್ಲಿನ ನೆಹರೂ ನಗರದ ನಿವಾಸಿಗಳು, ಒಂದು ತಿಂಗಳಿಂದ ಮಕ್ಕಳನ್ನು ಶಾಲೆಗೆ ಕಳುಹಿಸುತ್ತಿಲ್ಲ. ಶಾಸಕ ಎ.ಮಂಜು ಅವರೊಂದಿಗೆ ಬಿಇಒ, ಶಿಕ್ಷಕರು, ಮನೆಗಳಿಗೆ ತೆರಳಿ ಸಭೆ ನಡೆಸಿದರೂ ಪ್ರಯೋಜನವಾಗಿಲ್ಲ.

'ಗ್ರಾಮದ ಸರ್ಕಾರಿ ಶಾಲೆ ಹಾಗೂ ಅಂಗನವಾಡಿ ಸಮೀಪವೇ ಗಣಿಗಾರಿಕೆ ನಡೆಯುತ್ತಿದೆ. ಸಿಡಿಮದ್ದು ಸ್ಫೋಟದ ಶಬ್ದ ಹಾಗೂ ದೂಳು ಬರುತ್ತಿದೆ. ಮಕ್ಕಳು ಭಯ ಬೀಳುತ್ತಿದ್ದಾರೆ. ಕ್ರಷರ್ ನಿಲ್ಲಿಸುವವರೆಗೆ ಅಥವಾ ಸ್ಥಳಾಂತರಿಸುವವರೆಗೆ ಶಾಲೆಗೆ ಮಕ್ಕಳನ್ನು ಕಳುಹಿಸುವುದಿಲ್ಲ' ಎಂದು ಪೋಷಕರು ಪಟ್ಟು ಹಿಡಿದಿದ್ದಾರೆ.

> ಶೈಕ್ಷಣಿಕ ಹಿತದೃಷ್ಟಿಯಿಂದ ಮಕ್ಕಳನ್ನು ಶಾಲೆಗೆ ಕಳುಹಿಸುವಂತೆ ಮನವಿ ಮಾಡಿದ್ದೇವೆ. ಕ್ರಷರ್‌ಗೆ ಸಂಬಂಧಿಸಿ ಮೇಲಧಿಕಾರಿಗಳು ಕ್ರಮ ವಹಿಸಬೇಕಾಗಿದೆ
> **ಕೆ.ಸಿ.ಸೌಮ್ಯಾ,** ಅರಕಲಗೂಡು ತಹಶೀಲ್ದಾರ್

ಶಾಲೆಯಲ್ಲಿ 1 ರಿಂದ 5 ನೇ ತರಗತಿಯವರೆಗೆ 16 ಮಕ್ಕಳಿದ್ದು, ಅಂಗನವಾಡಿಯಲ್ಲಿ 7 ಮಕ್ಕಳಿವೆ. ಜ 19 ರಿಂದ ಯಾರೂ ಶಾಲೆಗೆ ಬರುತ್ತಿಲ್ಲ.

ಹೇಮಾವತಿ ಜಲಾಶಯ ಮುಳುಗಡೆ ಸಂತ್ರಸ್ತರಿಗೆ ಮೀಸಲಿರುವ ಗ್ರಾಮದಲ್ಲಿ 100 ದಲಿತ ಕುಟುಂಬಗಳಿವೆ. 'ಸಮೀಪದ ಅರಸೀಕಟ್ಟೆ ಕಾವಲಿನ ಸರ್ವೆ ನಂ.116ರ 2 ಎಕರೆ ಅರಣ್ಯ ಪ್ರದೇಶದಲ್ಲಿ ಕಲ್ಲುಗಣಿಗಾರಿಕೆ ನಡೆದಿದ್ದು, ಮಕ್ಕಳ ಆರೋಗ್ಯದ ಮೇಲೆ ಪರಿಣಾಮ ಬೀರುತ್ತಿದೆ' ಎಂಬುದು ಗ್ರಾಮಸ್ಥರ ಆರೋಪ.

'ಗ್ರಾಮದ ಮನೆಗಳಿಗೂ ತೊಂದರೆಯಾಗುತ್ತಿದೆ. ದೂರು ನೀಡಿದರೂ ಜಿಲ್ಲಾಡಳಿತ ಕ್ರಮ ಜರುಗಿಸಿಲ್ಲ. ಕಲ್ಲು ಸಾಗಿಸುವ ಭಾರಿ ವಾಹನಗಳ ಸಂಚಾರದಿಂದ ರಸ್ತೆಗಳು ಹಾಳಾಗುತ್ತಿವೆ' ಎಂಬುದು ಪೋಷಕರ ದೂರು.

'ಗಣಿಗಾರಿಕೆಯಿಂದ ಬರುವ ದೂಳು, ಕಲ್ಲು ಚೂರುಗಳಿಂದ ಕೃಷಿ ಭೂಮಿಗೂ ಹಾನಿ ಆಗುತ್ತಿದೆ. ಶಾಲೆ, ಅಂಗನವಾಡಿ ಕೇಂದ್ರ, ಅಂಬೇಡ್ಕರ್ ಭವನಗಳು ಗಣಿಗಾರಿಕೆ ಪ್ರದೇಶಕ್ಕೆ ಸಮೀಪದಲ್ಲಿವೆ. ಸ್ಫೋಟದ ತೀವ್ರತೆಯಿಂದ ಕಟ್ಟಡಗಳು ಬಿರುಕು ಬಿಡುವ ಅಥವಾ ಕುಸಿಯುವ ಭೀತಿ ಇದೆ' ಎಂಬುದು ಗ್ರಾಮಸ್ಥರ ವಾದ.

ಕೊಣನೂರು ಸಮೀಪದ ನೆಹರೂ ನಗರದಲ್ಲಿ ಶಾಸಕ ಎ.ಮಂಜು ಇತ್ತೀಚೆಗೆ ಸಭೆ ನಡೆಸಿದ್ದರು.

ಕರ್ನಾಟಕ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)

ಕಾರ್ಯನಿರ್ವಾಹಕ ಇಂಜಿನಿಯರವರ ಕಚೇರಿ

ಕನೀನಿನಿ, ತುಂ.ಮೇ.ಯೋ. ವಿಭಾಗ, ಶಿವಮೊಗ್ಗ ಫೋನ್ ನಂ. 08182–254832

1. ಟೆಂಡರ್ ಪ್ರಕಟಣೆ ಸಂಖ್ಯೆ: ಕನೀನಿನಿ/ತುಂ.ಮೇ.ಯೋ./ವಿ/ಜಿಬಿ–2/ಟೆಂಡರ್/36 Call4 ದಿನಾಂಕ: 23.02.2026

SHORT TERM PERCENTAGE TENDER NOTIFICATION (Through kpp portal only)

ವ್ಯವಸ್ಥಾಪಕ ನಿರ್ದೇಶಕರು, ಕ.ನೀ.ನಿ.ನಿ., ಬೆಂಗಳೂರು ಇವರ ಪರವಾಗಿ ಈ ಕೆಳಗೆ ಸಹಿ ಮಾಡಿರುವವರು ಅರ್ಹ ಗುತ್ತಿಗೆದಾರರಿಂದ ಕೆ.ಪಿ.ಪಿ.–ಪೋರ್ಟಲ್ ಪದ್ಧತಿಯ ಮೂಲಕ ಲೆಕ್ಕ ಶೀರ್ಷಿಕೆ 4701–ತುಂಗಾ ಆಧುನೀಕರಣ ಯೋಜನೆ ಅಡಿಯಲ್ಲಿ ಬರುವ ಒಂದು(01) ಕಾಮಗಾರಿಗೆ ಟೆಂಡರ್ ಕರೆಯಲಾಗಿದೆ.

(1) ಅಂದಾಜು ಪಟ್ಟಿಯಂತೆ ಟೆಂಡರಿಗೆ ಇಡಲಾದ ಮೊತ್ತ ರೂ.421.59 ಲಕ್ಷಗಳು(ಇ. ಸಂಖ್ಯೆ 3745 Call4) (ಜಿ.ಎಸ್.ಟಿ ಹೊರತುಪಡಿಸಿ) (2) ಟೆಂಡರ್ ಕುರಿತ ಪ್ರಶ್ನೆಗಳ/ಸ್ಪಷ್ಟೀಕರಣಗಳ ಕೊನೆಯ ದಿನಾಂಕ: 27.02.2026 17.30 ಘಂಟೆಯವರೆಗೆ. (3) ತುಂಬಿದ ಟೆಂಡರುಗಳನ್ನು ಸಲ್ಲಿಸುವ ದಿನಾಂಕ: 23.02.2026 ರಿಂದ 04.03.2026 ಸಾಯಂಕಾಲ 17.29 ಘಂಟೆಯವರೆಗೆ (ಕಚೇರಿ ವೇಳೆಯಲ್ಲಿ) ಟೆಂಡರನ್ನು ತೆರೆಯುವ ದಿನಾಂಕ / ಕಾಮಗಾರಿಯ ವಿವರಗಳು /ಇ.ಎಂ.ಡಿ. ಮೊತ್ತ/ ಟೆಂಡರ್‌ನ ನಿಯಮಗಳು ಮತ್ತು ಷರತ್ತುಗಳು / ಗುತ್ತಿಗೆದಾರರ ದರ್ಜೆ ಇತ್ಯಾದಿ ಹೆಚ್ಚಿನ ವಿವರಗಳನ್ನು ಟೆಂಡರ್ ಅಧಿಸೂಚನೆಯಲ್ಲಿ ಪಡೆಯಬಹುದು ಅಥವಾ ಕೆಳಗೆ ಸಹಿ ಮಾಡಿರುವವರ ಕಚೇರಿಯಲ್ಲಿ ಕಚೇರಿ ವೇಳೆಯಲ್ಲಿ ಪಡೆಯಬಹುದು ಅಥವಾ https://kppp.karnataka.gov.in ವೆಬ್‌ಸೈಟ್‌ನಲ್ಲಿ ಪಡೆಯಬಹುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್,
ಕ.ನೀ.ನಿ.ನಿ., ತುಂ.ಮೇ.ಯೋ. ವಿಭಾಗ, ಶಿವಮೊಗ್ಗ

ವಾ.ಸಾ.ಸಂ.ಇ/ಕೆ.ಎಸ್.ಎಂ.ಸಿ.ಎ/ಶಿ/25–26/123/02/1893

ಕರ್ನಾಟಕ ಸರ್ಕಾರ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
ಜಿಲ್ಲಾ ಮಕ್ಕಳ ರಕ್ಷಣಾ ಘಟಕ

ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳ ಕಾರ್ಯಾಲಯ,
ಬಿ4/3 ವಿವೇಕ ನಗರ ಪಶ್ಚಿಮ,ವಿಜಯಪುರ–586103
ಕಚೇರಿ ವಿಳಾಸ: ದೂರವಾಣಿ ಸಂಖ್ಯೆ:– 08352–276354
ಇ–ಮೇಲ್ ವಿಳಾಸ:– dcpobijapur@gmail.com

ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

2026–27ನೇ ಸಾಲಿಗೆ ವಿಜಯಪುರ ಜಿಲ್ಲಾ ಮಕ್ಕಳ ರಕ್ಷಣಾ ಘಟಕದಡಿಯಲ್ಲಿ ಬರುವ ಸರಕಾರಿ ಬಾಲಕರ ಬಾಲಮಂದಿರ (ಪಿ), (ಕೆ), ಬಾಲಕಿಯರ ಬಾಲಮಂದಿರ, ವೀಕ್ಷಣಾಲಯ, ಸರಕಾರಿ ವಿಶೇಷ ದತ್ತು ಸಂಸ್ಥೆ, ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ ಹಾಗೂ ಬಾಲ ನ್ಯಾಯ ಮಂಡಳಿ ಸಂಸ್ಥೆಗಳಿಗೆ ಆಹಾರ ಸಾಮಗ್ರಿಗಳನ್ನು ಮತ್ತು ಇತರೆ ಸಾಮಗ್ರಿಗಳನ್ನು ಖರೀದಿಸಿ, ಸರಬರಾಜು ಮಾಡಲು ಗುತ್ತಿಗೆದಾರರನ್ನು ಗುರುತಿಸುವ ಸಲುವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧಿನಿಯಮ (KTPP) 1999 ನಿಯಮಗಳು 2000ರ ಪ್ರಕಾರ ಇ–Procurement ಟೆಂಡರ್ ಮೂಲಕ ಪಡೆಯಲು ಅಧಿಸೂಚನೆಯನ್ನು ಹೊರಡಿಸಲಾಗಿದೆ. ಪ್ರಕಟಣೆ ವಿವರ ಕೆಳಗಿನಂತಿದೆ.

1) ಖಾಲಿ ಟೆಂಡರ ಅರ್ಜಿಗಳನ್ನು (ಅನುಬಂಧ 1 & 2) ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಡೌನಲೋಡ ಮಾಡಿಕೊಳ್ಳುವ ಹಾಗೂ ಅಪಲೋಡ್ ಮಾಡುವ ಕೊನೆಯ ದಿನಾಂಕ: 23.02.2026 ರಿಂದ 23.03.2026 ರ ಸಾಯಂಕಾಲ 5:30 ಘಂಟೆಯವರೆಗೆ

2) ಸ್ಯಾಂಪಲ್ ಸಲ್ಲಿಸುವ ದಿನಾಂಕ: 20.03.2026 ರಂದು ಬೆಳ್ಳಿಗೆ 10:30 ಘಂಟೆ

3) ತಾಂತ್ರಿಕ ಬಿಡ್ ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ: 25.03.2026 ಬೆಳ್ಳಿಗೆ 11:30 ಘಂಟೆ

4) ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ: 27.03.2026 ಬೆಳ್ಳಿಗೆ 11:00 ಘಂಟೆ

5) ಅಂದಾಜು ಮೌಲ್ಯ ರೂ. 25/– ಲಕ್ಷ.

6) ಇ.ಎಮ್.ಡಿ. ಮೊತ್ತ ರೂ. 50,000/– ಗಳು

7) **ಹೆಚ್ಚಿನ ಮಾಹಿತಿಗಾಗಿ ವ್ಯವಹರಿಸಬೇಕಾದ ಅಧಿಕಾರಿ ಹಾಗೂ ವಿಳಾಸ, ದೂರವಾಣಿ ಸಂಖ್ಯೆ: ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ವಿವೇಕ ನಗರ ಪಶ್ಚಿಮ, ವಿಜಯಪುರ ದೂರವಾಣಿ ಸಂಖ್ಯೆ: 08352–276354, e-mail id: dcpobijapur@gmail.com**

Website: www.eproc.karnataka.gov.in

ಸಹಿ/– ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು,
ಜಿಲ್ಲಾ ಮಕ್ಕಳ ರಕ್ಷಣಾ ಘಟಕ,
ವಿಜಯಪುರ

ವಾಸಾಸಂಇ/ವಿಜಯಪುರ/749/ಕೆಎಸ್‌ಎಂಸಿಎ/2025–26

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

(ಸಿಐಎನ್: ಯು40109ಕೆಎ1999ಎಸ್‌ಜಿಸಿ025521)

ಸಂಖ್ಯೆ: ಮುಇಂವಿ/ಟಿಮತ್ತುಪಿ/ಅಇಂ(ವಿ)–1&2/2025-26/10131-43&10149-62 ದಿನಾಂಕ: 24.02.2026

ಸಂಕ್ಷಿಪ್ತ ಅಲ್ಪಾವಧಿ ಟೆಂಡರ್ ಪ್ರಕಟಣೆ

(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಮಾತ್ರ)

ಕವಿಪ್ರನಿನಿಯು ಈ ಕೆಳಕಂಡ ವಿಚಾರಣಾ ಸಂಖ್ಯೆಗಳ ಮೂಲಕ ಕೆಳಕಂಡ ಕಾಮಗಾರಿಗಳಿಗೆ **ಭಾಗಶಃ ಟರ್ನ್‌ಕೀ ಆಧಾರದ ಮೇಲೆ** ಎಲೆಕ್ಟ್ರಾನಿಕ್ ವಿಧಾನದ ಮೂಲಕ ಬಿಡ್‌ಗಳನ್ನು ಆಹ್ವಾನಿಸಿದೆ:

ಕ್ರ.ಸಂ.	ವಿಚಾರಣಾ ಸಂಖ್ಯೆ ಮತ್ತು ಕಾಮಗಾರಿಗಳ ವಿವರ
1.	**ಕವಿಪ್ರನಿನಿ/2025-26/ಎಸ್‌ಎಸ್/ವರ್ಕ್_ಇಂಡೆಂಟ್3353**
	ಮೆ॥ ಗ್ಯಾರಿಸನ್ ಇಂಜಿನಿಯರ್, (I) (P) AF, ಮಿಲಿಟರಿ ಇಂಜಿನಿಯರ್ ಸೇವೆಗಳು, ಕಮಾಂಡ್ ಆಸ್ಪತ್ರೆ (AF) ಸಂಕೀರ್ಣ, ಅಗ್ರಾಮ್ ಪೋಸ್ಟ್, ಬೆಂಗಳೂರು ರವರಿಗೆ (EHT) ಇಎಚ್‌ಟಿ ಆಧಾರದ ಮೇಲೆ 10,000ಕೆವಿಎ ವರೆಗೆ ವಿದ್ಯುತ್ ಸರಬರಾಜು ವ್ಯವಸ್ಥೆ ಮಾಡಲು ಕಮಾಂಡ್ ಆಸ್ಪತ್ರೆ (AF) ಸಂಕೀರ್ಣದ ಆವರಣದಲ್ಲಿ 2x12.5ಎಂವಿಎ, 66/11ಕೆವಿ ಉಪ–ಕೇಂದ್ರವನ್ನು ಸ್ಥಾಪಿಸುವುದು ಹಾಗೂ ಹಾಲಿಯಿರುವ 220/66/11ಕೆವಿ ಪೂರ್ವ ವಿಭಾಗದ ಜಿಐಎಸ್ (EDC GIS) ಉಪ–ಕೇಂದ್ರದಿಂದ ಕಮಾಂಡ್ ಆಸ್ಪತ್ರೆ (AF) ಸಂಕೀರ್ಣದಲ್ಲಿ ಪ್ರಸ್ತಾವಿತ 66/11ಕೆವಿ ಉಪ–ಕೇಂದ್ರದವರೆಗೆ 3.063ಕಿಮೀ ಉದ್ದಕ್ಕೆ 66ಕೆವಿ ಎಸ್‌ಸಿ, 630 ಚದರ ಮಿಮೀ ಸಿಂಗಲ್ ಕೋರ್, XLPE Copper ಕಂಡಕ್ಟರ್ ಭೂಗತ ಕೇಬಲ್‌ಅನ್ನು ಅಳವಡಿಸುವುದು ಮತ್ತು 220/66/11ಕೆವಿ ಪೂರ್ವ ವಿಭಾಗದ ಜಿಐಎಸ್ (EDC GIS) ಉಪ–ಕೇಂದ್ರದಲ್ಲಿ 66ಕೆವಿ GIS ಜಿಐಎಸ್ ಟರ್ಮಿನಲ್ ಬೇಯನ್ನು ನಿರ್ಮಿಸುವುದು.
2.	**ಕವಿಪ್ರನಿನಿ/2025-26/ಎಸ್‌ಎಸ್/ವರ್ಕ್_ಇಂಡೆಂಟ್3384**
	ಸಂಯೋಜಿತ ಪ್ಯಾಕೇಜ್ ಅಡಿಯಲ್ಲಿ **ವರ್ಕ್ ಎ:** ಬೆಳಗಾವಿ ತಾಲ್ಲೂಕು ಮತ್ತು ಜಿಲ್ಲೆಯ ಹಾಲಿಯಿರುವ 220ಕೆವಿ **ಕನಬರ್ಗಿ** ಸ್ವಿಚಿಂಗ್ ಸ್ಟೇಷನ್‌ನಲ್ಲಿ 2x200ಎಂವಿಎ, 220/110ಕೆವಿ ಮತ್ತು 1x10ಎಂವಿಎ, 110/11ಕೆವಿ ವಿದ್ಯುತ್ ಪರಿವರ್ತಕಗಳನ್ನು ಒದಗಿಸುವುದು ಹಾಗೂ ಸಂಬಂಧಿಸಿದ 110ಕೆವಿ ಪ್ರಸರಣ ಮಾರ್ಗಗಳನ್ನು HPC ಮತ್ತು Lynx ವಿದ್ಯುತ್ ವಾಹಕ (Conductor)ವನ್ನು ಬಳಸಿ **8.44ಕಿ.ಮೀ** ದೂರಕ್ಕೆ ನಿರ್ಮಿಸುವುದು ಮತ್ತು **110ಕೆವಿ, 1200ಚ.ಮಿ.ಮೀ XLPE ಸಿಂಗಲ್ ಕೋರ್ UG(ಭೂಗತ) ಕೇಬಲ್** ಮಾರ್ಗವನ್ನು **0.5ಕಿ.ಮೀ** ಉದ್ದಕ್ಕೆ ನಿರ್ಮಿಸುವುದು ಮತ್ತು **110ಕೆವಿ ನೆಹರುನಗರ** ವಿದ್ಯುತ್ ಉಪ–ಕೇಂದ್ರದಲ್ಲಿ 02 ಸಂಖ್ಯೆಗಳ 110ಕೆವಿ ಟರ್ಮಿನಲ್ ಬೇಗಳನ್ನು ನಿರ್ಮಿಸುವುದು. **ವರ್ಕ್ ಬಿ:** ಬೆಳಗಾವಿ ತಾಲ್ಲೂಕು ಮತ್ತು ಜಿಲ್ಲೆಯ ಹಾಲಿಯಿರುವ 220ಕೆವಿ ನರೇಂದ್ರ – ಬೆಳಗಾವಿ (ಕನಬರ್ಗಿ) 2ನೇ ಸರ್ಕ್ಯೂಟ್ ನಿಂದ ಪ್ರಸ್ತಾವಿತ 220ಕೆವಿ CTT ವರೆಗೆ **12.148 ಕಿ.ಮೀ** ಉದ್ದಕ್ಕೆ HPC ಮತ್ತು Lynx ವಿದ್ಯುತ್ ವಾಹಕ (Conductor) ವನ್ನು ಬಳಸಿ ಡಿಸಿ ಲಿಲೋ ಪ್ರಸರಣ ಮಾರ್ಗವನ್ನು ನಿರ್ಮಿಸುವುದು ಹಾಗೂ ಪ್ರಸ್ತಾವಿತ 220ಕೆವಿ CTTಯಿಂದ ಪ್ರಗತಿಯಲ್ಲಿರುವ 220/110/11ಕೆವಿ ಮಾಚೆ ಉಪ–ಕೇಂದ್ರದವರೆಗೆ **1200ಚ.ಮಿ.ಮೀ, 220ಕೆವಿ UG (ಭೂಗತ) ಕೇಬಲ್** ಮಾರ್ಗವನ್ನು **2.47ಕಿ.ಮೀ** ಉದ್ದಕ್ಕೆ ನಿರ್ಮಿಸುವುದು ಮತ್ತು **220ಕೆವಿ ಮಾಚೆ** ವಿದ್ಯುತ್ ಉಪ–ಕೇಂದ್ರದಲ್ಲಿ 02 ಸಂಖ್ಯೆಗಳ 220ಕೆವಿ ಟರ್ಮಿನಲ್ ಬೇಗಳನ್ನು ನಿರ್ಮಿಸುವುದು.

ಬಿಡ್‌ಗಳನ್ನು ಎಲೆಕ್ಟ್ರಾನಿಕ್ ಟೆಂಡರಿಂಗ್ ವಿಧಾನದ ಮೂಲಕ ಮಾತ್ರ ಸ್ವೀಕರಿಸಲಾಗುವುದು. ಇ–ಟೆಂಡರಿಂಗ್ ಪ್ರಕ್ರಿಯೆಯಲ್ಲಿ ಭಾಗವಹಿಸುವುದರ ಕುರಿತಾದ ವಿವರಗಳನ್ನು ಕವಿಪ್ರನಿನಿಯ ವೆಬ್‌ಸೈಟ್ **https://kptcl.karnataka.gov.in** ನ ಹೈಪರ್‌ಲಿಂಕ್ ''ಇ ಪ್ರೊಕ್ಯೂರ್‌ಮೆಂಟ್ ಕವಿಪ್ರನಿನಿ'' ಅಥವಾ **https://kppp.karnataka.gov.in** ನಲ್ಲಿ ಲಾಗಿನ್ ಆಗಿ **ದಿನಾಂಕ 27.02.2026 ರಂದು ಅಪರಾಹ್ನ 15:00ಗಂಟೆ** ಅಥವಾ ನಂತರದಿಂದ ಪಡೆಯಬಹುದು. **ಕಾಮಗಾರಿಯ ಬಿಡ್ ಸಲ್ಲಿಕೆಗೆ ಕೊನೆಯ ದಿನಾಂಕ ಮತ್ತು ಬಿಡ್ ಸಲ್ಲಿಕೆಯ ದಿನಾಂಕವನ್ನು ವಿಸ್ತರಿಸಿದ್ದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ತಿಳಿಸಲಾಗುವುದು.** ಇದಕ್ಕೆ ಸಂಬಂಧಿಸಿದಂತೆ ಇತರೆ ಹೆಚ್ಚಿನ ಮಾಹಿತಿಗಳು ಬೇಕಾದಲ್ಲಿ ಕೆಳಸಹಿದಾರರ ಕಛೇರಿಯಿಂದ ಕಛೇರಿವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿದೆ.

ಬಿಡ್ಡುದಾರರು ಬಿಡ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕದ ಮುನ್ನ ಪ್ರಕಟಿಸುವ ಎಲ್ಲಾ ತಿದ್ದುಪಡಿಗಳು / ಸೇರ್ಪಡೆಗಳನ್ನು ಗಮನಿಸತಕ್ಕದ್ದು.

ಸಹಿ/– **ಮುಖ್ಯ ಇಂಜಿನಿಯರ್ (ವಿದ್ಯುತ್), ಟೆಂಡರಿಂಗ್ & ಪ್ರೊಕ್ಯೂರ್‌ಮೆಂಟ್, ಕವಿಪ್ರನಿನಿ, 9ನೇ ಮಹಡಿ, ಇಂಧನ ಭವನ, ಆನಂದ ರಾವ್ ವೃತ್ತ, ಬೆಂಗಳೂರು – 560 009.**

‘ಬಂಡೀಪುರ, ನಾಗರಹೊಳೆ ಸಫಾರಿ ಮುಂದುವರಿಸಿ’

ಆದಿವಾಸಿಗಳ ಬದುಕಿಗೆ ಆಧಾರವಾದ ಸಫಾರಿ: ಆದಿವಾಸಿ ಮಹಿಳಾ ಸಂಘದ ಅಧ್ಯಕ್ಷೆ ಪುಟ್ಟಮ್ಮ

ಮುಖ್ಯಾಂಶಗಳು
- ಸಫಾರಿ ನಿಲ್ಲಿಸಿದರೆ ಎಲ್ಲರ ಬದುಕು ಬೀದಿಗೆ: ಆತಂಕ
- ಆದಿವಾಸಿಗಳ ಬಗೆಗಿನ ಹೇಳಿಕೆಯಿಂದ ಬೇಸರ

ಪ್ರಜಾವಾಣಿ ವಾರ್ತೆ

ಚಾಮರಾಜನಗರ: ‘ಬಂಡೀಪುರ, ನಾಗರಹೊಳೆ ಸಂರಕ್ಷಿತ ಪ್ರದೇಶದಲ್ಲಿ ಸಫಾರಿಯನ್ನೇ ನಂಬಿ ಬುಡಕಟ್ಟು ಸಮುದಾಯಗಳು ಬದುಕು ಕಟ್ಟಿಕೊಂಡಿವೆ. ಹೀಗಾಗಿ, ಒತ್ತಡಕ್ಕೆ ಮಣಿದು ಸಫಾರಿಯನ್ನು ನಿರ್ಬಂಧಿಸಬಾರದು’ ಎಂದು ಗುಂಡ್ಲುಪೇಟೆ ತಾಲ್ಲೂಕು ಆದಿವಾಸಿ ಮಹಿಳಾ ಸಂಘದ ಅಧ್ಯಕ್ಷೆ ಪುಟ್ಟಮ್ಮ ಒತ್ತಾಯಿಸಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ‘ಹಲವರು ಸಫಾರಿ ಕೌಂಟರ್‌ಗಳಲ್ಲಿ, ಜೀಪ್ ಚಾಲಕರಾಗಿ ದುಡಿಯುತ್ತಿದ್ದಾರೆ. ರೆಸಾರ್ಟ್, ಹೋಂ ಸ್ಟೇಗಳಲ್ಲಿ ಕಾರ್ಮಿಕರಾಗಿದ್ದಾರೆ. ಸಫಾರಿ ನಿಲ್ಲಿಸಿದರೆ ಎಲ್ಲರ ಬದುಕು ಬೀದಿಗೆ ಬರಲಿದೆ’ ಎಂದು ಆತಂಕ ವ್ಯಕ್ತಪಡಿಸಿದರು.

‘ಸಫಾರಿ ಬಂದ್ ಆಗಿದ್ದಾಗ ಹಲವರು ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದರು. ಈಗ ಮತ್ತೆ ಆರಂಭವಾಗಿರುವುದು ಸಂತಸ ತಂದಿದೆ. ಕೆಲವರು ಆದಿವಾಸಿಗಳ ಬಗ್ಗೆ ಇಲ್ಲ ಸಲ್ಲದ ಹೇಳಿಕೆ ನೀಡುತ್ತಿರುವುದು ಬೇಸರ ತರಿಸಿದೆ’ ಎಂದರು.

ಪುಟ್ಟಮ್ಮ

‘ಸಫಾರಿಗೂ ಮಾನವ–ಪ್ರಾಣಿ ಸಂಘರ್ಷಕ್ಕೂ ಸಂಬಂಧವಿಲ್ಲ. ಅರಣ್ಯದಂಚಿನ ಗ್ರಾಮಸ್ಥರು ಹಾಗೂ ಅವರ ಜಾನುವಾರುಗಳ ಮೇಲೆ ಹಿಂದಿನಿಂದಲೂ ಕಾಡುಪ್ರಾಣಿಗಳು ದಾಳಿ ನಡೆಸುತ್ತಿವೆ. ಸಫಾರಿ ಆರಂಭವಾದ ಮೇಲೆ ಸಂಘರ್ಷ ಆರಂಭವಾಗಿಲ್ಲ. ಸಫಾರಿ ನಿಲ್ಲಿಸುವ ಅಗತ್ಯವಿಲ್ಲ’ ಎಂದು ಪ್ರತಿಪಾದಿಸಿದರು.

‘ಪ್ರವಾಸಿಗರಿಗೆ ಅರಣ್ಯ, ವನ್ಯಜೀವಿಗಳ ಸೌಂದರ್ಯ ಸವಿಯಲು ಸಫಾರಿ ಅಗತ್ಯ’ ಎಂದು ಪ್ರತಿಪಾದಿಸಿದರು.

INSTITUTE FOR SOCIAL AND ECONOMIC CHANGE
Dr. V.K.R.V. Rao Road, Nagarabhavi,
Bangalore - 560 072. India

ISEC Invites Short Term Tender from reputed authorised vendors for Supply of Quantitative and Qualitative Softwares. For more details visit our website: **www.isec.ac.in.** Last date for submitting tender is **12th March 2026.**

Sd/-
REGISTRAR

DIPR/CP/5860/Shirdi Sai/2025-26

ಕರ್ನಾಟಕ ಸರ್ಕಾರ
ಜಿಲ್ಲಾಧಿಕಾರಿಗಳ ಕಾರ್ಯಾಲಯ
ಜಿಲ್ಲಾ ನಗರಾಭಿವೃದ್ಧಿ ಕೋಶ
ಬೆಳಗಾವಿ

ಕ್ರಸಂ: ಬಿಜಿಎಂ:ಡಿಯುಡಿಸಿ:5:ಸಿಆರ್–25:2021–22 ದಿನಾಂಕ: 24–02–2026

ಟೆಂಡರ್ ಅಧಿಸೂಚನೆ

ಬೆಳಗಾವಿ ಜಿಲ್ಲೆ ಸದಲಗಾ ಪುರಸಭೆಯ ನಗರೋತ್ಥಾನ (ಮುನಿಸಿಪಾಲಿಟಿ) ಹಂತ–4 ಯೋಜನೆಯಡಿ ಫಲಾನುಭವಿಗಳ ಮನೆಗಳಿಗೆ ಸೋಲಾರ್ ಲೈಟ್ ಸಿಸ್ಟಮ್ ಅಳವಡಿಸುವ ಕಾಮಗಾರಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಟೆಂಡರ್ ಆಹ್ವಾನಿಸಿದ್ದು **(Tender No. DMA/2024-25/OW/WORK_INDENT25905/Call-3),** ಟೆಂಡರ್ ಮೊತ್ತ **ರೂ.78.18 ಲಕ್ಷ** (GST ಹೊರತುಪಡಿಸಿ) ಮತ್ತು ಇ.ಎಂ.ಡಿ ಮೊತ್ತ **ರೂ.1.56 ಲಕ್ಷ** ಇದ್ದು, ಟೆಂಡರ್ ಸಲ್ಲಿಸಲು ಕೊನೆಯ **ದಿ: 11–03–2026** ರಂದು **ಸಂಜೆ 5–00 ಗಂಟೆವರೆಗೆ** ಹಾಗೂ ಟೆಂಡರ್ ತೆರೆಯುವ **ದಿ: 13–03–2026** ರಂದು **ಬೆಳಿಗ್ಗೆ 10.30 ಗಂಟೆ** ನಂತರ ಸಮಯ ನಿಗಧಿಪಡಿಸಲಾಗಿದೆ. ಟೆಂಡರ್ ವಿವರವನ್ನು **https://kppp.karnataka.gov.in** ನಲ್ಲಿ ಪಡೆದುಕೊಳ್ಳಬಹುದಾಗಿದೆ ಹಾಗೂ ಹೆಚ್ಚಿನ ವಿವರಗಳಿಗೆ ಜಿಲ್ಲಾ ನಗರಾಭಿವೃದ್ಧಿ ಕೋಶ, ಬೆಳಗಾವಿ ಕಚೇರಿಯಲ್ಲಿ ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು
ಜಿಲ್ಲಾ ನಗರಾಭಿವೃದ್ಧಿ ಕೋಶ, ಬೆಳಗಾವಿ

ವಾ.ಸಾ.ಇ./ಬೆಳಗಾವಿ/1923/2025–26/ದೇಶಪಾಂಡೆಪಬ್ಲಿಸಿಟಿ

ಬೆಂಗಳೂರು ಕೇಂದ್ರ ನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ,
ಶಿವಾಜಿನಗರ ವಿಭಾಗ, ತಿಮ್ಮಯ್ಯ ರಸ್ತೆ, ಕ್ವೀನ್ಸ್ ರಸ್ತೆ, ಬೆಂಗಳೂರು – 560052.

ಸಂಖ್ಯೆ: ಕಾಅ/ಎಸ್‌ಜಿಎನ್/ಇ–ಪ್ರೊಕ್/22/2025–26 ದಿನಾಂಕ: 24–02–2026

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ

(ದ್ವಿ–ಲಕೋಟೆ ಪದ್ಧತಿ) (ಜಿಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು (ಶಿವಾಜಿನಗರ ವಿಭಾಗ), ಬೆಂಕೇನಪಾ, ಬೆಂಗಳೂರು ಇವರು ಈ ಕೆಳಕಂಡ ನಿರ್ಮಾಣ ಕಾಮಗಾರಿಗೆ ಬೆಂಕೇನ ಪಾಲಿಕೆಯಲ್ಲಿ ನೋಂದಾಯಿಸಿರುವ ಅಥವಾ ಸಿಪಿಡಬ್ಲ್ಯೂಡಿ / ಕೆಪಿಡಬ್ಲ್ಯೂಡಿ / ರೈಲ್ವೇಸ್ / ಎಂಇಎಸ್ / ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸರ್ಕಾರದ ಸಂಸ್ಥೆಗಳಲ್ಲಿ ತತ್ಸಮಾನ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

(ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ – ಕೆಡಬ್ಲ್ಯು–4)

ಕ್ರ. ಸಂ.	ಕಾಮಗಾರಿಯ ಹೆಸರು
1	ಶಿವಾಜಿನಗರ ವಿಧಾನಸಭಾ ಮತಕ್ಷೇತ್ರದಲ್ಲಿ 2025–26 ನೇ ಸಾಲಿಗೆ ರಸ್ತೆಗಳು, ಚರಂಡಿಗಳು ಮತ್ತು ಪಾದಚಾರಿಮಾರ್ಗಗಳ ಸುಧಾರಣೆಗಳು ಹಾಗೂ ನಿರ್ಮಾಣ ಕಾಮಗಾರಿ. **(ಪ್ಯಾಕೇಜ್–04)** (ಸರ್ಕಾರದ ಅನುಬಂಧ–1 ರಲ್ಲಿ 03 ಕಾಮಗಾರಿಗಳು ಒಳಗೊಂಡಿದೆ) – **ಟೆಂಡರಿಗಿಟ್ಟ ಮೊತ್ತ (ಜಿಎಸ್‌ಟಿ ರಹಿತವಾಗಿ) (ರೂ. ಲಕ್ಷಗಳಲ್ಲಿ): 1000.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): ರೂ. 10,00,000.00 (ರೂ. 1,00,000.00 ಎನ್‌ಇಎಫ್‌ಟಿ ಬಾಕಿ ರೂ. 9,00,000.00 ಬ್ಯಾಂಕ್ ಗ್ಯಾರಂಟಿ)**

ಟೆಂಡರ್ ವೇಳಾಪಟ್ಟಿ: 1) ಟೆಂಡರ್ ಡಾಕ್ಯುಮೆಂಟ್‌ಗಳನ್ನು ಜಿಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: **https://kppp.karnataka.gov.in** ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಬಿಡ್ ಪೂರ್ವಭಾವಿ ಸಭೆಯು ದಿನಾಂಕ: **27–02–2026 ರಂದು 15.00 ಗಂಟೆಗೆ ಮುಖ್ಯ ಅಭಿಯಂತರರ ಕಛೇರಿ, ವಲಯ–2, ಬೆಂಗಳೂರು ಕೇಂದ್ರ ನಗರ ಪಾಲಿಕೆ, ಅನೆಕ್ಸ್–3, 4ನೇ ಮಹಡಿ, ಜಿಬಿಎ ಕಛೇರಿ ಕಾಂಪೌಂಡ್, ಎನ್.ಆರ್. ಚೌಕ, ಬೆಂಗಳೂರು ಇಲ್ಲಿ ನಡೆಯುವುದು.** 3) ಭರ್ತಿ ಮಾಡಿದ ಟೆಂಡರ್ ಡಾಕ್ಯುಮೆಂಟ್‌ನ್ನು ಸಲ್ಲಿಸುವ ಕೊನೆಯ ದಿನಾಂಕ: **04–03–2026 ರಂದು 16.00 ಗಂಟೆವರೆಗೆ.** 4) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: **05–03–2026 ರಂದು 16.30 ಗಂಟೆಗೆ.** 5) ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: **ತಾಂತ್ರಿಕ ಬಿಡ್ ಅನುಮೋದನೆ ನಂತರ.** ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ಶಿವಾಜಿನಗರ ವಿಭಾಗ, ಬೆಂಕೇನಪಾ.

ಕರ್ನಾಟಕ ಸರ್ಕಾರ
ಹಾವೇರಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ದೇವಗಿರಿ–ಯಲ್ಲಾಪುರ, ಹಾವೇರಿ–581110
(ಕರ್ನಾಟಕ ಸರ್ಕಾರದ ಸ್ವಾಯತ್ತ ಸಂಸ್ಥೆ)

Website : https://himshaveri.karnataka.gov.in
E-mail : tenders.hims.dme@gmail.com

ಸಂ: ಹಿಮ್ಸ್/28/2025–26, ದಿನಾಂಕ : 23/02/2026

ಇ–ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಗಳ ಪಾರದರ್ಶಕ ಅಧಿನಿಯಮ–99/2000 ಮತ್ತು ಸರ್ಕಾರದಿಂದ ಕಾಲಕಾಲಕ್ಕೆ ಹೊರಡಿಸಿರುವ ಷರತ್ತುಗಳನ್ವಯ ನೋಂದಾಯಿತ ಅರ್ಹ ಸಂಸ್ಥೆಗಳಿಂದ/ಪ್ರತಿಷ್ಠಿತ ಮೂಲ ತಯಾರಕರು/ಅಧಿಕೃತ ಪ್ರತಿನಿಧಿಗಳು/ ಅಧಿಕೃತ ವಿತರಕರಿಂದ 2025–26ನೇ ಸಾಲಿಗಾಗಿ ಜಿಲ್ಲಾ ಆಸ್ಪತ್ರೆ, ಹಾವೇರಿಗೆ ಒಂದು ವರ್ಷದ ಅವಧಿಗೆ ಬೇಕಾದ ಔಷಧಿಗಳನ್ನು ಹಾಗೂ ಪ್ರಯೋಗಾಲಯ ಪರಿಕರಗಳನ್ನು ಖರೀದಿಸಲು ವಾರ್ಷಿಕ ದರ ಗುತ್ತಿಗೆ ಆದಾರದ ಮೇಲೆ ಖರೀದಿಸುವ ಕುರಿತು ಇ–ಟೆಂಡರ್ ಆಹ್ವಾನಿಸಲಾಗಿದೆ ಅರ್ಹ ಟೆಂಡರ್‌ದಾರರು ಕೆ.ಪಿ.ಪಿ. ಪೋರ್ಟಲ್ https://kppp.karnataka.gov.in ಮುಖಾಂತರ ಟೆಂಡರ್‌ನಲ್ಲಿ ಸಲ್ಲಿಸಬಹುದು. ಹೆಚ್ಚಿನ ವಿವರಗಳನ್ನು ಮೇಲ್ಕಂಡ ವಿಳಾಸದಲ್ಲಿ ಪಡೆಯುವುದು.

ಟೆಂಡರ್ ವೇಳಾಪಟ್ಟಿ : (1) ಟೆಂಡರ್ ಸಂಖ್ಯೆ DHFWS/2025-26/IND2272 (2) ಟೆಂಡರ್ ಅಪ್‌ಲೋಡ್ ಮಾಡುವ ಪ್ರಾರಂಭ ದಿನಾಂಕ : **23/02/2026** (3) ಇ ಎಂ ಡಿ ಮೊತ್ತ ರೂ. **4.50** ಲಕ್ಷ (4) ಟೆಂಡರ್ ಅಂದಾಜು ಮೌಲ್ಯ ರೂ. **300.00** ಲಕ್ಷಗಳು (5) ಪ್ರಿ–ಬಿಡ್ ಸಭೆಯ ದಿನಾಂಕ ಮತ್ತು ಸಮಯ : **09/03/2026** ಬೆಳಿಗ್ಗೆ 11.00 ಗಂಟೆಗೆ (6) ಟೆಂಡರ್ ಅಪ್‌ಲೋಡ್ ಮಾಡುವ ಕೊನೆಯ ದಿನಾಂಕ ಮತ್ತು ವೇಳೆ : **24/03/2026** ಸಾಯಂಕಾಲ 4.30 ಗಂಟೆಯವರೆಗೆ (7) ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ : **25/03/2026** (8) ಮೂಲ ದಾಖಲಾತಿಗಳ ಪರಿಶೀಲನೆ ದಿನಾಂಕ : ತಿಳಿಸಲಾಗುವುದು (9) ಔಷಧಗಳ ಹಾಗೂ ಪ್ರಯೋಗಾಲಯ ಪರಿಕರಗಳ ಮಾದರಿ ಸಲ್ಲಿಸುವ ದಿನಾಂಕ : ತಿಳಿಸಲಾಗುವುದು (10) ಹಣಕಾಸಿನ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ : ತಿಳಿಸಲಾಗುವುದು (11) ವ್ಯವಹರಿಸಬೇಕಾದ ಅಧಿಕಾರಿ ಹಾಗೂ ವಿಳಾಸ, ದೂರವಾಣಿ ಸಂಖ್ಯೆ (ರಜಾ ದಿನಗಳನ್ನು ಹೊರತುಪಡಿಸಿ) ನಿರ್ದೇಶಕರು, ಹಾವೇರಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾವೇರಿ **08375–200015/8660990320**

ಸಹಿ/– ಡೀನ್ ಮತ್ತು ನಿರ್ದೇಶಕರು,
ಹಾವೇರಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ಹಾವೇರಿ

ವಾಸಾಸಂಇ/ಹಾವೇರಿ/ಕೆಎಸ್‌ಎಂಸಿಎ/740/2025–26

ಕರ್ನಾಟಕ ಸರ್ಕಾರ
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ
HASSAN INSTITUTE OF MEDICAL SCIENCES, HASSAN (An Autonomous Institute under the Dept of Medical Education, Government of Karnataka) SRI CHAMARAJENDRA HOSPITAL CAMPUS, HASSAN

Website: https://himshassan.karnataka.gov.in/
Phone/Fax No.08172-231699, 231599,
Email:directorhims@yahoo.com
No : HIMS/TS/EQT/11/2025-TNDR-HIMS-HSN
Date: 19.02.2026

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ

ಸಂಸ್ಥೆಯ ಭೋದಕ ಆಸ್ಪತ್ರೆಯ ಮಕ್ಕಳ ಚಿಕಿತ್ಸಾ ವಿಭಾಗಕ್ಕೆ ಅಗತ್ಯವಿರುವ ವೈದ್ಯಕೀಯ ಉಪಕರಣಗಳ ಸರಬರಾಜಿಗಾಗಿ ನೊಂದಾಯಿಸಲ್ಪಟ್ಟ ಅಧಿಕೃತ ಮಾರಾಟಗಾರರಿಂದ ದ್ವಿ–ಲಕೋಟೆ ಪದ್ದತಿಯಲಿ ಅಲ್ಪಾವಧಿ ಇ–ಟೆಂಡರ್ ಆಹ್ವಾನಿಸಲಾಗಿದೆ. Sl.NO. 01)No.Tender Particulars: Invasive Standalone Neanatal Ventilators with High Frequency Oscillattion Capability with five years CMC/warranty Qty 05 EMD(Rs.)2,61,750-00 ಇ–ಪೋರ್ಟಲ್ ಮುಖಾಂತರ ನಿಗದಿತ ಶುಲ್ಕ(ಹಿಂದಿರುಗಿಸಲಾಗುವುದಿಲ್ಲ)ದೊಡನೆ ಇ–ಟೆಂಡರ್ ಅರ್ಜಿ ಸಲ್ಲಿಸುವ ದಿನಾಂಕ:21.02.2026.ರಿಂದ ಪ್ರಾರಂಭವಾಗುವುದು,ಭರ್ತಿ ಮಾಡಿದ ಇ–ಟೆಂಡರ್ ಅರ್ಜಿ ಸಲ್ಲಿಸುವ ಅಂತಿಮ ದಿನಾಂಕ:.27.02.2026.ರ ಸಂಜೆ 5.00ಗಂಟೆ. ಟೆಂಡರ್ ಪ್ರಕ್ರಿಯೆ ದಿನಾಂಕಗಳನ್ನು ಹಾಗೂ ಇತರೆ ವಿವರಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಸಿಸ್ಟಮ್ ಮುಖಾಂತರ https://kppp.karnataka.gov.in ವೆಬ್ ಸೈಟ್‌ನಲ್ಲಿವೀಕ್ಷಿಸಬಹುದು. ಹೆಚ್ಚಿನ ಮಾಹಿತಿಗಾಗಿ ಕಛೇರಿ ಕೆಲಸದ ವೇಳೆಯಲ್ಲಿ (ರಜಾ ದಿನಗಳನ್ನು ಹೊರತುಪಡಿಸಿ) ಸಂಪರ್ಕಿಸಬಹುದಾಗಿದೆ.

ಸಹಿ/–ಮುಖ್ಯ ಆಡಳಿತಾಧಿಕಾರಿಗಳು, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ.

ವಾಸಾಸಂಇ/ಹಿಸನಿ/ಹಾಸನ/1104/ಕೆಎಸ್‌ಎಂಸಿಎ/2025–26

ಕರ್ನಾಟಕ ಸೋಪ್ಸ್ ಅಂಡ್ ಡಿಟರ್ಜೆಂಟ್ಸ್ ಲಿಮಿಟೆಡ್
(ಕರ್ನಾಟಕ ಸರ್ಕಾರದ ಒಂದು ಉದ್ಯಮ)

An ISO-9001:2015 & 14001:2015 Company

ಶ್ರೀಗಂಧ ನಗರ: ಅಂಚೆ ಪೆಟ್ಟಿಗೆ ಸಂ.5531, ಬೆಂಗಳೂರು–ಪುಣೆ ಹೆದ್ದಾರಿ, ಬೆಂಗಳೂರು–560 055.
ದೂರವಾಣಿ: 080–22164879, 22164886, ಜಾಲತಾಣ: www.mysoresandal.org ಇ–ಮೇಲ್: ksdl.dgmmtls@gmail.com

ದಿನಾಂಕ: 24.02.2026

ಟೆಂಡರ್ ಪ್ರಕಟಣೆ

ಕೆಎಸ್&ಡಿಎಲ್ ಸಂಸ್ಥೆಗೆ ಈ ಕೆಳಕಂಡ ಸರಕು/ಸೇವೆ/ಕಾಮಗಾರಿಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಜಾಲತಾಣ (**https://kppp.karnataka.gov.in**)ದ ಮೂಲಕ ದ್ವಿ–ಲಕೋಟೆ ಪದ್ಧತಿಯಲ್ಲಿ ಟೆಂಡರನ್ನು ಆಹ್ವಾನಿಸಲಾಗಿದೆ.

ಕ್ರ. ಸಂ.	ಟೆಂಡರ್ ಸಂಖ್ಯೆ	ಟೆಂಡರ್ ಹೆಸರು	ಸಂಖ್ಯೆ	ಪ್ರಕಟಣೆ ದಿನಾಂಕ	ಬಿಡ್ ಸಲ್ಲಿಸಲು ಕೊನೆಯ ದಿನಾಂಕ
1	KSDL/2025-26/IND1021	ಮೀಥೈಲ್ ಲೊನೋನ್ ಗಾಮ್ಮಾ (Methyl Ionone Gamma)ಖರೀದಿ	33000 ಕೆ.ಜಿ.	23-02-2026	01-04-2026
2	KSDL/2025-26/IND1022	ಟೋನಲಿಡ್ (Tonalid)ಖರೀದಿ	50000 ಕೆ.ಜಿ.	23-02-2026	01-04-2026
3	KSDL/2025-26/IND1023	ಪೆಟಿಟ್‌ಗ್ರೇನ್ ಆಯಿಲ್ (Petitgrain oil)ಖರೀದಿ	11200 ಕೆ.ಜಿ.	23-02-2026	01-04-2026
4	KSDL/2025-26/IND1024	ಅಬ್ಬಲೈಡ್ (Abbalide)ಖರೀದಿ	44600 ಕೆ.ಜಿ.	23-02-2026	01-04-2026
5	KSDL/2025-26/IND1025	ಐಸೊಬೋರ್ನಿಲ್ ಸೈಕ್ಲೋ ಹೆಕ್ಸಾನಾಲ್ (Isobornyl Cyclo Hexanol) (IBCH)ಖರೀದಿ	66100 ಕೆ.ಜಿ.	23-02-2026	01-04-2026
6	KSDL/2025-26/IND1026	ಆಂಬ್ರೆಟೊಲೈಡ್ Ambrettolideಖರೀದಿ	3900 ಕೆ.ಜಿ.	23-02-2026	01-04-2026
7	KSDL/2025-26/IND1027	ಸ್ಯಾಂಡ್ರಾನಾಲ್ (Sandranol)ಖರೀದಿ	140600 ಕೆ.ಜಿ.	23-02-2026	01-04-2026
8	KSDL/2025-26/IND1008	ಸಲ್ಫೋಶೈನ್ DS 40 (Sulfoshine DS 40) ಖರೀದಿ	8600 ಕೆ.ಜಿ.	23-02-2026	10-03-2026
9	KSDL/2025-26/IND1009	ಹೈಡ್ರೋಲೈಸ್ಡ್ ಮಿಲ್ಕ್ ಪ್ರೋಟೀನ್(Hydrolized Milk Protein) ಖರೀದಿ	300 ಕೆ.ಜಿ.	23-02-2026	10-03-2026
10	KSDL/2025-26/IND1028	ಮೈಸೂರು ಸ್ಯಾಂಡಲ್ ಟಾಲ್ಕ್ 50 ಗ್ರಾಂ ಶ್ರಿಂಕ್ ಸ್ಲೀವ್ಸ್‌ಗಳ ಖರೀದಿ	4875000 ಸಂ.	24-02-2026	12-03-2026
11	KSDL/2025-26/IND1029	ಕ್ಯಾಪ್ ಸಹಿತ ಮೈಸೂರು ಸ್ಯಾಂಡಲ್ ಟಾಲ್ಕ್ 50 ಗ್ರಾಂ ಕಂಟೈನರ್‌ನ ಖರೀದಿ	4875000 ಸಂ.	24-02-2026	01-04-2026
12	KSDL/2025-26/IND1030	ಹನಿಕೂಂಬ್ ಪಾರ್ಟಿಶನ್ ಮತ್ತು ಟಾಪ್ ಪ್ಲೇಟ್‌ನೊಂದಿಗೆ ಮೈಸೂರು ಸ್ಯಾಂಡಲ್ ಟಾಲ್ಕ್ 50 ಗ್ರಾಂ ಇನ್ನರ್ ಮತ್ತು ಔಟರ್ ಕಾರೋಗೇಟೆಡ್ ಬಾಕ್ಸ್‌ನ ಖರೀದಿ.	48750 ಸಂ.	24-02-2026	12-03-2026
13	KSDL/2025-26/IND1031	ಮೈಸೂರು ಸ್ಯಾಂಡಲ್ ಟಾಲ್ಕ್ ಹಾಲೋಗ್ರಾಂ ಸ್ಟಿಕ್ಕರ್‌ಗಳ ಖರೀದಿ	6108440 ಸಂ.	24-02-2026	12-03-2026
14	KSDL/2025-26/IND1032	ವಿವಿಧ ರೀತಿಯ 250 ಮಿಲಿ (ಮುಂಭಾಗ ಮತ್ತು ಹಿಂಭಾಗ) ಹ್ಯಾಂಡ್‌ವಾಶ್ ಸ್ಟಿಕ್ಕರ್‌ಗಳ ಖರೀದಿ.	1243840 ಸೆಟ್	24-02-2026	12-03-2026
15	KSDL/2025-26/IND1033	ಮೈಸೂರು ಸ್ಯಾಂಡಲ್ ಮಿಲೇನಿಯಂ ಸೋಪ್–150 ಗ್ರಾಂಗಾಗಿ BOPP ಪೌಚ್ ಖರೀದಿ	121333 ಸಂ.	24-02-2026	12-03-2026
16	KSDL/2025-26/IND1034	ಶ್ರಿಂಕ್ ರ್ಯಾಪಿಂಗ್‌ಗಾಗಿ ಪಾಲಿಆಲಿಫಿನ್ ಫಿಲ್ಮ್ (POF) ರೋಲ್‌ಗಳ ಖರೀದಿ	217 ರೋಲ್	24-02-2026	12-03-2026
17	KSDL/2025-26/IND1035	ಮೈಸೂರು ಸ್ಯಾಂಡಲ್ ಕ್ಲಾಸಿಕ್ 125 ಗ್ರಾಂ ರಫ್ತು ಕಾರ್ಟನ್‌ಗಳ ಖರೀದಿ	117542 ಸಂ.	24-02-2026	12-03-2026
18	KSDL/2025-26/IND1036	ಎಂಎಸ್‌ಎಸ್ 75 ಗ್ರಾಂ (75 ಗ್ರಾಂ x 200 ಸಂಖ್ಯೆ) ರಫ್ತು ಕಾರೋಗೇಟೆಡ್ ಬಾಕ್ಸ್‌ನ ಖರೀದಿ.	4929 ಸಂ.	24-02-2026	12-03-2026
19	KSDL/2025-26/IND1037	ಎಂಎಸ್‌ಎಸ್ 75 ಗ್ರಾಂ (75 ಗ್ರಾಂ x 144 ಸಂಖ್ಯೆ) ರಫ್ತು ಕಾರೋಗೇಟೆಡ್ ಬಾಕ್ಸ್‌ನ ಖರೀದಿ.	8179 ಸಂ.	24-02-2026	12-03-2026
20	KSDL/2025-26/IND1038	ಮೈಸೂರು ಸ್ಯಾಂಡಲ್ ಬೇಬಿ ಸೋಪ್ 75 ಗ್ರಾಂ ಕಾರೋಗೇಟೆಡ್ ಬಾಕ್ಸ್‌ನ ಖರೀದಿ.	19608 ಸಂ.	24-02-2026	12-03-2026
21	KSDL/2025-26/IND1039	ಮೈಸೂರು ಸ್ಯಾಂಡಲ್ ಕ್ಲಾಸಿಕ್ ಮಾಯಿಶ್ಚರೈಸಿಂಗ್ ಸೋಪ್ 75 ಗ್ರಾಂ ಕಾರ್ಟನ್‌ಗಳ ಖರೀದಿ	391083 ಸಂ.	24-02-2026	12-03-2026
22	KSDL/2025-26/IND1040	ಮೈಸೂರು ಸ್ಯಾಂಡಲ್ ಟಾಲ್ಕ್ 100 ಗ್ರಾಂ ಶ್ರಿಂಕ್ ಸ್ಲೀವ್ಸ್‌ಗಳ ಖರೀದಿ	1555667 ಸಂ.	24-02-2026	12-03-2026
23	KSDL/2025-26/IND1041	ಪಾರ್ಟಿಶನ್ ಮತ್ತು ಟಾಪ್ ಪ್ಲೇಟ್‌ನೊಂದಿಗೆ ಮೈಸೂರು ಸ್ಯಾಂಡಲ್ ಟಾಲ್ಕ್ 100 ಗ್ರಾಂ ಕಾರೋಗೇಟೆಡ್ ಬಾಕ್ಸ್‌ನ ಖರೀದಿ.	54167 ಸಂ.	24-02-2026	12-03-2026
24	KSDL/2025-26/IND1042	ಮೈಸೂರು ಸ್ಯಾಂಡಲ್ ಗೋಲ್ಡ್ ಸೋಪ್ 150 ಗ್ರಾಂ (ಎಸ್) ಕಾರ್ಟನ್‌ಗಳ ಖರೀದಿ	271375 ಸಂ.	24-02-2026	12-03-2026

ಯಾವುದೇ ಹೆಚ್ಚಿನ ವಿಚಾರಣೆ/ಸ್ಪಷ್ಟೀಕರಣಕ್ಕೆ ಕೆಳಕಂಡ ಸಹಿದಾರರನ್ನು ಸಂಪರ್ಕಿಸಬಹುದು.

ಸಹಿ/–ಸಹಾಯಕ ಪ್ರಧಾನ ವ್ಯವಸ್ಥಾಪಕರು (ಸಾಮಗ್ರಿ)

ಗುಲಬರ್ಗಾ ವಿಶ್ವವಿದ್ಯಾಲಯದ 43ನೇ ಘಟಿಕೋತ್ಸವದಲ್ಲಿ ರಾಜ್ಯಪಾಲ ಥಾವರ್ ಚಂದ್ ಗೆಹಲೋತ್ ಅವರು ರೈತ ಮುಖಂಡ ಕೇದಾರಲಿಂಗಯ್ಯ ಹಿರೇಮಠ, ಮಾಜಿ ಸಚಿವರಾದ ಮುರುಗೇಶ ನಿರಾಣಿ, ಪಿ.ಜಿ.ಆರ್. ಸಿಂಧ್ಯಾ ಅವರಿಗೆ ಗೌರವ ಡಾಕ್ಟರೇಟ್ ನೀಡಿ ಗೌರವಿಸಿದರು. ಕುಲಸಚಿವ ಪ್ರೊ.ರಮೇಶ ಲಂಡನಕರ್, ಕುಲಪತಿ ಪ್ರೊ.ಶಶಿಕಾಂತ ಎಸ್. ಉಡಿಕೇರಿ, ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್, ವಿಶ್ರಾಂತ ಕುಲಪತಿ ಪ್ರೊ.ಎಲ್.ಎಂ.ಪಟ್ನಾಯಕ್, ಮೌಲ್ಯಮಾಪನ ಕುಲಸಚಿವ ಎನ್. ಜಿ.ಕಣ್ಣೂರ ಭಾಗವಹಿಸಿದ್ದರು –ಪ್ರಜಾವಾಣಿ ಚಿತ್ರ

ಸಿಇಟಿ: ಅರ್ಜಿ ತಿದ್ದುಪಡಿಗೆ ಮಾರ್ಚ್ 30ರವರೆಗೆ ಅವಕಾಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಂಜಿನಿಯರಿಂಗ್ ಸೇರಿದಂತೆ ವಿವಿಧ ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ನಡೆಯುವ ಸಿಇಟಿಗೆ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳು ತಮ್ಮ ಅರ್ಜಿಗಳಲ್ಲಿನ ಲೋಪಗಳನ್ನು ತಿದ್ದುಪಡಿ ಮಾಡಿಕೊಳ್ಳಲು ಮಾರ್ಚ್ 30ರವರೆಗೆ ಅವಕಾಶ ನೀಡಲಾಗಿದೆ.

ಅರ್ಜಿ ಸಲ್ಲಿಸಲು ಫೆ.27ರವರೆಗೆ ಅವಕಾಶ ಇದೆ. ಶುಲ್ಕ ಪಾವತಿಗೆ ಮಾರ್ಚ್ 3 ಕೊನೆಯ ದಿನ. ಈ ನಿಗದಿತ ಅವಧಿಯ ಒಳಗೆ ಅರ್ಜಿ ಸಲ್ಲಿಸಿದವರು ತಿದ್ದುಪಡಿ ಮಾಡಿಕೊಳ್ಳಬಹುದು. ಆದರೆ, ಅರ್ಜಿ ಸಲ್ಲಿಕೆಯ ದಿನಾಂಕ ವಿಸ್ತರಣೆ ಇರುವುದಿಲ್ಲ ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಹೇಳಿದೆ.

ಒಳಮೀಸಲಾತಿಗೆ ಆರ್‌ಡಿ ಕಡ್ಡಾಯ: ಪರಿಶಿಷ್ಟ ಜಾತಿಯ ಅಭ್ಯರ್ಥಿಗಳು ಆರ್‌ಡಿ ಸಂಖ್ಯೆ ಇರುವ ಪ್ರವರ್ಗ-ಎ, ಬಿ ಮತ್ತು ಸಿ ಎಂದು ಮುದ್ರಿತವಾಗಿರುವ ಪ್ರಮಾಣ ಪತ್ರವನ್ನು ತಹಶೀಲ್ದಾರರಿಂದ ಪಡೆದು ಅರ್ಜಿಯ ಪೋರ್ಟಲ್‌ನಲ್ಲಿ ಆರ್‌ಡಿ ಸಂಖ್ಯೆಯನ್ನು ದಾಖಲಿಸಬೇಕು. ಈ ತಿದ್ದುಪಡಿಗೂ ಮಾರ್ಚ್ 30ರವರೆಗೆ ಸಮಯ ನೀಡಲಾಗಿದೆ

ಪರಿಶಿಷ್ಟ ಜಾತಿಯ 40 ಸಾವಿರ ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದ್ದು, 20 ಸಾವಿರ ಅಭ್ಯರ್ಥಿಗಳು ಮಾತ್ರ ಒಳ ಮೀಸಲಾತಿ ಪ್ರಕಾರ ಪ್ರವರ್ಗಗಳ ಆರ್‌ಡಿ ಸಂಖ್ಯೆ ದಾಖಲಿಸಿದ್ದಾರೆ. ಉಳಿದವರು ಪರಿಶಿಷ್ಟ ಜಾತಿ ಎಂದು ನಮೂದಾಗಿರುವ ಆರ್‌ಡಿ ಸಂಖ್ಯೆ ನಮೂದಿಸಿದ್ದಾರೆ. ಒಳ ಮೀಸಲಾತಿ ಪ್ರಕಾರ ಪ್ರಮಾಣ ಪತ್ರ ಪಡೆಯದವರು ತಕ್ಷಣ ತಹಶೀಲ್ದಾರ್ ಅವರಿಂದ ಪಡೆದು, ಹೊಸ ಸಂಖ್ಯೆ ದಾಖಲಿಸುವಂತೆ ಪ್ರಾಧಿಕಾರ ಹೇಳಿದೆ.

ನೀಟ್‌ಗೆ ಪ್ರತ್ಯೇಕ ಅರ್ಜಿ

ವೈದ್ಯಕೀಯ, ದಂತ ವೈದ್ಯಕೀಯ ಮತ್ತು ಆಯುಷ್ ಕೋರ್ಸ್‌ಗಳ ಪ್ರವೇಶಕ್ಕೆ ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (ಎನ್‌ಟಿಎ) ನಡೆಸುವ ನೀಟ್ ಅಂಕಗಳನ್ನೇ ಮಾನದಂಡವಾಗಿ ಪರಿಗಣಿಸಲಾಗುತ್ತದೆ. ಹಾಗಾಗಿ, ಎನ್‌ಟಿಎಗೂ ಪ್ರತ್ಯೇಕ ಅರ್ಜಿ ಸಲ್ಲಿಸಬೇಕಾಗುತ್ತದೆ ಎಂದು ಕೆಇಎ ಹೇಳಿದೆ.

ಎನ್‌ಟಿಎ ನೀಟ್ ನಡೆಸಿದರೂ ರಾಜ್ಯ ಕೋಟಾದ ಸೀಟುಗಳ ಹಂಚಿಕೆ ಪ್ರಕ್ರಿಯೆಯನ್ನು ಕೆಇಎ ಮೂಲಕ ಮಾಡಲಾಗುತ್ತದೆ. ನೀಟ್‌ಗೆ ಪ್ರತ್ಯೇಕ ಅರ್ಜಿ ಸಲ್ಲಿಸುವವರು ಕೆಇಎನಲ್ಲೂ ಅರ್ಜಿ ಸಲ್ಲಿಸಿ, ನೋಂದಣಿ ಮಾಡಿರಬೇಕು. ನೀಟ್ ಫಲಿತಾಂಶ ಬಂದ ನಂತರ ನೀಟ್ ರೋಲ್ ನಂಬರ್ ಅನ್ನು ಸಿಇಟಿ ಅರ್ಜಿಯೊಂದಿಗೆ ಲಿಂಕ್ ಮಾಡಲು ಅವಕಾಶ ನೀಡಲಾಗುವುದು ಎಂದು ಮಾಹಿತಿ ನೀಡಿದೆ.

ಮಂದಾರ್ತಿ: ಸಾಮೂಹಿಕ ವಿವಾಹ ಕಾರ್ಯಕ್ರಮಕ್ಕೆ ನೋಂದಣಿ

ಬ್ರಹ್ಮಾವರ (ಉಡುಪಿ): ತಾಲ್ಲೂಕಿನ ಮಂದಾರ್ತಿ ದುರ್ಗಾಪರಮೇಶ್ವರಿ ದೇವಸ್ಥಾನದಲ್ಲಿ 24ನೇ ವರ್ಷದ ಸಾಮೂಹಿಕ ವಿವಾಹ ಕಾರ್ಯಕ್ರಮ ‘ಮಾಂಗಲ್ಯ ಭಾಗ್ಯ’ ಏಪ್ರಿಲ್ 8ರಂದು ನಡೆಯಲಿದೆ.

ವಧುವಿಗೆ ಕರಿಮಣಿ ಸರ, ಧಾರೆ ಸೀರೆ ಮತ್ತು ವರನಿಗೆ ಕುರ್ತಾ ಪೈಜಾಮ, ಹೂವಿನ ಹಾರ ದೇವಸ್ಥಾನದ ವತಿಯಿಂದ ನೀಡಲಾಗುವುದು. ಜೋಡಿಗಳ ವಿವಾಹ ನೋಂದಣಿಗೆ ಮದುವೆ ದಿನವೇ ಕ್ರಮವಹಿಸಲಾಗುವುದು. ವಧು–ವರರು ರಾಜ್ಯ ಸರ್ಕಾರದ ಪ್ರೋತ್ಸಾಹಧನ ಪಡೆಯಲು ಅರ್ಹರಾಗಿರುತ್ತಾರೆ.

ಆಸಕ್ತರು ದೇವಸ್ಥಾನದ ಕಚೇರಿಯಲ್ಲಿ ಮಾರ್ಚ್ 10ರೊಳಗೆ ಹೆಸರು ನೋಂದಾಯಿಸಬೇಕು ಎಂದು ದೇವಸ್ಥಾನದ ಅಧ್ಯಕ್ಷ ಎಚ್. ಧನಂಜಯ ಶೆಟ್ಟಿ, ಕಾರ್ಯನಿರ್ವಹಣಾ ಅಧಿಕಾರಿ ಎಸ್.ಪಿ.ಬಿ. ಮಹೇಶ ತಿಳಿಸಿದ್ದಾರೆ. ಮಾಹಿತಿಗೆ ದೇವಸ್ಥಾನ ಕಚೇರಿ (9449470403, 9071160933) ಸಂಪರ್ಕಿಸಬಹುದು.

ಮಾರಿಕಾಂಬಾ ರಥೋತ್ಸವ ಇಂದು

ಪ್ರಜಾವಾಣಿ ವಾರ್ತೆ

ಶಿರಸಿ: ಎರಡು ವರ್ಷಕ್ಕೊಮ್ಮೆ ಜರುಗುವ ಇಲ್ಲಿನ ಮಾರಿಕಾಂಬಾ ದೇವಿಯ ಮಹಾರಥೋತ್ಸವ ಬುಧವಾರ (ಫೆ.25) ಬೆಳಿಗ್ಗೆ ನಡೆಯಲಿದೆ. ರಥೋತ್ಸವವನ್ನು ಕಣ್ತುಂಬಿಕೊಳ್ಳಲು ಹಾವೇರಿ, ಗದಗ ಸೇರಿ ವಿವಿಧ ಜಿಲ್ಲೆಗಳಿಂದ ಅಪಾರ ಸಂಖ್ಯೆಯಲ್ಲಿ ಜನರು ಬಂದಿದ್ದಾರೆ. ಗೋವಾ, ಮಹಾರಾಷ್ಟ್ರ ರಾಜ್ಯದಿಂದಲೂ ಭಕ್ತರು ದೇವಾಲಯದಲ್ಲಿ ಬೀಡುಬಿಟ್ಟಿದ್ದಾರೆ.

ಫೆಬ್ರುವರಿ 26ರ ನಸುಕಿನ 5ರಿಂದ ಜಾತ್ರಾ ಗದ್ದುಗೆಯಲ್ಲಿ ದೇವಿಗೆ ಹಣ್ಣು–ಕಾಯಿ, ಉಡಿ, ಹರಕೆ ಸೇವೆಗಳು ನಡೆಯಲಿವೆ. ಬೆಳಿಗ್ಗೆ 6 ರಿಂದ ಬೇವಿನ ಉಡುಗೆ ಸೇವೆ ಆರಂಭವಾಗುತ್ತದೆ. ಪ್ರಾಣಿ ಬಲಿ ಇಲ್ಲದಿರುವುದು ವಿಶೇಷ.

ದೇವಿಯ ಪತಿ ಎನ್ನಲಾಗುವ ಪಟ್ಟದ ಕೋಣದ ಹಣೆಗೆ ಎಣ್ಣೆ ಹಾಕಿ, ಅರಿಸಿನ–ಕುಂಕುಮ ಹಚ್ಚಿ ಜನರು ಪೂಜಿಸುತ್ತಾರೆ. ಬೂದುಗುಂಬಳ ಕಾಯಿಯ ಸಾತ್ವಿಕ ಬಲಿ ನೀಡಿದ ಬಳಿಕ, ರಥೋತ್ಸವ ಆರಂಭವಾಗುತ್ತದೆ.

ಮಾರಿಕಾಂಬಾ ದೇವಿ

ಲಕ್ಕುಂಡಿ: ಪ್ರಾಚ್ಯ ಅವಶೇಷ ಅಧ್ಯಯನಕ್ಕೆ ತಜ್ಞರ ಸಮಿತಿ ರಚನೆ

ಪ್ರಜಾವಾಣಿ ವಾರ್ತೆ

ಗದಗ: ತಾಲ್ಲೂಕಿನ ಲಕ್ಕುಂಡಿಯ ಕೋಟೆ ವೀರಭದ್ರೇಶ್ವರ ಆವರಣದಲ್ಲಿ ಉತ್ಖನನದ ವೇಳೆ ಸಿಕ್ಕ ಪ್ರಾಚ್ಯ ಅವಶೇಷಗಳ ಅಧ್ಯಯನಕ್ಕೆ ಸರ್ಕಾರ ಪುರಾತತ್ವ ಶಾಸ್ತ್ರಜ್ಞ ಎಂ.ಎಸ್. ಕೃಷ್ಣಮೂರ್ತಿ ಅಧ್ಯಕ್ಷತೆಯಲ್ಲಿ ತಜ್ಞರ ಸಮಿತಿ ರಚಿಸಿದೆ.

ಇತಿಹಾಸ ತಜ್ಞರಾದ ಡಾ. ರಾಘವೇಂದ್ರ ರಾವ್ ಎಚ್.ಕುಲಕರ್ಣಿ, ಪ್ರೊ. ಚೂಡಾಮಣಿ ನಂದಗೋಪಾಲ, ಹನುಮಾಕ್ಷಿ ಗೋಗಿ, ರತ್ನಶಾಸ್ತ್ರಜ್ಞ ಪ್ರಭು ಕಮ್ಮಾರ ಅವರು ಸಮಿತಿ ಸದಸ್ಯರಾಗಿದ್ದಾರೆ. ಪುರಾತತ್ವ ಶಾಸ್ತ್ರಜ್ಞ ಡಾ. ಆರ್.ಶೇಜೇಶ್ವರ ಸಮಿತಿಯ ಕಾರ್ಯದರ್ಶಿಯನ್ನಾಗಿ ಸರ್ಕಾರ ನೇಮಕ ಮಾಡಿದೆ. ಸಮಿತಿಯು ನಿಧಿಯ ನಿಖರವಾದ ಕಾಲಗಣನೆ, ಬಳಕೆ, ಮೌಲ್ಯಮಾಪನ ಮತ್ತು ಇನ್ನಿತರೆ ಅಂಶಗಳ ಕುರಿತು ತಜ್ಞರು ಅಧ್ಯಯನ ನಡೆಸಲಿದ್ದು, 15 ದಿನಗಳೊಳಗೆ ಸರ್ಕಾರಕ್ಕೆ ವರದಿ ಸಲ್ಲಿಸಲಿದೆ.

ಅಗ್ನಿಶಾಮಕ ಇಲಾಖೆ: 1600 ಹುದ್ದೆ ಭರ್ತಿಗೆ ಕ್ರಮ

ಇಲಾಖೆಯ ಸಿಬ್ಬಂದಿಗೆ ಮುಖ್ಯಮಂತ್ರಿ ಪದಕ ಪ್ರದಾನ ಮಾಡಿದ ಪರಮೇಶ್ವರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಗ್ನಿಶಾಮಕ ಮತ್ತು ತುರ್ತುಸೇವೆಗಳ ಇಲಾಖೆಯಲ್ಲಿ ಖಾಲಿ ಇರುವ 1,600ಕ್ಕೂ ಅಧಿಕ ಹುದ್ದೆಗಳನ್ನು ತುಂಬುವ ಸಂಬಂಧ ಮುಖ್ಯಮಂತ್ರಿಗೆ ಪ್ರಸ್ತಾವನೆ ಸಲ್ಲಿಸಿದ್ದು, ಶೀಘ್ರವೇ ಭರ್ತಿ ಮಾಡಲಾಗುವುದು ಎಂದು ಗೃಹ ಸಚಿವ ಜಿ.ಪರಮೇಶ್ವರ ಹೇಳಿದರು.

ಆರ್.ಎ.ಮುಂಡ್ಕುರ್ ಅಗ್ನಿಶಾಮಕ ತರಬೇತಿ ಅಕಾಡೆಮಿಯಲ್ಲಿ ಮಂಗಳವಾರ ನಡೆದ ಕಾರ್ಯಕ್ರಮದಲ್ಲಿ ರಾಜ್ಯ ಅಗ್ನಿಶಾಮಕ ಮತ್ತು ತುರ್ತುಸೇವಾ ಇಲಾಖೆ, ಗೃಹರಕ್ಷಕ ದಳ, ಪೌರರಕ್ಷಣೆ ಮತ್ತು ಎಸ್‌ಡಿಆರ್‌ಎಫ್ ಅಧಿಕಾರಿ, ಸಿಬ್ಬಂದಿಗೆ 'ಮುಖ್ಯಮಂತ್ರಿ ಪದಕ' ಪ್ರದಾನ ಹಾಗೂ 40 ಹೊಸ ಅಗ್ನಿಶಾಮಕ ಜಲ ವಾಹನಗಳನ್ನು ಹಸ್ತಾಂತರಿಸಿ ಮಾತನಾಡಿದರು.

ಖಾಲಿ ಹುದ್ದೆ ಭರ್ತಿ ಸಂಬಂಧ ಬಜೆಟ್ ಪೂರ್ವಭಾವಿ ಸಭೆಯಲ್ಲಿ ಮುಖ್ಯಮಂತ್ರಿ ಅವರಿಗೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ. 15ನೇ ಹಣಕಾಸಿನ ಯೋಜನೆಯಡಿ ₹329 ಕೋಟಿ ಒದಗಿಸಲಾಗಿತ್ತು. 21 ಅಗ್ನಿಶಾಮಕ ಠಾಣೆ ನಿರ್ಮಾಣಕ್ಕೆ ₹98 ಕೋಟಿ ಖರ್ಚು ಮಾಡಲಾಗಿದೆ. ಆಧುನಿಕ ಉಪಕರಣಗಳ ಖರೀದಿ, ತರಬೇತಿ ಕೇಂದ್ರದ ಉನ್ನತಿಕರಣಕ್ಕೆ ಕ್ರಮ ವಹಿಸಲಾಗಿದೆ ಎಂದರು.

ಇನ್ನೂ 15 ಹೊಸ ತಾಲ್ಲೂಕುಗಳಲ್ಲಿ ಅಗ್ನಿಶಾಮಕ ಠಾಣೆಗಳನ್ನು ಆರಂಭಿಸಲು ಕೋರಿ ಪ್ರಸ್ತಾವ ಸಲ್ಲಿಸಲಾಗಿದೆ. ಪೊಲೀಸ್ ಗೃಹ ಯೋಜನೆಯಡಿ 40 ಸಾವಿರ ಮನೆ ನಿರ್ಮಿಸಲಾಗಿದ್ದು, ಅದೇ ಮಾದರಿಯಲ್ಲಿ ಅಗ್ನಿಶಾಮಕ ಸಿಬ್ಬಂದಿಗೆ ವಸತಿ ಗೃಹ ಕಲ್ಪಿಸುವ ತೀರ್ಮಾನ ಮಾಡಲಾಗಿದೆ. ಇದಕ್ಕೆ ಅನುದಾನ ಒದಗಿಸಲಾಗುವುದು ಎಂದು ತಿಳಿಸಿದರು.

ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಯು ಉತ್ತಮ ಕೆಲಸದ ಮೂಲಕ ರಾಷ್ಟ್ರ ಮಟ್ಟದಲ್ಲಿ ಜನಮನ್ನಣೆ ಪಡೆದಿದೆ. ನಗರ ಪ್ರದೇಶಗಳಲ್ಲಿ ಹೆಚ್ಚಿನ ಅವಘಡಗಳು ಸಂಭವಿಸುತ್ತವೆ. ತುರ್ತು ಸಂದರ್ಭದಲ್ಲಿ ಪ್ರಾಣ ಒತ್ತೆ ಇಟ್ಟು, ಸಾರ್ವಜನಿಕರ ಆಸ್ತಿ ಮತ್ತು ನಾಗರಿಕರ ಪ್ರಾಣ ರಕ್ಷಣೆ ಮಾಡುವ ಕೆಲಸವನ್ನು ಸಿಬ್ಬಂದಿ ಮಾಡುತ್ತಿದ್ದಾರೆ. ಪ್ರವಾಹ ಸಂದರ್ಭದಲ್ಲಿ ಜೀವದ ಹಂಗು ತೊರೆದು ಜನರ ರಕ್ಷಣೆ ಮಾಡಿರುವುದನ್ನು ಮರೆಯುವಂತಿಲ್ಲ ಎಂದು ಹೇಳಿದರು.

ಮಡಿಕೇರಿಯಲ್ಲಿ ಸಂಭವಿಸಿದ ಪ್ರವಾಹದ ವೇಳೆ ಒಂಟಿ ಮನೆಗಳಲ್ಲಿದ್ದ ಜನರನ್ನು ರಕ್ಷಣೆ ಮಾಡಲು ತೆಗೆದುಕೊಂಡ ನಿರ್ಧಾರ ಮತ್ತು ಪ್ರಯತ್ನಗಳು ಅತ್ಯಂತ ಶ್ಲಾಘನೀಯ. ಇಲಾಖೆ ಕೆಲಸ ಸುಲಭ ಎಂದು ಹೇಳಲಾಗುವುದಿಲ್ಲ. ದೇಶದ ದಕ್ಷಿಣ ಭಾಗದ ರಾಜ್ಯಗಳಲ್ಲಿ ಕರ್ನಾಟಕ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆ ಅತ್ಯಂತ ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿದೆ ಎಂದರು.

ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಮಹಾ ನಿರ್ದೇಶಕ ಪ್ರಶಾಂತ್ ಕುಮಾರ್ ಠಾಕೂರ್, ಗೃಹ ಇಲಾಖೆ ಪ್ರಧಾನ ಕಾರ್ಯದರ್ಶಿ ಕೆ.ವಿ.ಶರತ್ ಚಂದ್ರ, ಐಪಿಎಸ್ ಅಧಿಕಾರಿ ಸವಿತಾ, ಸಂಚಾರ ವಿಭಾಗದ ಡಿಸಿಪಿ ಗೋಪಾಲ್ ಹಾಜರಿದ್ದರು.

ಬೆಂಗಳೂರಿನಲ್ಲಿ ಮಂಗಳವಾರ ಏರ್ಪಡಿಸಿದ್ದ ಸಮಾರಂಭದಲ್ಲಿ ಅಗ್ನಿಶಾಮಕ, ಗೃಹ ರಕ್ಷಕ, ರಾಜ್ಯ ವಿಪತ್ತು ಸ್ಪಂದನಾ ಪಡೆ ಅಧಿಕಾರಿ ಮತ್ತು ಸಿಬ್ಬಂದಿಗೆ 'ಮುಖ್ಯಮಂತ್ರಿ ಪದಕ' ಪ್ರದಾನ ಮಾಡಲಾಯಿತು. ಜಿ.ಪರಮೇಶ್ವರ, ಕೆ.ವಿ. ಶರತ್‌ಚಂದ್ರ, ಪ್ರಶಾಂತ್ ಕುಮಾರ್ ಠಾಕೂರ್ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ಕಲ್ಲು ತೂರಾಟ: ಬಿಗುವಿನ ಸ್ಥಿತಿ ಏಳು ಬಾಲಕರ ಬಂಧನ

ಪ್ರಜಾವಾಣಿ ವಾರ್ತೆ

ಭಟ್ಕಳ (ಉತ್ತರ ಕನ್ನಡ): ತಾಲ್ಲೂಕಿನ ಮುರುಡೇಶ್ವರ-ಬೈಲೂರು ಮಾರ್ಗದ ತೆಂಗಾರ ರಸ್ತೆಯ ಅಕ್ಕಪಕ್ಕದ ಕೆಲ ಹಿಂದೂ ಮನೆಗಳ ಮೇಲೆ ಸೋಮವಾರ ರಾತ್ರಿ ಬೈಕ್‌ನಲ್ಲಿ ಬಂದ 7 ಮಂದಿ ಮುಸ್ಲಿಂ ಬಾಲಕರು ಕಲ್ಲು ತೂರಾಟ ನಡೆಸಿದರು. ಇದರಿಂದ ಕೆಲ ಹೊತ್ತು ಬಿಗುವಿನ ವಾತಾವರಣ ನಿರ್ಮಾಣವಾಗಿತ್ತು.

ಕಲ್ಲು ತೂರಾಟದಿಂದ ಮನೆಗಳ ಕಿಟಕಿ ಗಾಜುಗಳಿಗೆ ಹಾನಿಯಾಗಿದೆ. ಘಟನೆ ವೇಳೆ ಸಿಕ್ಕಿಬಿದ್ದ ಇಬ್ಬರು ಬಾಲಕರನ್ನು ಜನರೇ ಪೊಲೀಸರಿಗೆ ಒಪ್ಪಿಸಿದರು. ಬಳಿಕ ಪೊಲೀಸರು ಇನ್ನೂ ಐವರು ಬಾಲಕರನ್ನು ವಶಕ್ಕೆ ಪಡೆದರು.

'ವೈದ್ಯಕೀಯ ಪರೀಕ್ಷೆ ನಡೆಸಿದಾಗ, ಈ ಎಲ್ಲರೂ ಮಾದಕವಸ್ತು ಸೇವಿಸಿದ್ದರು ಎಂಬುದು ದೃಢಪಟ್ಟಿದೆ. ಎಲ್ಲರನ್ನೂ ಬಾಲ ನ್ಯಾಯಮಂಡಳಿ ಎದುರು ಹಾಜರುಪಡಿಸಲಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

ಕಲ್ಲುತೂರಾಟ ನಡೆಸಿದವರ ವಿರುದ್ಧ ಕ್ರಮ ಮತ್ತು ಅವರನ್ನು ಪ್ರಚೋದಿಸಿದವರ ಬಂಧನಕ್ಕೆ ಒತ್ತಾಯಿಸಿ ಮುರುಡೇಶ್ವರ ಠಾಣೆಯ ಮುಂಭಾಗ ಹಿಂದೂ ಜಾಗರಣಾ ವೇದಿಕೆ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

'ಮುನ್ನೆಚ್ಚರಿಕೆಯಾಗಿ ಬೈಲೂರು, ಮುರುಡೇಶ್ವರ ಭಾಗದಲ್ಲಿ ಹೆಚ್ಚಿನ ಪೊಲೀಸರನ್ನು ನಿಯೋಜಿಸಲಾಗಿದೆ. ಶಾಂತಿ ಸಭೆ ನಡೆಸಿ, ಸ್ಥಳೀಯರಲ್ಲಿ ಧೈರ್ಯ ಮೂಡಿಸಲಾಗಿದೆ. ಸದ್ಯಕ್ಕೆ ಪರಿಸ್ಥಿತಿ ನಿಯಂತ್ರಣದಲ್ಲಿದೆ. ಜನರು ವದಂತಿಗಳಿಗೆ ಕಿವಿಗೊಡಬಾರದು' ಎಂದು ಎಸ್‌ಪಿ ದೀಪನ್ ಎಂ.ಎನ್ ತಿಳಿಸಿದ್ದಾರೆ.

ಬಾಗಲಕೋಟೆ ಪ್ರಕರಣ: ನಾಳೆ ಪ್ರತಿಭಟನೆ

ಹುಬ್ಬಳ್ಳಿ: 'ಬಾಗಲಕೋಟೆಯ ಕಲ್ಲು ತೂರಾಟ ಪ್ರಕರಣಕ್ಕೆ ಸಂಬಂಧ ಉಳಿದವರನ್ನು ಶೀಘ್ರ ಬಂಧಿಸಲು ಆಗ್ರಹಿಸಿ ಫೆ.26ರಂದು ಹುಬ್ಬಳ್ಳಿ, ಬಾಗಲಕೋಟೆಯಲ್ಲಿ ಪ್ರತಿಭಟನೆ ನಡೆಸಲಾಗುವುದು' ಎಂದು ಶ್ರೀರಾಮಸೇನೆ ಸಂಘಟನೆಯ ಸಂಸ್ಥಾಪಕ ಅಧ್ಯಕ್ಷ ಪ್ರಮೋದ ಮುತಾಲಿಕ್ ಇಲ್ಲಿ ತಿಳಿಸಿದರು.

'ಕಾಂಗ್ರೆಸ್ ತುಷ್ಟೀಕರಣ ನೀತಿಯಿಂದ ಕೆಲ ಮುಸ್ಲಿಮರು ಮೆರೆದಾಡುತ್ತಿದ್ದಾರೆ. ಇಂಥ ಬೆಳವಣಿಗೆಗೆ ರಾಜ್ಯ ಸರ್ಕಾರ ಕಡಿವಾಣ ಹಾಕಬೇಕು' ಎಂದು ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಒತ್ತಾಯಿಸಿದರು.

ತಕ್ಷಣವೇ ಸಿಗಲಿದೆ ಮ್ಯುಟೇಷನ್ ಪ್ರತಿ

ಒಂದನೇ ಪುಟದಿಂದ...

'ಈ ಸೇವೆಯನ್ನು ಒಂದು ತಿಂಗಳಿನಿಂದ ಮಂಡ್ಯದಲ್ಲಿ ಅನುಷ್ಠಾನಗೊಳಿಸಿ, ಸಾಧಕ-ಬಾಧಕ ಪರಿಶೀಲಿಸಿದ್ದೇವೆ. ಇವತ್ತಿನಿಂದಲೇ ಶೇ 98 ರಷ್ಟು ಎಲ್ಲಾ ಖಾತೆ ಬದಲಾವಣೆಗಳೂ ಸ್ವಯಂ ಚಾಲಿತಗೊಳ್ಳಲಿವೆ' ಎಂದರು.

ಕೆಲ ಅಧಿಕಾರಿಗಳ ಸ್ವೇಚ್ಛಾಚಾರದಿಂದ ಮತ್ತು ಮಧ್ಯವರ್ತಿಗಳ ಕಿರುಕುಳದಿಂದ ಸಾರ್ವಜನಿಕರು ಶೋಷಣೆಗೆ ಒಳಗಾಗುತ್ತಿದ್ದರು. ಸರ್ಕಾರಕ್ಕೂ ಕೆಟ್ಟ ಹೆಸರು ಬರುತ್ತಿತ್ತು. ಸ್ವಯಂ ಚಾಲಿತ ಮ್ಯುಟೇಷನ್‌ನಿಂದ ಈ ಎಲ್ಲ ಸಮಸ್ಯೆಗಳಿಗೂ ಶಾಶ್ವತ ಪರಿಹಾರ ಸಿಕ್ಕಿದಂತಾಗಿದೆ. ಇನ್ನು ಮುಂದೆ ಜನಸಾಮಾನ್ಯರು ಖಾತೆ ಬದಲಾವಣೆಗಾಗಿ ಸರ್ಕಾರಿ ಕಚೇರಿಗಳಿಗೆ ಅಲೆಯುವಂತಿಲ್ಲ. ಮನೆಯಲ್ಲೇ ಕುಳಿತು ಮೊಬೈಲ್ ಮೂಲಕ ಆನ್‌ಲೈನ್‌ನಲ್ಲೇ ತಮ್ಮ ಖಾತೆ ಬದಲಾವಣೆ ಕೆಲಸಗಳನ್ನು ನಿರ್ವಹಿಸಬಹುದು ಎಂದು ಕೃಷ್ಣಬೈರೇಗೌಡ ಹೇಳಿದರು. '2024ನೇ ಏ. 1ರಿಂದ 2026ರ ಫೆ. 20ರವರೆಗಿನ ಅವಧಿಯಲ್ಲಿ 35,11,987 ಖಾತೆ ಬದಲಾವಣೆಯನ್ನು ಸ್ವಯಂ ಚಾಲಿತವಾಗಿ ಮಾಡಿದ್ದೇವೆ' ಎಂದು ಹೇಳಿದರು.

ಯುವಜನರ ಪ್ರತಿಭಟನೆ ಗಂಭೀರವಾಗಿ ಪರಿಗಣನೆ– ಸಿದ್ದರಾಮಯ್ಯ

ಅರ್ಹರಿಗೆ ಉದ್ಯೋಗ: ಸಿ.ಎಂ ವಾಗ್ದಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸರ್ಕಾರಿ ಉದ್ಯೋಗ ಪಡೆದು ನೆಮ್ಮದಿಯ ಬದುಕು ಕಟ್ಟಿಕೊಳ್ಳಬೇಕೆಂಬ ಕನಸು ಹೊತ್ತಿರುವ ಉದ್ಯೋಗಾಕಾಂಕ್ಷಿಗಳ ಆಸೆ- ಆಕಾಂಕ್ಷೆಯನ್ನು ರಕ್ಷಿಸಿ, ಅರ್ಹರಿಗೆ ಸೂಕ್ತ ಉದ್ಯೋಗ ಖಚಿತಪಡಿಸಲು ನಮ್ಮ ಸರ್ಕಾರ ಬದ್ಧ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

ಸಿದ್ದರಾಮಯ್ಯ

ಉದ್ಯೋಗಾಕಾಂಕ್ಷಿಗಳು ಧಾರವಾಡದಲ್ಲಿ ಮಂಗಳವಾರ ನಡೆಸಿದ ಪ್ರತಿಭಟನೆಯನ್ನು ಉಲ್ಲೇಖಿಸಿ ಹೇಳಿಕೆ ನೀಡಿರುವ ಅವರು, 'ಈ ಪ್ರತಿಭಟನೆಯನ್ನು ನಾನು ಗಂಭೀರವಾಗಿ ಪರಿಗಣಿಸಿದ್ದೇನೆ. ಉದ್ಯೋಗಾಕಾಂಕ್ಷಿಗಳು ಅನುಭವಿಸುತ್ತಿರುವ ಆತಂಕ, ನಿರಾಶೆ, ಅನಿಶ್ಚಿತತೆಯನ್ನು ಅರ್ಥಮಾಡಿಕೊಳ್ಳಬಲ್ಲೆ' ಎಂದಿದ್ದಾರೆ.

'ನಾವು (ಕಾಂಗ್ರೆಸ್) ಅಧಿಕಾರಕ್ಕೆ ಬಂದಾಗ 2.64 ಲಕ್ಷಕ್ಕೂ ಹೆಚ್ಚು ಸರ್ಕಾರಿ ಹುದ್ದೆಗಳು ಖಾಲಿ ಇದ್ದವು. ಹಿಂದಿನ ಬಿಜೆಪಿ ಸರ್ಕಾರ ಸಕಾಲದಲ್ಲಿ ನೇಮಕಾತಿಗಳನ್ನು ಆರಂಭಿಸದಿರುವುದು ಮತ್ತು ಹುದ್ದೆಗಳನ್ನು ಭರ್ತಿ ಮಾಡಲು ಸೂಕ್ತ ಯೋಜನೆ ರೂಪಿಸದ ಕಾರಣ ದೊಡ್ಡ ಸಂಖ್ಯೆಯಲ್ಲಿ ಹುದ್ದೆಗಳು ಖಾಲಿ ಉಳಿದಿವೆ' ಎಂದು ಹೇಳಿದ್ದಾರೆ.

'ವಿರೋಧ ಪಕ್ಷದ ನಾಯಕರು ನಿರಪರಾಧಿ ವಿದ್ಯಾರ್ಥಿಗಳಿಗೆ ತಪ್ಪು ಮಾರ್ಗದರ್ಶನ ಮಾಡಿ ತಮ್ಮ ರಾಜಕೀಯ ಸ್ವಾರ್ಥದ ಈಡೇರಿಕೆಗಾಗಿ ಬಳಸಿಕೊಳ್ಳುತ್ತಿದ್ದಾರೆ. ಉದ್ಯೋಗದ ನಿರೀಕ್ಷೆಯಲ್ಲಿರುವ ಯುವ ಜನರನ್ನು ಉಜ್ವಲ ಭವಿಷ್ಯದ ಕಡೆ ಯೋಚಿಸಲು ಪ್ರೇರೇಪಿಸುವ ಬದಲು, ಅವರ ಮೂಲಕ ಅಶಾಂತಿ ಉಂಟು ಮಾಡಲು ಹೊರಟಿರುವ ಈ ನಡೆ ಖಂಡನೀಯ' ಎಂದು ಟೀಕಿಸಿದ್ದಾರೆ.

'ಬಿಜೆಪಿ ಸರ್ಕಾರದ ಅವಧಿಯಲ್ಲಿ (2019–2023) ನೇಮಕಾತಿಯಲ್ಲಿ ನಡೆದ ಅಕ್ರಮಗಳು ಮತ್ತು ಭ್ರಷ್ಟಾಚಾರಗಳು ಇಂದಿನ ಈ ದುಸ್ಥಿತಿಗೆ ಕಾರಣ. ನ್ಯಾಯಾಲಯದಲ್ಲಿ ಪ್ರಕರಣಗಳು ನಡೆಯುತ್ತಿದ್ದ ಕಾರಣದಿಂದ ಹಲವು ನೇಮಕಾತಿ ಪ್ರಕ್ರಿಯೆಗಳನ್ನು ತಾತ್ಕಾಲಿಕವಾಗಿ ನಿಲ್ಲಿಸಬೇಕಾಯಿತು. ಈ ವಿಳಂಬದಿಂದ ಅರ್ಹ ಅಭ್ಯರ್ಥಿಗಳು ಅನ್ಯಾಯಕ್ಕೊಳಗಾಗದಂತೆ ತಡೆಯಲು ಮುಂಬರುವ ನೇಮಕಾತಿಗಳಿಗೆ ಗರಿಷ್ಠ ವಯೋಮಿತಿಯನ್ನು 5 ವರ್ಷ ಸಡಿಲಿಸಲಾಗಿದೆ' ಎಂದು ಹೇಳಿದ್ದಾರೆ.

ವರ್ಗಾವಣೆ ದಂಧೆಯ ಫಲ: ಎಚ್‌ಡಿಕೆ

ಅತಿ ಹೆಚ್ಚು ಹುದ್ದೆಗಳು ಶಿಕ್ಷಣ, ಆರೋಗ್ಯ, ಪೊಲೀಸ್ ಇಲಾಖೆಗಳಲ್ಲಿ ಖಾಲಿ ಇವೆ. ಬೆಂಗಳೂರು ನಗರದ 18 ಆಯಕಟ್ಟಿನ ಪೊಲೀಸ್ ಠಾಣೆಗಳಲ್ಲಿ ಇನ್‌ಸ್ಪೆಕ್ಟರ್‌ಗಳೇ ಇಲ್ಲ. ವರ್ಗಾವಣೆ ದಂಧೆಯಲ್ಲಿ ಸರ್ಕಾರ ಮುಳುಗಿದ್ದರ ಪರಿಣಾಮ ಇದು ಎಂದು ಕೇಂದ್ರ ಸಚಿವ ಎಚ್‌.ಡಿ.ಕುಮಾರಸ್ವಾಮಿ ಟೀಕಿಸಿದ್ದಾರೆ.

ಈ ಕುರಿತು 'ಎಕ್ಸ್' ಮಾಡಿರುವ ಅವರು, ಆರ್‌.ವಿ. ದೇಶಪಾಂಡೆ ಅಧ್ಯಕ್ಷತೆಯ ಕರ್ನಾಟಕ ಆಡಳಿತ ಸುಧಾರಣೆ ಆಯೋಗದ ವರದಿಯಂತೆ ರಾಜ್ಯದಲ್ಲಿ 7 ಲಕ್ಷ ನಿರುದ್ಯೋಗಿಗಳಿದ್ದಾರೆ. ಇವರೆಲ್ಲರೂ ಸರ್ಕಾರಿ ಹುದ್ದೆಗಳ ನಿರೀಕ್ಷೆಯಲ್ಲಿದ್ದು, ಖಾಲಿ ಹುದ್ದೆಗಳನ್ನು ಹಂತ ಹಂತವಾಗಿ ಭರ್ತಿ ಮಾಡಬೇಕಿತ್ತು. ಕುರ್ಚಿ ತಿಕ್ಕಾಟದಲ್ಲೇ ಮೂರು ವರ್ಷಗಳನ್ನು ಪೋಲು ಮಾಡಿದರು. ಯುವಜನರತ್ತ ಗಮನ ಹರಿಸಲೇ ಇಲ್ಲ ಎಂದು ದೂರಿದ್ದಾರೆ.

ಉದ್ಯೋಗ ಆಕಾಂಕ್ಷಿಗಳು ಬೀದಿಗೆ ಇಳಿದಿರುವುದನ್ನು ಲಘುವಾಗಿ ಪರಿಗಣಿಸಬಾರದು. ಹುದ್ದೆಗಳನ್ನು ಕಾಲ ಕಾಲಕ್ಕೆ ತುಂಬದೇ ನಿರ್ಲಕ್ಷಿಸಿದ ಪರಿಣಾಮ ಯುವಜನರು ಪ್ರತಿಭಟನೆ ದಾರಿ ತುಳಿಯಲು ಕಾರಣ. ಆಕಾಂಕ್ಷಿಗಳು ತಮ್ಮ ಹಕ್ಕು ಪ್ರತಿಪಾದಿಸುವ ವೇಗದಲ್ಲಿ ಕಾನೂನು ಕೈಗೆತ್ತಿಕೊಳ್ಳಬಾರದು. ಶಾಂತಿಯುತವಾಗಿ ಪ್ರತಿಭಟನೆ ನಡೆಸಬೇಕು ಎಂದು ಹೇಳಿದ್ದಾರೆ

ದ್ವೇಷ ಭಾಷಣ: ಶಾಸಕ ಯತ್ನಾಳ ವಿರುದ್ಧ ಪ್ರಕರಣ ದಾಖಲು

ಗುರುಮಠಕಲ್: ದ್ವೇಷ ಭಾಷಣಕ್ಕೆ ಸಂಬಂಧಿಸಿದಂತೆ ವಿಜಯಪುರದ ಶಾಸಕ ಬಸನಗೌಡ ಪಾಟೀಲ ಯತ್ನಾಳ ವಿರುದ್ಧ ಪಟ್ಟಣದ ಪೊಲೀಸ್ ಠಾಣೆಯಲ್ಲಿ ಸೋಮವಾರ ಸ್ವಯಂಪ್ರೇರಿತ ಪ್ರಕರಣ ದಾಖಲಾಗಿದೆ.

'ಪಟ್ಟಣದಲ್ಲಿ ಶನಿವಾರ (ಫೆ.21) ನಡೆದ ಶಿವಾಜಿ ಮಹಾರಾಜ ಜಯಂತಿ ಕಾರ್ಯಕ್ರಮದಲ್ಲಿ ಯತ್ನಾಳ ಅವರು ಭಾಷಣ ಮಾಡುತ್ತಿದ್ದ ವೇಳೆ ಮುಸ್ಲಿಂ ಸಮುದಾಯ, ಮಹಾತ್ಮ ಗಾಂಧಿ, ಜವಾಹರಲಾಲ್ ನೆಹರೂ, ಟಿಪ್ಪು ಸುಲ್ತಾನ, ಔರಂಗಜೇಬ್ ಕುರಿತು ವಿವಾದಾತ್ಮಕ ಹೇಳಿಕೆ ನೀಡಿದ್ದಾರೆ. ಇದು ಜಾಲತಾಣಗಳಲ್ಲಿ ಚರ್ಚೆ ಮತ್ತು ಆಕ್ಷೇಪಕ್ಕೆ ಕಾರಣವಾಗಿದೆ. ಈ ಹಿನ್ನೆಲೆಯಲ್ಲಿ ಪ್ರಕರಣ ದಾಖಲಿಸಲಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

ಪಹಣಿ ಜತೆ ಆಧಾರ್ ಜೋಡಣೆಗೆ ಮನವಿ

ಪಹಣಿಗಳಿಗೆ (ಆರ್‌ಟಿಸಿ) ಆಧಾರ್ ಅನ್ನು ಕಡ್ಡಾಯವಾಗಿ ಜೋಡಣೆ ಮಾಡಬೇಕು ಎಂದು ಸಚಿವ ಕೃಷ್ಣಬೈರೇಗೌಡ ಮನವಿ ಮಾಡಿದರು.

ಪಹಣಿ ಜತೆ ಆಧಾರ್ ಜೋಡಣೆಯಾದರೆ ಪಹಣಿಯಲ್ಲಿ ಏನೇ ಬದಲಾವಣೆ ಆದರೂ ಆ ಸಂದೇಶವನ್ನು ಆಸ್ತಿ ಮಾಲೀಕರ ಮೊಬೈಲ್‌ಗೆ ಕಳಿಸಲಾಗುತ್ತದೆ. ಆಗ ಆಸ್ತಿ ಮಾಲೀಕರ ಗಮನಕ್ಕೆ ಬಾರದೆ ನಡೆಯುವ ಖಾತೆ ಬದಲಾವಣೆ ಅಥವಾ ಮಾರಾಟವನ್ನು ತಡೆಯಬಹುದು. ಆ ಮೂಲಕ ಆಸ್ತಿ ಮಾಲೀಕತ್ವಕ್ಕೆ ಖಾತರಿ ಪಡೆಯಬಹುದು. ಅಲ್ಲದೇ, ನ್ಯಾಯಾಲಯ ಆದೇಶ ನಮೂದಿಸಿದರೆ ಅಥವಾ ಪಹಣಿಯಲ್ಲಿ ಬೇರೆಯವರ ಹೆಸರು ಸೇರಿಸಿದರೂ ಎಸ್‌ಎಂಎಸ್ ಮೂಲಕ ಮಾಹಿತಿ ಬರುತ್ತದೆ ಎಂದು ಅವರು ಹೇಳಿದರು.

ಆಧಾರ್ ಜೋಡಣೆ ಮಾಡದಿದ್ದರೆ ಆಸ್ತಿ ಮಾಲೀಕರ ಗಮನಕ್ಕೆ ಬಾರದೆ ಖಾತೆ ಬದಲಾವಣೆ ಆಗುವ ಅಪರೂಪದ ಸಾಧ್ಯತೆಗಳಿವೆ. ಹೀಗಾಗಿ ಮಾಲೀಕತ್ವ ಸುಭದ್ರವಾಗಿರಬೇಕಾದರೆ ಮೊದಲು ಪಹಣಿ ಜತೆಗೆ ಆಧಾರ್ ಜೋಡಿಸಬೇಕು ಎಂದು ಅವರು ಸಲಹೆ ನೀಡಿದರು.

ಧಾರವಾಡದಲ್ಲಿ ಪ್ರತಿಭಟನಕಾರರತ್ತ ಪೊಲೀಸರು ಲಾಠಿ ಬೀಸಿದರು ಪ್ರಜಾವಾಣಿ ಚಿತ್ರ

ನೇಮಕಾತಿ: ಭುಗಿಲೆದ್ದ ಆಕ್ರೋಶ

ಒಂದನೇ ಪುಟದಿಂದ...

ಆರ್.ಅಶೋಕ, ಛಲವಾದಿ ನಾರಾಯಣ ಸ್ವಾಮಿ ಅವರು ಪುನಃ ಜುಬಿಲಿ ವೃತ್ತಕ್ಕೆ ಬಂದು, ಭಾಷಣಕ್ಕೆ ಮುಂದಾದರು. ಪ್ರತಿಭಟನಕಾರರು ಮತ್ತೆ ಆಕ್ಷೇಪ ವ್ಯಕ್ತಪಡಿಸಿದರು. ಅವರಿಬ್ಬರೂ ಅಲ್ಲಿಂದ ಹೊರಟರು. ನಂತರ ವಿಧಾನಸಭೆ ವಿರೋಧಪಕ್ಷದ ಉಪನಾಯಕ ಅರವಿಂದ ಬೆಲ್ಲದ, ಬಿಜೆಪಿ ನಾಯಕ ಭರತ್ ಬೊಮ್ಮಾಯಿ ಕೆಲ ನಿಮಿಷಗಳಷ್ಟೇ ಮಾತನಾಡಿದರು. ಅವರಿಗೂ ತೀವ್ರ ವಿರೋಧ ವ್ಯಕ್ತವಾಯಿತು.

ಜಿಲ್ಲಾಧಿಕಾರಿ ಮನವಿ: ಜುಬಿಲಿ ವೃತ್ತಕ್ಕೆ ಬಂದ ಜಿಲ್ಲಾಧಿಕಾರಿ ಸ್ನೇಹಲ್ ಆರ್., 'ನೀವು ಪ್ರತಿಭಟನೆ ನಡೆಸಿರುವುದನ್ನು ಸರ್ಕಾರದ ಗಮನಕ್ಕೆ ತರಲಾಗುವುದು. ನಿಮ್ಮ ಬೇಡಿಕೆಗಳನ್ನು ಈಡೇರಿಸುವಂತೆ ಕೋರಲಾಗುವುದು' ಎಂದರು. ಆದರೂ ಪ್ರತಿಭಟನಾಕಾರರು ಪಟ್ಟು ಸಡಿಲಿಸಲಿಲ್ಲ. ಈ ಸಂದರ್ಭದಲ್ಲಿ ಮಹಿಳೆಯೊಬ್ಬರು, 'ಮನೆಯಲ್ಲಿ ಮಗುವನ್ನು ಬಿಟ್ಟು ಪ್ರತಿಭಟನೆಗೆ ಬಂದಿದ್ದೇನೆ. ಸರ್ಕಾರ ನೇಮಕಾತಿ ಆರಂಭಿಸಬೇಕು. ನಮ್ಮ ಸಂಕಷ್ಟಗಳನ್ನು ಪರಿಹರಿಸಬೇಕು' ಎಂದು ಕಣ್ಣೀರಿಟ್ಟರು.

ಜಿಲ್ಲಾಧಿಕಾರಿಯವರು ಮನವಿಪತ್ರ ಸ್ವೀಕರಿಸಿ ನಿರ್ಗಮಿಸಿದ ಬಳಿಕ, ಪೊಲೀಸರು ಪ್ರತಿಭಟನಕಾರರನ್ನು ಚದುರಿಸಿದರು. ಅಕ್ಸಾ ಅಧ್ಯಕ್ಷ ಕಾಂತ ಕುಮಾರ್ ಅವರನ್ನು ವಶಕ್ಕೆ ಪಡೆದರು. ಹುಬ್ಬಳ್ಳಿ–ಧಾರವಾಡ ಮಹಾನಗರ ಪೊಲೀಸ್ ಕಮಿಷನರ್ ಎನ್.ಶಶಿ ಕುಮಾರ್, ಇತರ ಅಧಿಕಾರಿಗಳು ಪರಿಸ್ಥಿತಿ ನಿಭಾಯಿಸಿದರು.

> **ಬಿಜೆಪಿಯವರು ತಮ್ಮ ಅವಧಿಯಲ್ಲಿ ಏಕೆ ಹುದ್ದೆಗಳನ್ನು ಭರ್ತಿ ಮಾಡಿಲ್ಲ? ನಿರುದ್ಯೋಗಿ ಯುವಕರಿಗೆ ಯುವನಿಧಿ ಯೋಜನೆ ನೀಡಿದ್ದೇವೆ**
> **ಡಿ.ಕೆ. ಶಿವಕುಮಾರ್**, ಉಪ ಮುಖ್ಯಮಂತ್ರಿ

> **ಉದ್ಯೋಗಾಕಾಂಕ್ಷಿಗಳು ಕೋಚಿಂಗ್ ಪಡೆದು, ನೇಮಕಾತಿ ಅಧಿಸೂಚನೆ ನಿರೀಕ್ಷೆಯಲ್ಲಿ ಇದ್ದಾರೆ. ಹೋರಾಟವನ್ನು ತಾರ್ಕಿಕ ಅಂತ್ಯಕ್ಕೆ ಒಯ್ಯಬೇಕಿದೆ**
> **ಆರ್.ಅಶೋಕ**, ವಿರೋಧ ಪಕ್ಷದ ನಾಯಕ, ವಿಧಾನಸಭೆ

> **ಪ್ರಧಾನಿ ಅವರು ವರ್ಷಕ್ಕೆ ಎರಡು ಕೋಟಿ ಉದ್ಯೋಗ ಸೃಷ್ಟಿಸುತ್ತೇನೆ ಎಂದಿದ್ದರು. ಕೇಂದ್ರದ ವಿರುದ್ಧವೂ ಹೋರಾಟ ಮಾಡಬೇಕು. ಎಲ್ಲ ಸರ್ಕಾರಗಳನ್ನೂ ಪ್ರಶ್ನಿಸಬೇಕು**
> **ಸಂತೋಷ್ ಎಸ್.ಲಾಡ್**, ಸಚಿವ

ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

ನಿಗಮ ಕಾರ್ಯಾಲಯ, ಖರೀದಿ ಶಾಖೆ, ಚಾವಿಸನಿನಿ, ಮೈಸೂರು–570017, ದೂರವಾಣಿ ಸಂಖ್ಯೆ: 9448994705
ಇ–ಮೇಲ್ ಐಡಿ: gmpurc@cescmysore.org, ವೆಬ್‌ಸೈಟ್: www.cescmysore.org

ಸಂಖ್ಯೆ: ಚಾವಿಸನಿನಿ/ಪ್ರ.ವ್ಯ(ಖ)/ಟಿ.ಎ.ಟುಎಂ.ಡಿ/2025–26/37966 ದಿನಾಂಕ: 24.02.2026

ಅಲ್ಪಾವಧಿ ಟೆಂಡರ್ ಅಧಿಸೂಚನೆ (ವಿದ್ಯುನ್ಮಾನ ಸಂಗ್ರಹಣಾ ವೇದಿಕೆ)

ಚಾ.ವಿ.ಸ.ನಿ.ನಿ ವತಿಯಿಂದ ಅರ್ಹ ಗುತ್ತಿಗೆದಾರರಿಂದ ಕೆಳಕಂಡ ಸಾಮಾಗ್ರಿಗಳನ್ನು ಅಲ್ಪಾವಧಿ ಟೆಂಡರ್‌ನ್ನು ಆಹ್ವಾನಿಸಿದೆ.

ಕ್ರ.ಸಂ	ವಿವರಗಳು	ವಿಚಾರಣೆ ಸಂಖ್ಯೆ / ದಿನಾಂಕ
1	ಚಾ.ವಿ.ಸ.ನಿ.ನಿ, ವ್ಯಾಪ್ತಿಯ ಮೈಸೂರು ಕೈಗಾರಿಕ ಪ್ರದೇಶದಲ್ಲಿನ ಹೆಚ್ಚು ವಿದ್ಯುತ್ ಅಡಚಣೆಗೊಂಡಿರುವ 11ಕೆ.ವಿ ಇಂಡಸ್ಟ್ರಿಯಲ್ ಫೀಡರ್ ಗಳಿಗೆ Compact Fault Passage Indicators (CFPIs) ಗಳನ್ನು ಸರಬರಾಜು ಮಾಡುವುದು, ಅಳವಡಿಸುವುದು ಹಾಗೂ ನಿರ್ವಹಿಸುವುದು	C2-6456/ 23-02-2026

ಟೆಂಡರ್‌ನಲ್ಲಿ ಭಾಗವಹಿಸುವ ಬಗ್ಗೆ ಹೆಚ್ಚಿನ ವಿವರಗಳನ್ನು ವೆಬ್‌ಸೈಟ್ https://kppp.karnataka.gov.in ನಲ್ಲಿ ದಿನಾಂಕ: 26.02.2026 ರ ನಂತರ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಹೆಲ್ಪ್‌ಲೈನ್ ಹೆಲ್ಸ್‌ಲೈನ್ 080–46010000/ 22631200/ 68948777ಗೆ ಅಥವಾ ಇ–ಮೇಲ್ ವಿಳಾಸ support@eprochelpdesk.com ವ್ಯವಹರಿಸಲು ಕೋರಲಾಗಿದೆ.

ವಿದ್ಯುತ್ ಸಂಬಂಧಿಸಿದ ದೂರುಗಳಿಗೆ ಕರೆ ಮಾಡಿ: 1912

ವಾಸಾಸಂಇ/ಮೈಸೂರು/1734/ಎಸ್‌ಎಸ್‌ಸಿ/2025–26
ಸಹಿ/– ಪ್ರಧಾನ ವ್ಯವಸ್ಥಾಪಕರು (ಖರೀದಿ), ಚಾ.ವಿ.ಸ.ನಿ.ನಿ., ಮೈಸೂರು

ಕರ್ನಾಟಕ ಗೃಹ ಮಂಡಳಿ

ಕರ್ನಾಟಕ ಗೃಹ ಮಂಡಳಿ ಸಮುದಾಯ ನಿರ್ಮಾಣದತ್ತ

ಗೃಹ ಆಯುಕ್ತರ ಕಛೇರಿ, 3 ಮತ್ತು 4ನೇ ಮಹಡಿ, ಕರ್ನಾಟಕ ಗೃಹ ಮಂಡಳಿ, ಕಾವೇರಿ ಭವನ, ಬೆಂಗಳೂರು–560 009.

ಸಂಖ್ಯೆ: ಕಗೃಮಂ/ಕಾ/ಹಂಚಿಕೆ/ಲಾಟರಿ/2025–26 ದಿನಾಂಕ: 21–02–2026

ಸಾರ್ವಜನಿಕ ಪ್ರಕಟಣೆ

ಕರ್ನಾಟಕ ಗೃಹ ಮಂಡಳಿಯು ಕೊಪ್ಪಳ ಜಿಲ್ಲೆ, ಕೊಪ್ಪಳ ಡಿ.ಸಿ. ಆಫೀಸ್ ಹಿಂಭಾಗದ ಬಡಾವಣೆಯಲ್ಲಿ ಅಭಿವೃದ್ಧಿಪಡಿಸಿರುವ ನಿವೇಶನಗಳಿಗೆ ಈ ಹಿಂದೆ 30–05–2017 ರಂದು ಪತ್ರಿಕಾ ಪ್ರಕಟಣೆ ನೀಡಿ ಬೇಡಿಕೆ ಸಮೀಕ್ಷೆಯಡಿ ಸಾರ್ವಜನಿಕರಿಂದ ಅರ್ಜಿಗಳನ್ನು ಆಹ್ವಾನಿಸಿದ್ದು, ಸದರಿ ಪ್ರಕಟಣೆಗೆ ಅನುಗುಣವಾಗಿ ನಿಗಧಿತ ನೊಂದಣಿ ಶುಲ್ಕ ಹಾಗೂ ಆರಂಭಿಕ ಠೇವಣಿ ಮೊತ್ತದೊಂದಿಗೆ ಅರ್ಜಿ ಸಲ್ಲಿಸಿದ ಅರ್ಜಿದಾರರಿಗೆ ಕರ್ನಾಟಕ ಗೃಹ ಮಂಡಳಿ ಹಂಚಿಕೆ ನಿಯಮಗಳು 1983ರ ನಿಯಮ 9ರ ಅನ್ವಯ ಇ–ಲಾಟರಿ ಮುಖಾಂತರ ಹಂಚಿಕೆ ಮಾಡಲು ತಾತ್ಕಾಲಿಕ & ಅಂತಿಮ ಅರ್ಹ/ಅನರ್ಹ ಅರ್ಜಿದಾರರ ಪಟ್ಟಿಯನ್ನು ಪ್ರಕಟಿಸಲು ಈ ಕೆಳಕಂಡಂತೆ ವೇಳಾಪಟ್ಟಿಯನ್ನು ನಿಗಧಿಪಡಿಸಲಾಗಿದೆ.

ಇ–ಲಾಟರಿ ಮಾಡುವ ಸ್ಥಳ:– ಕರ್ನಾಟಕ ಗೃಹ ಮಂಡಳಿ ಸಭಾಂಗಣ, 4ನೇ ಮಹಡಿ, ಕೇಂದ್ರ ಕಛೇರಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು.

ಬಡಾವಣೆ	ಅರ್ಹ & ಅನರ್ಹ ಅರ್ಜಿದಾರರ ತಾತ್ಕಾಲಿಕ ಪಟ್ಟಿ ಪ್ರಕಟಣೆ ದಿನಾಂಕ	ಆಕ್ಷೇಪಣೆ ಸಲ್ಲಿಸಲು ಕೊನೆಯ ದಿನಾಂಕ	ಅರ್ಹ & ಅನರ್ಹ ಅರ್ಜಿದಾರರ ಅಂತಿಮ ಪಟ್ಟಿ ಪ್ರಕಟಣೆ ದಿನಾಂಕ	ಇ–ಲಾಟರಿ ದಿನಾಂಕ ಮತ್ತು ಸಮಯ
ಕೊಪ್ಪಳ ಡಿ.ಸಿ. ಆಫೀಸ್ ಹಿಂಭಾಗ	02-03-2026	13-03-2026	18-03-2026	25-03-2026 ಬೆಳಿಗ್ಗೆ 11:00 ಗಂಟೆಗೆ
	ಸಹಾಯಕ ಕಾರ್ಯಪಾಲಕ ಅಭಿಯಂತರರು, ಕಗೃಮಂ, ಜಿಲ್ಲಾ ಯೋಜನಾ ಕಛೇರಿ, ಕೊಪ್ಪಳ ಹಾಗೂ ಕೇಂದ್ರ ಕಛೇರಿ, ಕಾವೇರಿ ಭವನ, ಕೆ. ಜಿ. ರಸ್ತೆ, ಬೆಂಗಳೂರು ಹಾಗೂ ಮಂಡಳಿಯ ವೆಬ್‌ಸೈಟ್			

ಹೆಚ್ಚಿನ ಮಾಹಿತಿಗಾಗಿ ಸಹಾಯಕ ಕಾರ್ಯಪಾಲಕ ಅಭಿಯಂತರರು, ಕಗೃಮಂ, ಕೊಪ್ಪಳ ಜಿಲ್ಲಾ ಯೋಜನಾ ಕಛೇರಿ, ಮೊಬೈಲ್ ನಂ. 9900192350, ಸಹಾಯಕ ಕಂದಾಯ ಅಧಿಕಾರಿಗಳ ಮೊಬೈಲ್ ನಂ.9449456923, ಹಾಗೂ ಕಂದಾಯ ಅಧಿಕಾರಿಗಳು, ಹಂಚಿಕೆ ಶಾಖೆ, ಕರ್ನಾಟಕ ಗೃಹ ಮಂಡಳಿ, 4ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು–560009 ಇವರನ್ನು ಖುದ್ದಾಗಿ ಅಥವಾ ದೂರವಾಣಿ ಸಂಖ್ಯೆ: 080–22273511 ವಿಸ್ತರಣೆ: 306/309 ರಲ್ಲಿ ಸಂಪರ್ಕಿಸಬಹುದು ಹಾಗೂ ವೆಬ್‌ಸೈಟ್ www.khb.karnataka.gov.in ಯಿಂದ ಮಾಹಿತಿ ಪಡೆಯಬಹುದು.

ಸಹಿ/–, ಗೃಹ ಆಯುಕ್ತರು,
ಕರ್ನಾಟಕ ಗೃಹ ಮಂಡಳಿ, ಬೆಂಗಳೂರು.

DIPR/CP/RO5854/AAPL/2025-26

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಇಲಾಖೆ

ಜಿಲ್ಲಾ ಪಂಚಾಯತ ಕೊಪ್ಪಳ,
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಛೇರಿ, ಕೊಪ್ಪಳ – 583 231.
ದೂರವಾಣಿ : 08539–221660, ಇ–ಮೇಲ್ : dhokoppal@gmail.com

ಸಂಖ್ಯೆ : ಜಿ.ಯೋ.ಮ.ಅ.ಅ.ಕ.ಕೊ./675/25–2026 ದಿನಾಂಕ : 24–02–2026

ಇ-ಟೆಂಡರ್ ಅಧಿಸೂಚನೆ

ರಾಷ್ಟ್ರೀಯ ಆರೋಗ್ಯ ಅಭಿಯಾನದಡಿಯಲ್ಲಿ 15 ನೇ ಹಣಕಾಸು ಎಫ್.ಆರ್.4 ಯೋಜನೆಯಲ್ಲಿ ಬರುವ ಸಿ.ಪಿ.ಹೆಚ್.ಸಿ – ಯು.ಹೆಚ್.ಸಿ ಕಾರ್ಯಕ್ರಮದಡಿಯಲ್ಲಿ ಕೊಪ್ಪಳದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣದಡಿಯಲ್ಲಿರುವ ಆಯುಷ್ಮಾನ ಆರೋಗ್ಯ ಕೇಂದ್ರಗಳಿಗೆ ವೈದ್ಯಕೀಯ ಉಪಕರಣಗಳನ್ನು ಖರೀದಿಸಲು 15 ನೇ ಹಣಕಾಸು ಎಫ್.ಆರ್.4 ಅನುದಾನದಡಿಯಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಕೊಪ್ಪಳದಡಿಯಲ್ಲಿ ಇ–ಟೆಂಡರ್ ಪ್ರಕಟಣೆ. **ಟೆಂಡರ್ ಮೊತ್ತ : ರೂ. 71,11,000/–. ಇ.ಎಂ.ಡಿ. ಮೊತ್ತ : ರೂ. 1,42,220/–.**

ಟೆಂಡರ್ ವೇಳಾಪಟ್ಟಿ : ಟೆಂಡರ್ ಇಂಡೆಂಟ್ ನಂಬರ್ : DHFWS/2025-26/IND2284. 1) ಟೆಂಡರ್ ಪ್ರಕಟಣೆ ದಿನಾಂಕ : 24–02–2026 ರ ಬೆಳಿಗ್ಗೆ, 2) ಇ–ಪ್ರೋಕ್ಯೂರ್‌ಮೆಂಟ್ ಮುಖಾಂತರ ದರಗಳನ್ನು ನಮೂದಿಸಿ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ : 11–03–2026 ರ ಸಂಜೆ 5.00 ಗಂಟೆಯ ವರಿಗೆ. 3) ತಾಂತ್ರಿಕ ಬಿಡನ್ನು ತೆರೆಯುವ ದಿನಾಂಕ : 13–03–2026 ರ ಬೆಳ್ಳಿಗ್ಗೆ 11.00 ಗಂಟೆ ನಂತರ. 4) ಆರ್ಥಿಕ ಬಿಡನ್ನು ತೆರೆಯುವ ದಿನಾಂಕ : 16–03–2026 ರ ಬೆಳ್ಳಿಗ್ಗೆ 11.00 ಗಂಟೆ ನಂತರ.

ಹೆಚ್ಚಿನ ವಿವರಗಳಿಗಾಗಿ ಕೆಲಸದ ದಿನದಂದು ಸದರಿ ಸಂಸ್ಥೆಯನ್ನು ಸಂಪರ್ಕಿಸಿ ಮಾಹಿತಿಯನ್ನು ದೂರವಾಣಿ : 08539 – 221660 ಅಥವಾ https://kppp.karnataka.gov.in ಪಡೆಯಬಹುದು.

ಸಹಿ/– ಜಿಲ್ಲಾ ಆರೋಗ್ಯ & ಕುಟುಂಬ ಕಲ್ಯಾಣಾಧಿಕಾರಿಗಳು,
ಕೊಪ್ಪಳ.

ಡಿಐಪಿಆರ್/ಕೊಪ್ಪಳ/712/ಮಣಿಪಾಲ್/2025–26

ಕರ್ನಾಟಕ ಗೃಹ ಮಂಡಳಿ

1,3, 4ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು–560 009.

Karnataka Housing Board Building communities

ಸಂಖ್ಯೆ: ಕಗೃಮಂ/ಕಾ/ಹಂಚಿಕೆ/ಲಾಟರಿ/2025–26 ದಿನಾಂಕ: 24–02–2026

ಸಾರ್ವಜನಿಕ ಪ್ರಕಟಣೆ

ಕರ್ನಾಟಕ ಗೃಹ ಮಂಡಳಿ ವತಿಯಿಂದ ಬೆಂಗಳೂರು ನಗರ ಜಿಲ್ಲೆ, ಸೂರ್ಯನಗರ 2ನೇ ಹಂತದ ಮುಂದುವರೆದ ರಾಜಾಪುರ ಬಡಾವಣೆಯಲ್ಲಿನ ಸ್ವತ್ತುಗಳನ್ನು ದಿನಾಂಕ: 28–08–2024 ರಂದು ಈಗಾಗಲೇ ಪ್ರವರ್ಗವಾರು ಮೀಸಲಾತಿಯಡಿ ಇ–ಲಾಟರಿ ಮೂಲಕ ಹಂಚಿಕೆ ಮಾಡಲಾಗಿದ್ದು, ಹಂಚಿಕೆ ನಂತರ ಖಾಲಿ ಉಳಿದಿರುವ ನಿವೇಶನಗಳನ್ನು ವಿಲೇವಾರಿ ಮಾಡಲು ದಿನಾಂಕ: 06–12–2025 ರಂದು ಪತ್ರಿಕಾ ಪ್ರಕಟಣೆ ನೀಡಿ ಸಾರ್ವಜನಿಕರಿಂದ ಆರಂಭಿಕ ಠೇವಣಿಯೊಂದಿಗೆ ಹೊಸದಾಗಿ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿತ್ತು.

ಸದರಿ ಪ್ರಕಟಣೆಗೆ ಅನುಗುಣವಾಗಿ ನಿಗಧಿತ ಆರಂಭಿಕ ಠೇವಣಿ ಮೊತ್ತದೊಂದಿಗೆ ಅರ್ಜಿ ಸಲ್ಲಿಸಿದ ಅರ್ಜಿದಾರರಿಗೆ ಇ–ಲಾಟರಿ ಮುಖಾಂತರ ಪ್ರವರ್ಗವಾರು ವಿಂಗಡಿಸದೇ ಎಲ್ಲಾ ಅರ್ಜಿಗಳನ್ನು ಒಟ್ಟಿಗೆ ಸೇರಿಸಿ ಹಂಚಿಕೆ ಮಾಡುವ ಸಂಬಂಧ ತಾತ್ಕಾಲಿಕ & ಅಂತಿಮ ಅರ್ಹ/ಅನರ್ಹ ಅರ್ಜಿದಾರರ ಪಟ್ಟಿ ದಿನಾಂಕವನ್ನು ಪ್ರಕಟಿಸಿ ಈ ಕೆಳಕಂಡಂತೆ ವೇಳಾಪಟ್ಟಿಯನ್ನು ನಿಗಧಿಪಡಿಸಲಾಗಿದೆ.

ಬಡಾವಣೆ	ಅರ್ಹ & ಅನರ್ಹ ಅರ್ಜಿದಾರರ ತಾತ್ಕಾಲಿಕ ಪಟ್ಟಿ ಪ್ರಕಟಣೆ ದಿನಾಂಕ	ಆಕ್ಷೇಪಣೆ ಸಲ್ಲಿಸಲು ಕೊನೆಯ ದಿನಾಂಕ	ಅರ್ಹ & ಅನರ್ಹ ಅರ್ಜಿದಾರರ ಅಂತಿಮ ಪಟ್ಟಿ ಪ್ರಕಟಣೆ ದಿನಾಂಕ	ಇ–ಲಾಟರಿ ದಿನಾಂಕ
ಸೂರ್ಯನಗರ 2ನೇ ಹಂತದ ಮುಂದುವರೆದ ರಾಜಾಪುರ	03–03–2026	13–03–2026	26–03–2026	ಇ–ಲಾಟರಿ ನಡೆಯುವ ಸ್ಥಳ ಮತ್ತು ದಿನಾಂಕವನ್ನು ಪ್ರತ್ಯೇಕವಾಗಿ ತಿಳಿಸಲಾಗುವುದು

ವಿಶೇಷ ಸೂಚನೆ:–

1) ಅರ್ಜಿದಾರರ ತಾತ್ಕಾಲಿಕ ಮತ್ತು ಅಂತಿಮ ಅರ್ಹ/ಅನರ್ಹ ಅರ್ಜಿಗಳ ವಿವರಗಳನ್ನು ಮಂಡಳಿಯ ವೆಬ್‌ಸೈಟ್, ಕೇಂದ್ರ ಕಛೇರಿಯ ಹಾಗೂ ಆಯಾ ಜಿಲ್ಲಾ ಯೋಜನಾ ಕಛೇರಿಯ ಸೂಚನಾಫಲಕದಲ್ಲಿ ಮೇಲೆ ತಿಳಿಸಿರುವ ದಿನಾಂಕಗಳಂದು ಪ್ರಕಟಿಸಲಾಗುವುದು. ಅನರ್ಹ ಅರ್ಜಿದಾರರು ಆಕ್ಷೇಪಣೆ ಸಲ್ಲಿಸಲು ತಿಳಿಸಿರುವ ಕೊನೆಯ ದಿನಾಂಕದೊಳಗೆ ಮಾಹಿತಿ/ದಾಖಲೆಯನ್ನು ಸಂಬಂಧಿಸಿದ ಜಿಲ್ಲಾ ಯೋಜನಾ ಕಛೇರಿಗಳಲ್ಲಿ ಅಥವಾ ಕೇಂದ್ರ ಕಛೇರಿ, ಹಂಚಿಕೆ ಶಾಖೆ, ಕಾವೇರಿ ಭವನ ಬೆಂಗಳೂರು ಇಲ್ಲಿ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಸಲ್ಲಿಸಲಾಗುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.
2) ಹಂಚಿಕೆಯಾದ ನಿವೇಶನಗಳಿಗೆ ಬದಲಾವಣೆ ಮಾಡಲು ಅವಕಾಶವಿರುವುದಿಲ್ಲ.

ಸಹಿ/–
ಗೃಹ ಆಯುಕ್ತರು
ಕರ್ನಾಟಕ ಗೃಹ ಮಂಡಳಿ, ಬೆಂಗಳೂರು

ವಾಸಾಸಂಇ/ವಾಪ್ರ/5857/ಎಂಎಎ/2025–26

ಕರ್ನಾಟಕ ಗೃಹ ಮಂಡಳಿ

1,3, 4ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು–560 009.

Karnataka Housing Board Building communities

ಸಂಖ್ಯೆ: ಕಗೃಮಂ/ಕಾ/ಹಂಚಿಕೆ/ಲಾಟರಿ/2025–26 ದಿನಾಂಕ: 23–02–2026

ಸಾರ್ವಜನಿಕ ಪ್ರಕಟಣೆ

ಕರ್ನಾಟಕ ಗೃಹ ಮಂಡಳಿ ವತಿಯಿಂದ ಬೆಂಗಳೂರು ಗ್ರಾಮಾಂತರ ಜಿಲ್ಲೆ ನೆಲಮಂಗಲ ತಾಲ್ಲೂಕು ಮಾಚೋನಾಯಕನಹಳ್ಳಿ ಬಡಾವಣೆಯಲ್ಲಿ ಅಭಿವೃದ್ಧಿಪಡಿಸಿರುವ ನಿವೇಶನಗಳಿಗೆ ದಿನಾಂಕ: 30–05–2017 ರಂದು ಪತ್ರಿಕಾ ಪ್ರಕಟಣೆ ನೀಡಿ ಅರ್ಜಿಗಳನ್ನು ಆಹ್ವಾನಿಸಲಾಗಿತ್ತು. ಸದರಿ ಪ್ರಕಟಣೆಗೆ ಅನುಗುಣವಾಗಿ ಸ್ವೀಕರಿಸಿರುವ ಅರ್ಜಿಗಳಿಗೆ ದಿನಾಂಕ: 25–01–2023 ರಂದು ಇ–ಲಾಟರಿ ಮೂಲಕ ನಿವೇಶನಗಳನ್ನು ಹಂಚಿಕೆ ಮಾಡಲಾಗಿತ್ತು. ಸದರಿ ಬಡಾವಣೆಯಲ್ಲಿ ಉಳಿದಿರುವ ನಿವೇಶನಗಳಿಗೆ ದಿನಾಂಕ: 09–02–2023 ರಂದು ಪತ್ರಿಕಾ ಪ್ರಕಟಣೆ ನೀಡಿ ಅರ್ಜಿಗಳನ್ನು ಆಹ್ವಾನಿಸಲಾಗಿತ್ತು. ಸದರಿ ಪ್ರಕಟಣೆಗೆ ಅನುಗುಣವಾಗಿ ಸ್ವೀಕರಿಸಿರುವ ಅರ್ಜಿಗಳಿಗೆ ಮತ್ತು 24–03–2023 ರಂದು ಸ್ವತ್ತುಗಳನ್ನು ಪ್ರವರ್ಗವಾರು ಮೀಸಲಾತಿಯಡಿ ಇ–ಲಾಟರಿ ಮೂಲಕ ಹಂಚಿಕೆ ಮಾಡಲಾಗಿರುತ್ತದೆ. ಸದರಿ ಇ–ಲಾಟರಿಯಲ್ಲಿ ಹಂಚಿಕೆಯಾಗದೆ ಉಳಿದಿರುವ ಅರ್ಜಿದಾರರಿಗೆ ಬಾಕಿ ಉಳಿದ 5 ಎಕರೆ 16 ಗುಂಟೆಗೆ ಜಮೀನಿನಲ್ಲಿ ಅಭಿವೃದ್ಧಿಪಡಿಸಿರುವ ನಿವೇಶನಗಳನ್ನು ಇ–ಲಾಟರಿ ಮುಖಾಂತರ ಪ್ರವರ್ಗವಾರು ವಿಂಗಡಿಸದೇ ಎಲ್ಲಾ ಅರ್ಜಿಗಳನ್ನು ಒಟ್ಟಿಗೆ ಸೇರಿಸಿ ಹಂಚಿಕೆ ಮಾಡುವ ಸಂಬಂಧ ತಾತ್ಕಾಲಿಕ & ಅಂತಿಮ ಅರ್ಹ/ಅನರ್ಹ ಅರ್ಜಿದಾರರ ಪಟ್ಟಿ ಪ್ರಕಟಿಸಿ ಈ ಕೆಳಕಂಡಂತೆ ವೇಳಾಪಟ್ಟಿಯನ್ನು ನಿಗಧಿಪಡಿಸಲಾಗಿದೆ.

ಬಡಾವಣೆ	ಸ್ವತ್ತಿನ ಬೆಲೆ	ಅರ್ಹ & ಅನರ್ಹ ಅರ್ಜಿದಾರರ ತಾತ್ಕಾಲಿಕ ಪಟ್ಟಿ ಪ್ರಕಟಣೆ ದಿನಾಂಕ	ಆಕ್ಷೇಪಣೆ ಸಲ್ಲಿಸಲು ಕೊನೆಯ ದಿನಾಂಕ	ಅರ್ಹ & ಅನರ್ಹ ಅರ್ಜಿದಾರರ ಅಂತಿಮ ಪಟ್ಟಿ ಪ್ರಕಟಣೆ ದಿನಾಂಕ	ಷರಾ
ಬೆಂಗಳೂರು ಗ್ರಾಮಾಂತರ ಜಿಲ್ಲೆ ನೆಲಮಂಗಲ ತಾಲ್ಲೂಕು ಮಾಚೋನಾಯಕನಹಳ್ಳಿ ಬಡಾವಣೆ	ರೂ.1550/– (ಪ್ರತಿ ಚದರಡಿಗೆ)	03–03–2026	13–03–2026	26–03–2026	ಇ–ಲಾಟರಿ ನಡೆಯುವ ಸ್ಥಳ ಮತ್ತು ದಿನಾಂಕವನ್ನು ಪ್ರತ್ಯೇಕವಾಗಿ ತಿಳಿಸಲಾಗುವುದು

ವಿಶೇಷ ಸೂಚನೆ:–

1. ಅರ್ಜಿದಾರರ ತಾತ್ಕಾಲಿಕ ಮತ್ತು ಅಂತಿಮ ಅರ್ಹ/ಅನರ್ಹ ಅರ್ಜಿಗಳ ವಿವರಗಳನ್ನು ಮಂಡಳಿಯ ವೆಬ್‌ಸೈಟ್, ಕೇಂದ್ರ ಕಛೇರಿಯ ಹಾಗೂ ಆಯಾ ಜಿಲ್ಲಾ ಯೋಜನಾ ಕಛೇರಿಯ ಸೂಚನಾಫಲಕದಲ್ಲಿ ಮೇಲೆ ತಿಳಿಸಿರುವ ದಿನಾಂಕಗಳಂದು ಪ್ರಕಟಿಸಲಾಗುವುದು. ಅನರ್ಹ ಅರ್ಜಿದಾರರು ಆಕ್ಷೇಪಣೆ ಸಲ್ಲಿಸಲು ತಿಳಿಸಿರುವ ಕೊನೆಯ ದಿನಾಂಕದೊಳಗೆ ಮಾಹಿತಿ/ದಾಖಲೆಯನ್ನು ಸಂಬಂಧಿಸಿದ ಜಿಲ್ಲಾ ಯೋಜನಾ ಕಛೇರಿಗಳಲ್ಲಿ ಅಥವಾ ಕೇಂದ್ರ ಕಛೇರಿ, ಹಂಚಿಕೆ ಶಾಖೆ, ಕಾವೇರಿ ಭವನ ಬೆಂಗಳೂರು ಇಲ್ಲಿ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಸಲ್ಲಿಸಲಾಗುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.
2. ಹೆಚ್.ಐ.ಜಿ–2 ಅಳತೆಯ ನಿವೇಶನಗಳು ಲಭ್ಯವಿಲ್ಲದಿರುವ ಕಾರಣ ಹೆಚ್.ಐ.ಜಿ–2 ನಿವೇಶನಗಳಿಗೆ ಅರ್ಜಿ ಸಲ್ಲಿಸಿರುವ ಅರ್ಜಿದಾರರಿಗೆ ಆರಂಭಿಕ ಠೇವಣಿ ಮೊತ್ತವನ್ನು ಮರುಪಾವತಿ ಮಾಡುವ ಸಂಬಂಧ ಕ್ರಮವಹಿಸಲಾಗಿರುತ್ತದೆ.
3. ಹಂಚಿಕೆಯಾದ ನಿವೇಶನಗಳಿಗೆ ಬದಲಾವಣೆ ಮಾಡಲು ಅವಕಾಶವಿರುವುದಿಲ್ಲ.

ಸಹಿ/–
ಗೃಹ ಆಯುಕ್ತರು
ಕರ್ನಾಟಕ ಗೃಹ ಮಂಡಳಿ, ಬೆಂಗಳೂರು

ವಾಸಾಸಂಇ/ವಾಪ್ರ/5856/ಎಂಎಎ/2025–26

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 **editpage@prajavani.co.in**

ಅಭಿಮತ



ಸುಭಾಷಿತ

ಸತ್ಯದೊಂದಿಗೆ ಬದುಕುವವರು ಯಾರಿಗೂ ಹೆದರಬೇಕಾಗಿಲ್ಲ.

-ಸಾಕ್ರಟಿಸ್

ಸಂಪಾದಕೀಯ

ತಾತ್ಕಾಲಿಕ ಬೋಧಕ ಸಿಬ್ಬಂದಿ ವ್ಯವಸ್ಥೆಯ ಲೋಪದ ದ್ಯೋತಕ

ವಿಶ್ವವಿದ್ಯಾಲಯಗಳು ಎದುರಿಸುತ್ತಿರುವ ಸಿಬ್ಬಂದಿ ಕೊರತೆಯ ಬಗ್ಗೆ ರಾಜ್ಯಪಾಲ ಹಾಗೂ ರಾಜ್ಯದ ವಿಶ್ವವಿದ್ಯಾಲಯಗಳ ಕುಲಾಧಿಪತಿಯೂ ಆಗಿರುವ ಥಾವರಚಂದ್ ಗೆಹಲೋತ್ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಗಮನ ಸೆಳೆಯುವ ಕೆಲಸ ಮಾಡಿದ್ದಾರೆ. ಅಲ್ಲದೆ, ಕುಲಪತಿಗಳ ಸಭೆಯಲ್ಲಿ ಗೆಹಲೋತ್ ಅವರು ಹೆಚ್ಚುವರಿ ಅನುದಾನವನ್ನು ಕೋರಿದ್ದಾರೆ. ಸಿಬ್ಬಂದಿ ಕೊರತೆಯ ಬಗ್ಗೆ ಪ್ರಸ್ತಾಪ ಮಾಡುವ ಮೂಲಕ ಅವರು 'ಬಹಳ ಸಹಜ' ಎಂದು ಪರಿಗಣಿಸಲಾಗಿರುವ ಬಿಕ್ಕಟ್ಟೊಂದರ ಕಡೆ ಗಮನ ಸೆಳೆಯುವ ಕೆಲಸ ಮಾಡಿದ್ದಾರೆ. ಆದರೆ ನಂತರದಲ್ಲಿ ಆಗಿರುವ ಬೆಳವಣಿಗೆಗಳು, ಸಮಸ್ಯೆಯನ್ನು ಎದುರಿಸುವ ಬದಲು ಸಮಸ್ಯೆಯನ್ನು ಮರುವ್ಯಾಖ್ಯಾನಕ್ಕೆ ಒಳಪಡಿಸುವ ಪ್ರಯತ್ನದಂತೆ ಕಾಣುತ್ತವೆ. ಹಲವು ವಿಶ್ವವಿದ್ಯಾಲಯಗಳಲ್ಲಿ ಬೋಧಕ ಸಿಬ್ಬಂದಿಯ ಕೊರತೆ ಶೇ 60ರಷ್ಟಿದೆ ಎಂದು ಸಿದ್ದರಾಮಯ್ಯ ಅವರೇ ಒಪ್ಪಿಕೊಂಡಿದ್ದಾರೆ. ಆದರೆ, ವಿಶ್ವದ ಅತ್ಯುನ್ನತ ವಿಶ್ವವಿದ್ಯಾಲಯಗಳಲ್ಲಿಯೂ ಅತಿಥಿ ಉಪನ್ಯಾಸಕರನ್ನು ನೆಚ್ಚಿಕೊಳ್ಳಲಾಗಿದೆ ಎಂದು ಅವರು ಸಮರ್ಥನೆ ನೀಡುತ್ತಿರುವುದು ಸರಿಯಲ್ಲ. ಕರ್ನಾಟಕದಲ್ಲಿ ಕೆಲಸ ಮಾಡುತ್ತಿರುವ 'ಅತಿಥಿ ಉಪನ್ಯಾಸಕರು' ಬಹಳ ವಿಶೇಷವಾದ ವಿಷಯವನ್ನು ಬೋಧಿಸುವ ತಜ್ಞರೇನೂ ಅಲ್ಲ. ಅವರು ಇಲ್ಲಿ ತಾತ್ಕಾಲಿಕ ಅವಧಿಗೆ ಅಥವಾ ಗುತ್ತಿಗೆ ಆಧಾರದಲ್ಲಿ ನೇಮಕ ಆಗಿರುವವರು. ಮಂಜೂರಾಗಿರುವ ಹುದ್ದೆಗಳು ಖಾಲಿ ಇದ್ದಾಗ, ಆ ಜಾಗಕ್ಕೆ ಅತಿಥಿ ಉಪನ್ಯಾಸಕರನ್ನು ನೇಮಕ ಮಾಡಿಕೊಳ್ಳಲಾಗುತ್ತಿದೆ. ಅವರು ದಿನವೊಂದರಲ್ಲಿ ಪೂರ್ತಿ ಅವಧಿಗೆ ಕೆಲಸ ಮಾಡುತ್ತಾರೆ, ಇತರ ಬೋಧಕರಿಗಿಂತ ಕಡಿಮೆ ಸಂಭಾವನೆ ಪಡೆಯುತ್ತಾರೆ; ಅವರಿಗೆ ಕನಿಷ್ಠ ಉದ್ಯೋಗ ಭದ್ರತೆಯೂ ಇರುವುದಿಲ್ಲ. ಹೀಗಿರುವಾಗ, ರಾಜ್ಯದಲ್ಲಿನ ಅತಿಥಿ ಉಪನ್ಯಾಸಕರ ನೇಮಕ ವ್ಯವಸ್ಥೆಯನ್ನು ಜಾಗತಿಕ ಮಟ್ಟದ ವಿಶ್ವವಿದ್ಯಾಲಯಗಳಲ್ಲಿನ ವ್ಯವಸ್ಥೆಯ ಜೊತೆ ಹೋಲಿಕೆ ಮಾಡುವುದು ತಪ್ಪುದಾರಿಗೆ ಎಳೆಯುವ ಕೆಲಸ.



ವಿಶ್ವವಿದ್ಯಾಲಯಗಳಲ್ಲಿನ ಬೋಧಕರ ಕೊರತೆಯನ್ನು ಅತಿಥಿ ಸಿಬ್ಬಂದಿ ಮೂಲಕ ನಿಭಾಯಿಸುವುದು ಸರ್ಕಾರ ಮಾಡಿಕೊಂಡಿರುವ ರಾಜಿಯೇ ಹೊರತು, ಶಿಕ್ಷಣ ಕ್ಷೇತ್ರವನ್ನು ಬಲಪಡಿಸುವ ನಡೆಯಲ್ಲ.

ಅಂತರರಾಷ್ಟ್ರೀಯ ಮಟ್ಟದ ಶಿಕ್ಷಣ ಸಂಸ್ಥೆಗಳಲ್ಲಿ ಬೋಧಿಸುವ ಅತಿಥಿ ಉಪನ್ಯಾಸಕರು ಬಹಳ ವಿಶಿಷ್ಟವಾದ ಅಕಡೆಮಿಕ್ ಸಾಧನೆ ಮಾಡಿದವರಾಗಿರುತ್ತಾರೆ; ಅವರಲ್ಲಿ ಉದ್ಯಮ ವಲಯದ ಪ್ರಮುಖರು ಹಾಗೂ ನೀತಿ ನಿರೂಪಣಾ ಕ್ಷೇತ್ರದ ಹಿರಿಯರೂ ಇರುತ್ತಾರೆ. ಅವರು ಅತ್ಯುತ್ತಮ ಗುಣಮಟ್ಟದ ಬೋಧಕ ಸಿಬ್ಬಂದಿ ಸಮೂಹಕ್ಕೆ ಪೂರಕವಾಗಿ ಕೆಲಸ ಮಾಡುತ್ತಾರೆ, ಖಾಲಿ ಇರುವ ಬೋಧಕ ಹುದ್ದೆಗೆ ಪರ್ಯಾಯವಾಗಿ ಅವರ ನೇಮಕ ಆಗಿರುವುದಿಲ್ಲ. ಅಂತಹ ತಜ್ಞರನ್ನು ನಮ್ಮ ರಾಜ್ಯದ ವಿಶ್ವವಿದ್ಯಾಲಯಗಳಲ್ಲಿ ಕಾಲಕಾಲಕ್ಕೆ ಬೋಧನೆಗೆ ಆಹ್ವಾನಿಸಲಾಗುತ್ತದೆ ಎಂದು ಸರ್ಕಾರ ಹೇಳಿಕೊಳ್ಳುತ್ತದೆಯೇ? ಕ್ಷೇತ್ರ ತಜ್ಞರನ್ನು ಬೋಧನೆಗೆ ಆಹ್ವಾನಿಸುವ ಉದ್ದೇಶ ಇದೆ ಎಂದಿದ್ದರೂ, ಅದಕ್ಕೆ ಅಗತ್ಯವಿರುವ ಅನುದಾನ ಎಲ್ಲಿದೆ? ದೋಷಪೂರಿತವಾದ ವಿಸ್ತರಣಾ ಕಾರ್ಯಕ್ರಮಗಳು ಸಮಸ್ಯೆಯನ್ನು ತೀವ್ರವಾಗಿಸಿವೆ. 'ಒಂದು ಜಿಲ್ಲೆ, ಒಂದು ವಿಶ್ವವಿದ್ಯಾಲಯ' ಕ್ರಮವು ವಿಶ್ವವಿದ್ಯಾಲಯಗಳ ಅಸ್ತಿತ್ವವನ್ನು ಹೆಚ್ಚಿಸಿದ್ದರೂ, ಅದಕ್ಕೆ ಅಗತ್ಯವಿರುವ ಪ್ರಮಾಣದಲ್ಲಿ ಮೂಲಸೌಕರ್ಯ ಸೃಷ್ಟಿಯಾಗಿಲ್ಲ, ಬೋಧಕರ ನೇಮಕ ಆಗಿಲ್ಲ. ಸುಸ್ಥಿರವಾದ ಅಕಡೆಮಿಕ್ ನೀಲನಕ್ಷೆ ಅಥವಾ ಹಣಕಾಸಿನ ಯೋಜನೆ ಇಲ್ಲದೆ ರಚಿಸಲಾಗಿರುವ ಸಂಗೀತ, ಜಾನಪದದಂತಹ ವಿಷಯವಾರು ವಿಶ್ವವಿದ್ಯಾಲಯಗಳು ಸೀಮಿತ ಸಂಪನ್ಮೂಲವನ್ನೇ ಬಳಸಲು ಯತ್ನಿಸುತ್ತಿವೆ. ಸರ್ಕಾರದ ಅನುದಾನ ಪಡೆಯುವ ವಿಶ್ವವಿದ್ಯಾಲಯಗಳು ಖಾಸಗಿ ವಿ.ವಿ.ಗಳ ಮಾದರಿಯಲ್ಲಿ ದುಬಾರಿ ಶುಲ್ಕ ವಸೂಲಿ ಮಾಡುವಂತಿಲ್ಲ. ಹೀಗಾಗಿ, ವಿ.ವಿ.ಗಳು ತಮಗೆ ಅಗತ್ಯವಿರುವ ಹಣಕಾಸಿನ ಸಂಪನ್ಮೂಲವನ್ನು ತಾವೇ ಕಂಡುಕೊಳ್ಳಬೇಕು ಎಂಬುದು ಸರಿಯಲ್ಲ. ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆಯ ಮೂಲಕ ಹಣ ಸಂಗ್ರಹಿಸಬಹುದು ಎಂಬ ಸಲಹೆಯನ್ನು ನೀಡುವುದು ಸುಲಭ, ಅನುಷ್ಠಾನ ಕಷ್ಟ. ಬಹುತೇಕ ಕುಲಪತಿಗಳು ಬೋಧನಾ ಅನುಭವ ಮಾತ್ರ ಹೊಂದಿರುತ್ತಾರೆ, ಅವರಿಗೆ ಆಡಳಿತಾತ್ಮಕ ಅನುಭವ ಹೆಚ್ಚಿರುವುದಿಲ್ಲ. ಅವರಿಗೆ ಬೃಹತ್ ಗಾತ್ರದ ಕಾರ್ಪೊರೇಟ್ ಕಂಪನಿಗಳ ಜೊತೆ ವ್ಯವಹರಿಸಿದ ಅನುಭವ ಕಡಿಮೆ.

ಸಮಾಧಾನದ ಸಂಗತಿಯೆಂದರೆ, ತಾತ್ಕಾಲಿಕ ಬೋಧಕರನ್ನು ನೆಚ್ಚಿಕೊಳ್ಳುವ ವ್ಯವಸ್ಥೆಯ ವಿರುದ್ಧ ಸುಪ್ರೀಂ ಕೋರ್ಟ್ ಜನವರಿಯಲ್ಲಿ ಗಟ್ಟಿ ಸಂದೇಶವೊಂದನ್ನು ರವಾನಿಸಿದೆ. ಒಬ್ಬ ತಾತ್ಕಾಲಿಕ ಶಿಕ್ಷಕನಿಂದ ತೆರವಾದ ಸ್ಥಾನವನ್ನು ಇನ್ನೊಬ್ಬ ತಾತ್ಕಾಲಿಕ ಶಿಕ್ಷಕನ ಮೂಲಕ ನೇಮಕ ಮಾಡಿಕೊಳ್ಳುವುದು ಸರಿಯಲ್ಲ ಎಂದು ಅದು ಹೇಳಿದೆ. ಕಾಯಂ ಕೆಲಸಗಳನ್ನು ತಾತ್ಕಾಲಿಕ ಸಿಬ್ಬಂದಿಯ ಮೂಲಕ ಮಾಡಿಸುವುದು ಶೋಷಣೆ ಎಂದೂ ಹೇಳಿದೆ. ಎಲ್ಲ ಉನ್ನತ ಶಿಕ್ಷಣ ಸಂಸ್ಥೆಗಳು ದೀರ್ಘಾವಧಿಯಿಂದ ಖಾಲಿ ಇರುವ ಸ್ಥಾನಗಳನ್ನು ನಾಲ್ಕು ತಿಂಗಳಲ್ಲಿ ಭರ್ತಿ ಮಾಡಬೇಕು ಎಂದು ಹೇಳಿದೆ. ರಾಜ್ಯದ ಉನ್ನತ ಶಿಕ್ಷಣ ವ್ಯವಸ್ಥೆಗೆ ಹೊಸ ಆಲೋಚನೆಗಳು ಬೇಕಾಗಿವೆ; ಟೊಳ್ಳು ಆವೇಶದ ಸಮರ್ಥನೆಗಳ ಅವಶ್ಯಕತೆ ಇಲ್ಲ. ರಾಜ್ಯದ ವಿಶ್ವವಿದ್ಯಾಲಯಗಳು ಸಮರ್ಥ ಹಾಗೂ ಉದ್ಯಮ ಕೌಶಲಗಳಿಗೆ ಸ್ಪಂದಿಸುವ ಪದವೀಧರರನ್ನು ತಯಾರಿಸಬೇಕು. ತಾತ್ಕಾಲಿಕ ಬೋಧಕ ಸಿಬ್ಬಂದಿಯ ನೇಮಕವನ್ನು ಸಹಜವಾಗಿಸುವುದು, ವಿಶ್ವವಿದ್ಯಾಲಯಗಳಿಗೆ ಅಗತ್ಯ ಅನುದಾನ ಇಲ್ಲದಂತೆ ಮಾಡುವುದು ನೀತಿ ನಿರೂಪಣೆಯಲ್ಲಿನ ಸೋಲು. ವಿಶ್ವವಿದ್ಯಾಲಯಗಳು ಅಂದರೆ ಜ್ಞಾನ ದೇಗುಲವಿದ್ದಂತೆ, ಅವುಗಳನ್ನು ಆ ಬಗೆಯಲ್ಲೇ ಕಾಣಬೇಕು.

ಜಾಲಡಾ

ದಿಕ್ಸೂಚಿಯಿಲ್ಲದ ಆಡಳಿತ

'ಉದ್ಯೋಗ ಸೃಷ್ಟಿ' ಭಾಷಣಗಳಿಗೆ ಮತ್ತು ಪ್ರಣಾಳಿಕೆಗಳಿಗೆ ಸೀಮಿತವಾಗಿದೆ. ವಾಸ್ತವದಲ್ಲಿ ಯುವಜನರನ್ನು ಮತಬ್ಯಾಂಕ್ ಆಗಿ ಮಾತ್ರ ಬಳಸಿಕೊಳ್ಳಲಾಗುತ್ತಿದೆ. ಇದು ರಾಜ್ಯ ಸರ್ಕಾರದ ಅಭಿವೃದ್ಧಿ ಶೂನ್ಯ ಮತ್ತು ದಿಕ್ಸೂಚಿಯಿಲ್ಲದ ಆಡಳಿತದ ಸ್ಪಷ್ಟ ನಿದರ್ಶನ.

ಬಿ. ಭಾಸ್ಕರ ರಾವ್, ನಿವೃತ್ತ ಐಪಿಎಸ್ ಅಧಿಕಾರಿ, 'ಎಕ್ಸ್'ನಿಂದ

ಕಿಡಿನುಡಿ

ರೋಮ್ ಹೊತ್ತಿ ಉರಿಯುವಾಗ ನೀರೋ ಪಿಟೀಲು ನುಡಿಸುತ್ತಿದ್ದನಂತೆ; ಹಾಗೆಯೇ ರಾಜ್ಯದ ಕಾಂಗ್ರೆಸ್ ಸರ್ಕಾರ ಯುವಜನರ ಆಕ್ರೋಶಕ್ಕೆ ಕನಿಷ್ಠ ಸ್ಪಂದನವನ್ನೂ ವ್ಯಕ್ತಪಡಿಸದೆ ಸಾವಿರ ದಿನಗಳ ಸಂಭ್ರಮಾಚರಣೆ, ಕುರ್ಚಿ ಕಾಳಗದಲ್ಲಿ ಮುಳುಗಿದೆ.

ಬಿ.ವೈ. ವಿಜಯೇಂದ್ರ, ಅಧ್ಯಕ್ಷ, ಬಿಜೆಪಿ ರಾಜ್ಯ ಘಟಕ

25 ವರ್ಷಗಳ ಹಿಂದೆ

ಭಾನುವಾರ, 25-2-2001

• ಅಂಕೋಲಾ: ಒಂದೇ ಕುಟುಂಬದ 9 ಜನರ ಆತ್ಮಹತ್ಯೆ

ಅಂಕೋಲಾ (ಕಾರವಾರ), ಫೆ. 24– ಮನೆಯ ಯಜಮಾನನ ವರ್ತನೆಯಿಂದ ಬೇಸತ್ತ ಆತನ ಹೆಂಡತಿ ಮತ್ತು 8 ಮಕ್ಕಳು ಸಾಮೂಹಿಕವಾಗಿ ಆತ್ಮಹತ್ಯೆ ಮಾಡಿಕೊಂಡ ಘಟನೆ ಅಂಕೋಲಾ ತಾಲ್ಲೂಕಿನಲ್ಲಿ ನಡೆದಿದೆ.

'ಕಚ್ಚು ಗಣಪತಿ' ಎಂದೇ ಹೆಸರಾಗಿರುವ ಗಣಪತಿ ಕುಸಲಪ್ಪ ನಾಯ್ಕ (50) ಅವರ ವಿಕ್ಷಿಪ್ತ ಸ್ವಭಾವ ಮತ್ತು ಊರಲ್ಲಿ ಕಟ್ಟಿಕೊಂಡ ದ್ವೇಷ ಮತ್ತು ಬೆಳೆಸಿಕೊಂಡ ತಿರಸ್ಕಾರದಿಂದ ಮನನೊಂದ ಈತನ ಹೆಂಡತಿ ಮತ್ತು ಮಕ್ಕಳು ಆತ್ಮಹತ್ಯೆ ಮಾಡಿಕೊಂಡಿದ್ದು, ಇಂದು ಶವಗಳು ಪತ್ತೆಯಾಗಿವೆ.

• ಕೃಷಿ ಉತ್ಪನ್ನ ಆಮದು ನಿರ್ಬಂಧ ಏಪ್ರಿಲ್‌ನಿಂದ ರದ್ದು

ನವದೆಹಲಿ, ಫೆ. 24 (ಯುಎನ್ಐ)– ವಿಶ್ವ ವಾಣಿಜ್ಯ ಸಂಸ್ಥೆಯೊಂದಿಗೆ ಮಾಡಿಕೊಳ್ಳಲಾದ ಒಪ್ಪಂದದ ಪ್ರಕಾರ ಬರುವ ಏಪ್ರಿಲ್‌ನಿಂದ ಕೃಷಿ ಉತ್ಪನ್ನಗಳ ಮೇಲಿನ ಆಮದು ನಿರ್ಬಂಧ ರದ್ದಾಗಲಿದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ.

75 ವರ್ಷಗಳ ಹಿಂದೆ

ಭಾನುವಾರ, 25-2-1951

• ವ್ಯಾವಸಾಯಿಕ ಕಾರ್ಮಿಕರಿಗೆ ಕನಿಷ್ಠ ವೇತನ: ಕೆಲವು ಮಿತಕ್ಷೇತ್ರಗಳಲ್ಲಿ ಮಾತ್ರವೇ ಅನ್ವಯ ಸಾಧ್ಯ

ನವದೆಹಲಿ, ಫೆ. 23– ವ್ಯಾವಸಾಯಿಕ ಕಾರ್ಮಿಕರಿಗೆ ಕನಿಷ್ಠ ವೇತನ ನಿಗದಿ ಮಾಡುವುದು 'ಕೆಲವು ಮಿತಕ್ಷೇತ್ರಗಳಲ್ಲಿ' ಮಾತ್ರ ಸಾಧ್ಯವಾಗಬಹುದೆಂದು ಅರ್ಥ ಸಚಿವ ಸಿ.ಡಿ. ದೇಶಮುಖರು ಇಂದು ಪಾರ್ಲಿಮೆಂಟಿನಲ್ಲಿ ತಿಳಿಸಿದರು.

ವ್ಯಾವಸಾಯಿಕ ಕಾರ್ಮಿಕರ ವಿವಿಧ ವೃತ್ತಿಗಳಿಗೆ ಕನಿಷ್ಠ ವೇತನ ಮಸೂದೆಯನ್ನು ಅನ್ವಯ ಮಾಡುವುದು, ಈಗಿನ ಪರಿಸ್ಥಿತಿಯಲ್ಲಿ ಗ್ರಾಮಾಂತರ ಕಾರ್ಯಗಳಿಗೆ ಧಕ್ಕೆ ತರುತ್ತದೆ ಎಂಬುದು ಸಿ.ಡಿ. ದೇಶಮುಖರ ಅಭಿಪ್ರಾಯ.

ರಾಷ್ಟ್ರೀಯತೆ: ಹಿಮ್ಮೆಟ್ಟುವಿಕೆ ಏಕೆ?

ವಿಶ್ಲೇಷಣೆ

ಯೋಗೇಂದ್ರ ಯಾದವ್

ಗಣತಂತ್ರದ ಜೀವಶಕ್ತಿ ಬಗ್ಗೆ ನಂಬಿಕೆಯುಳ್ಳವರ ಮಾತುಗಳನ್ನು ಸಮಾಜ ಕೇಳಿಸಿಕೊಳ್ಳುತ್ತಿಲ್ಲ. ಆದರೆ, ಗಣರಾಜ್ಯವನ್ನು ನಾಶಗೊಳಿಸುವ ಪ್ರಯತ್ನದಲ್ಲಿ ಇರುವವರು ಎಲ್ಲರನ್ನೂ ಮರುಳುಗೊಳಿಸುವ ಮೋಸದ ಭಾಷೆಯನ್ನು ಯಶಸ್ವಿಯಾಗಿ ಬಳಸುತ್ತಿದ್ದಾರೆ. ನಮ್ಮ ಚಿಂತನೆ, ಸಂವಹನ ಮತ್ತು ನಡವಳಿಕೆಯನ್ನು ಪ್ರಜ್ಞಾಪೂರ್ವಕವಾಗಿ ಬದಲಿಸಿಕೊಳ್ಳಬೇಕಾದ ಸಮಯ ಇದು.

'ನೀವು ಈ ಜಗತ್ತನ್ನು ಪ್ರಶ್ನಿಸಲೇಬೇಕು. ಬೇಕೆಂದಾದರೆ ಅದರ ಪದಗಳನ್ನು ನೀವು ಪ್ರಶ್ನಿಸಿ. ಆದರೆ, ಎಂದಿಗೂ ಅಕ್ಷರಗಳ ಜೊತೆಗೆ ಜಗಳ ಆಡಬೇಡಿ'. ಸೇವಾಗ್ರಾಮದಲ್ಲಿ ಗಾಂಧೀಜಿಯ ಕಾಲ ಕೆಳಗೆ ಕುಳಿತಿದ್ದಾಗ, ನನ್ನ ಮಾರ್ಕ್ಸ್‌ವಾದಿ ಶಿಕ್ಷಕರೊಬ್ಬರು ಬಂಡಾಯ ಮನಃಸ್ಥಿತಿಯ ಯುವ ವಿದ್ಯಾರ್ಥಿಗಳ ಗುಂಪಿಗೆ ನೀಡಿದ ಎಚ್ಚರಿಕೆ ನೆನಪಿಗೆ ಬಂತು. ಸಂವಹನಕ್ಕೆ ಸಂಬಂಧಿಸಿ ಗಹನವಾದ ಸತ್ಯವೊಂದರತ್ತ ಅವರು ನಮ್ಮ ಗಮನ ಸೆಳೆದಿದ್ದರು: ಪರಸ್ಪರ ಹಂಚಿಕೊಂಡ ಭಾಷೆ, ರೂಪಕಗಳು ಮತ್ತು ಸಂಕೇತಗಳ ಮೂಲಕ ಮಾತ್ರವೇ ಹೊಸ ಅರ್ಥಗಳನ್ನು ಮತ್ತು ಹೊಸ ಜಗತ್ತೊಂದನ್ನು ಸೃಷ್ಟಿಸಲು ಸಾಧ್ಯ.

ನಾನು ನನ್ನನ್ನೇ ಕೇಳಿಕೊಂಡೆ: ನಮ್ಮ ಶಿಕ್ಷಕರು ಎಚ್ಚರಿಕೆ ಕೊಟ್ಟಿದ್ದರೂ ನಾವು ಅದೇ ತಪ್ಪನ್ನು ಮಾಡುತ್ತಿದ್ದೇವೆಯೆ? ಉದಾರವಾದಿ, ಪ್ರಗತಿಪರ ಮತ್ತು ಜಾತ್ಯತೀತ ಭಾರತೀಯರು, ಭಾರತೀಯ ಸಮಾಜದ ಅಕ್ಷರಗಳ ಜೊತೆಗೆ ವ್ಯರ್ಥ ಜಗಳ ಮಾಡುತ್ತಿದ್ದೇವೆಯೇ? ನಾವು ಮಾತನಾಡುವುದು ಅಥವಾ ಚಿಂತಿಸುವುದನ್ನು ಇಂಗ್ಲಿಷ್‌ನಲ್ಲಿ ಮಾಡುತ್ತಿದ್ದೇವೆ. ರಾಷ್ಟ್ರೀಯತೆ ಎಂಬುದನ್ನು ಉಲ್ಲೇಖಿಸಿದರೆ ಹಿಮ್ಮೆಟ್ಟುತ್ತೇವೆ. ನಾವು ಹೆಮ್ಮೆಪಡಬಹುದಾದ ವಿಚಾರಗಳ ನೆನಪಿಸುವಿಕೆಯು ನಮ್ಮ ನಾಗರಿಕತೆಯು ನಾಚಿಕೆಪಟ್ಟುಕೊಳ್ಳಬೇಕಾದ ಎಲ್ಲವುಗಳನ್ನು ದೂಷಿಸುವ ನಮ್ಮ ಉತ್ಸಾಹಕ್ಕೆ ಸರಿಸಾಟಿಯೇ ಅಲ್ಲ. 'ಹಿಂದೂ ರಾಷ್ಟ್ರೀಯವಾದಿ'ಗಳು ನಮ್ಮ ಎದುರಾಳಿಗಳು ಎಂದು ಹೇಳಲು ಖುಷಿಪಡುತ್ತೇವೆ. ದೇವರ ಅಸ್ತಿತ್ವವನ್ನು ಪ್ರಶ್ನಿಸುವ ಬಹಿರಂಗ ಸಮಾರಂಭಗಳಲ್ಲಿ ಭಾಗವಹಿಸುತ್ತೇವೆ. ಧಾರ್ಮಿಕವಾದ ಎಲ್ಲದರಿಂದಲೂ, ವಿಶೇಷವಾಗಿ ಹಿಂದೂ ಎಂಬುದರಿಂದ ಅಂತರ ಕಾಯ್ದುಕೊಳ್ಳಲು ಬಯಸುತ್ತೇವೆ. ಈ ದೇಶದ ಜನರು ನಮ್ಮ ಮಾತುಗಳನ್ನು ಏಕೆ ಕೇಳುತ್ತಿಲ್ಲ ಎಂದು ಆ ಬಳಿಕ ಅಚ್ಚರಿಪಡುತ್ತೇವೆ.

ಕೊನೆಗಾಲದವರೆಗೆ ಮಹಾತ್ಮ ಗಾಂಧೀಜಿ ಅವರು ಬದುಕಿದ್ದ 'ಸೇವಾಗ್ರಾಮ' ಆಶ್ರಮದಲ್ಲಿ ಕುಳಿತಿದ್ದಾಗ ಸಿಕ್ಕ ಸಂದೇಶ ತಪ್ಪಾಗಲು ಸಾಧ್ಯವಿಲ್ಲ: ನೀವು ಬಯಸುವ ಬದಲಾವಣೆ ಮೊದಲು ನಿಮ್ಮಲ್ಲಿಯೇ ಆಗಲಿ. ಎಲ್ಲ ವಿಚಾರಗಳು ಬದಲಾಗಬೇಕು ಎಂದು ನೀವು ಬಯಸಿದ್ದರೆ ಆ ಬದಲಾವಣೆ ನಿಮ್ಮಿಂದಲೇ ಆರಂಭಗೊಳ್ಳಬೇಕು. ನಾವು ಚಿಂತಿಸುವ, ಸಂವಹನ ನಡೆಸುವ ಕ್ರಮ ಮತ್ತು ನಮ್ಮ ನಡವಳಿಕೆ ಎಲ್ಲವೂ ಆಮೂಲಾಗ್ರವಾಗಿ ಬದಲಾಗಬೇಕು. ಸದ್ಯದ ಆಕ್ರಮಣದಿಂದ ನಮ್ಮ ಗಣರಾಜ್ಯವನ್ನು ಹೇಗೆ ರಕ್ಷಿಸಿಕೊಳ್ಳಬಹುದು ಎಂದು ಚಿಂತಿಸಲು ಸೇರಿದ್ದ ವೈವಿಧ್ಯಮಯ ಸಿದ್ಧಾಂತ ಪರಂಪರೆಯ– ಗಾಂಧಿವಾದಿಗಳು, ಅಂಬೇಡ್ಕರ್‌ವಾದಿಗಳು, ಸಮಾಜವಾದಿಗಳು, ಮಾರ್ಕ್ಸ್‌ವಾದಿಗಳು, ಸ್ತ್ರೀವಾದಿಗಳು– ಗೆಳೆಯರ ಜೊತೆಗೆ ನಡೆದ ಸಂವಾದದಲ್ಲಿ ನಾನು ಕಂಡುಕೊಂಡ ಸಂಗತಿಗಳು ಇವು.

ಮೊದಲ ಪಾಠ ಅಚ್ಚರಿದಾಯಕ ಎಂಬಷ್ಟು ಸರಳ: ಸಕಾರಾತ್ಮಕವಾಗಿರಿ. ಇಂದು ಗಣರಾಜ್ಯವನ್ನು ಧ್ವಂಸಗೊಳಿಸುವವರು ಮತ್ತು ರಕ್ಷಕರ ಮಾತುಗಳನ್ನು ಕೇಳಿಸಿಕೊಳ್ಳುವುದರಲ್ಲಿ ಗಾಢವಾದ ವ್ಯತ್ಯಾಸ ಇದೆ. ಗಣರಾಜ್ಯವನ್ನು ನಾಶಗೊಳಿಸಲು ಬಯಸುವವರು ಸಕಾರಾತ್ಮಕವಾಗಿ ಮೋಸಗೊಳಿಸುವ ರೀತಿಯಲ್ಲಿ ನವಭಾರತ, ಆತ್ಮನಿರ್ಭರ, ಏಕೀಕರಣ, ರಾಷ್ಟ್ರೀಯ ಏಕತೆ ಮತ್ತು ರಾಷ್ಟ್ರೀಯ ಪುನರುತ್ಥಾನ ಎಂದೆಲ್ಲ ಮಾತನಾಡುತ್ತಾರೆ. ಬೇಸರದ ಸಂಗತಿಯೆಂದರೆ, ಭಾರತ ಎಂಬ ಚಿಂತನೆಯನ್ನು ರಕ್ಷಿಸಲು ಬಯಸುವವರು ಭೀತಿ, ಅಪಮಾನ ಮತ್ತು ನಾಶದ ಭಾಷೆಯನ್ನು ಮಾತನಾಡುತ್ತಾರೆ. ಭಾರತದ ಕುರಿತು ನಮ್ಮ ಮುನ್ನೋಟವನ್ನು ಸ್ಪಷ್ಟವಾಗಿ ತಿಳಿಸುವುದು ಮತ್ತು ಆ ಕುರಿತ ಭರವಸೆಯನ್ನು ವರ್ಧಿಸುವುದು ನಮ್ಮ ಮುಂದಿರುವ ಮೊದಲ ಹಾಗೂ ಮುಖ್ಯವಾದ ಸವಾಲು.

ಅನಗತ್ಯ ವಿಚಾರಗಳ ಕುರಿತು ಟೀಕಿಸುವ ಭರದಲ್ಲಿ ನಮ್ಮ ನಾಗರಿಕತೆಯ ಪರಂಪರೆಯಲ್ಲಿ ಶೋಧಿಸಲು ಮತ್ತು ಸಂಭ್ರಮಿಸಲು ಇರುವ ಹಲವು ವಿಚಾರಗಳನ್ನು ನಾವು ಮರೆತುಬಿಡಬಾರದು. ನಾಗರಿಕತೆಗಳು ಎಂದರೆ, ನದಿಗಳ ಹಾಗೆ; ಅವು ಹೊಸ ನೀರಿನ ಜೊತೆಗೆ ಕಲ್ಲು, ಮರಳು ಮತ್ತು ಕಸ ಎಲ್ಲವನ್ನೂ ತರುತ್ತವೆ. ನಮ್ಮ ಪರಂಪರೆಯಲ್ಲಿ ಇರುವ ಕೆಟ್ಟದ್ದರ ಕುರಿತೇ ಗಮನ ಕೇಂದ್ರೀಕರಿಸುವ ಬದಲು ನಾವು ಹೊಸ ಸಂಕೇತಗಳನ್ನು ಸೃಷ್ಟಿಸಬೇಕು, ಸಕಾರಾತ್ಮಕತೆಯನ್ನು ತುಂಬುವ ಚಾರಿತ್ರಿಕ ಸ್ಮರಣೆಗಳು ಹಾಗೂ ಸಮಕಾಲೀನ ಪದ್ಧತಿಗಳ ವಾಹಕರಾಗಬೇಕು.

ಭಾರತ ಎಂಬ ಚಿಂತನೆಯ ನೆಲಗಟ್ಟೇ ಆಗಿರುವ ನಮ್ಮ ಸಾಂವಿಧಾನಿಕ ಮೌಲ್ಯಗಳು ಸಂಸ್ಕೃತಿಯಲ್ಲಿ ನೆಟ್ಟುಹೋಗಬೇಕಾದ ಅಗತ್ಯವಿದೆ ಎಂಬುದು ಎರಡನೇ ಪಾಠವಾಗಿದೆ. ಪ್ರತಿಯೊಂದು ತಲೆಮಾರು ಈ ಮೌಲ್ಯಗಳತ್ತ ಮೋಹಗೊಳ್ಳುವಂತೆ, ಮರುಮೋಹಗೊಳ್ಳುವಂತೆ ನಾವು ಮಾಡಲೇಬೇಕಿದೆ. ಕಳೆದ 75 ವರ್ಷಗಳಲ್ಲಿ ಇದನ್ನು ಮಾಡುವಲ್ಲಿ ನಾವು ವಿಫಲರಾಗಿದ್ದೇವೆ. ಸಾಂವಿಧಾನಿಕ ಆದರ್ಶಗಳು ಸಾಮಾನ್ಯ ಪೌರನ ನೈತಿಕ ಭಾಷೆಯೊಂದಿಗೆ ಮಿಳಿತಗೊಂಡರೆ ಮಾತ್ರ ಪ್ರಸ್ತಾವನೆಯ ಓದು ಮತ್ತು ಸಂವಿಧಾನದ ಕಿರುಹೊತ್ತಗೆಯನ್ನು ಎತ್ತಿ ತೋರುವುದು ಒಂದು ಪವಿತ್ರ ಪದ್ಧತಿಯಾಗಿ ರೂಪುಗೊಳ್ಳುತ್ತದೆ. ಬಿಡುಗಡೆಯು ಸ್ವಾತಂತ್ರ್ಯದ ಹುರುಪನ್ನು ತುಂಬಿಕೊಂಡಿರಬೇಕು. ಜಾತ್ಯತೀತತೆಯು ಸೌಹಾರ್ದವನ್ನು ಮರುಸ್ಥಾಪಿಸಬೇಕು. ಕರುಣೆ ಮತ್ತು ದಯೆಯ ಪರಿಕಲ್ಪನೆಯಿಂದ ಸಮಾಜವಾದವು ಸಶಕ್ತಗೊಳ್ಳಬೇಕು. ಪ್ರಜಾಪ್ರಭುತ್ವದ ಮೂಲವನ್ನು ವಿನಯ ಪಿಠಕದಲ್ಲಿಯೇ ಗುರುತಿಸಬಹುದು. ಒಕ್ಕೂಟವಾದವು ಸ್ಥಳೀಯ ಪದ್ಧತಿಗಳು ಮತ್ತು ಸಾಂಪ್ರದಾಯಿಕ ಕಾನೂನುಗಳನ್ನು ತಳಹದಿ ಆಗಿಸಿಕೊಳ್ಳಬೇಕು. ನಮ್ಮ ಸಾಂವಿಧಾನಿಕ ಮೌಲ್ಯಗಳನ್ನು ಸಂಸ್ಕೃತಿಯೊಳಗೆ ಹುದುಗಿಸಿಕೊಳ್ಳುವ ಪರಿಕಲ್ಪನೆಯೇ ಗಣತಂತ್ರದ ಸ್ವಧರ್ಮವಾಗಿದೆ.

ಭಾರತದ ರಾಷ್ಟ್ರೀಯವಾದವನ್ನು ಮರಳಿ ಪಡೆಯುವುದು ಮೂರನೇ ಪಾಠವಾಗಿದೆ. ಜರ್ಮನಿಯ ರಾಷ್ಟ್ರೀಯತೆಯ ಕೀಳರಿಮೆ ಮತ್ತು ಯುರೋಪ್‌ನ ಅನ್ಯಗೊಳಿಸುವ ರಾಷ್ಟ್ರೀಯವಾದವನ್ನು ನಾವು ಅನುಸರಿಸಬಾರದು. ನಾವು ಸಕಾರಾತ್ಮಕ ಮತ್ತು ಪರಸ್ಪರ ನಂಟಿನ ಜನಾಂಗದ ಪರಂಪರೆಯಿಂದ ಬಂದವರು. ಯುರೋಪ್‌ನ ರಾಷ್ಟ್ರೀಯವಾದವನ್ನು ಅನುಸರಿಸುವವರು ನೆರೆಯವರ ಜೊತೆ ದ್ವೇಷ ಸಾಧಿಸುವವರು ಮತ್ತು ಆಂತರಿಕವಾಗಿ ದ್ವೇಷವನ್ನು ಹುಡುಕುವವರು.

ನಮ್ಮ ರಾಷ್ಟ್ರೀಯವಾದವು ಪರಸ್ಪರ ನಂಟಿನ ಬಾಂಧವ್ಯವನ್ನು ಗಟ್ಟಿಗೊಳಿಸಬೇಕು, ಆಂತರಿಕ ಸಂಘರ್ಷಗಳನ್ನು ಶಮನಗೊಳಿಸಬೇಕು ಮತ್ತು ವಿಶೇಷವಾಗಿ ಅನ್ಯಗೊಂಡಿರುವ ಭಾವನೆಯ ಇತಿಹಾಸವಿರುವ ಗಡಿ ಪ್ರದೇಶಗಳಲ್ಲಿ ಇದು ನಡೆಯಬೇಕು. ನಮ್ಮ ರಾಷ್ಟ್ರೀಯ ಏಕತೆಯು ಏಕರೂಪತೆ ಅಲ್ಲ, ಬದಲಿಗೆ ಅದು ನಮ್ಮ ಗಾಢ ಸಾಂಸ್ಕೃತಿಕ ವೈವಿಧ್ಯಗಳಲ್ಲಿ ವಿವರಿಸಲ್ಪಟ್ಟಿದೆ. ಮುಂದೆ ಬರಲಿರುವ ಕ್ಷೇತ್ರ ವಿಂಗಡಣೆಯು ಪ್ರಾದೇಶಿಕ ಅಸಮತೋಲನವನ್ನು ಉಂಟು ಮಾಡಬಹುದು ಎಂಬುದನ್ನು ಗಮನದಲ್ಲಿ ಇರಿಸಿಕೊಂಡು ಬಹಿಷ್ಕೃತಗೊಳ್ಳುವ ಭೀತಿಯುಳ್ಳವರ ಕಳವಳಗಳು ಮತ್ತು ಹಿಂದಿಯೇತರ ಭಾಷಿಕರ ಕಳವಳಗಳಿಗೆ ಪರಿಹಾರ ಕಂಡುಕೊಳ್ಳುವ ಮೂಲಕ ನಮ್ಮ ರಾಷ್ಟ್ರೀಯವಾದವು ವ್ಯಕ್ತವಾಗಬೇಕು; ಗಡಿಯಾಚೆಗಿನ ರಾಷ್ಟ್ರೀಯ ಭದ್ರತಾ ಕಳವಳಗಳ ಕುರಿತು ಪ್ರಾಮಾಣಿಕ ಸಂವಾದವನ್ನೂ ಇದು ಒಳಗೊಂಡಿರಬೇಕು. ಮತಾಂಧತೆಯು ಭಾರತೀಯ ರಾಷ್ಟ್ರೀಯವಾದಕ್ಕೆ ಮಾರಕ, ಹಾಗಾಗಿ ಅದನ್ನು 'ಹಿಂದೂ ರಾಷ್ಟ್ರೀಯವಾದ' ಎಂದು ಕರೆದು ವೈಭವೀಕರಿಸಬಾರದು.

ಭಾರತದ ಬಹುಪಾಲು ಪೌರರ ನೈತಿಕ ಯೋಚನೆಗಳು ಮತ್ತು ಪದ್ಧತಿಗಳನ್ನು ರೂಪಿಸುವ ಬಹುಧರ್ಮ ಪರಂಪರೆಗಳಿಗೆ ಬೆನ್ನು ತಿರುಗಿಸಬಾರದು ಎಂಬುದು ನಾಲ್ಕನೇ ಪಾಠವಾಗಿದೆ. ಜಾತ್ಯತೀತತೆಗಾಗಿ ಪೌರರು ತಮ್ಮ ಧರ್ಮವನ್ನು ಕೈಬಿಡಬೇಕಾಗಿಲ್ಲ ಅಥವಾ ಸಾರ್ವಜನಿಕ ವ್ಯವಹಾರಗಳ ಕುರಿತು ಚಿಂತಿಸುತ್ತಾ ತಮ್ಮ ಧಾರ್ಮಿಕ ನಂಬಿಕೆಗಳನ್ನು ಪಕ್ಕಕ್ಕೆ ಇರಿಸಬೇಕಾಗಿಲ್ಲ. ಭಾರತವು ಬಹುಧರ್ಮಗಳು, ಧರ್ಮಗಳೊಳಗೆ ಬಹುಧಾರೆಗಳು, ವೈವಿಧ್ಯಮಯ ಧರ್ಮ ಪರಂಪರೆಗಳನ್ನು ಹೊಂದಿರುವುದು ನಮ್ಮ ಅದೃಷ್ಟ. ಸಂಘಟಿತ ಧರ್ಮಗಳು, ಸಾಂಸ್ಥಿಕ ಶ್ರೇಣೀಕರಣಗಳು, ನ್ಯಾಯಸಮ್ಮತವಲ್ಲದ ಸಾಮಾಜಿಕ ಪದ್ಧತಿಗಳು ಮತ್ತು ಧರ್ಮಾಂಧತೆಯೊಂದಿಗೆ ಸೇರಿಕೊಂಡಿರುವ ಎಲ್ಲ ಕೆಡುಕುಗಳನ್ನು ಎದುರಿಸಲು ಶಕ್ತವಾದ ಸಂಪನ್ಮೂಲಗಳು ಈ ಯೋಚನೆಗಳು ಮತ್ತು ಪದ್ಧತಿಗಳ ವಿಶಾಲ ಸಾಗರದಲ್ಲಿ ನಮಗೆ ಲಭ್ಯ ಇವೆ.

ಧರ್ಮ ಎಂಬುದು ಒಂದು ಭಾಷೆಯ ಹಾಗೆ, ಅದನ್ನು ಪ್ರೀತಿಗೂ ಕವಿತೆಗೂ ಬಳಸಿಕೊಳ್ಳಬಹುದು; ದುಷ್ಟ ಬೈಗುಳಗಳಿಗೂ ಬಳಸಿಕೊಳ್ಳಬಹುದು. ಹಿಂದೂ ಧರ್ಮವೂ ಸೇರಿದಂತೆ ನಮ್ಮ ಧಾರ್ಮಿಕ ಪರಂಪರೆಗಳನ್ನು ನಾವು ಈ ರೀತಿಯಲ್ಲಿ ಸಮೀಪಿಸಬೇಕಿದೆ. ಹಿಂದೂಯೇತರರನ್ನು ದ್ವೇಷಿಸುವುದು ಅಥವಾ ಸವರ್ಣೀಯರಲ್ಲದವರ ಮೇಲಿನ ದೌರ್ಜನ್ಯಕ್ಕೆ ಹಿಂದೂ ಧರ್ಮವು ಕೊಡುವ ಸಮ್ಮತಿಯನ್ನು ಖಂಡಿಸಬೇಕಿದೆ. 'ಹಿಂದುತ್ವ' ಎಂದು ಕರೆಯುವ ಮೂಲಕ ಇಂತಹ ಪದ್ಧತಿಗಳಿಗೆ ಗೌರವವನ್ನು ನೀಡಲೇಬಾರದು.

ಇವು ಸಂವಹನ ಪದ್ಧತಿಗಳ ಕುರಿತಂತೆ ಇರುವ ಪಾಠಗಳಲ್ಲ. ಇವು ಅರಿವಿನ ವಿನಮ್ರತೆಯ ಕುರಿತ ನೈತಿಕ ಪಾಠಗಳು. ಪ್ರಜಾಪ್ರಭುತ್ವ ಎಂದರೆ ಜನರ ಮತದ ಆಯ್ಕೆಯನ್ನು ಗೌರವಿಸುವುದಷ್ಟೇ ಅಲ್ಲ. ಇದು ಜನರ ನಂಬಿಕೆಗಳು, ಸಂಸ್ಕೃತಿ ಮತ್ತು ಪರಂಪರೆಗಳನ್ನು ಗೌರವಿಸುವುದೂ ಹೌದು. ಅವರ ಆಯ್ಕೆಗಳು ಮತ್ತು ಅಭಿಪ್ರಾಯಗಳ ಕುರಿತು ನಾವು ಅಸಮ್ಮತಿಯನ್ನು ಸೂಚಿಸಬಹುದು ಮತ್ತು ಸೂಚಿಸುತ್ತೇವೆ. ಆದರೆ, ಅವರ ಜೊತೆಗೆ ಅವರ ಭಾಷೆಯಲ್ಲಿಯೇ ಮಾತನಾಡುವ ವಿನಮ್ರತೆಯು ನಮ್ಮಲ್ಲಿ ಇರಲೇಬೇಕು.

ಬಾಪು ಕುಟೀರದ ಪರಿಸರದಲ್ಲಿ ಸಂವಾದ ನಡೆದ ಕಾರಣ, ಈ ಎಲ್ಲ ಯೋಚನೆಗಳು ಸ್ವಯಂ-ಸ್ಪಷ್ಟ ಎಂದು ಕಾಣಿಸುತ್ತಿವೆಯೆ?

ವಾಚಕರ ವಾಣಿ

ನೇಮಕಾತಿ ತಡ: ಯುವಜನರ ರೋದನ

ಸರ್ಕಾರದ ವಿವಿಧ ಇಲಾಖೆಗಳಲ್ಲಿ ಎರಡೂವರೆ ಲಕ್ಷಕ್ಕೂ ಹೆಚ್ಚು ಹುದ್ದೆಗಳು ಖಾಲಿ ಇವೆ. ಅವುಗಳ ಭರ್ತಿಗೆ ಸರ್ಕಾರಕ್ಕೆ ಮನಸ್ಸಿಲ್ಲ. ಪರಿಶಿಷ್ಟ ಜಾತಿಯ ಒಳಮೀಸಲಾತಿ ಗೊಂದಲವನ್ನು ಮುಂದಿಟ್ಟುಕೊಂಡು ನೇಮಕಾತಿ ಪ್ರಕ್ರಿಯೆಯನ್ನು ವಿಳಂಬ ಮಾಡುತ್ತಿದೆ. ಈ ಧೋರಣೆ ಖಂಡಿಸಿ ಧಾರವಾಡದಲ್ಲಿ ಸಾವಿರಾರು ಉದ್ಯೋಗಾಕಾಂಕ್ಷಿಗಳು ಮತ್ತೆ ಹೋರಾಟಕ್ಕಿಳಿದಿದ್ದಾರೆ. ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದ ಹೆಚ್ಚಿನವರಲ್ಲಿ ಬಡ ರೈತರು, ಕೂಲಿ ಕಾರ್ಮಿಕರ ಮಕ್ಕಳು.

ಮಕ್ಕಳ ಕನಸಿಗಾಗಿ ಬಡ ಕುಟುಂಬಗಳು ಸಾಲ ಮಾಡಿ, ಮಾಸಿಕ ಏಳೆಂಟು ಸಾವಿರ ರೂಪಾಯಿ ವೆಚ್ಚವನ್ನು ಭರಿಸುತ್ತಿವೆ. ನೇಮಕಾತಿ ವಿಳಂಬದಿಂದ ಉದ್ಯೋಗಾಕಾಂಕ್ಷಿಗಳು ನಿರಾಸೆ ಮತ್ತು ಮಾನಸಿಕ ಒತ್ತಡ ಅನುಭವಿಸುತ್ತಿದ್ದಾರೆ. ಸರ್ಕಾರಿ ಉದ್ಯೋಗವು ಕೇವಲ ಕೆಲಸವಲ್ಲ; ಅದು ಬಡ ಕುಟುಂಬಗಳ ಭವಿಷ್ಯ ಮತ್ತು ಗೌರವ. ಆಳುವ ವರ್ಗಕ್ಕೆ ಈ ಸತ್ಯದ ಅರಿವಾಗಬೇಕಿದೆ.

ಸಿದ್ದು ಮೃದೊಳಲು, ಶಿವಮೊಗ್ಗ

ದೇವರಾಯನದುರ್ಗಕ್ಕೆ ರೋಪ್ ವೇ ಏಕೆ?

ತುಮಕೂರು ಜಿಲ್ಲೆಯ ದೇವರಾಯನದುರ್ಗಕ್ಕೆ ರೋಪ್ ವೇ ಅಳವಡಿಕೆಗೆ ಜನಪ್ರತಿನಿಧಿಗಳು ಮುಂದಾಗಿರುವುದು ಅಪ್ರಸ್ತುತ ಹಾಗೂ ಅರ್ಥಹೀನ. ಪುರಾಣ ಪ್ರಸಿದ್ಧ ದೇವರಾಯನದುರ್ಗದ ಕೆಳಗಿನ ಬೆಟ್ಟದಲ್ಲಿ ಭೋಗಾನರಸಿಂಹಸ್ವಾಮಿ ಮತ್ತು ಮೇಲಿನ ಬೆಟ್ಟದಲ್ಲಿ ಯೋಗಾನರಸಿಂಹಸ್ವಾಮಿ ದೇವಾಲಯವಿದೆ. ಕೆಳಗಿನ ಬೆಟ್ಟಕ್ಕೆ ಸುವ್ಯವಸ್ಥಿತ ರಸ್ತೆ ಸೌಲಭ್ಯವಿದೆ. ದೇವಾಲಯದ ಬಾಗಿಲಿನವರೆಗೆ ವಾಹನದಲ್ಲೇ ತೆರಳಬಹುದಾಗಿದೆ. ಇಲ್ಲಿಂದ ಮೇಲಿನ ಬೆಟ್ಟದ ಅರ್ಧಭಾಗದವರೆಗೂ ಸುಸಜ್ಜಿತ ರಸ್ತೆಯಿದೆ. ಅಲ್ಲಿಯವರೆಗೂ ವಾಹನದಲ್ಲಿ ಆರಾಮವಾಗಿ ತಲಪಬಹುದಾಗಿದೆ. ಇನ್ನು ಅಲ್ಲಿಂದ ಮೇಲಕ್ಕೆ ದೇವಾಲಯದವರೆಗೆ ಮಾತ್ರ ಸುವ್ಯವಸ್ಥಿತ ಮೆಟ್ಟಿಲುಗಳನ್ನು ಹತ್ತಬೇಕಾಗಿದೆಯಷ್ಟೇ. ಇದು ದೇವರಾಯನದುರ್ಗದ ವಾಸ್ತವ ಚಿತ್ರಣ. ಪರಿಸ್ಥಿತಿ ಹೀಗಿದ್ದರೂ ಇಲ್ಲಿಗೆ ರೋಪ್ ವೇ ನಿರ್ಮಿಸಲು ತುದಿಗಾಲಲ್ಲಿ ನಿಂತಿರುವುದು ಅತಾರ್ಕಿಕ. ಈ ಕ್ಷೇತ್ರವು ಯಾತ್ರಾಸ್ಥಳವಾಗಿ ಉಳಿಯಬೇಕೇ ವಿನಾ ಮೋಜು-ಮಸ್ತಿಯ ತಾಣವಾಗಬಾರದು.

ಆರ್.ಎಸ್. ಅಯ್ಯರ್, ತುಮಕೂರು

ಮೊಬೈಲ್ ನಿರ್ಬಂಧ ಸ್ವಾಗತಾರ್ಹ

ಮಕ್ಕಳಿಗೆ ಮೊಬೈಲ್ ಬಳಕೆ ನಿರ್ಬಂಧ ಕುರಿತಂತೆ ಸರ್ಕಾರದ ಚಿಂತನೆ ಸ್ವಾಗತಾರ್ಹ. ಶಾಲೆಗಳಲ್ಲಿ ಮೊಬೈಲ್ ಬಳಕೆ ನಿಷೇಧಿಸುವುದರಿಂದ ಧನಾತ್ಮಕ ಬೆಳವಣಿಗೆಯಾಗಲಿದೆ. ಇದಕ್ಕೆ ಪೂರಕವಾಗಿ ಪೋಷಕರು ತಮ್ಮ ಮಕ್ಕಳನ್ನು ಮೊಬೈಲ್ ಗೀಳಿನಿಂದ ದೂರವಿಡುವ ಕುರಿತಂತೆ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳಬೇಕು. ಮಕ್ಕಳಲ್ಲಿನ ಮೊಬೈಲ್ ಬಳಕೆ ಕುರಿತು ಪೋಷಕರು ಮತ್ತು ವಿದ್ಯಾರ್ಥಿಗಳಿಗೆ ನೀಡಿದ ನನ್ನ ಜಾಗೃತಿ ಅಭಿಯಾನಕ್ಕೆ ಸರ್ಕಾರದ ಕಾನೂನಿನ ಕ್ರಮದ ಚಿಂತನೆ ಸಮಾಧಾನ ತಂದಿದೆ.

ದೇವನೂರು ಅಚ್ಯುತರಾವ್, ಸಾಗರ

ವೆಂಕಣ್ಣಯ್ಯನವರನ್ನು ಮರೆತ ಚಿತ್ರದುರ್ಗ

ಟಿ.ಎಸ್. ವೆಂಕಣ್ಣಯ್ಯನವರು ಚಿತ್ರದುರ್ಗ ಜಿಲ್ಲೆಯ ತಳುಕು ಗ್ರಾಮದವರು. ಮೈಸೂರು ವಿ.ವಿ.ಯ ಮೊದಲ ಕನ್ನಡ ಪ್ರೊಫೆಸರ್ ಆಗಿದ್ದವರು. ಪಾಂಡಿತ್ಯ, ಮಾನವೀಯತೆ, ಜಾತ್ಯತೀತ ಮನೋಭಾವ, ಶಿಷ್ಯ ವಾತ್ಸಲ್ಯಕ್ಕೆ ಹೆಸರಾಗಿದ್ದವರು. ಇಂಗ್ಲಿಷ್ ವಾತಾವರಣ ದಟ್ಟವಾಗಿದ್ದ ಕಾಲದಲ್ಲಿ ಕನ್ನಡವನ್ನು ಅದರೆಲ್ಲ ಜೀವಂತಿಕೆಯಲ್ಲಿ ದಕ್ಷತೆಯಿಂದ ಕಟ್ಟಿ ಬೆಳೆಸಿದವರು. ವೆಂಕಣ್ಣಯ್ಯನವರ ಪ್ರಭಾವಳಿಯಲ್ಲಿ ರೂಪುಗೊಂಡವರು ಮಹಾಕವಿ ಕುವೆಂಪು. ಈ ಗುರು-ಶಿಷ್ಯ ಸಂಬಂಧ ಅಸದೃಶವಾದುದು. ಅವರ ಸೋದರ ತ.ಸು. ಶಾಮರಾಯರದ್ದೂ ಅದೇ ಎತ್ತರದ ವ್ಯಕ್ತಿತ್ವ. ಅವರ ಶಿಷ್ಯ ಪ್ರೀತಿ ಅನನ್ಯ. ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪನವರು, ಮತ್ತಿನ್ನೆಷ್ಟೋ ವಿದ್ಯಾರ್ಥಿಗಳು ವ್ಯಾಸಂಗ ಮಾಡಿದ್ದು ಈ ಗುರುವಿನ ತಂಪು ನೆರಳಿನಡಿ. ಇಂತಹ ಅಪೂರ್ವ ಸಾಂಸ್ಕೃತಿಕ ಚೈತನ್ಯಗಳನ್ನು ಚಿತ್ರದುರ್ಗದ ಸಾಂಸ್ಕೃತಿಕ ಲೋಕ ಮರೆತೇಬಿಟ್ಟಿದೆ. ಈ ಆದರ್ಶ ಗುರುಗಳ ಹೆಸರಿನಲ್ಲಿ ಸ್ನಾತಕೋತ್ತರ ಕೇಂದ್ರಗಳಲ್ಲಿ ಅಧ್ಯಯನ ಪೀಠ ಸ್ಥಾಪಿಸಬೇಕಿದೆ.

ಚಂದ್ರಶೇಖರ ತಾಳ್ಯ, ಹೊಳಲ್ಕೆರೆ

ರಂಗಶಿಕ್ಷಕರ ನೇಮಕಾತಿ ಸಂಖ್ಯೆ ಎಷ್ಟು?

ರಂಗಭೂಮಿ ಶಿಕ್ಷಕರ ನೇಮಕಾತಿಯನ್ನು ಪರಿಗಣಿಸುವುದಾಗಿ ಹೇಳಿರುವ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಭರವಸೆಯು ಬಾಯಿ ಮಾತಿನ ಹೇಳಿಕೆಯಾಗದಿರಲಿ. ಶಿಕ್ಷಣ ಸಚಿವರು ಹನ್ನೊಂದು ಸಾವಿರ ಶಿಕ್ಷಕರ ನೇಮಕಾತಿ ಮಾಡಿಕೊಳ್ಳುತ್ತೇವೆಂದು ಹಲವು ತಿಂಗಳಿನಿಂದ ಹೇಳುತ್ತಿದ್ದಾರೆ. ಅದು ಕಾರ್ಯರೂಪಕ್ಕೆ ಬರುತ್ತದೆಯೇ ಎನ್ನುವ ಅನುಮಾನ ಕಾಡುತ್ತಿದೆ. ಇದರಲ್ಲಿ ರಂಗಶಿಕ್ಷಕರೆಷ್ಟು ಎಂಬ ಅಧಿಕೃತ ಮಾಹಿತಿಯ ಅಗತ್ಯವಿದೆ. ಏಕೆಂದರೆ, ಈಗ 'ವಿಶೇಷ ಶಿಕ್ಷಕರು' ಎನ್ನುವ ಹುದ್ದೆಯಿದೆ. ಅದರಲ್ಲಿ ರಂಗಶಿಕ್ಷಕರು, ಸಂಗೀತ ಶಿಕ್ಷಕರು ಮುಂತಾದವರು ಬರುತ್ತಾರೆ. ನೇಮಕಾತಿ ಮಾಡಿಕೊಳ್ಳುವಾಗ ನಿರ್ದಿಷ್ಟವಾಗಿ 'ರಂಗಶಿಕ್ಷಕರು' ಎಂದೇ ಪರಿಗಣಿಸಬೇಕು. ರಂಗಶಿಕ್ಷಣವನ್ನು ವ್ಯಾಸಂಗ ಕ್ರಮವಾಗಿ ರೂಪಿಸುವ ಮಹತ್ವ ಮತ್ತು ಅಗತ್ಯವನ್ನು ಸರ್ಕಾರ ಅರಿತುಕೊಳ್ಳಬೇಕಿದೆ.

ಬಿ. ಶ್ರೀಪಾದ ಭಟ್, ಬೆಂಗಳೂರು

ಕಾರಾಗೃಹ ಮತ್ತು ಅಲ್ಲಾವುದ್ದೀನ್ ದ್ವೀಪ

ಬೆಂಗಳೂರಿನ ಪರಪ್ಪನ ಅಗ್ರಹಾರದ ಕಾರಾಗೃಹವು ಪ್ರತಿದಿನ ಸುದ್ದಿಯಾಗುತ್ತಿದೆ. ವಾರದಲ್ಲಿ ನಾಲ್ಕೈದು ಬಾರಿ ದಾಳಿ ನಡೆಸಿ ನಿಷೇಧಿತ ವಸ್ತುಗಳನ್ನು ವಶಪಡಿಸಿಕೊಂಡರೂ ಮತ್ತೆ ಮತ್ತೆ ಪತ್ತೆಯಾಗುತ್ತಲೇ ಇರುತ್ತವೆ. ಆದರೂ, ಕಾರಾಗೃಹವು ಅಲ್ಲಾವುದ್ದೀನನ ಅದ್ಭುತ ದೀಪದಂತೆ ವರ್ತಿಸುತ್ತಿರುವುದು ಅಚ್ಚರಿದಾಯಕ. ಇದು ಪೊಲೀಸ್ ಅಧಿಕಾರಿಗಳ ನಿರ್ಲಕ್ಷ್ಯಕ್ಕೆ ಹಿಡಿದ ನಿದರ್ಶನ. ಯಾವುದೇ ಒತ್ತಡಕ್ಕೆ ಸಿಲುಕದೆ ನ್ಯಾಯವಾಗಿ ಕಾರ್ಯ ನಿರ್ವಹಿಸುವ ಶುದ್ಧಹಸ್ತದ ಅಧಿಕಾರಿಗಳನ್ನು ಕಾರಾಗೃಹಕ್ಕೆ ನಿಯೋಜಿಸಬೇಕಿದೆ. ಆಗಷ್ಟೇ ಇಲ್ಲಿನ ಅಕ್ರಮ ಚಟುವಟಿಕೆಗಳಿಗೆ ಕಡಿವಾಣ ಹಾಕಬಹುದು.

ಬಾಲಕೃಷ್ಣ ಎಂ.ಆರ್., ಬೆಂಗಳೂರು

ಚುರುಮುರಿ

ಕುರ್ಚಿ ಕಥಾ ಕಾಲಕ್ಷೇಪ

• ಮಣ್ಣೆ ರಾಜು

'**ಕರುನಾಡು** ರಾಜ್ಯದಲ್ಲಿ ಹಾಲಿ ಚೇರ್-ಮನ್ ಹಾಗೂ ಖಾಲಿ ಚೇರ್-ಮನ್ ನಡುವೆ ಕುರ್ಚಿ ಕಲಹ ನಡೆದಿತ್ತು, ರಾಜ್ಯಭಾರ ವ್ಯಾಜ್ಯಭಾರವಾಗಿತ್ತು...' ಎಂದು ದಾಸರು ಕುರ್ಚಿ ಕಥಾಕಾಲಕ್ಷೇಪ ಆರಂಭಿಸಿದರು. ನೆರೆದಿದ್ದ ಜನ ಚಪ್ಪಾಳೆ ತಟ್ಟಿದರು.

'ಇಂತಿರ್ಪ ರಾಜ್ಯದೊಳು ಕ್ಯಾಲೆಂಡರ್ ಹಾಳೆ ಬದಲಾಗಿ ಮಳೆಗಾಲ, ಚಳಿಗಾಲ ಮುಗಿದು ಬೇಸಿಗೆ ಶುರುವಾದರೂ ಚೇರ್ ವಾರ್ ಬದಲಾಗಲಿಲ್ಲ. ಬುದ್ಧಿವಂತನೂ ಚಾಣಾಕ್ಷನೂ ಚತುರನೂ ಆದ ಹಾಲಿ ಚೇರ್-ಮನ್, ವೀರನೂ ಶೂರನೂ ಪರಾಕ್ರಮಿಯೂ ಆದ ಖಾಲಿ ಚೇರ್-ಮನ್ ನಡುವಿನ ಬಹಿರಂಗದ ಮುದ್ದಾಟ, ಅಂತರಂಗದ ಗುದ್ದಾಟದ ಆಟಗಳನ್ನು ಪ್ರಜೆಗಳು ಕಂಡರೂ ಕಾಣದಂತೆ, ಕೇಳಿದರೂ ಕೇಳದಂತೆ ತೆಪ್ಪಗಿದ್ದರು...'

ಕಾಲಕ್ಷೇಪ ಮುಂದುವರಿಸಿದ ದಾಸರು, 'ಹೀಗಿರುವಾಗ ಹಾಲಿಯ ಕುರ್ಚಿಭದ್ರ ಹಿತಾಸಕ್ತಿಯಿಂದ ನರಳಿ, ಕೆರಳಿದ ಖಾಲಿ ಚೇರ್-ಮನ್, 'ನುಡಿದಂತೆ ನಡೆಯಿರಿ, ಕುರ್ಚಿ ಬಿಟ್ಟು ನಡಿಯಿರಿ' ಎಂದು ಹಲವು ಬಾರಿ ಹೇಳಿದರೂ ಕೇಳಲಿಲ್ಲವಂತೆ. ದುಃಖತಪ್ತ ಖಾಲಿ ಚೇರ್-ಮನ್ ದೆಹಲಿ ಯಾತ್ರೆ ಮಾಡಿ ದೊರೆಗಳಿಗೆ ಅಹವಾಲು ತೋಡಿಕೊಂಡು, ತಮ್ಮ ತ್ಯಾಗ, ಸೇವೆ, ಕೊಡುಗೆ ನೆನಪಿಸಿ ಕುರ್ಚಿ ಭಾಗ್ಯದ ಬಿನ್ನಹ ಮಂಡಿಸಿಕೊಂಡರು. ಕರುಣಾಳು ದೊರೆಗಳು ಇಷ್ಟಾರ್ಥ ಸಿದ್ಧಿರಸ್ತು ಎಂದು ಆಶೀರ್ವಾದಿಸಿದರು.

ಇದರಿಂದ ವಿಚಲಿತರಾದ ಹಾಲಿ ಚೇರ್-ಮನ್ ತಾವೂ ದೆಹಲಿ ಯಾತ್ರೆ ತೆರಳಿ ತಮ್ಮ ಸಾಧನೆ, ವೇದನೆ ವ್ಯಕ್ತಪಡಿಸಿ ದೀರ್ಘಾವಧಿ ಅಧಿಕಾರ ಕರುಣಿಸಿರೆಂದು ಕೋರಿಕೊಂಡರು. ದೊರೆಗಳು ತಥಾಸ್ತು ಎಂದರು.

ಚಿಂತಾಕ್ರಾಂತರಾದ ಖಾಲಿ ಚೇರ್-ಮನ್‌ಗೆ ದೇವರೇ ದಿಕ್ಕು ಎನ್ನುವಂತಾಗಿ ತೀರ್ಥಯಾತ್ರೆ ಕೈಗೊಂಡು ದೇವಸ್ಥಾನಗಳಲ್ಲಿ ಪೂಜೆ, ಪ್ರಾರ್ಥನೆ, ಭಜನೆ, ಧ್ಯಾನ ನಿರತರಾಗಿದ್ದಾರೆ. ಇಂದಲ್ಲಾ ನಾಳೆ ಪ್ರಯತ್ನ, ಪ್ರಾರ್ಥನೆ ಫಲಿಸುತ್ತದೆ ಎಂಬ ವಿಶ್ವಾಸದಲ್ಲಿದ್ದಾರೆ ಎನ್ನುವಲ್ಲಿಗೆ ಈ ಕುರ್ಚಿ ಕಥಾಕಾಲಕ್ಷೇಪಕ್ಕೆ ಮಂಗಳ ಹಾಡುತ್ತೇನೆ, ಮಂಗಳ ಜಯ ಮಂಗಳ, ಮಂಗಳ ಶುಭ ಮಂಗಳ...

ಸಂಗತ

ಕನ್ನಡ ಮಾಧ್ಯಮ: ಯಾವುದೇ ರಾಜಿ ಬೇಡ

ಪ್ರಾಥಮಿಕ ಶಿಕ್ಷಣದಲ್ಲಿ ಕನ್ನಡ ಒಂದು ಭಾಷೆ ಆಗಿರುವುದು, ಕಲಿಕೆಯ ಮಾಧ್ಯಮ ಇಂಗ್ಲಿಷ್ ಆಗಿರುವುದು ಅಪಾಯಕಾರಿ. ಈ ಸಮೀಕರಣ ಬದಲಾಗಬೇಕಿದೆ.

• ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ

ಬಾಲ್ಯದ ಶಿಕ್ಷಣ ಮಕ್ಕಳ ಭವಿಷ್ಯವನ್ನು ರೂಪಿಸಬಲ್ಲುದು. ಹಾಗಾಗಿ, ಕರ್ನಾಟಕದ ಪ್ರಾಥಮಿಕ ಶಾಲೆಗಳಲ್ಲಿ ಕನ್ನಡ ಮಾಧ್ಯಮದಲ್ಲೇ ಶಿಕ್ಷಣ ದೊರೆಯಬೇಕೆನ್ನುವುದು ಶಿಕ್ಷಣ ತಜ್ಞರ ಅಭಿಪ್ರಾಯ. ಏಳನೆಯ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿ ಕಲಿತ ವಿದ್ಯಾರ್ಥಿಗಳು ಮುಂದೆ ತಮಗೆ ಬೇಕಾದ ಮಾಧ್ಯಮದಲ್ಲಿ ಓದಬಹುದು. ಆಗಲೂ ಕನ್ನಡವನ್ನು ಒಂದು ಭಾಷೆಯನ್ನಾಗಿ ಎಲ್ಲ ತರಗತಿಗಳಲ್ಲೂ ಕಲಿಯುವುದು ಕಡ್ಡಾಯವಾಗಬೇಕು.

2019ರಿಂದ 2025ರ ನಡುವೆ ತೆರೆದಿರುವ ದ್ವಿಭಾಷಾ ಶಾಲೆಗಳಲ್ಲಿನ 6 ಮತ್ತು 7ನೇ ತರಗತಿಗೆ ಯಾವ ಭಾಷಾ ಮಾಧ್ಯಮದಲ್ಲಿ ಪಠ್ಯಪುಸ್ತಕಗಳಿಗೆ ಬೇಡಿಕೆ ಸಲ್ಲಿಸಬೇಕೆಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಅವರು ಇತ್ತೀಚೆಗೆ ನಿರ್ದೇಶನ ನೀಡಿದ್ದಾರೆ. ಅವರ ನಿರ್ದೇಶನದಂತೆ 4,134 ದ್ವಿಭಾಷಾ ಶಾಲೆಗಳ ವಿದ್ಯಾರ್ಥಿಗಳು ಆಂಗ್ಲಮಾಧ್ಯಮದ ಪಠ್ಯಪುಸ್ತಕಗಳನ್ನು ಕಡ್ಡಾಯವಾಗಿ ತರಿಸಿಕೊಂಡು ಓದಬೇಕಾಗಿದೆ. ಇದು ಪೋಷಕರ ಮತ್ತು ವಿದ್ಯಾರ್ಥಿಗಳ ಆಂಗ್ಲಭಾಷಾ ವ್ಯಾಮೋಹವನ್ನು ತೃಪ್ತಿಪಡಿಸುವಂತೆ ಕಂಡರೂ, ವಿದ್ಯಾರ್ಥಿಗಳ ಮನೋವಿಕಾಸ ಮತ್ತು ಕನ್ನಡ ಮಾಧ್ಯಮದ ಅಸ್ತಿತ್ವಕ್ಕೆ ದೊಡ್ಡ ಪೆಟ್ಟು ಕೊಡುತ್ತದೆ ಎನ್ನುವುದು ಸುಳ್ಳಲ್ಲ. ಐದು ಮತ್ತು ಆರನೆಯ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲೇ ಓದಿದ ವಿದ್ಯಾರ್ಥಿಗಳು ಒಮ್ಮೆಲೇ ಆಂಗ್ಲ ಭಾಷೆಯಲ್ಲಿ ಗಣಿತ, ವಿಜ್ಞಾನ, ಸಮಾಜ ವಿಜ್ಞಾನ ಇತ್ಯಾದಿ ವಿಷಯಗಳನ್ನು ಅರಗಿಸಿಕೊಳ್ಳಲು ಸಾಧ್ಯವೆ?



ಗ್ರಾಮೀಣ ಪ್ರದೇಶದ ಜನರ ಮನೆಗಳಲ್ಲಿ ಇಂಗ್ಲಿಷ್ ಪರಿಸರ ಇರುವುದಿಲ್ಲ. ಜೊತೆಗೆ, ಆಯಾ ಶಾಲೆಗಳಲ್ಲೂ ಸ್ಪಷ್ಟವಾಗಿ ಆಂಗ್ಲ ಭಾಷೆಯಲ್ಲಿ ಬೋಧಿಸುವ ಪರಿಣತಿಯುಳ್ಳ ಶಿಕ್ಷಕರ ಕೊರತೆ ಇರುತ್ತದೆ. ಇದರಿಂದ ಗ್ರಾಮೀಣ ಮಕ್ಕಳು ಶೈಕ್ಷಣಿಕವಾಗಿ ಹಿಂದುಳಿಯುವುದಿಲ್ಲವೆ? ವಿಷಯ ಜ್ಞಾನಕ್ಕಿಂತ ಭಾಷೆಯನ್ನು ಕಲಿಯುವಲ್ಲೇ ಮಕ್ಕಳ ಶ್ರಮ, ಶಕ್ತಿ ವ್ಯಯವಾಗಿ ಅವರಲ್ಲಿ ಸೃಜನಶೀಲತೆ ಕುಂಠಿತವಾಗುವುದಿಲ್ಲವೆ?

ಖಾಸಗಿ ಶಾಲೆಗಳವರು ಕನ್ನಡ ಮಾಧ್ಯಮದ ಬದಲು ಆಂಗ್ಲ ಮಾಧ್ಯಮದಲ್ಲೇ ಬೋಧನೆ ಮಾಡುತ್ತಿರುವುದರಿಂದ, ಅಲ್ಲಿ ಓದುವ ಬಹುತೇಕ ಮಕ್ಕಳಿಗೆ ಕನ್ನಡ ಮಾತನಾಡಲು ಬಂದರೂ ಬರೆಯಲು, ಓದಲು ಬರುವುದಿಲ್ಲ. ಸರ್ಕಾರಿ ಶಾಲೆಗಳು ಸಹ ಕನ್ನಡದ ಕತ್ತು ಕೊಯ್ಯುವ ನೆಲೆಯಲ್ಲೇ ಆಂಗ್ಲ ಮಾಧ್ಯಮಕ್ಕೆ ಮುದ್ರೆ ಒತ್ತುತ್ತಿರುವುದು ಏನನ್ನು ತೋರಿಸುತ್ತಿದೆ? ಮುಂದೆ ನಮ್ಮ ಕನ್ನಡತನ ಮತ್ತು ಕರ್ನಾಟಕದ ಸಾಂಸ್ಕೃತಿಕ ಬೇರುಗಳನ್ನೇ ನಾಶ ಮಾಡುವ ದುರಂತ ಇದರ ಹಿಂದಿದೆ ಎನಿಸುವುದಿಲ್ಲವೇ?

ಒಂದು ಹಂತದವರೆಗೆ ಇಂಗ್ಲಿಷನ್ನು ಸಂವಹನ ಭಾಷೆ ಆಗಿ ಕಲಿಸುವುದರಲ್ಲಿ ತಪ್ಪಿಲ್ಲ. ಆದರೆ, ಅದನ್ನೇ ಮಾಧ್ಯಮ ಮಾಡಿದರೆ ಗ್ರಾಮೀಣ ಪ್ರತಿಭೆಗಳ ಬದುಕಿಗೆ ಬೆಂಕಿ ಇಟ್ಟಂತೆ. ಸರ್ಕಾರ ತನ್ನ ನಿರ್ಧಾರವನ್ನು ತಕ್ಷಣ ಪುನರ್‌ಪರಿಶೀಲಿಸಿ ಏಳನೆಯ ತರಗತಿಯವರೆಗೆ ಎಲ್ಲ ಪಠ್ಯಪುಸ್ತಕಗಳು ಕನ್ನಡದಲ್ಲೇ ಇರುವಂತೆ, ಇಂಗ್ಲಿಷನ್ನು ಒಂದು ಭಾಷೆಯಾಗಿ ಕಲಿಯುವಂತೆ ಆದೇಶ ಮಾಡಬೇಕು. ಬದಲಾಗಿ, ಕನ್ನಡವನ್ನೇ ಒಂದು ಭಾಷೆಯಾಗಿಸಿ, ಇಂಗ್ಲಿಷನ್ನು ಮಾಧ್ಯಮವಾಗಿಸುವುದು 'ನೀರಿಳಿಯದ ಗಂಟಲಲ್ಲಿ ಕಡುಬು ತುರುಕಿದಂತೆ'.

ಕನ್ನಡವನ್ನು ಬರೀ ಭಾಷಣದ ಸರಕಾಗಿ ಉಳಿಸದೆ ಶಿಕ್ಷಣದ ಮಾಧ್ಯಮವನ್ನಾಗಿ ಉಳಿಸಿಕೊಳ್ಳುವ ಜವಾಬ್ದಾರಿ ಸರ್ಕಾರದ ಮತ್ತು ಪ್ರತಿಯೊಬ್ಬ ಕನ್ನಡಿಗನ ಜವಾಬ್ದಾರಿ. ಹಾಗಾಗಿ ಕನ್ನಡಪರ ಸಂಘಟನೆಗಳು ಎಚ್ಚತ್ತುಕೊಂಡು ಸರ್ಕಾರದ ಈ ನೀತಿಯನ್ನು ಪ್ರತಿಭಟಿಸಬೇಕಾಗಿದೆ. ಕನ್ನಡದ ಅಸ್ಮಿತೆಗೆ ಬಂದಿರುವ ಆಪತ್ತನ್ನು ತಕ್ಷಣ ಪರಿಹರಿಸುವ ಕಾರ್ಯವನ್ನು ಸರ್ಕಾರ ಮತ್ತು ಶಿಕ್ಷಣ ಇಲಾಖೆ ಮಾಡಬೇಕಿದೆ.

ಖಾಸಗಿ ಶಾಲೆಗಳ ಪೈಪೋಟಿಯನ್ನು ಎದುರಿಸಲು ಸರ್ಕಾರ ಈ ನಿರ್ಧಾರ ತೆಗೆದುಕೊಂಡಿರಬಹುದು. ಇದರಿಂದ ಕನ್ನಡ ಮಾಧ್ಯಮ ಇರುವ ಬಹುತೇಕ ಖಾಸಗಿ ಪ್ರೌಢಶಾಲೆಗಳು ವಿದ್ಯಾರ್ಥಿಗಳ ಕೊರತೆಯಿಂದ ಮುಚ್ಚುವಂತಾಗಬಹುದು.

ಈಗಾಗಲೇ, ಕೆಪಿಎಸ್ ಸ್ಕೂಲ್‌ಗಳನ್ನು ತೆರೆಯುತ್ತಿರುವುದು ಕನ್ನಡ ಭಾಷೆಗೆ ಕುಂದು ತರುವಂತಹುದೇ ಆಗಿದೆ. ಮುಂದೆ ಕಡಿಮೆ ವಿದ್ಯಾರ್ಥಿಗಳಿರುವ ಸರ್ಕಾರಿ ಪ್ರಾಥಮಿಕ ಶಾಲೆಗಳನ್ನು ಸಹ ಮುಚ್ಚುತ್ತಾರೆ ಎನ್ನುವ ಸುದ್ದಿ ಇದೆ. ಯಾವ ಶಾಲೆಗಳನ್ನೂ ಮುಚ್ಚುವುದಿಲ್ಲ ಎಂದು ಶಿಕ್ಷಣ ಸಚಿವರು ಹೇಳಿದ್ದನ್ನು ಮಾಧ್ಯಮಗಳ ಮೂಲಕ ಕೇಳಿದ್ದೇವೆ.

ಸಾಣೇಹಳ್ಳಿಯ ಸುತ್ತಮುತ್ತ 1ರಿಂದ 5ನೆಯ ತರಗತಿವರೆಗೆ ಇರುವ ಶಾಲೆಗಳಲ್ಲಿರುವ ಶಿಕ್ಷಕರ ಸಂಖ್ಯೆಯನ್ನು ನೋಡಿ: ಆದರಕಟ್ಟೆ-2, ದಾಸೇನಹಳ್ಳಿ-1, ಗೊಲ್ಲರಹಟ್ಟಿ-2, ಕುಂಬಾರಗಟ್ಟ ಗಡಿ-2. ಈ ಎಲ್ಲ ಶಾಲೆಗಳಲ್ಲಿ ಶಿಕ್ಷಕರ ಕೊರತೆ ಇದೆ. 5ರಿಂದ 7ನೆಯ ತರಗತಿವರೆಗೆ ಇರುವ ಶಾಲೆಗಳ ಶಿಕ್ಷಕರ ಸಂಖ್ಯೆ ಹೀಗಿದೆ: ಮಾರಬಗಟ್ಟ-4, ನೀರಗುಂದ-3, ಸಾಣೇಹಳ್ಳಿ-4, ಸೆಟ್ಟಿಹಳ್ಳಿ-3, ಅಹಮದ್ ನಗರ-4.

ಸಾಣೇಹಳ್ಳಿಯ ಸುತ್ತಮುತ್ತಲ ಶಾಲೆಗಳ ಸ್ಥಿತಿಯೇ ರಾಜ್ಯದ ಬಹುತೇಕ ಭಾಗಗಳಲ್ಲಿದೆ. ಒಂದು ತರಗತಿಗೆ ಒಬ್ಬರಾದರೂ ಶಿಕ್ಷಕರಿರಬೇಕು. ಇರುವ ಶಿಕ್ಷಕರೇ ಪ್ರತಿದಿನ ಇಲಾಖೆಯ ಕೆಲಸ, ಬಿಸಿಯೂಟದ ಜವಾಬ್ದಾರಿ ಇತ್ಯಾದಿ ಜೊತೆಗೆ ಇಡೀ ದಿನ ಪಾಠ ಮಾಡಲು ಸಾಧ್ಯವೆ? ಇದರಿಂದ ಗ್ರಾಮೀಣ ಪ್ರದೇಶದ ಶಾಲಾ ಮಕ್ಕಳ ಶೈಕ್ಷಣಿಕ ಗುಣಮಟ್ಟ ಹೇಗೆ ಸುಧಾರಿಸಲು ಸಾಧ್ಯ? ಈ ಬಗ್ಗೆ ಶಿಕ್ಷಣ ಇಲಾಖೆ ಮತ್ತು ಸರ್ಕಾರ ಗಂಭೀರವಾಗಿ ಯೋಚಿಸಬೇಕಿದೆ. ಕಲಿಕೆಯ ಮಾಧ್ಯಮ ಕನ್ನಡ ಆಗಿರುವುದು ನುಡಿಯ ಬೆಳವಣಿಗೆಯ ಜೊತೆಗೆ ನಾಡಿನ ನಾಳೆಗಳಿಗೂ ಮುಖ್ಯವಾಗಿದೆ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಮೊಬೈಲ್ ನಿಯಂತ್ರಣ ಸಾಧ್ಯವೇ?

• ಬಿ.ವಿ.ಶ್ರೀನಾಥ್, ಸೂರ್ಯನಾರಾಯಣ ವಿ.

ಇತ್ತೀಚೆಗೆ ದೆಹಲಿಯಲ್ಲಿ ನಡೆದ 'ಎಐ ಇಂಪ್ಯಾಕ್ಟ್ ಶೃಂಗಸಭೆ'ಯಲ್ಲಿ ಭಾಗವಹಿಸಿದ್ದ ಫ್ರಾನ್ಸ್ ಅಧ್ಯಕ್ಷ ಇಮ್ಯಾನುವೆಲ್ ಮ್ಯಾಕ್ರನ್ ಅವರು, 15 ವರ್ಷದವರೆಗಿನ ಮಕ್ಕಳಿಗೆ ಸಾಮಾಜಿಕ ಜಾಲತಾಣಗಳನ್ನು ನಿರ್ಬಂಧಿಸಬೇಕಾದ ಅಗತ್ಯವಿದೆ ಎಂದು ಪ್ರತಿಪಾದಿಸಿದ್ದರು. ಈ ವಿಚಾರದಲ್ಲಿ ಭಾರತವು ಫ್ರಾನ್ಸ್ ಮತ್ತು ಇತರ ದೇಶಗಳೊಂದಿಗೆ ಕೈಜೋಡಿಸಲಿದೆ ಎಂದೂ ಅವರು ಭರವಸೆ ವ್ಯಕ್ತಪಡಿಸಿದ್ದರು. ಪ್ರಧಾನಿ ನರೇಂದ್ರ ಮೋದಿ ಅವರು ಮ್ಯಾಕ್ರನ್ ಅವರ ಮಾತುಗಳಿಗೆ ಸಹಮತ ವ್ಯಕ್ತಪಡಿಸಿದ್ದರು. ಇದಾದ ಕೆಲವೇ ದಿನಗಳಲ್ಲಿ ಕರ್ನಾಟಕ ಸರ್ಕಾರವು ಮಕ್ಕಳ ಮೊಬೈಲ್ ಬಳಕೆ ನಿರ್ಬಂಧಿಸುವ ವಿಚಾರದಲ್ಲಿ ಒಂದು ಹೆಜ್ಜೆ ಮುಂದಿಟ್ಟಿದೆ. 16 ವರ್ಷದವರೆಗಿನ ಮಕ್ಕಳ ಮೊಬೈಲ್ ಬಳಕೆಯ ಮೇಲೆ ನಿರ್ಬಂಧ ಹೇರುವುದರ ಬಗ್ಗೆ ಪರಿಶೀಲನೆ ನಡೆಸಲು ಸಮಿತಿಯನ್ನು ರಚಿಸಲಾಗುವುದು ಎಂದು ಸರ್ಕಾರ ಹೇಳಿದೆ.

ರಾಜ್ಯದಲ್ಲಿ ಮೊಬೈಲ್ ನಿರ್ಬಂಧದ ಅಗತ್ಯವನ್ನು ಪ್ರತಿಪಾದಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಆಸ್ಟ್ರೇಲಿಯಾದ ನಿದರ್ಶನವನ್ನು ಉಲ್ಲೇಖಿಸಿದ್ದಾರೆ. ಜಗತ್ತಿನಲ್ಲಿ ಮೊಬೈಲ್ ದುಷ್ಪರಿಣಾಮಗಳನ್ನು ತಡೆಯುವ ದಿಸೆಯಲ್ಲಿ ಕ್ರಮ ಕೈಗೊಂಡ ಮೊದಲ ದೇಶ ಆಸ್ಟ್ರೇಲಿಯಾ. ದೇಶದ 10ರಿಂದ 15 ವರ್ಷದವರೆಗಿನ ಶೇ 96ರಷ್ಟು ಮಕ್ಕಳು ಸಾಮಾಜಿಕ ಜಾಲತಾಣಗಳನ್ನು ಬಳಸುತ್ತಿದ್ದಾರೆ ಎಂದು, ಈ ಪೈಕಿ ಶೇ 10ರಷ್ಟು ಮಕ್ಕಳು ಹಾನಿಕಾರಕ ಮಾಹಿತಿ/ವಿಡಿಯೊ ಇತ್ಯಾದಿಗಳ ಸಂಪರ್ಕಕ್ಕೆ ಬಂದಿದ್ದಾರೆ ಎಂದು ಅಧ್ಯಯನವೊಂದು ಹೇಳಿತ್ತು. ಈ ಕಾರಣಕ್ಕೆ 16 ವರ್ಷದ ಒಳಗಿನ ಮಕ್ಕಳು ಕೆಲವು ಸಾಮಾಜಿಕ ಜಾಲತಾಣಗಳನ್ನು ಬಳಸುವುದು ನಿಷೇಧಿಸಿ 2025ರ ಡಿಸೆಂಬರ್‌ನಲ್ಲಿ ಆಸ್ಟ್ರೇಲಿಯಾ ಸರ್ಕಾರ ಆದೇಶ ಹೊರಡಿಸಿತು.

ಮಕ್ಕಳ ಚಾಲ್ತಿಯಲ್ಲಿರುವ ಖಾತೆಗಳನ್ನು ಬಂದ್ ಮಾಡಲಾಗುವುದು ಮತ್ತು ಹೊಸ ಖಾತೆಗಳನ್ನು ತೆರೆಯುವುದನ್ನು ನಿರ್ಬಂಧಿಸಲಾಗುವುದು ಎಂದು ಘೋಷಿಸಿತು. ನಿಯಮದ ಮೀರಿದರೆ ಮಕ್ಕಳಿಗೆ, ಅವರ ಪೋಷಕರಿಗೆ ಯಾವುದೇ ಶಿಕ್ಷೆ ಇಲ್ಲ. ಬದಲಿಗೆ, ಸಾಮಾಜಿಕ ಜಾಲತಾಣಗಳ ಕಂಪನಿಗಳಿಗೆ ದಂಡ ವಿಧಿಸಲಾಗುತ್ತದೆ ಎಂದಿತು. ಪರಿಣಾಮವಾಗಿ, ಮೆಟಾ ಮತ್ತು ಇತರ ಕಂಪನಿಗಳು ಲಕ್ಷಾಂತರ ಮಕ್ಕಳ ಖಾತೆಗಳನ್ನು ನಿರ್ಬಂಧಿಸಿದವು. ವಯಸ್ಸು ಖಚಿತಪಡಿಸಿಕೊಳ್ಳುವುದು ಹೇಗೆ, ದತ್ತಾಂಶದ ಸುರಕ್ಷತೆ ಸೇರಿದಂತೆ ಹಲವು ವಿಷಯಗಳ ಬಗ್ಗೆ ಕಂಪನಿಗಳ ತಕರಾರುಗಳೂ ವ್ಯಕ್ತವಾಗಿವೆ. ಅದರ ಬೆನ್ನಲ್ಲೇ, ಸರ್ಕಾರದ ಕ್ರಮದಿಂದ ಹೆಚ್ಚಿನ ಪ್ರಯೋಜನವೇನೂ ಇಲ್ಲ ಎನ್ನುವ ಮಾತುಗಳೂ ಕೇಳಿಬಂದಿವೆ. ಸಾಮಾಜಿಕ ಜಾಲತಾಣಗಳ ಬಳಕೆಯನ್ನು ನಿಷೇಧಿಸುವುದಕ್ಕಿಂತ ಅದರ ಪರಿಣಾಮಕಾರಿ ಬಳಕೆಗೆ ಕ್ರಮ ಜರುಗಿಸಬೇಕಿತ್ತು ಎನ್ನುವ ಅಭಿಪ್ರಾಯ ಅಲ್ಲಿ ಬಲವಾಗಿದೆ.

> ಭಾರತದಲ್ಲಿ ಆಂಧ್ರಪ್ರದೇಶ ಸರ್ಕಾರವು ಈ ದಿಸೆಯಲ್ಲಿ ಕಾರ್ಯೋನ್ಮುಖವಾದ ಮೊದಲ ರಾಜ್ಯವಾಗಿದೆ. ಮಕ್ಕಳು ಸಾಮಾಜಿಕ ಜಾಲತಾಣ ಬಳಸುವುದಕ್ಕೆ ನಿಯಂತ್ರಣ ಹೇರಲು ಮುಂದಾಗಿರುವ ತೆಲುಗು ದೇಶಂ ಪಕ್ಷದ ನೇತೃತ್ವದ ಸರ್ಕಾರವು, ಈ ಸಂಬಂಧ ಚಾಲ್ತಿಯಲ್ಲಿರುವ ಕಾನೂನುಗಳನ್ನು ಪರಿಶೀಲಿಸಲು ಸಚಿವ ನಾರಾ ಲೋಕೇಶ್ ನೇತೃತ್ವದಲ್ಲಿ ಸಮಿತಿಯೊಂದನ್ನು ರಚಿಸಿದೆ. ಗುಜರಾತ್ ರಾಜ್ಯವೂ ಈ ದಿಸೆಯಲ್ಲಿ ನಿಯಮ ರೂಪಿಸಲಾಗುವುದು ಎಂದಿದೆ.

ಚಿಲಿಯು ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳಲ್ಲಿ ಮೊಬೈಲ್ ಫೋನ್ ಬಳಕೆಯನ್ನು ನಿಷೇಧಿಸಿದೆ. 2026ರ ಶೈಕ್ಷಣಿಕ ವರ್ಷದಿಂದ ನಿಷೇಧವು ಜಾರಿಗೆ ಬರಲಿದೆ ಎಂದು ಸರ್ಕಾರ ಪ್ರಕಟಿಸಿದೆ. ದಕ್ಷಿಣ ಕೊರಿಯಾ ದೇಶದಾದ್ಯಂತ ಶಾಲೆಗಳಲ್ಲಿ ಮೊಬೈಲ್ ಫೋನ್‌ಗಳನ್ನು ಮತ್ತು ಸ್ಮಾರ್ಟ್ ಸಾಧನಗಳನ್ನು ನಿಷೇಧಿಸಿದೆ. 2026ರ ಮಾರ್ಚ್‌ನಿಂದ ನಿಷೇಧ ಜಾರಿಗೆ ಬರಲಿದೆ. ಫ್ರಾನ್ಸ್, ಬ್ರೆಜಿಲ್, ಹಂಗರಿ, ನೆದರ್ಲೆಂಡ್ಸ್, ಚೀನಾ ಶಾಲೆಗಳಲ್ಲಿ ಮೊಬೈಲ್ ಬಳಕೆಯನ್ನು ವಿವಿಧ ಹಂತಗಳಲ್ಲಿ ನಿಷೇಧಿಸಿವೆ.

ಆದರೆ, ಮೊಬೈಲ್ ಮತ್ತು ಸಾಮಾಜಿಕ ಜಾಲತಾಣಗಳ ಬಳಕೆ ನಿರ್ಬಂಧಿಸುವುದರ ಬಗ್ಗೆ ವಿವಿಧ ದೇಶಗಳಲ್ಲಿ ಅಧ್ಯಯನ–ಪ್ರಯೋಗಗಳು ನಡೆದಿದ್ದು, ಭಿನ್ನವಾದ ಫಲಿತಾಂಶ/ನಿಲುವುಗಳು ವ್ಯಕ್ತವಾಗಿವೆ. ಮೊಬೈಲ್ ಬಳಕೆಯನ್ನು ಸಂಪೂರ್ಣವಾಗಿ ನಿಷೇಧಿಸುವುದು ಎಷ್ಟರ ಮಟ್ಟಿಗೆ ಕಾರ್ಯಸಾಧು ಎನ್ನುವ ಪ್ರಶ್ನೆ ಮೂಡಿದೆ. ಮೊಬೈಲ್ ನಿಷೇಧಕ್ಕಿಂತ ಅದರ ಪರಿಣಾಮಕಾರಿ ಬಳಕೆಗೆ ನಿಯಮ ರೂಪಿಸಬೇಕು; ಸಾಮಾಜಿಕ ಜಾಲತಾಣಗಳ ಬಳಕೆಯ ಮೇಲೆ ನಿಯಂತ್ರಣ ಹೇರಬೇಕು; ಮಕ್ಕಳು ಹಾನಿಕಾರಕ ವಿಷಯಗಳ ಸಂಪರ್ಕಕ್ಕೆ ಬಾರದಂತೆ ಕ್ರಮ ಜರುಗಿಸಬೇಕು ಎನ್ನುವುದು ತಜ್ಞರ ಅಭಿಪ್ರಾಯ.

ಆಧಾರ: ಯುನಿಸೆಫ್ ವೆಬ್‌ಸೈಟ್, ಬಿಬಿಸಿ, ಟೆಕ್‌ಕ್ರಂಚ್.ಕಾಂ, ಮಾಧ್ಯಮ ವರದಿಗಳು

ಶಿಕ್ಷಣ ವ್ಯವಸ್ಥೆಯ ಭಾಗವಾಗಿರುವ ಮೊಬೈಲ್

ನಿಯಂತ್ರಿತ ಬಳಕೆಗೆ ಹಲವರ ಒಲವು

ಏಕೆ ನಿರ್ಬಂಧಿಸಬೇಕು?

- ಮಕ್ಕಳು ಮೊಬೈಲ್ ಬಳಕೆಯ ವ್ಯಸನಕ್ಕೆ ಸಿಲುಕಿದ್ದಾರೆ ಎಂಬುದು ಪೋಷಕರು, ಶಿಕ್ಷಕರ ಅಸಮಾಧಾನ
- ಚಿಕ್ಕವಯಸ್ಸಿನಲ್ಲಿಯೇ ಮಕ್ಕಳು ಹಾನಿಕಾರಕ ವಿಷಯಗಳ ಸಂಪರ್ಕಕ್ಕೆ ಬರಲು ಮೊಬೈಲ್ ಕಾರಣವಾಗುತ್ತಿದೆ. ಮೊಬೈಲ್ ಇಂಟರ್‌ನೆಟ್ ಮತ್ತು ಸಾಮಾಜಿಕ ಜಾಲತಾಣಗಳ ಬಳಕೆಯಿಂದ ಮಕ್ಕಳ ಸುರಕ್ಷೆಗೆ ಭಂಗ ಉಂಟಾಗಿದೆ. ಹಲವು ಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯ ಮತ್ತು ಇತರ ದೌರ್ಜನ್ಯಗಳು ನಡೆದಿವೆ
- ಮೊಬೈಲ್ ಫೋನ್‌ಗಳು ಮಕ್ಕಳ ಶಿಕ್ಷಣದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತಿವೆ. ಮಕ್ಕಳ ಓದುವ ಅವಧಿಯನ್ನು ಆವರಿಸಿವೆ; ಶೈಕ್ಷಣಿಕ ಸಾಧನೆ, ಗುಣಮಟ್ಟದ ಮೇಲೆ ಪರಿಣಾಮ ಬೀರುತ್ತಿವೆ
- ಮೊಬೈಲ್‌ನ ಅತಿಯಾದ ಬಳಕೆಯು ಮಕ್ಕಳ ದೈಹಿಕ, ಮಾನಸಿಕ ಬೆಳವಣಿಗೆಗೆ ತೊಡಕಾಗಿದ್ದು, ವರ್ತನೆಗೆ ಸಂಬಂಧಿಸಿದ ಸಮಸ್ಯೆಗಳಿಗೂ ಕಾರಣವಾಗುತ್ತಿದೆ; ಸಾಮಾಜಿಕ ಸಂವಹನ, ಸಂಬಂಧಗಳಿಗೆ ಅಡ್ಡಿಯಾಗಿದೆ
- ಮೊಬೈಲ್ ಗೇಮಿಂಗ್ ಚಟ ಹೆಚ್ಚಾಗುತ್ತಿದ್ದು, ಮಕ್ಕಳು ಸದಾಕಾಲ ಮೊಬೈಲ್ ಹಿಡಿದಿರುತ್ತಾರೆ



'ಯುನಿಸೆಫ್' ಹೇಳುವುದೇನು?

- ಮಕ್ಕಳ ಆನ್‌ಲೈನ್ ಸುರಕ್ಷತೆಯ ಬಗ್ಗೆ ರಾಷ್ಟ್ರಗಳು ಕ್ರಮ ಕೈಗೊಳ್ಳುತ್ತಿರುವುದು ಸ್ವಾಗತಾರ್ಹವಾದರೂ, ಸಾಮಾಜಿಕ ಜಾಲತಾಣಗಳನ್ನು ಸಂಪೂರ್ಣವಾಗಿ ನಿರ್ಬಂಧಿಸುವುದು ತಿರುಗುಬಾಣವಾಗಬಹುದು
- ನಗರಗಳಿಂದ ದೂರವಿರುವ, ಪ್ರತ್ಯೇಕವಾಗಿರುವ ಅಥವಾ ಅಂಚಿನ ಸಮುದಾಯದ ಹಲವು ಮಕ್ಕಳಿಗೆ ಸಾಮಾಜಿಕ ಜಾಲತಾಣಗಳು ಕಲಿಯುವಿಕೆಗೆ, ಹೊರಜಗತ್ತಿನೊಂದಿಗೆ ಸಂಪರ್ಕ ಸಾಧಿಸಲು, ತಮ್ಮ ಅಭಿಪ್ರಾಯಗಳನ್ನು ಹಂಚಿಕೊಳ್ಳಲು ವೇದಿಕೆಯಾಗಿವೆ
- ಮಕ್ಕಳಿಗೆ ಸುರಕ್ಷಿತವಾದ, ಎಲ್ಲರನ್ನೂ ಒಳಗೊಂಡ ಮತ್ತು ಮಕ್ಕಳ ಹಕ್ಕುಗಳನ್ನು ರಕ್ಷಿಸುವಂತಹ ಡಿಜಿಟಲ್ ವಾತಾವರಣವನ್ನು ಸೃಷ್ಟಿಸಲು ಸರ್ಕಾರಗಳು, ನಿಯಂತ್ರಕರು ಮತ್ತು ತಂತ್ರಜ್ಞಾನ ಕಂಪನಿಗಳು ಕ್ರಮ ಕೈಗೊಳ್ಳಬೇಕು
- ಮಕ್ಕಳ ಪೋಷಕರಲ್ಲಿ ಡಿಜಿಟಲ್ ಸಾಕ್ಷರತೆಯನ್ನು ಹೆಚ್ಚು ಮಾಡಲು ಕ್ರಮ ಕೈಗೊಳ್ಳಬೇಕು

ಕಾರ್ಯಸಾಧ್ಯವೇ?

ಮಕ್ಕಳು ಮೊಬೈಲ್ ಬಳಸುವುದನ್ನು ಹೇಗೆ ನಿರ್ಬಂಧಿಸಲಾಗುತ್ತದೆ ಎಂಬ ಪ್ರಶ್ನೆಯೂ ಈಗ ಉದ್ಭವವಾಗಿದೆ.

- ಡಿಜಿಟಲ್ ತಂತ್ರಜ್ಞಾನ ಮುಂಚೂಣಿಯಲ್ಲಿರುವ ಈ ಕಾಲ ಘಟ್ಟದಲ್ಲಿ, ಶಿಕ್ಷಣ ಕ್ಷೇತ್ರವೂ ಅದನ್ನು ಗರಿಷ್ಠ ಪ್ರಮಾಣದಲ್ಲಿ ಬಳಸಿಕೊಳ್ಳುತ್ತಿದೆ
- ಕೋವಿಡ್ ಸಾಂಕ್ರಾಮಿಕದ ನಂತರ ಮೊಬೈಲ್ ಫೋನ್‌ಗಳು ಶಿಕ್ಷಣ ವ್ಯವಸ್ಥೆಯ ಅನಿವಾರ್ಯ ಭಾಗ ಎನ್ನುವಂತಾಗಿವೆ. ಆನ್‌ಲೈನ್ ತರಗತಿಗಳು ಹೆಚ್ಚು ನಡೆಯುತ್ತಿವೆ. ಪಠ್ಯದ ವಿವರಗಳು, ಪಠ್ಯಕ್ಕೆ ಸಂಬಂಧಿಸಿದ ವಿಡಿಯೊಗಳು, ಅಸೈನ್‌ಮೆಂಟ್‌ಗಳು ಹೀಗೆ ಪಾಠಕ್ಕೆ ಸಂಬಂಧಿಸಿದ ವಿಷಯಗಳನ್ನು ಶಿಕ್ಷಕರು ಮೊಬೈಲ್‌ಗಳಲ್ಲೇ ಮಕ್ಕಳಿಗೆ ಅಥವಾ ಅವರ ಪೋಷಕರಿಗೆ ಕಳುಹಿಸುತ್ತಾರೆ
- ಗ್ರಾಮೀಣ ಭಾಗದವರು, ಅಂಗವಿಕಲರು, ಸಮಾಜದ ಅಂಚಿನ ವರ್ಗಗಳಿಗೆ ಸೇರಿದ ಮಕ್ಕಳು ಕೂಡ ಕಲಿಕೆಯ ಉದ್ದೇಶಕ್ಕೆ ಮೊಬೈಲ್‌ಗಳನ್ನು ಬಳಸುತ್ತಿದ್ದಾರೆ. ಆರ್ಥಿಕವಾಗಿ ದುರ್ಬಲರಾಗಿರುವವರಿಗೆ ಕಂಪ್ಯೂಟರ್, ಲ್ಯಾಪ್‌ಟಾಪ್‌ಗಳನ್ನು ಖರೀದಿಸುವ ಶಕ್ತಿ ಇರುವುದಿಲ್ಲ. ಎಲ್ಲದಕ್ಕೂ ಮೊಬೈಲನ್ನೇ ಅವರು ಅವಲಂಬಿಸಿದ್ದಾರೆ. ಮೊಬೈಲ್ ನಿಷೇಧ ಅಥವಾ ನಿರ್ಬಂಧ ಅವರ ಕಲಿಕೆಯ ಅವಕಾಶವನ್ನು ಕಸಿದುಕೊಳ್ಳಬಹುದು
- ನಿಯಂತ್ರಿತ ಮೊಬೈಲ್ ಬಳಕೆಗೆ ಒತ್ತು ಕೊಡಬಹುದು ಎಂಬುದು ಕೆಲವು ಶಿಕ್ಷಣ ತಜ್ಞರ ಅಭಿಪ್ರಾಯ

ಸಾಮಾಜಿಕ ಜಾಲತಾಣಗಳಿಗೆ ಒತ್ತು

ಜಗತ್ತಿನ ಹಲವು ದೇಶಗಳು 16 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳು ಫೇಸ್‌ಬುಕ್, ಎಕ್ಸ್, ಟಿಕ್ ಟಾಕ್ ಮುಂತಾದ ಸಾಮಾಜಿಕ ಜಾಲತಾಣಗಳನ್ನು ಬಳಸುವುದಕ್ಕೆ ಮತ್ತು ಅಪಾಯಕಾರಿಯಾದ ವಿಷಯಗಳ ಸಂಪರ್ಕಕ್ಕೆ ಬರುವುದಕ್ಕೆ ನಿರ್ಬಂಧ ಹೇರುವ ಪ್ರಯತ್ನ ಮಾಡಿವೆ. ಇದಕ್ಕಾಗಿಯೇ ಪ್ರತ್ಯೇಕ ಕಾನೂನು ರೂಪಿಸಿದ ಮೊದಲ ರಾಷ್ಟ್ರ ಆಸ್ಟ್ರೇಲಿಯಾ. ವಾಟ್ಸ್‌ಆ್ಯಪ್ ಮತ್ತು ಯೂಟ್ಯೂಬ್ ಕಿಡ್ಸ್ ಬಿಟ್ಟು ಉಳಿದೆಲ್ಲ ಸಾಮಾಜಿಕ ಜಾಲತಾಣಗಳನ್ನು ಅಲ್ಲಿ ನಿಷೇಧಿಸಲಾಗಿದೆ. ಇಂಥ ಪ್ರಯತ್ನ ನಡೆಸುತ್ತಿರುವ ಕೆಲವು ರಾಷ್ಟ್ರಗಳ ಪಟ್ಟಿ ಇಲ್ಲಿದೆ.

ಡೆನ್ಮಾರ್ಕ್: 15 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳು ಸಾಮಾಜಿಕ ಜಾಲತಾಣಗಳನ್ನು ಬಳಸುವುದಕ್ಕೆ ನಿರ್ಬಂಧ ಹೇರುವ ಕಾನೂನು ತರಲಾಗುವುದು ಎಂದು ಡೆನ್ಮಾರ್ಕ್ ಸರ್ಕಾರ 2025ರ ನವೆಂಬರ್‌ನಲ್ಲಿ ಘೋಷಿಸಿದೆ. ಸರ್ಕಾರದ ಈ ಪ್ರಸ್ತಾವಕ್ಕೆ ಅಲ್ಲಿನ ರಾಜಕೀಯ ಪಕ್ಷಗಳು ಬೆಂಬಲಿಸಿವೆ. ಈ ವರ್ಷದ ಮಧ್ಯಭಾಗದಲ್ಲಿ ಹೊಸ ಕಾನೂನು ಜಾರಿಯಾಗುವ ನಿರೀಕ್ಷೆಯಿದೆ.

ಫ್ರಾನ್ಸ್: 2018ರಲ್ಲೇ ಶಾಲೆಗಳಲ್ಲಿ ಮಕ್ಕಳು ಫೋನ್ ಬಳಸುವುದನ್ನು ಫ್ರಾನ್ಸ್ ನಿರ್ಬಂಧಿಸಿದೆ. ಮಕ್ಕಳ ಸ್ಕ್ರೀನ್ ಟೈಮ್ ಅನ್ನು ಕಡಿಮೆ ಮಾಡುವ ಉದ್ದೇಶದಿಂದ 15 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳು ಸಾಮಾಜಿಕ ಜಾಲತಾಣಗಳ ಬಳಸುವುದಕ್ಕೆ ನಿಷೇಧ ಹೇರುವ ಮಸೂದೆಯನ್ನು ಫ್ರಾನ್ಸ್‌ನ ಜನಪ್ರತಿನಿಧಿಗಳು ಅಂಗೀಕರಿಸಿದ್ದಾರೆ. ಮಸೂದೆ ಅಲ್ಲಿನ ಕೆಳಮನೆಯಲ್ಲಿ ಅಂಗೀಕಾರ ಆಗುವುದಕ್ಕೂ ಮುನ್ನ ಸೆನೆಟ್‌ನ ಒಪ್ಪಿಗೆ ಸಿಗಬೇಕಿದೆ.

ಜರ್ಮನಿ: 13ರಿಂದ 16 ವರ್ಷದೊಳಗಿನ ಮಕ್ಕಳು ಅವರ ಪೋಷಕರ ಅನುಮತಿ ಇದ್ದರೆ ಮಾತ್ರ ಸಾಮಾಜಿಕ ಜಾಲತಾಣಗಳನ್ನು ಬಳಸುವುದಕ್ಕೆ ಜರ್ಮನಿಯಲ್ಲಿ ಅವಕಾಶ ನೀಡಲಾಗಿದೆ. 16 ವರ್ಷದೊಳಗಿನ ಮಕ್ಕಳು ಸಾಮಾಜಿಕ ಜಾಲತಾಣಗಳಿಂದ ದೂರ ಉಳಿಯುವಂತೆ ಮಾಡುವ ನಿಯಮ ರೂಪಿಸುವ ಬಗ್ಗೆ ಸರ್ಕಾರ ಚರ್ಚೆ ನಡೆಸಿದೆ.

ಗ್ರೀಸ್: 15 ವರ್ಷದೊಳಗಿನ ಮಕ್ಕಳು ಸಾಮಾಜಿಕ ಜಾಲತಾಣಗಳನ್ನು ಬಳಸದಂತೆ ಮಾಡಲು ಕಾನೂನು ರೂಪಿಸುವ ಅಂತಿಮ ಹಂತದಲ್ಲಿ ಗ್ರೀಸ್ ಆಡಳಿತ ಇದೆ.

ಮಲೇಷ್ಯಾ: ಪ್ರೌಢಶಾಲೆ ಹಂತದವರೆಗಿನ ಮಕ್ಕಳು (16 ವರ್ಷ) ಸಾಮಾಜಿಕ ಜಾಲತಾಣಗಳನ್ನು ಬಳಸುವುದಕ್ಕೆ ನಿರ್ಬಂಧ ಹೇರುವುದಾಗಿ ಮಲೇಷ್ಯಾ ಸರ್ಕಾರ 2025ರ ನವೆಂಬರ್‌ನಲ್ಲಿ ಹೇಳಿತ್ತು. ಈ ವರ್ಷ ಅದನ್ನು ಜಾರಿಗೊಳಿಸುವ ಯೋಚನೆಯಲ್ಲಿದೆ.

ಸ್ಲೊವೇನಿಯಾ: 15 ವರ್ಷದೊಳಗಿನ ಮಕ್ಕಳು ಸಾಮಾಜಿಕ ಜಾಲತಾಣಗಳ ಬಳಕೆಯನ್ನು ನಿರ್ಬಂಧಿಸುವುದಕ್ಕಾಗಿ ಕರಡು ಶಾಸನ ಸಿದ್ಧಪಡಿಸುತ್ತಿದೆ.

ಸ್ಪೇನ್: 16 ವರ್ಷದೊಳಗಿನ ಮಕ್ಕಳು ಸಾಮಾಜಿಕ ಜಾಲತಾಣಗಳನ್ನು ಬಳಕೆ ತಡೆಯಲು ಕ್ರಮ ಕೈಗೊಳ್ಳಲಾಗುವುದು ಎಂದು ಸ್ಪೇನ್ ಪ್ರಧಾನಿ ಹೇಳಿದ್ದಾರೆ. ಆದರೆ, ಅದನ್ನು ಜಾರಿ ಮಾಡಬೇಕಾದರೆ ಸಂಸತ್ತಿನ ಒಪ್ಪಿಗೆ ಬೇಕು.

ಬ್ರಿಟನ್: ಮಕ್ಕಳು ಸಾಮಾಜಿಕ ಜಾಲತಾಣಗಳಿಂದ ದೂರ ಉಳಿಯುವಂತೆ ಮಾಡಲು ಕಾನೂನು ರೂಪಿಸಲು ಬ್ರಿಟನ್ ಕೂಡ ಮುಂದಾಗಿದೆ. 2023ರಲ್ಲಿ ಆನ್‌ಲೈನ್ ಸುರಕ್ಷತಾ ಕಾಯ್ದೆಯನ್ನು ಅಲ್ಲಿ ರೂಪಿಸಲಾಗಿತ್ತು. ಕಳೆದ ವರ್ಷದಿಂದ ಇದು ಜಾರಿಗೆ ಬಂದಿದೆ. ಇದರ ಅಡಿಯಲ್ಲಿ ಸಾಮಾಜಿಕ ಜಾಲತಾಣಗಳಿಗೆ ಕಠಿಣ ಮಾನದಂಡಗಳನ್ನು ನಿಗದಿಪಡಿಸಲಾಗಿದೆ. ಮಕ್ಕಳಿಗೆ ಅಪಾಯಕಾರಿ ವಿಷಯಗಳ ಸಂಪರ್ಕ ತಪ್ಪಿಸುವುದು ಸೇರಿದಂತೆ ಹಲವು ನಿರ್ಬಂಧಗಳು ಈ ಕಾನೂನಿನಲ್ಲಿವೆ. ಆದರೆ, ಸಾಮಾಜಿಕ ಜಾಲತಾಣಗಳ ಬಳಕೆಗೆ ವಯಸ್ಸಿನ ಮಿತಿ ನಿಗದಿಪಡಿಸಲಾಗಿಲ್ಲ.

ಇಟಲಿ: 14 ವರ್ಷದೊಳಗಿನ ಮಕ್ಕಳು ಸಾಮಾಜಿಕ ಜಾಲತಾಣಗಳನ್ನು ಬಳಸಲು ಪೋಷಕರ ಅನುಮತಿ ಇಟಲಿಯಲ್ಲಿ ಬೇಕು.

ನಾರ್ವೆ: 15 ವರ್ಷದೊಳಗಿನ ಮಕ್ಕಳಿಗೆ ಸಾಮಾಜಿಕ ಜಾಲತಾಣಗಳನ್ನು ನಿರ್ಬಂಧಿಸುವ ಸಂಬಂಧ ಕಾನೂನು ರೂಪಿಸಲು ನಾರ್ವೆ ಸರ್ಕಾರ ಹೊರಟಿದೆ. ಈಗ 13 ವರ್ಷದೊಳಗಿನ ಮಕ್ಕಳು ಈ ಜಾಲತಾಣಗಳನ್ನು ಬಳಸಲು ಪೋಷಕರ ಸಮ್ಮತಿ ಬೇಕು.

ಅಮೆರಿಕ: ಹಲವು ರಾಜ್ಯಗಳು ಮಕ್ಕಳು ಜಾಲತಾಣ ಬಳಸುವುದಕ್ಕೆ ಕಡಿವಾಣ ಹಾಕಿವೆ. ಮಕ್ಕಳ ಆನ್‌ಲೈನ್ ಖಾಸಗಿತನ ರಕ್ಷಣಾ ಕಾಯ್ದೆ ಜಾರಿಯಲ್ಲಿದ್ದು, ಪೋಷಕರ ಅನುಮತಿ ಇಲ್ಲದೆ 13 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳ ವೈಯಕ್ತಿಕ ಮಾಹಿತಿಗಳನ್ನು ಕಂಪನಿಗಳು ಸಂಗ್ರಹಿಸುವಂತಿಲ್ಲ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

'ಭಾರತ ಮತ್ತು ಪಾಕಿಸ್ತಾನದ ನಡುವೆ 2025ರ ಮೇನಲ್ಲಿ ನಡೆದ ಸೇನಾ ಸಂಘರ್ಷದಲ್ಲಿ ಭಾರತೀಯ ವಾಯುಪಡೆಯು 10 ರಫೇಲ್ ಯುದ್ಧ ವಿಮಾನಗಳನ್ನು ಕಳೆದುಕೊಂಡಿದ್ದನ್ನು ಪ್ರಧಾನಿ ನರೇಂದ್ರ ಮೋದಿ ಅವರು ಒಪ್ಪಿಕೊಂಡಿದ್ದಾರೆ' ಎಂದು ಪ್ರತಿಪಾದಿಸುತ್ತಾ ಮುಸಾಫಿರ್ ಎಂಬ ಫೇಸ್‌ಬುಕ್ ಬಳಕೆದಾರ ಫೆ.20ರಂದು ಮೋದಿ ಅವರು ಮಾತನಾಡುತ್ತಿರುವ ವಿಡಿಯೊವೊಂದನ್ನು ಪೋಸ್ಟ್ ಮಾಡಿದ್ದಾರೆ. ಇದು ಫ್ರಾನ್ಸ್ ಅಧ್ಯಕ್ಷ ಇಮ್ಯಾನುವೆಲ್ ಮ್ಯಾಕ್ರನ್ ಅವರೊಂದಿಗೆ ಜಂಟಿ ಪತ್ರಿಕಾಗೋಷ್ಠಿ ನಡೆಸಿದ ಸಂದರ್ಭದ ವಿಡಿಯೊ ತುಣುಕು. ಆದರೆ, ಈ ಮಾಹಿತಿ ಸುಳ್ಳು.

ವಿಡಿಯೊ ತುಣುಕಿನಿಂದ ಪ್ರತ್ಯೇಕಿಸಲಾದ ಒಂದು ಕೀಫ್ರೇಮ್ ಅನ್ನು ಗೂಗಲ್ ಲೆನ್ಸ್ ಮೂಲಕ ರಿವರ್ಸ್ ಸರ್ಚ್ ವಿಧಾನದಲ್ಲಿ ಹುಡುಕಿದಾಗ ಹಲವರು ಇದೇ ವಿಡಿಯೊವನ್ನು ಹಂಚಿಕೊಂಡಿರುವುದು ಕಂಡು ಬಂತು. ಇನ್ನಷ್ಟು ಹುಡುಕಿದಾಗ, ಮುಂಬೈನಲ್ಲಿ ಮೋದಿ ಮತ್ತು ಮ್ಯಾಕ್ರನ್ ಅವರು ನಡೆಸಿದ ಜಂಟಿ ಪತ್ರಿಕಾಗೋಷ್ಠಿಯ 29 ನಿಮಿಷಗಳ ಮೂಲ ವಿಡಿಯೊ ಸಿಕ್ಕಿತು. ಅದನ್ನು ಕೂಲಂಕಷವಾಗಿ ಪರಿಶೀಲಿಸಿದಾಗ, ಪೋಸ್ಟ್‌ನಲ್ಲಿ ಹೇಳಿದಂತೆ ಮೋದಿ ಅವರು ಎಲ್ಲೂ ಹೇಳಿಕೆ ನೀಡಿರಲಿಲ್ಲ. ಹೀಗಾಗಿ, ಆಡಿಯೊವನ್ನು ಡಿಜಿಟಲ್ ತಂತ್ರಜ್ಞಾನದಲ್ಲಿ ತಿದ್ದುಪಡಿ ಮಾಡಿರಬಹುದು ಎಂಬ ಅನುಮಾನ ಬಂತು. ವಿಡಿಯೊದಿಂದ ಆಡಿಯೊವನ್ನು ಪ್ರತ್ಯೇಕಿಸಿ ಎಐ ಧ್ವನಿ ಪತ್ತೆ ಟೂಲ್ 'ರಿಸೆಂಬಲ್ ಎಐ' ಮೂಲಕ ಪರಿಶೀಲನೆಗೆ ಒಳಪಡಿಸಿದಾಗ ಧ್ವನಿ ತಿರುಚಿರುವುದು ದೃಢಪಟ್ಟಿತು ಎಂದು ಪಿಟಿಐ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ಪದಬಂಧ 6326

ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಚಲುವಾದುದು ಮರದಲ್ಲಿದೆ! (4)
3.ಕೆನ್ನೆಗೆ ಹೊಡೆಯುವ ಏಟು (4)
5.ವಿಷಮವಾಗಿರುವ ಸಂಗತಿ (3)
6.ಮೃತರಾದವರಿಗಾಗಿ ಮಾಡುವ ಅಪರ ಕ್ರಿಯೆ (4)
7.ನದಿ ಸಮುದ್ರಕ್ಕೆ ಸೇರುವೆಡೆಯ ಮೆಕ್ಕಲು ಭೂಮಿ (7)
10.ವಾರದ ಕೊನೆಗೆ ಬಂದಿರುವ ಗ್ರಾಮ ರಕ್ಷಕ (4)
11.ಅವನಿರುವ ಭೂಮಿ (3)
14.ಒಂದು ಸಂಖ್ಯೆಯನ್ನು ಮತ್ತೊಂದರಿಂದ ಗುಣಿಸುವುದು (4)
15.ಕಾಣಿಕೆ ಅಥವಾ ಬಹುಮಾನ (4)

ಮೇಲಿಂದ ಕೆಳಕ್ಕೆ

1.ಮೂಳೆಯಲ್ಲಿರುವ ಮೆದುವಾದ ಕೊಬ್ಬಿನ ಪದಾರ್ಥ (2)
2.ಹರ್ಷವಿಲ್ಲಿ ವಿರಳವಾಗಿ ಬಂದಿದೆ (3)
4.ದೇವತೆಗಳ ಒಂದು ವರ್ಗ (3)
5.ರೀತಿಯು ಈ ವಿಧವಾಗಿ ಬಂದಿದೆಯಲ್ಲಾ (3)
6.ಧಾನ್ಯ ಸಂಗ್ರಹಿಸುವ ಸ್ಥಳ (3)
8.ಪುಷ್ಕರಿಣಿ ಹತ್ತಿರ ಹೂಡಿದ ಸಂಪು (3)
9.ಬಂಗಾರ ಇಲ್ಲಿದೆ (3)
10.ತರಗುಟ್ಟುತ್ತಿರುವವನ ಬಳಿಯಿರುವ ಒಣಗಿದ ವಸ್ತು (3)
12.ಹಲ್ಲುಗಳಿಗೆ ಆಧಾರವಾಗಿರುವ ಮಾಂಸ ಖಂಡ (3)
13.ಇದೊಂದು ಕಬ್ಬಿಣದ ಉಪಕರಣ (2)



6325ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಪರಾಜಿತ 3.ವಿದ್ಯಾಲಯ 5.ಕವಿ 7.ಕೆರಸಿ 8.ನಳ 9.ಪ್ರಯತ್ನ 10.ಲವಂಗ 11.ಜಾತ್ರೆ 12.ಸಂಭ್ರಮ 14.ಕರ 16.ತತ್ವಜ್ಞಾನ 17.ಕರಂಡಕ

ಮೇಲಿಂದ ಕೆಳಕ್ಕೆ: 1.ಪದಕ 2.ತಡಿಕೆ 3.ವಿಲಾಸಿ 4.ಯಮಳ 6.ವಿಜಯಯಾತ್ರೆ 8.ನಯವಂಚಕ 11.ಜಾಗೃತ 12.ಸಂಧಾನ 13.ಮರುಕ 15.ರಸಿಕ

ಥರಾವರಿ ತಕರಾರು

ನುಡಿ ಬೆಳಗು

ವಾಸುದೇವ ನಾಡಿಗ್

ಅವರಿಬ್ಬರೂ ದಟ್ಟ ಟ್ರಾಫಿಕ್‌ನ ಮಧ್ಯದಿಂದ ಹೇಗೋ ತಪ್ಪಿಸಿಕೊಂಡು ಸಂಜೆ ಮನೆಗೆ ಬಂದು ಲ್ಯಾಪ್‌ಟಾಪ್‌ಗಳನ್ನು ಎಸೆದು ಜಗಳಕ್ಕೆ ಕೂತಿದ್ದರು. ಏನಾದರೂ ತಿನ್ನುವುದಕ್ಕೆ ಸಿಗಬಹುದಾ ಅಂತ ಅಡುಗೆ ಮನೆ ತಡಕಾಟ. ಮಾಡಿಟ್ಟು ಹೋಗಿದ್ದರೆ ತಾನೆ ಸಿಗಲು ಸಾಧ್ಯ? ಮನೆ ಬಿಡಬೇಕಾದರೂ ಈಗೋ ಹಿಡಿದುಕೊಂಡು ಮುನಿಸಿಕೊಂಡೇ ಹೊರಟವರು. ಸಂಜೆಗೇನು ಸಿಗಲು ಸಾಧ್ಯ? ಹೊರಗೂ ವಿಚಿತ್ರ ವಾತಾವರಣ. ಕಾಲ ಯಾವುದೆಂಬ ಗೊಂದಲದ ಹಾಗೆ ಚಳಿಗಾಲದಲ್ಲೂ ತುಂತುರು ಮಳೆ. ಸ್ವಿಗ್ಗಿ ಆರ್ಡರ್ ಮಾಡಿ ಕೂತರು. ಏನೋ ಬೇಗ ಬರಲಿ ಬಿಸಿ ಇರಲಿ ಎಂಬ ನಿರ್ಧಾರ. ಐದು ನಿಮಿಷಕ್ಕೆ ಮೆಸೇಜ್: 'ಯುವರ್ ಆರ್ಡರ್ ಪಿಕ್ಡ್ ಬೈ ನಂದಿತಾ'.

ಆಹಾರ ಬರುವವರೆಗೂ ಅದೇ ವ್ಯಾಜ್ಯ. ಸಣ್ಣ ಸಣ್ಣ ನೆಪದಿಂದ ಶುರುವಾಗಿ ಅವರಿಬ್ಬರೂ ಮದುವೆ ಆಗಿದ್ದ ದಿನವನ್ನು ತಲುಪಿದ ವ್ಯಾಜ್ಯ. ಪದೇ ಪದೇ ಸ್ವಿಗ್ಗಿ ಬರುವಿಕೆಯನ್ನು ಪತ್ತೆ ಹಚ್ಚುವ ಕೆಲಸ. ಅದು ಹೇಳ್ತಾನೆ ಇತ್ತು ಇಪ್ಪತ್ತು ನಿಮಿಷ, ಹತ್ತು ನಿಮಿಷ ಅಂತ. ಆನಂತರ ಹತ್ತು ನಿಮಿಷವಾದರೂ ಸೂಚನೆ ಇಲ್ಲ. ಹೊರಗೆ ಚಳಿ ಮತ್ತು ವಿಚಿತ್ರ ಕಾಲಮಾನದಂತಹ ತುಂತುರು ಮಳೆ. ಇಲ್ಲಿ ಇವರಿಬ್ಬರ ಹೊಟ್ಟೆಯಲ್ಲಿ ಹಸಿವಿನ ಅಗ್ನಿ ಹೊತ್ತಿ ಉರಿಯುತ್ತಿದೆ. ಮನಸ್ಸಿನಲ್ಲೇ ಹಿಡಿಶಾಪ ನಂದಿತಾಳಿಗೆ.

ಮಳೆ, ಟ್ರಾಫಿಕ್ ಬೇರೆ ಯಾವುದನ್ನೂ ಅರ್ಥಮಾಡೊಕೊಳ್ಳದ ಅಸಹನೆಯ ಉರಿ ಕಾರಿಕೊಳ್ಳುತ್ತಿದ್ದರು. ನಿಗದಿತ ಸಮಯಕ್ಕಿಂತ ಹದಿನೈದು ನಿಮಿಷದ ನಂತರ ಮನೆ ಬಾಗಿಲು ಬಡಿದ ಹೆಂಗಸು. 'ಸಾರೀ ಮೇಡಂ ತಡವಾಯಿತು. ಮಳೆ, ಕೆಟ್ಟ ಟ್ರಾಫಿಕ್' ಅಂತ ಹೇಳುತ್ತಲೆ ಎದುರು ನಿಂತ ಹೆಣ್ಣುಮಗಳನ್ನು ನೋಡಿದಾಗ ಅವಳ ಹಿಂದೆ ಬಚ್ಚಿಟ್ಟುಕೊಂಡು ನಿಂತಿದ್ದ ಪುಟ್ಟ ಹುಡುಗಿ. ರೇನ್ ಕೋಟ್ ಇದ್ದರೂ ನೆನೆದು ನಡುಗುತಿತ್ತು.

'ಕೊನೆ ಡೆಲಿವರಿ ಮೇಡಂ. ಮನೆಗೆ ಹೊರಟುಬಿಡ್ತೀನಿ. ಹಾಗಾಗಿ ನಾನೇ ಪಿಕ್ ಮಾಡಿದೆ ನಿಮ್ಮ ಆರ್ಡರ್. ಮಗಳನ್ನೂ ಟ್ಯೂಷನ್‌ನಿಂದ ಮನೆಗೆ ಕರೆದುಕೊಂಡು ಹೋಗಬೇಕಿತ್ತು. ಇಲ್ಲೇ ಹತ್ತಿರ ನಮ್ಮ ಮನೆ' ಎನ್ನುತ್ತ ಹೊರಟೇ ಹೋದ ನಂದಿತಾ. ಅವಳ ಮಾತನ್ನು ಬಾಗಿಲಲ್ಲೇ ನಿಲ್ಲಿಸಿ ಕೇಳಿಸಿಕೊಂಡ ಈ ಇಬ್ಬರೂ ಚಕಾರ ಎತ್ತಲಿಲ್ಲ. ಇಬ್ಬರ ಮಧ್ಯೆ ಭಯಂಕರ ಮೌನ.

ಜೀವನವೇ ಹೀಗೆ ನೋಡಿ. ನಮ್ಮದೇ ಹಿಮಾಲಯದಷ್ಟು ಭಾರ ಅಂದುಕೊಂಡು ಲೋಕವನ್ನು ನೋಡುವ ಗೊಡವೆಗೇ ಹೋಗುವುದಿಲ್ಲ. ನಮ್ಮದೇ ಬಹುದೊಡ್ಡ ಸಮಸ್ಯೆ ನಮಗೆ. ಈ ಇಬ್ಬರ ಬ್ಯಾಂಕ್ ಬ್ಯಾಲೆನ್ಸ್ ಕಮ್ಮಿ ಇರಲಿಲ್ಲ. ಆದರೆ ಬಾಳ್ವೆಯ ಅರ್ಥವಂತಿಕೆ ಮತ್ತು ಬಾಳಿನ ಹೊಂದಾಣಿಕೆಯೇ ಕಳಚಿಹೋಗಿತ್ತು. ಸ್ವಿಗ್ಗಿ ಅಹಾರ ತಂದುಕೊಟ್ಟು ಹೋಗಿದ್ದ ನಂದಿತಾ ಮತ್ತವಳ ಮಗಳ ಚಿತ್ರ ಅವರ ಬಾಳಿನ ದೃಷ್ಟಿಕೋನವನ್ನೇ ಬದಲಾಯಿಸಿತು. ಅಕಾಶವೇ ಬಿದ್ದ ಹಾಗೆ ಆಡುವ ನಾವು ಮತ್ತು ನಮ್ಮಂಥವರ ಗ್ರಹಿಕೆಯನ್ನು ಆ ಪುಟ್ಟ ಹುಡುಗಿ ಪ್ರಶ್ನಿಸಿದ ಹಾಗೆ ಆಗಿತ್ತು. ನಿರ್ದಿಷ್ಟ ಅಳತೆ ಮತ್ತು ವಿನ್ಯಾಸದ ಶೂಗಳಿಗಾಗಿ ಹುಡುಕುತ್ತಾ ಗೊಣಗುತ್ತಾ ಸಿಗದೇ ಹೋದಾಗ ಇದ್ದ ಬದ್ದ ಕಂಪನಿಗಳನ್ನು ಬೈಯುವಾಗ ಕಾಲಿರದ ವ್ಯಕ್ತಿಯೊಬ್ಬ ಸರ್ಕಲ್ ಸಿಗ್ನಲ್ಲಿನಲ್ಲಿ ಕಾಣಿಸಿಕೊಳ್ಳಬೇಕು.

ಸುಡೊಕು 6710

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

		6		7		3		8
	8		2		4			
7		1		5		4		9
	9		5				7	
1				4				3
	6				8		5	
9		5			6	2		1
							8	
6		8	4			9		5

6709 ಸುಡೊಕು

8	5	3	1	6	2	4	9	7
6	1	9	7	5	4	3	2	8
7	4	2	8	9	3	1	6	5
4	6	7	5	3	9	2	8	1
1	2	8	6	4	7	9	5	3
3	9	5	2	1	8	7	4	6
5	7	4	3	2	6	8	1	9
9	3	1	4	8	5	6	7	2
2	8	6	9	7	1	5	3	4

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

25 ಫೆಬ್ರುವರಿ 2026 ಬುಧವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಫಾಲ್ಗುಣ ಶುಕ್ಲ ನವಮಿ ಗಂ. 26-41 ನಕ್ಷತ್ರ: ರೋಹಿಣಿ ಗಂ. 13-39 ಯೋಗ: ವಿಷ್ಕಂಭ ಗಂ. 25-29 ಕರಣ: ಬಾಲವ ಗಂ 15-47 ಕುಂಭ ಮಾಸದ 13 ನೇ ದಿನ. ಮಳೆ ನಕ್ಷತ್ರ : ಶತಭಿಷ 2 ನೇ ಪಾದ. ರಾಹುಕಾಲ : ಮಧ್ಯಾಹ್ನ 12-00 - 01-30, ಸೂರ್ಯೋದಯ : 06-52 ಸೂರ್ಯಾಸ್ತ : 06-35, ಮುಸ್ಲಿಂ ದಿನಾಂಕ : 7 ರಂಜಾನ್, ಅದೃಷ್ಟ ಸಂಖ್ಯೆ : 11, 10

ಮೇಷ: ಸಮಾಧಾನ ದೊರೆತು ಹಂತ ಹಂತವಾಗಿ ಅನುಕೂಲ ವಾತಾವರಣದ ಅನುಭವ ದೊರಕಲಿದೆ. ಸದುದ್ದೇಶ ಕಾರಣದಿಂದ ಕೆಲಸವನ್ನು ಗೌಪ್ಯವಾಗಿ ನಿರ್ವಹಿಸಬೇಕಾಗುವುದು.

ವೃಷಭ: ತಾಂತ್ರಿಕ ಕ್ಷೇತ್ರದಲ್ಲಿ ಪರಿಣತಿ ಹೊಂದಿರುವವರಿಗೆ ಉತ್ತಮ ಅವಕಾಶಗಳು ಅರಸಿ ಬರಲಿವೆ. ಉದ್ಯೋಗಾಕಾಂಕ್ಷಿಗಳಿಗೆ ವಿದ್ಯಾರ್ಹತೆಗೆ ಸರಿಯಾದ ಕೆಲಸಗಳು ದೊರಕಬಹುದು.

ಮಿಥುನ: ಕೆಲಸಕ್ಕೆ ಇನ್ನೊಂದು ಕೆಲಸ ಜೊತೆ ಜೊತೆಗೂಡಿ ಮುಕ್ತಾಯದ ಹಂತ ತಲುಪಲು ಸಾಧ್ಯವಾಗುವುದಿಲ್ಲ. ಆತ್ಮೀಯರ ಮತ್ತು ಬಂಧುವರ್ಗದವರ ಸಹಾಯ ಸ್ವೀಕರಿಸಿ.

ಕರ್ಕಾಟಕ: ಬರುವ ಅವಕಾಶಗಳನ್ನು ಸದುಪಯೋಗ ಪಡೆದುಕೊಳ್ಳು-ವುದು ನಿಮಗೆ ಬಿಟ್ಟ ವಿಷಯ. ಗೃಹ ಬಳಕೆಯ ಸಾಮಗ್ರಿ ಖರೀದಿಯಿಂದ ಸಂತಸವಾಗಲಿದೆ. ಮಕ್ಕಳಿಂದ ಸೌಖ್ಯವಿರುವುದು.

ಸಿಂಹ: ಈವರೆಗೂ ಕೂಡಿಟ್ಟ ಶ್ರಮದ ಠೇವಣಿ ಹಣ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ವಿನಿಯೋಗಿಸಬೇಕಾಗುವುದು. ಸೋದರರನ್ನು ಸರಿಹಾದಿಗೆ ತರುವಲ್ಲಿ ಶ್ರಮ ವಹಿಸುವಿರಿ.

ಕನ್ಯಾ: ನಿಯಮ ಉಲ್ಲಂಘನೆ ಮಾಡುವ, ದಬ್ಬಾಳಿಕೆ ನಡೆಸುವ ರೀತಿನೀತಿಯನ್ನು ಬದಲಿಸಿಕೊಳ್ಳಿ. ಸಾರಿಗೆ ಸಂಸ್ಥೆಗಳಲ್ಲಿ ಕೆಲಸ ಮಾಡುವವರಿಗೆ ಬಡ್ತಿ ದೊರೆಯಲಿದೆ.

ತುಲಾ: ವೃತ್ತಿ ಜೀವನದಲ್ಲಿ ಬಹಳಷ್ಟು ಬದಲಾವಣೆ ಮಾಡಿಕೊಳ್ಳುವ ತೀರ್ಮಾನ ಅಭಿವೃದ್ಧಿಗೆ ಕಾರಣವಾಗುವುದು. ನಿರುದ್ಯೋಗಿಗಳಿಗೆ ಉದ್ಯೋಗ ದೊರೆತು ಕುಟುಂಬದವರೂ ಸಂತಸ ಪಡುತ್ತಾರೆ.

ವೃಶ್ಚಿಕ: ಇಬ್ಬನಿಯಲ್ಲಿ ನೆನೆಯುವುದು ಅಥವಾ ನಿಮ್ಮ ದೇಹಕ್ಕೆ ಅಹಿತಕರ ಕೆಲವು ಕೆಲಸದ ಕಾರಣದಿಂದ ಜ್ವರ ಬರಬಹುದು. ಕುಟುಂಬದ ಸದಸ್ಯರಲ್ಲಿ ಆದಷ್ಟು ತಾಳ್ಮೆ-ಸಮಾಧಾನದಿಂದ ವರ್ತಿಸಿ.

ಧನು: ವ್ಯವಹಾರದಲ್ಲಿ ಅದರಲ್ಲೂ ಮುಖ್ಯವಾಗಿ ಹಣಕಾಸಿನ ವಿಚಾರದಲ್ಲಿ ತಪ್ಪುಗಳಾಗದಂತೆ ಜಾಗರೂಕತೆ ವಹಿಸಿರಿ. ಯೋಗ ಹೇಳಿಕೊಡುವ ಶಿಕ್ಷಕರಿಗೆ ಬೇಡಿಕೆ ಹೆಚ್ಚಲಿದೆ. ವೈದ್ಯಕೀಯ ವಿದ್ಯಾರ್ಥಿಗಳಿಗೆ ಯಶಸ್ಸು ಲಭ್ಯವಾಗುತ್ತದೆ.

ಮಕರ: ಮನೆ ನಿರ್ಮಾಣದ ಕಾರ್ಯ ಅಡ್ಡಿ-ಆತಂಕಗಳಿಲ್ಲದೆ ಸರಾಗವಾಗಿ ನಡೆಯಲಿದೆ. ಯೋಚನೆಗಿಂತ ಅಧಿಕ ಮಟ್ಟದಲ್ಲಿ ಹಣ ವ್ಯಯವಾಗುತ್ತದೆ. ಕುಟುಂಬದ ಸದಸ್ಯರ ಜತೆ ಸಮಯ ಕಳೆಯಲಿದ್ದೀರಿ.

ಕುಂಭ: ಸ್ವಂತ ಉದ್ಯೋಗಿಗಳಿಗೆ ಬರುವ ನೂತನ ಯೋಚನೆಗಳನ್ನು ಕೈ ಬಿಟ್ಟು ಈಗಿನ ಯಥಾಸ್ಥಿತಿಯನ್ನು ಕಾಪಾಡಿಕೊಳ್ಳಿ. ನಿಮ್ಮ ವಿರುದ್ಧ ರಾಜಕೀಯ ಪಿತೂರಿ ನಡೆಸುತ್ತಿರುವವರು ಯಾರು ಎಂಬುದು ತಿಳಿದು ಬರಲಿದೆ.

ಮೀನ: ಅನೇಕ ದಿನಗಳಿಂದ ಸೇವಿಸುತ್ತಿರುವ ಅಪಥ್ಯದ ಆಹಾರದ ಪರಿಣಾಮವಾಗಿ ಆರೋಗ್ಯದಲ್ಲಿ ವ್ಯತ್ಯಾಸಗಳಾಗಲಿವೆ. ಆರಕ್ಷಕ ಸಿಬ್ಬಂದಿಗೆ ಕೆಲಸದ ಒತ್ತಡ ಹೆಚ್ಚುತ್ತದೆ.

ಗುಂಡಣ್ಣ

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ	
ಹಿಂದಿನ ಅಂತ್ಯ:	25,713
ಇಂದಿನ ಅಂತ್ಯ:	25,424
ದಿನದ ಕನಿಷ್ಠ:	25,327
	288

ಮೊಟ್ಟೆ ಧಾರಣೆ (ಎನ್‌ಇಸಿಸಿ)	
ಬೆಂಗಳೂರು	
100 ಕ್ಕೆ	₹550
12 ಕ್ಕೆ	₹80
ಮೈಸೂರು: 100 ಕ್ಕೆ	₹550

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)	
ಆರ್‌ಎಸ್‌ಎಸ್-4	₹212.50
ಆರ್‌ಎಸ್‌ಎಸ್-5	₹206.50
ಗುಡ್ ಲಾಟ್	₹194.50

ರಾಮನಗರ ರೇಷ್ಮೆಗೂಡು	
ಮಿಶ್ರತಳಿ(ಸಿ.ಬಿ)	₹455-779
ದ್ವಿತಳಿ (ಬಿ.ವಿ)	₹240-936

ಮುದ್ರೆಮನೆ ಕಾಫಿ	
ಎಪಿ	₹23000
ಎಸಿ	₹13000
ಆರ್‌ಪಿ	₹18200
ಆರ್‌ಸಿ	₹9825

₹3.25 ಲಕ್ಷ ಕೋಟಿ ಜೈವಿಕ ಆರ್ಥಿಕತೆ

ದೇಶದ ಜೈವಿಕ ಆರ್ಥಿಕತೆಗೆ ಕರ್ನಾಟಕದ ಕೊಡುಗೆ ಶೇ 21ರಷ್ಟು: ಪ್ರಿಯಾಂಕ್ ಖರ್ಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಜೈವಿಕ ಆರ್ಥಿಕತೆಯು (ಬಯೋ ಎಕಾನಮಿ) 2025 ರಲ್ಲಿ ₹3,25,360 ಕೋಟಿಗಳಿಗೆ (39.2 ಶತಕೋಟಿ ಡಾಲರ್) ಏರಿಕೆಯಾಗಿದೆ. ಹಿಂದಿನ ವರ್ಷಕ್ಕಿಂತ ಗಣನೀಯ ಬೆಳವಣಿಗೆ ದಾಖಲಿಸಿದೆ.

ಕರ್ನಾಟಕ ನಾವೀನ್ಯತೆ ಮತ್ತು ತಂತ್ರಜ್ಞಾನ ಸೊಸೈಟಿಯು (ಕಿಟ್ಸ್), ಜೈವಿಕ ತಂತ್ರಜ್ಞಾನ ಉದ್ಯಮಗಳ ಸಂಘದ (ಎಬಿಎಲ್‌ಇ) ಸಹಯೋಗದಲ್ಲಿ ಸಿದ್ಧಪಡಿಸಿರುವ ರಾಜ್ಯದ ಜೈವಿಕ ಆರ್ಥಿಕ ವರದಿ 2025 ರಲ್ಲಿ ಈ ಮಾಹಿತಿ ಇದೆ. ಈ ವರದಿಯನ್ನು ಐಟಿ-ಬಿಟಿ ಸಚಿವ ಪ್ರಿಯಾಂಕ್ ಖರ್ಗೆ ಬಿಡುಗಡೆ ಮಾಡಿದರು.

ಆ ಬಳಿಕ ಮಾತನಾಡಿದ ಪ್ರಿಯಾಂಕ್, 'ಕರ್ನಾಟಕವು ದೇಶದ ಜೈವಿಕ ಆರ್ಥಿಕತೆಗೆ ಶೇ 21ರಷ್ಟು ಕೊಡುಗೆ ನೀಡುತ್ತಿದೆ. ರಾಜ್ಯದ ಒಟ್ಟು ಆಂತರಿಕ ಉತ್ಪನ್ನದಲ್ಲಿ (ಜಿಎಸ್‌ಡಿಪಿ) ಶೇ 10 ಕ್ಕಿಂತ ಹೆಚ್ಚು ಪಾಲು ಹೊಂದಿದೆ. ಜೈವಿಕ ತಂತ್ರಜ್ಞಾನವು ಆರ್ಥಿಕ ಬೆಳವಣಿಗೆಯ ಪ್ರಮುಖ ಎಂಜಿನ್ ಆಗಿರುವುದಕ್ಕೆ ನಿದರ್ಶನವಾಗಿದೆ. ದೇಶದ ಅತ್ಯಂತ ಪ್ರಬುದ್ಧ ಮತ್ತು ನಾವೀನ್ಯ ಆಧಾರಿತ ಜೈವಿಕ ತಂತ್ರಜ್ಞಾನ ವ್ಯವಸ್ಥೆಯಾಗಿ ಸುಸ್ಥಿರ ರೀತಿಯಲ್ಲಿ ಮುಂಚೂಣಿ ಸ್ಥಾನ ಕಾಯ್ದುಕೊಂಡಿರುವುದನ್ನು ವರದಿ ಬೆಳಕು ಚೆಲ್ಲಿದೆ' ಎಂದು ಹೇಳಿದರು.

ಜೈವಿಕ ತಂತ್ರಜ್ಞಾನವು ಇನ್ನು ಮುಂದೆ ಪ್ರಯೋಗಾಲಯಗಳಿಗೆ ಮಾತ್ರ ಸೀಮಿತವಾಗಿರದೇ ಆರ್ಥಿಕ ಬೆಳವಣಿಗೆ, ಕೈಗಾರಿಕಾ ನಾವೀನ್ಯತೆ ಮತ್ತು ಸಾಮಾಜಿಕ ಪ್ರಭಾವದ ಕೇಂದ್ರ ಚಾಲಕ ಶಕ್ತಿಯಾಗಲಿದೆ. ಡೀಪ್- ಟೆಕ್ ನವೋದ್ಯಮಗಳಿಗೆ ಬೆಂಬಲ, ನಾವೀನ್ಯತೆ, ಮೂಲ ಸೌಕರ್ಯಗಳ ಬಲಪಡಿಸುವಿಕೆ ಮತ್ತು ಬೆಳವಣಿಗೆಯು ಬೆಂಗಳೂರು ಆಚೆಗಿನ ಪ್ರತಿಯೊಂದು ಪ್ರದೇಶಕ್ಕೂ ತಲುಪುವಂತೆ ನೋಡಿಕೊಳ್ಳಬೇಕಾಗಿದೆ. ಈ ಮೂಲಕ ಸಮಗ್ರ ಜೈವಿಕ ಉತ್ಪಾದನಾ ಆರ್ಥಿಕ ವ್ಯವಸ್ಥೆ ನಿರ್ಮಿಸುವುದರ ಕಡೆ ಸರ್ಕಾರ ಹೆಚ್ಚಿನ ಗಮನ ಹರಿಸಲಿದೆ ಎಂದು ಹೇಳಿದರು.

ವರದಿಯ ಮುಖ್ಯಾಂಶಗಳು

- ಜೈವಿಕ ಆರ್ಥಿಕತೆಯು ಸಂಶೋಧನೆ, ಉತ್ಪಾದನೆ, ವಿತರಣೆ ಸೇವೆಗಳನ್ನು ಒಳಗೊಂಡ ಸಂಪೂರ್ಣ ಮೌಲ್ಯ ಸರಪಳಿಯನ್ನು ಒಳಗೊಂಡಿದೆ
- ಜೈವಿಕ ಆರ್ಥಿಕತೆ 2023ರಲ್ಲಿದ್ದ 31 ಶತಕೋಟಿ ಡಾಲರ್‌ನಿಂದ ಈಗ 39.2 ಶತಕೋಟಿ ಡಾಲರ್‌ಗೆ ವಿಸ್ತರಿಸಿದೆ. ಇದು ಒಟ್ಟಾರೆ ಶೇ 26.5 ರಷ್ಟು ಬೆಳವಣಿಗೆ. ಈಗ ರಾಜ್ಯದ ಜಿಡಿಪಿಗೆ ಪ್ರತಿ ಮೂರು ತಿಂಗಳಿಗೆ ಸುಮಾರು 10 ಶತಕೋಟಿ ಡಾಲರ್ ಸೇರ್ಪಡೆ ಆಗುತ್ತಿದೆ
- ಜೈವಿಕ ಔಷಧಗಳು, ಕಡಿಮೆ ವೆಚ್ಚದ ಪರ್ಯಾಯ ಜೈವಿಕ ಔಷಧಗಳು (ಬಯೊಸಿಮಿಲರ್), ಲಸಿಕೆಗಳು ಮತ್ತು ರೋಗ ಪತ್ತೆ ವಲಯಗಳ ಒಳಗೊಂಡಂತೆ ಶೇ 40 ಕ್ಕಿಂತ ಹೆಚ್ಚು ಪಾಲು (ಸುಮಾರು 16.44 ಶತಕೋಟಿ ಡಾಲರ್) ಹೊಂದಿವೆ.
- ಸುಮಾರು 11.46 ಶತಕೋಟಿ ಡಾಲರ್ ಮೊತ್ತದ ಜೈವಿಕ ಕೈಗಾರಿಕಾ ತಂತ್ರಜ್ಞಾನ ವಲಯವು ಶೇ 29 ರಷ್ಟು ಪಾಲು ಹೊಂದುವುದರ ಜೊತೆಗೆ ವೇಗವಾಗಿ ಬೆಳೆಯುತ್ತಿದೆ. ಇದು ರಾಜ್ಯವು ಬಲವಾದ ಜೈವಿಕ ಉತ್ಪಾದನಾ ಆರ್ಥಿಕತೆಯತ್ತ ಸಾಗುತ್ತಿರುವುದನ್ನು ಸೂಚಿಸುತ್ತದೆ
- ಶೇ 25.8 ಪಾಲು ಹೊಂದಿರುವ ಜೈವಿಕ ಸೇವೆಗಳು ಸ್ಥಿರವಾಗಿ ಬೆಳೆಯುತ್ತಿವೆ. ಜಾಗತಿಕ ಸಂಶೋಧನಾ ಸೇವೆಗಳು, ಡಿಜಿಟಲ್ ಆರೋಗ್ಯ ಮತ್ತು ನಾವೀನ್ಯತೆ-ನೇತೃತ್ವದ ಹೊರಗುತ್ತಿಗೆಯಲ್ಲಿ ಕರ್ನಾಟಕದ ಸ್ಥಾನವನ್ನು ಬಲಪಡಿಸುತ್ತಿವೆ. ಜೈವಿಕ ಕೃಷಿಯು ಸುಸ್ಥಿರ ಕೃಷಿ ಚಟುವಟಿಕೆ ಮತ್ತು ಕಚ್ಚಾ ಸಾಮಗ್ರಿಗಳ ನಾವೀನ್ಯತೆಗಳಿಗೆ ಕೊಡುಗೆ ನೀಡುತ್ತಿದೆ
- ಬೆಂಗಳೂರು ನಗರ ರಾಜ್ಯದ ಜೈವಿಕ ಆರ್ಥಿಕತೆಯಲ್ಲಿ ಶೇ 54 ರಷ್ಟು ಪಾಲು ಹೊಂದಿದೆ. ಮೈಸೂರು ಶೇ 8.7, ಬೆಳಗಾವಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳು ಶೇ 9 ಕ್ಕಿಂತ ಹೆಚ್ಚು ಪಾಲು ಹೊಂದಿವೆ. ಉತ್ತರ ಕರ್ನಾಟಕದ ಜಿಲ್ಲೆಗಳು ಕೃಷಿ ಜೈವಿಕ ತಂತ್ರಜ್ಞಾನ ವಲಯಗಳಾಗಿ ಗಮನ ಸೆಳೆಯುತ್ತಿವೆ

ಪ್ರಶ್ನೋತ್ತರ



ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಸುರೇಶ್ ಕುಮಾರ್, ವಿಲ್ಸನ್ ಗಾರ್ಡನ್, ಬೆಂಗಳೂರು

ಪ್ರಶ್ನೆ: ನಾನು ಪ್ರಸ್ತುತ ಹಳೆಯ ತೆರಿಗೆ ಪದ್ಧತಿಯ ಅಡಿ ಆದಾಯ ತೆರಿಗೆ ಪಾವತಿಸುತ್ತಿದ್ದೇನೆ. ಸರ್ಕಾರ ಏಪ್ರಿಲ್ 1ರಿಂದ ಹೊಸ ಆದಾಯ ತೆರಿಗೆ ಕಾನೂನನ್ನು ಜಾರಿ ಮಾಡಲಿರುವುದರಿಂದ ಸಾಮಾನ್ಯ ತೆರಿಗೆ ಪಾವತಿದಾರನಾಗಿ ನಾನು ಈ ಹೊಸ ನಿಯಮಗಳ ಅಡಿ ಯಾವ ತೆರಿಗೆ ವಿವರದ ನಮೂನೆ (ರಿಟರ್ನ್ ಫಾರಂ) ಸಲ್ಲಿಕೆ ಮಾಡಬೇಕಾಗುತ್ತದೆ ಎಂಬ ಬಗ್ಗೆ ಸ್ಪಷ್ಟತೆ ಬೇಕಿದೆ. ಮುಂದಿನ ಜುಲೈ 31ರೊಳಗೆ ವಿವರ ಸಲ್ಲಿಸಬೇಕಾಗಿರುವುದರಿಂದ ಹೊಸ ನಮೂನೆ ಅನ್ವಯವಾಗುತ್ತದೆಯೇ ಅಥವಾ ಈ ಹಿಂದೆ ನಾವು ಬಳಸುತ್ತಿದ್ದ ಐಟಿಆರ್ ಬಳಸಬಹುದೇ? ಇದಲ್ಲದೆ, ನನಗೆ ಮುಂದೆ ಅನ್ವಯವಾಗುವ ಯಾವುದೇ ತೆರಿಗೆ ಬದಲಾವಣೆಗಳನ್ನು ತಿಳಿದುಕೊಳ್ಳಬೇಕು. ನಾನು ಮನೆ ಬಾಡಿಗೆ ಭತ್ಯೆ, ಕಾರಿನ ಉಪಯೋಗಕ್ಕೆ ಸಂಬಂಧಿಸಿ ಕೆಲವು ಭತ್ಯೆ, ಗೃಹ ಸಾಲದ ಮೇಲಿನ ಬಡ್ಡಿ, ಮಕ್ಕಳ ಶಿಕ್ಷಣ, ಎನ್‌ಪಿಎಸ್ ಹೂಡಿಕೆ ಮತ್ತಿತರ ವಿನಾಯಿತಿಗಳನ್ನು ಪಡೆಯುತ್ತಿದ್ದೇನೆ. ಹೀಗಿರುವಾಗ ಮುಂದೆ ಈ ಹೊಸ ನಿಯಮಗಳಿಂದ ಅನ್ವಯಿಸುವ ಬದಲಾವಣೆ ಏನು?

ಉತ್ತರ: ಆರು ದಶಕಗಳಿಗಿಂತ ಹೆಚ್ಚಿನ ಕಾಲದಿಂದ ಜಾರಿಯಲ್ಲಿರುವ ಆದಾಯ ತೆರಿಗೆ ಕಾನೂನಿನ ಅನೇಕ ತೆರಿಗೆ ಉಳಿತಾಯ ಯೋಜನೆಗಳು ತೆರಿಗೆದಾರರಿಗೆ ಚಿರಪರಿಚಿತ. ಬಹುತೇಕ ಮಂದಿ, ತಮಗೆ ಸಂಬಂಧಿಸಿದ ಸೆಕ್ಷನ್‌ಗಳ ಹಾಗೂ ನಮೂನೆಗಳ ಬಗ್ಗೆ ಮಾಹಿತಿ ಹೊಂದಿರುವುದು ಉತ್ತಮ ವಿಚಾರ. ಉದಾಹರಣೆಗೆ, ಈಗ ಜಾರಿಯಲ್ಲಿರುವ ಆದಾಯ ತೆರಿಗೆ ಕಾಯ್ದೆಯ ಸೆಕ್ಷನ್ 80ಸಿ ಉಳಿತಾಯ ಹೂಡಿಕೆಗಳಿಗೆ, 80ಡಿ ಆರೋಗ್ಯ ವಿಮೆಗೆ, ಸೆಕ್ಷನ್ 10 ಬಾಡಿಗೆ ಭತ್ಯೆ ಮತ್ತು ರಜಾ ಪ್ರವಾಸ ಭತ್ಯೆ ಮುಂತಾದ ವಿನಾಯಿತಿಗಳಿಗೆ, ಸೆಕ್ಷನ್ 24(ಬಿ) ಗೃಹ ಸಾಲದ ಬಡ್ಡಿಗೆ ಮತ್ತು ಸೆಕ್ಷನ್ 115ಬಿಎಸಿ ಹೊಸ ತೆರಿಗೆ ಪದ್ಧತಿಗೆ ಸಂಬಂಧಿಸಿದ್ದಾಗಿ ಎಂಬುದು ಹೆಚ್ಚಿನವರಿಗೆ ಗೊತ್ತಿದೆ. ಆದರೆ ಏಪ್ರಿಲ್ 1ರಿಂದ ಜಾರಿಗೆ ಬರುವ ಹೊಸ ಆದಾಯ ತೆರಿಗೆ ಕಾಯ್ದೆ ಅಡಿ ಇದೇ ಪ್ರಯೋಜನಗಳಿಗೆ ಕುರಿತು ಬದಲಾವಣೆ ಇದ್ದರೂ ಮೂಲ ಆಶಯದಲ್ಲಿ ಹೆಚ್ಚೇನೂ ಬದಲಾವಣೆಯಾಗಿಲ್ಲ. ಸಂಬಂಧಿಸಿದ ಸೆಕ್ಷನ್ ಸಂಖ್ಯೆಗಳ ಕ್ರಮಾಂಕವನ್ನು ಬದಲಾಯಿಸಲಾಗಿದೆ.

ವೈಯಕ್ತಿಕ ತೆರಿಗೆ ಪಾವತಿದಾರರಿಗೆ ಹಳೆಯ ತೆರಿಗೆ ಪದ್ಧತಿ ಮತ್ತು ಹೊಸ ಪದ್ಧತಿಯ ನಡುವೆ ಆಯ್ಕೆ ಮಾಡುವ ಅವಕಾಶವನ್ನು ಪ್ರಸ್ತುತ ಕಾಯ್ದೆಯ ಸೆಕ್ಷನ್ 115ಬಿಎಸಿ ಅಡಿ ಕಲ್ಪಿಸಲಾಗಿದೆ. ಇದೇ ಅಂಶವನ್ನು 2025ರ ನೂತನ ಕಾಯ್ದೆಯ ಸೆಕ್ಷನ್ 202 ಅಡಿಯಲ್ಲಿ ಮುಂದುವರಿಸಲಾಗಿದೆ. ಇದರಂತೆ ಎಲ್ಲ ವರ್ಗದವರಿಗೆ ₹4 ಲಕ್ಷದ ಮೂಲ ಆದಾಯ ವಿನಾಯಿತಿ ಹಾಗೂ ₹12 ಲಕ್ಷದ ತನಕದ ಆದಾಯ ತೆರಿಗೆ ಸೆಕ್ಷನ್ 156 ಅಡಿ ಒಟ್ಟು ತೆರಿಗೆ ರಿಬೇಟ್ ಲಭ್ಯ. ಆದರೆ, ಮುಂದಿನ 2026-27ರ ಆದಾಯ ವರ್ಷಕ್ಕೆ ಸಂಬಂಧಿಸಿ, ಹಳೆಯ ತೆರಿಗೆ ಪದ್ಧತಿ ಕಾನೂನಿನ ಅಡಿ ಮುಂದುವರಿಸುತ್ತಿದ್ದರೂ, ಅದರ ಆಯ್ಕೆ ಒಟ್ಟಾರೆ ಲಾಭದಾಯಕವಾಗಲಿದೆಯೇ ಎನ್ನುವ ಬಗ್ಗೆ ನಿಖರವಾಗಿ ವಿಮರ್ಶಿಸಿ. ಕಾರಣ, ಪ್ರಸ್ತುತ ಇರುವ ಅದೇ ವಿನಾಯಿತಿ ಯೋಜನೆಗಳ ಮೊತ್ತ ಬದಲಾವಣೆಯೊಂದಿಗೆ ಮುಂದುವರಿಯಲಿವೆ. ಉದಾಹರಣೆಗೆ, ಈ ತನಕ ಬೆಂಗಳೂರು ನಗರದಲ್ಲಿ ಮನೆ ಬಾಡಿಗೆ ಭತ್ಯೆ ವಿನಾಯಿತಿ ಲೆಕ್ಕ ಹಾಕುವಾಗ ಈಗಾಗಲೇ ಮೆಟ್ರೊ ನಗರಗಳೆಂದು ಪರಿಗಣಿಸಲ್ಪಟ್ಟ ದೆಹಲಿ, ಮುಂಬೈ, ಕೋಲ್ಕತ್ತ ಹಾಗೂ ಚೆನ್ನೈ ನಗರಗಳಿಗೆ ಅನ್ವಯಿಸುತ್ತದೆ, ಭತ್ಯೆಯ ಮೇಲೆ ಶೇ 40ರ ಬದಲು ಶೇ 50ಕ್ಕೆ ರಿಯಾಯಿತಿಯನ್ನು ಹೆಚ್ಚಿಸಲಾಗಿದೆ. ಹೊಸ ತೆರಿಗೆ ಪದ್ಧತಿ ಎಲ್ಲರಿಗೆ ಅನ್ವಯಿಸುವ ತೆರಿಗೆ ಪದ್ಧತಿ. ಇದರ ಬದಲು, ಹಳೆಯ ತೆರಿಗೆ ಪದ್ಧತಿಯನ್ನೇ ಆಯ್ಕೆ ಮಾಡುವುದಿದ್ದರೆ, ಅದನ್ನು ನಮ್ಮ ಆದಾಯದ ವಿವರ ಸಲ್ಲಿಕೆ ಸಮಯದಲ್ಲಿ ಘೋಷಿಸಬೇಕಾಗುತ್ತದೆ.

ಇನ್ನು ಕಾರಿಗೆ ಸಂಬಂಧಿಸಿ - ಉಪಯೋಗಿಸುವ ಕಾರಿನ ಗಾತ್ರಕ್ಕೆ ಅನುಗುಣವಾಗಿ ಮಾಸಿಕ ₹8 ಸಾವಿರ ಅಥವಾ ₹10 ಸಾವಿರದ ತನಕ, ವೇತನದೊಡನೆ ತೆರಿಗೆಗೆ ಪರಿಸುವ ವಿಶೇಷ ಸೌಲಭ್ಯಗಳ ಮೌಲ್ಯವನ್ನು ಹೆಚ್ಚಿಸಲಾಗಿದೆ. ಅದೇ ರೀತಿ ಮಕ್ಕಳ ವಿದ್ಯಾಭ್ಯಾಸಕ್ಕೆ ಸಂಬಂಧಿಸಿ ವಸತಿ ಭತ್ಯೆ ₹9 ಸಾವಿರ ಹಾಗೂ ಶಿಕ್ಷಣ ಭತ್ಯೆಯನ್ನು ₹3 ಸಾವಿರ ಎಂದು ವಿನಾಯಿತಿ ನಿಗದಿ ಮಾಡಲಾಗಿದೆ.

ನೀವು ಹಳೆಯ ತೆರಿಗೆ ಪದ್ಧತಿಯನ್ನು ಆಯ್ಕೆ ಮಾಡಿಕೊಂಡ ಕಾರಣ ಸೆಕ್ಷನ್ 80ಸಿ, 80ಡಿ, 80ಸಿಸಿಡಿ (1ಬಿ) ಇತ್ಯಾದಿ ಪ್ರಸ್ತುತ ಸೆಕ್ಷನ್‌ಗಳಿಗೆ ಬದಲಾಗಿ ಹೊಸ ನಿಯಮದ ಸೆಕ್ಷನ್ 123, 124, 126 ಇವನ್ನು ನೋಡಬೇಕಾಗುತ್ತದೆ. ಬಹುತೇಕ ಪ್ರಸ್ತುತ ಮಿತಿಯನ್ನೇ ಮುಂದುವರಿಸಲಾಗಿದೆ.

ತೆರಿಗೆದಾರ ವಾರ್ಷಿಕ ವೇತನಕ್ಕೆ ಸಂಬಂಧಿಸಿದ ದಾಖಲೆಯಾದ ಫಾರಂ 16 ಇನ್ನು ಮುಂದೆ ಫಾರಂ 130 ಎಂದೂ, ಫಾರಂ 26 ಎಎಸ್ ಬದಲು ಫಾರಂ 168 ಎಂದೂ ಬದಲಾಗಿದೆ. ಹೊಸ ಕಾಯ್ದೆಯಡಿ ಅನ್ವಯವಾಗುವ ವಿವರ ಸಲ್ಲಿಕೆ ಸಂಬಂಧಿತ ಕರಡು ಫಾರ್ಮ್‌ಗಳನ್ನು ಕೇಂದ್ರ ನೇರ ತೆರಿಗೆ ಮಂಡಳಿ ಈಗಾಗಲೇ ಪ್ರಕಟಿಸಿದ್ದು ಸಾರ್ವಜನಿಕರ ಪ್ರತಿಕ್ರಿಯೆಗೆ ಬಿಡುಗಡೆ ಮಾಡಲಾಗಿದೆ. ಇದರೊಂದಿಗೆ ಹೊಸ ನಿಯಮಾವಳಿಗಳೂ ಹೊರಬಂದಿವೆ. ಆದರೆ, ನೀವು ಮುಂದಿನ ಆರ್ಥಿಕ ವರ್ಷ 2026-27ರ ಆದಾಯಕ್ಕೆ ಅನ್ವಯವಾಗುವಂತೆ ಹೊಸ ನಮೂನೆ ಸಲ್ಲಿಸುವ ವಿವರಗಳಿಗೆ ಅನ್ವಯವಾಗಲಿದೆ. ಹೀಗಾಗಿ 2026ರ ಜುಲೈನಲ್ಲಿ ನೀವು ಪ್ರಸ್ತುತ ಜಾರಿಯಲ್ಲಿ ಇರುವ ಐಟಿಆರ್ ಫಾರ್ಮ್‌ಗಳನ್ನೇ ಬಳಸಿಕೊಳ್ಳಬೇಕಾಗುತ್ತದೆ. ❖

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-560001.
ಇ-ಮೇಲ್: businessdesk@prajavani.co.in

ಚಂದ್ರಶೇಖರನ್‌ಗೆ ಇನ್ನೊಂದು ಅವಧಿ: ನಿರ್ಧಾರ ಮುಂದಕ್ಕೆ

ಮುಂಬೈ (ಪಿಟಿಐ): ಎನ್. ಚಂದ್ರಶೇಖರನ್ ಅವರನ್ನು ಮೂರನೆಯ ಅವಧಿಗೆ ಅಧ್ಯಕ್ಷ ಸ್ಥಾನದಲ್ಲಿ ಮುಂದುವರಿಸುವುದಕ್ಕೆ ಸಂಬಂಧಿಸಿದ ತೀರ್ಮಾನವನ್ನು ಟಾಟಾ ಸನ್ಸ್ ಆಡಳಿತ ಮಂಡಳಿಯು ಮುಂದಕ್ಕೆ ಹಾಕಿದೆ ಎಂದು ಮೂಲಗಳು ತಿಳಿಸಿವೆ.

ಮಂಡಳಿಯ ಸಭೆಯು ಮಂಗಳವಾರ ನಡೆಯಿತು. ಟಾಟಾ ಸನ್ಸ್‌ನ ಅಧ್ಯಕ್ಷರಾಗಿ ಚಂದ್ರಶೇಖರನ್ ಅವರು ಈಗ ಎರಡನೆಯ ಅವಧಿಯಲ್ಲಿ ಇದ್ದಾರೆ. ಇದು 2027ರ ಫೆಬ್ರುವರಿಯಲ್ಲಿ ಕೊನೆಗೊಳ್ಳಲಿದೆ.

ಸಭೆಯ ನಂತರದಲ್ಲಿ ಯಾವುದೇ ಅಧಿಕೃತ ಪ್ರಕಟಣೆ ಬಂದಿಲ್ಲ. ಆದರೆ ಟಾಟಾ ಟ್ರಸ್ಟ್ಸ್‌ನ ಅಧ್ಯಕ್ಷರಾದ ನೋಯಲ್ ಟಾಟಾ ಅವರು, ಟಾಟಾ ಸಮೂಹದ ಕೆಲವು ಕಂಪನಿಗಳು ನಷ್ಟ ಅನುಭವಿಸಿರುವುದನ್ನು ಸಭೆಯಲ್ಲಿ ಪ್ರಸ್ತಾಪಿಸಿದರು ಎಂದು ವಿವರಿಸಿವೆ.

ಆಡಳಿತ ಮಂಡಳಿಯ ಹಲವರು ಚಂದ್ರಶೇಖರನ್ ಅವರನ್ನು ಬೆಂಬಲಿಸಿದರು. ಒಂದು ಕಂಪನಿಗೆ ಆಗಿರುವ ನಷ್ಟ ಆಧರಿಸಿ ಇಡೀ ಸಮೂಹದ ಸಾಧನೆಯನ್ನು ಕಡೆಗಣಿಸಬಾರದು, ಚಂದ್ರಶೇಖರನ್ ಅವರ ಕೊಡುಗೆಯನ್ನು ಮರೆಯಬಾರದು ಎಂದು ಅವರು ಹೇಳಿದರು ಎನ್ನಲಾಗಿದೆ.

ಅಡಿಕೆ ಧಾರಣೆ

ಪುತ್ತೂರು		ರಾಶಿ	46038-58109	ಕೆಂಪುಗೋಟು	26499-38219
ಕೋಕ	20000-37500	ಸರಕು	54859-95310	ರಾಶಿ	51539-55619
ಹೊಸತು	26000-48500	**ಸಿದ್ದಾಪುರ**		**ಯಲ್ಲಾಪುರ**	
ಹಳತು	50000-54000	ಬಿಳಿಗೋಟು	27469-39509	ಆಪಿ	63630-66899
ಸಾಗರ		ಚಾಲಿ	45159-51099	ಬಿಳಿಗೋಟು	17786-40599
ಬಿಳಿಗೋಟು	8009-34410	ಕೋಕ	25099-36899	ಕೋಕ	14109-34899
ಚಾಲಿ	42599-44699	ಹೊಸಚಾಲಿ	39299-50500	ಹಳೆಚಾಲಿ	38692-52189
ಕೋಕ	33699-33699	ಕೆಂಪುಗೋಟು	30000-36000	ಹೊಸಚಾಲಿ	45099-49800
ಕೆಂಪುಗೋಟು	33989-37399	ರಾಶಿ	50199-55299	ಕೆಂಪುಗೋಟು	18899-41299
ರಾಶಿ	36509-55669	ತಟ್ಟಿಬೆಟ್ಟೆ	38899-50319	ರಾಶಿ	50869-62899
ಸಿಪ್ಪೆಗೋಟು	7189-24585	**ಶಿರಸಿ**		ತಟ್ಟಿಬೆಟ್ಟೆ	37220-52299
ಶಿವಮೊಗ್ಗ		ಬೆಟ್ಟೆ	41150-53599	**ಕುಮಟಾ**	
ಬೆಟ್ಟೆ	50810-66200	ಬಿಳಿಗೋಟು	28889-42699	ಚಾಲಿ	40185-47519
ಗೊರಬಲು	19010-43069	ಚಾಲಿ	45018-49815		

ಷೇರು ಮಾರಾಟ, ಕುಸಿದ ಷೇರುಪೇಟೆ

ಮುಂಬೈ (ಪಿಟಿಐ): ಕೃತಕ ಬುದ್ಧಿಮತ್ತೆ ತಂತ್ರಜ್ಞಾನದ ಪರಿಣಾಮವಾಗಿ ಐ.ಟಿ. ಸೇವಾ ವಲಯದಲ್ಲಿ ಬಹಳಷ್ಟು ಬದಲಾವಣೆ ಆಗಲಿವೆ ಎಂಬ ಭೀತಿಯು ಷೇರುಪೇಟೆಯನ್ನು ಮಂಗಳವಾರ ಆವರಿಸಿಕೊಂಡಿತು. ಐ.ಟಿ ಸೇವಾ ವಲಯದ ಕಂಪನಿಗಳ ಷೇರು ಮಾರಾಟವು ಜೋರಾಗಿತ್ತು.

ಇದರಿಂದಾಗಿ ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ ಹಾಗೂ ರಾಷ್ಟ್ರೀಯ ಷೇರುಪೇಟೆ ಸಂವೇದಿ ಸೂಚ್ಯಂಕ ನಿಫ್ಟಿ ಶೇ 1ಕ್ಕಿಂತ ಹೆಚ್ಚು ಕುಸಿದವು. ಜಾಗತಿಕ ವ್ಯಾಪಾರದಲ್ಲಿನ ಅನಿಶ್ಚಿತತೆಗಳು ಕೂಡ ಕುಸಿತಕ್ಕೆ ಕಾರಣವಾದವು.

ಮಂಗಳವಾರದ ವಹಿವಾಟಿನಲ್ಲಿ ಸೆನ್ಸೆಕ್ಸ್ 1,068 ಅಂಶ ಹಾಗೂ ನಿಫ್ಟಿ 288 ಅಂಶ ಕುಸಿದಿವೆ.

'ಜಾಗತಿಕ ವ್ಯಾಪಾರಕ್ಕೆ ಸಂಬಂಧಿಸಿದ ಕೆಲವು ಬೆಳವಣಿಗೆಗಳು ಮತ್ತು ಹೆಚ್ಚುತ್ತಿರುವ ಜಾಗತಿಕ ಬಿಕ್ಕಟ್ಟುಗಳು ಹೂಡಿಕೆದಾರರ ಹುಮ್ಮಸ್ಸು ಕುಗ್ಗಿಸಿವೆ. ಜಾಗತಿಕ ಮಟ್ಟದಲ್ಲಿ ತಂತ್ರಜ್ಞಾನ ಕ್ಷೇತ್ರದ ಷೇರುಗಳ ಮಾರಾಟ ಜೋರಾಗಿರುವುದು ಹಾಗೂ ಎ.ಐ ಕಾರಣದಿಂದಾಗಿ ಭಾರಿ ಪಲ್ಲಟಗಳು ಆಗಲಿವೆ ಎಂಬ ಭೀತಿಯಿಂದಾಗಿ ದೇಶದ ಐ.ಟಿ. ವಲಯದ ಷೇರುಗಳ ಮೌಲ್ಯ ಕುಸಿಯಿತು' ಎಂದು ರೆಲಿಗೇರ್ ಬ್ರೋಕಿಂಗ್ ಲಿಮಿಟೆಡ್‌ನ ಸಂಶೋಧನಾ ವಿಭಾಗದ ಹಿರಿಯ ಉಪಾಧ್ಯಕ್ಷ ಅಜಿತ್ ಮಿಶ್ರಾ ಹೇಳಿದ್ದಾರೆ.

ಟೆಕ್ ಮಹೀಂದ್ರ ಕಂಪನಿಯ ಷೇರುಗಳು ಶೇ 6.6ರಷ್ಟು ಕುಸಿದಿವೆ. ಎಚ್‌ಸಿಎಲ್ ಟೆಕ್ನಾಲಜೀಸ್, ಇನ್ಫೊಸಿಸ್, ಟಿಸಿಎಸ್ ಷೇರುಮೌಲ್ಯ ಕೂಡ ಕುಸಿದಿದೆ.

ಐಡಿಎಫ್‌ಸಿ ಫಸ್ಟ್: ಮರಳಿದ ವಂಚನೆ ಮೊತ್ತ

ಚಂಡೀಗಢ (ಪಿಟಿಐ): ಐಡಿಎಫ್‌ಸಿ ಫಸ್ಟ್ ಬ್ಯಾಂಕ್‌ನಲ್ಲಿ ನಡೆದ ವಂಚನೆ ಪ್ರಕರಣದಲ್ಲಿ ತನಗೆ ಬರಬೇಕಿದ್ದ ಸರಿಸುಮಾರು ₹556 ಕೋಟಿ ವಾಪಸ್ಸಾಗಿದೆ ಎಂದು ಹರಿಯಾಣ ಮುಖ್ಯಮಂತ್ರಿ ನಾಯಬ್ ಸಿಂಗ್ ಸೈನಿ ತಿಳಿಸಿದ್ದಾರೆ.

'₹22 ಕೋಟಿ ಬಡ್ಡಿ ಸೇರಿ ಸರಿಸುಮಾರು ₹556 ಕೋಟಿ ಮೊತ್ತವು 24 ಗಂಟೆಗಳಲ್ಲಿ ಮರಳಿ ಬಂದಿದೆ' ಎಂದು ಸೈನಿ ಅವರು ವಿಧಾನಸಭೆಗೆ ತಿಳಿಸಿದ್ದಾರೆ.

ಹರಿಯಾಣ ಸರ್ಕಾರಕ್ಕೆ ಸಂಬಂಧಿಸಿದ ಖಾತೆಗಳಲ್ಲಿ ತನ್ನ ಸಿಬ್ಬಂದಿ ಹಾಗೂ ಇತರರಿಂದ ₹590 ಕೋಟಿ ಮೊತ್ತದ ವಂಚನೆ ನಡೆದಿದೆ ಎಂದು ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಭಾನುವಾರ ತಿಳಿಸಿತ್ತು.

ಮುಂಬೈ ಧಾರಣೆ (ಶೇಂಗಾ)

24-02-2026

ಜಾವಾ 70/80(ಹೊಸ)	11400-11500
ಜಾವಾ 80/90(ಹೊಸ)	10700-10800
ದಪ್ಪ ಮಧ್ಯಪ್ರದೇಶ (ಹೊಸ)	8400-8500
ದಪ್ಪ ಗುಜರಾತ್ (ಹೊಸ)	9700-9800
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1740 (1740)
ಒಂದು ವಾರದ ಡೆಲಿವರಿ	1735 (1735)
ಪಾಮ್ ವಾರದ ಡೆಲಿವರಿ	1293 (1293)
ಸೂರ್ಯಕಾಂತಿ ಎಣ್ಣೆ ಕಚ್ಚಾ	1510 (1500)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,58,600 (1,57,800)
ಬೆಳ್ಳಿ ಕೆ.ಜಿಗೆ	2,62,900 (2,64,000)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಮುಂಬೈ ಖಾದ್ಯ ತೈಲ
(ಆವರಣದಲ್ಲಿ ಕಳೆದ ವಹಿವಾಟಿನ ದರ)

(10 ಕೆ.ಜಿಗೆ)

ಶೇಂಗಾ (ರಿಫೈನ್ಡ್)	₹1730 (1730)
ಸೋಯಾ (ರಿಫೈನ್ಡ್)	₹1370 (1370)
ಸೂರ್ಯಕಾಂತಿ (ರಿಫೈನ್ಡ್)	₹1590 (1590)
ಪಾಮೋಲಿನ್	₹1293 (1295)

ಭಾರತದ ತಂತ್ರಜ್ಞಾನ ಉದ್ಯಮ ₹28 ಲಕ್ಷ ಕೋಟಿ ವರಮಾನ ನಿರೀಕ್ಷೆ

ಮುಂಬೈ (ಪಿಟಿಐ): 'ಪ್ರಸಕ್ತ ಆರ್ಥಿಕ ವರ್ಷದಲ್ಲಿ ದೇಶದ ತಂತ್ರಜ್ಞಾನ ಉದ್ಯಮವು ₹28.64 ಲಕ್ಷ ಕೋಟಿಯಷ್ಟು ವರಮಾನ ಕಾಣುವ ನಿರೀಕ್ಷೆ ಇದೆ' ಎಂದು ಐ.ಟಿ ಉದ್ಯಮಗಳ ಸಂಘಟನೆ ನಾಸ್ಕಾಂ ಮಂಗಳವಾರ ತಿಳಿಸಿದೆ.

ಕಳೆದ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ತಂತ್ರಜ್ಞಾನ ಉದ್ಯಮ ವಲಯವು ₹27 ಲಕ್ಷ ಕೋಟಿಯಷ್ಟು ವರಮಾನ ಗಳಿಸಿತ್ತು. ಇದಕ್ಕೆ ಹೋಲಿಸಿದರೆ ಈ ಬಾರಿ ಶೇ 6.1ರಷ್ಟು ಬೆಳವಣಿಗೆ ಆಗಬಹುದು ಎಂದು ನಾಸ್ಕಾಂ ಅಂದಾಜು ಮಾಡಿದೆ.

2024–25ರಲ್ಲಿ ಉದ್ಯಮವು ಶೇ 5.9ರಷ್ಟು ಬೆಳವಣಿಗೆ ಕಂಡಿದೆ.

ಉದ್ಯಮವು ಉದ್ಯೋಗ ಸೃಷ್ಟಿಯ ಎಂಜಿನ್ ಆಗಿ ಮುಂದುವರಿದಿದೆ. ಕಳೆದ ಆರ್ಥಿಕ ವರ್ಷದಲ್ಲಿ ಈ ಉದ್ಯಮದಲ್ಲಿ ಒಟ್ಟು 58.2 ಲಕ್ಷ ಉದ್ಯೋಗಗಳಿದ್ದವು, ಅದು ಈ ಬಾರಿ 59.5 ಲಕ್ಷಕ್ಕೆ ಹೆಚ್ಚಳವಾಗಿದೆ. ಅಂದರೆ ಶೇ 2.3ರಷ್ಟು ಬೆಳವಣಿಗೆ ಕಂಡುಬಂದಿದೆ ಎಂದು ನಾಸ್ಕಾಂ ಅಧ್ಯಕ್ಷ ರಾಜೇಶ್ ನಂಬಿಯಾರ್ ಹೇಳಿದ್ದಾರೆ.

2024–25ರಲ್ಲಿ ವಲಯಕ್ಕೆ 1.33 ಲಕ್ಷ ಉದ್ಯೋಗಿಗಳು ಸೇರ್ಪಡೆಯಾಗಿದ್ದರೆ, ಅದು ಈ ಬಾರಿ 1.35 ಲಕ್ಷಕ್ಕೆ ಏರಿಕೆಯಾಗಿದೆ ಎಂದು ತಿಳಿಸಿದೆ.

ರಿಟೇಲ್ ಸಾಲ ₹162 ಲಕ್ಷ ಕೋಟಿ

ಮುಂಬೈ (ಪಿಟಿಐ): 2025ರ ಡಿಸೆಂಬರ್ ತ್ರೈಮಾಸಿಕದ ಅಂತ್ಯಕ್ಕೆ ಹಣಕಾಸು ಸಂಸ್ಥೆಗಳು ನೀಡಿರುವ ರಿಟೇಲ್ ಸಾಲದ ಮೊತ್ತವು ಶೇ 18.1ರಷ್ಟು ಏರಿಕೆಯಾಗಿ, ₹162 ಲಕ್ಷ ಕೋಟಿಗೆ ತಲುಪಿದೆ ಎಂದು ಸಿಆರ್‌ಐಎಫ್ ಹೈ ಮಾರ್ಕ್ ವರದಿ ತಿಳಿಸಿದೆ.

ಚಿನ್ನದ ಬೆಲೆಯು ಹೆಚ್ಚಳವಾಗಿದ್ದು, ಚಿನ್ನದ ಅಡಮಾನ ಸಾಲದ ಮೊತ್ತ ಹೆಚ್ಚಳಕ್ಕೆ ಅನುಕೂಲಕರ ವಾತಾವರಣ ಸೃಷ್ಟಿಯಾಗಿದೆ. ಹಬ್ಬದ ಋತು ಮತ್ತು ಜಿಎಸ್‌ಟಿ ದರ ಪರಿಷ್ಕರಣೆಯು ಕೂಡ ಸಾಲ ಹೆಚ್ಚಳಕ್ಕೆ ಕಾರಣವಾಗಿವೆ ಎಂದು ತಿಳಿಸಿದೆ.

ರಿಟೇಲ್ ಸಾಲಕ್ಕೆ ಹೆಚ್ಚಿನ ಕೊಡುಗೆ ನೀಡುವ ಗೃಹ ಸಾಲ ವಿಭಾಗದಲ್ಲಿ ಸಾಲವು ಶೇ 10.5ರಷ್ಟು ಏರಿಕೆಯಾಗಿದ್ದು, ₹43 ಲಕ್ಷ ಕೋಟಿಯಾಗಿದೆ. ಚಿನ್ನದ ಸಾಲ ವಿಭಾಗದಲ್ಲಿ ₹16.2 ಲಕ್ಷ ಕೋಟಿಯಷ್ಟಾಗಿದ್ದು, ಶೇ 44.1ರಷ್ಟು ಹೆಚ್ಚಳವಾಗಿದೆ. ವೈಯಕ್ತಿಕ ಸಾಲವು ₹15.9 ಲಕ್ಷ ಕೋಟಿಯಾಗಿದೆ.

ವಾಹನಗಳ ಸಾಲ ವಿಭಾಗದಲ್ಲಿ ಶೇ 14.6ರಷ್ಟು ಹೆಚ್ಚಳವಾಗಿದೆ. ದ್ವಿಚಕ್ರ ವಾಹನಗಳ ವಿಭಾಗದಲ್ಲಿ ಶೇ 12.3ರಷ್ಟು ಮತ್ತು ಗ್ರಾಹಕ ಬಳಕೆಯ ಗೃಹೋಪಯೋಗಿ ಉಪಕರಣಗಳ ವಿಭಾಗದ ಸಾಲವು ಶೇ 14.3ರಷ್ಟು ಏರಿಕೆಯಾಗಿದೆ ಎಂದು ತಿಳಿಸಿದೆ.

30 ದಿನದಿಂದ 180 ದಿನಗಳವರೆಗೆ ಮರುಪಾವತಿ ಆಗದೆ ಬಾಕಿ ಉಳಿದಿರುವ ರಿಟೇಲ್ ಸಾಲಗಳು ಡಿಸೆಂಬರ್ ವೇಳೆಗೆ ಶೇ 2.8ಕ್ಕೆ ಇಳಿದಿವೆ. 2024ರ ಇದೇ ಅವಧಿಯಲ್ಲಿ ಇದು ಶೇ 3.2ರಷ್ಟಿತ್ತು.

ಉಕ್ರೇನ್‌ಗೆ ಅಣ್ವಸ್ತ್ರ: ಬ್ರಿಟನ್, ಫ್ರಾನ್ಸ್ ವಿರುದ್ಧ ರಷ್ಯಾ ಆರೋಪ

ಮಾಸ್ಕೊ (ಪಿಟಿಐ): ಬ್ರಿಟನ್ ಮತ್ತು ಫ್ರಾನ್ಸ್ ರಹಸ್ಯವಾಗಿ ಉಕ್ರೇನ್‌ಗೆ ಅಣ್ವಸ್ತ್ರ ವರ್ಗಾಯಿಸಲು ಯತ್ನಿಸುತ್ತಿವೆ ಎಂದು ರಷ್ಯಾದ ಗುಪ್ತಚರ ಸಂಸ್ಥೆ ಹೇಳಿದೆ.

ರಷ್ಯಾದ ಮಿಲಿಟರಿ ಮಂಗಳವಾರ ಬಿಡುಗಡೆ ಮಾಡಿರುವ ವರದಿಯಲ್ಲಿ, ರಷ್ಯಾದ ವಿದೇಶಿ ಗುಪ್ತಚರ ಸಂಸ್ಥೆಯ (ಎಸ್‌ವಿಆರ್) ವರದಿಯನ್ನು ಉಲ್ಲೇಖಿಸಿದೆ. ಆದರೆ, ಈ ಆರೋಪಕ್ಕೆ ಸಂಬಂಧಿಸಿದಂತೆ ಯಾವುದೇ ಸಾಕ್ಷ್ಯಗಳನ್ನು ಒದಗಿಸಿಲ್ಲ.

ಬ್ರಿಟನ್ ಮತ್ತು ಫ್ರಾನ್ಸ್‌ನ ರಹಸ್ಯ ಕಾರ್ಯಾಚರಣೆಯು ಅಂತರರಾಷ್ಟ್ರೀಯ ಕಾನೂನಿನ ಉಲ್ಲಂಘನೆ ಆಗಿದೆ. ಇದು ಜಾಗತಿಕ ಅಣ್ವಸ್ತ್ರ ಪ್ರಸರಣ ನಿಷೇಧ ಒಪ್ಪಂದಕ್ಕೆ (ಎನ್‌ಪಿಟಿ) ವಿರುದ್ಧವಾಗಿದೆ ಎಂದು ಎಂದು ಎಸ್‌ವಿಆರ್ ಹೇಳಿದೆ.

ಯುದ್ಧದಲ್ಲಿ ಪುಟಿನ್ ಗೆದ್ದಿಲ್ಲ: ಝೆಲೆನ್‌ಸ್ಕಿ

ಕೀವ್ (ಎಪಿ): ಯುದ್ಧ ಆರಂಭವಾದಾಗಿನಿಂದ ಈವರೆಗೆ ನಾವು ನಮ್ಮ ಸ್ವಾತಂತ್ರ್ಯವನ್ನು, ರಾಷ್ಟ್ರ ಸ್ಥಾನಮಾನವನ್ನು ಬಿಟ್ಟುಕೊಟ್ಟಿಲ್ಲ ಎಂದು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಮಂಗಳವಾರ ಹೇಳಿದ್ದಾರೆ.

ಉಕ್ರೇನ್ –ರಷ್ಯಾ ನಡುವಿನ ಯುದ್ಧ ಆರಂಭಗೊಂಡು ನಾಲ್ಕು ವರ್ಷಗಳಾದ ಹಿನ್ನೆಲೆಯಲ್ಲಿ ಮಾತನಾಡಿರುವ ಝೆಲೆನ್‌ಸ್ಕಿ,' ರಷ್ಯಾ ದಾಳಿಯನ್ನು ಉಕ್ರೇನ್ ತಡೆದುಕೊಂಡಿದೆ. ಆದರೆ, ಎಂದಿಗೂ ನಾವು ನಮ್ಮ ಸ್ವಾತಂತ್ರ್ಯವನ್ನು ಬಿಟ್ಟುಕೊಟ್ಟಿಲ್ಲ. ನಮ್ಮನ್ನು ಧೃತಿಗೆಡಿಸಲು, ಯುದ್ಧವನ್ನು ಗೆಲ್ಲಲು ಪುಟಿನ್‌ಗೆ ಸಾಧ್ಯವಾಗಲಿಲ್ಲ' ಎಂದೂ ಪ್ರತಿಪಾದಿಸಿದ್ದಾರೆ.

ಉಗ್ರ ರಾಣಾ ಪೌರತ್ವ ರದ್ದತಿಗೆ ಮುಂದಾದ ಕೆನಡಾ

ತಹವ್ವುರ್ ರಾಣಾ

ಟೊರೊಂಟೊ(ಪಿಟಿಐ): 2008ರಲ್ಲಿ ಮುಂಬೈನಲ್ಲಿ ಸಂಭವಿಸಿದ್ದ ಭಯೋತ್ಪಾದಕ ದಾಳಿಯಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಆರೋಪ ಎದುರಿಸುತ್ತಿರುವ ತಹವ್ವುರ್ ರಾಣಾ ಹುಸೇನ್ ಪೌರತ್ವ ರದ್ದುಪಡಿಸುವುದಕ್ಕೆ ಕೆನಡಾ ಸರ್ಕಾರ ಮುಂದಾಗಿದೆ.

ಪ್ರಧಾನಿ ಮಾರ್ಕ್ ಕಾರ್ನಿ ಅವರು ಭಾರತಕ್ಕೆ ಭೇಟಿ ನೀಡುತ್ತಿರುವ ಸಂದರ್ಭದಲ್ಲಿಯೇ ಈ ಮಹತ್ವದ ಬೆಳವಣಿಗೆ ನಡೆದಿದೆ.

ಪಾಕಿಸ್ತಾನದಲ್ಲಿ ಜನಿಸಿರುವ ರಾಣಾ ಕೆನಡಾ ಪೌರತ್ವ ಹೊಂದಿದ್ದು, ಮುಂಬೈನಲ್ಲಿ ನಡೆದಿದ್ದ ಭಯೋತ್ಪಾದಕ ದಾಳಿಯ ಸಂಚುಕೋರ ಡೇವಿಡ್ ಕೋಲ್‌ಮನ್ ಹೆಡ್ಲಿ ಅಲಿಯಾಸ್ ದಾವೂದ್ ಗಿಲಾನಿಯ ಆಪ್ತನೂ ಆಗಿದ್ದಾನೆ. ಹೆಡ್ಲಿ ಅಮೆರಿಕದ ಪ್ರಜೆ.

'2001ರಲ್ಲಿ ರಾಣಾ ಪಡೆದಿರುವ ಕೆನಡಾ ಪೌರತ್ವವನ್ನು ಹಿಂಪಡೆಯಲು ಉದ್ದೇಶಿಸಲಾಗಿದೆ' ಎಂದು ವಲಸೆ ಅಧಿಕಾರಿಗಳು ಅಧಿಸೂಚನೆ ಹೊರಡಿಸಿದ್ದನ್ನು ಉಲ್ಲೇಖಿಸಿ ಗ್ಲೋಬಲ್ ನ್ಯೂಸ್ ವರದಿ ಮಾಡಿದೆ.

ಭಯೋತ್ಪಾದಕ ಕೃತ್ಯಗಳ ಕಾರಣಗಳಿಂದಾಗಿ ರಾಣಾ ಪೌರತ್ವವನ್ನು ರದ್ದು ಮಾಡಲಾಗುತ್ತಿಲ್ಲ. ಪೌರತ್ವಕ್ಕಾಗಿ ಸಲ್ಲಿಸಿದ್ದ ಅರ್ಜಿಯಲ್ಲಿ ಆತ ಸುಳ್ಳು ಮಾಹಿತಿ ನೀಡಿದ್ದಕ್ಕಾಗಿ ಈ ಕ್ರಮ ಕೈಗೊಳ್ಳಲಾಗುತ್ತಿದೆ ಎಂಬುದಾಗಿ ಕೆನಡಾದ ವಲಸೆ, ನಿರಾಶ್ರಿತರು ಹಾಗೂ ಪೌರತ್ವ (ಐಆರ್‌ಸಿಸಿ) ಇಲಾಖೆಯು ತಿಳಿಸಿದೆ ಎಂದು ವರದಿಯಲ್ಲಿ ವಿವರಿಸಲಾಗಿದೆ.

ಮುಂಬೈ ಮೇಲೆ 2008ರ ನವೆಂಬರ್ 26ರಂದು ನಡೆದಿದ್ದ ಭಯೋತ್ಪಾದಕ ದಾಳಿಯಲ್ಲಿ 166 ಜನರು ಮೃತಪಟ್ಟಿದ್ದರು.

ಈ ಬಳಿಕ, ರಾಣಾನನ್ನು ಹಸ್ತಾಂತರಿಸುವಂತೆ ಭಾರತವು ಅಮೆರಿಕಕ್ಕೆ ಕೋರಿತ್ತು. ಸುದೀರ್ಘ ಕಾನೂನು ಹೋರಾಟದ ಬಳಿಕ, ಕಳೆದ ವರ್ಷ ಏಪ್ರಿಲ್‌ನಲ್ಲಿ ಆತನನ್ನು ಭಾರತಕ್ಕೆ ಹಸ್ತಾಂತರಿಸಲಾಯಿತು. ನವದೆಹಲಿಗೆ ಬಂದಿಳಿದ ಕೂಡಲೇ, ಆತನನ್ನು ಎನ್‌ಐಎ ಬಂಧಿಸಿತ್ತು.

ಎಲ್ ಮೆಂಚೊ ವಿರುದ್ಧದ ಕಾರ್ಯಾಚರಣೆ ಬಳಿಕ ಘಟನೆ

ಮೆಕ್ಸಿಕೊದಲ್ಲಿ ಹಿಂಸಾಚಾರ: 74 ಸಾವು

ಗ್ವಾದಲಹಾರ (ಮೆಕ್ಸಿಕೊ) (ಎಪಿ): ಮೆಕ್ಸಿಕೊದ ಡ್ರಗ್ಸ್ ಜಾಲದ ಪಾತಕಿ, 'ಹಾಲಿಸ್ಕೊ ನ್ಯೂ ಜನರೇಷನ್ ಕಾರ್ಟೆಲ್' (ಸಿಜೆಎನ್‌ಜಿ) ಮುಖ್ಯಸ್ಥ 'ಎಲ್ ಮೆಂಚೊ'ನನ್ನು ಸೆರೆ ಹಿಡಿಯುವ ಕಾರ್ಯಾಚರಣೆ ಹಾಗೂ ಆತನ ಹತ್ಯೆ ನಂತರ ನಡೆದ ಹಿಂಸಾಚಾರದಲ್ಲಿ 74 ಮಂದಿ ಮೃತಪಟ್ಟಿದ್ದಾರೆ.

ಇವರಲ್ಲಿ ಭದ್ರತಾ ಪಡೆಯ 27 ಯೋಧರು, 46 ಶಂಕಿತ ಆರೋಪಿಗಳು ಹಾಗೂ ನಾಗರಿಕರೊಬ್ಬರು ಹತರಾಗಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಈ ಘಟನೆಯಿಂದಾಗಿ ಮೆಕ್ಸಿಕೊದ ಬಹುತೇಕ ಭಾಗಗಳಲ್ಲಿ ಮತ್ತಷ್ಟು ಹಿಂಸಾಚಾರ ನಡೆಯಬಹುದೆಂಬ ಭೀತಿ ಎದುರಾಗಿದೆ.

'ಎಲ್ ಮೆಂಚೊ' ಎಂದು ಕರೆಯುವ ನೆಮೆಸಿಯೊ ಒಸೆಗುರಾ ಸೆರ್ವಾಂಟೆಸ್ ಅಮೆರಿಕಕ್ಕೆ ಫೆಂಟಾನಿಲ್, ಮೆಥಾಂಫೆಟಮೈನ್ ಮತ್ತು ಕೊಕೇನ್ ಕಳ್ಳಸಾಗಣೆ ಮಾಡುತ್ತಿದ್ದ. ತನ್ನ ಕಾರ್ಯಾಚರಣೆಗೆ ವಿರುದ್ಧವಾಗಿರುವ ಸರ್ಕಾರಿ ಅಧಿಕಾರಿಗಳ ಮೇಲೆ ದಾಳಿ ನಡೆಸುತ್ತಿದ್ದ. ಈ ಪಾತಕಿಯ ಹತ್ಯೆ ಬಳಿಕ, ಸಂಘಟನೆಯ ಸದಸ್ಯರು ರಸ್ತೆ ತಡೆ ನಡೆಸಿ, ವಾಹನಗಳಿಗೆ ಬೆಂಕಿ ಹಚ್ಚುವ ಮೂಲಕ ಹಿಂಸಾಚಾರದಲ್ಲಿ ತೊಡಗಿದ್ದಾರೆ.

'ಹಾಲಿಸ್ಕೊದ ಟಪಲ್ಪಾದಲ್ಲಿ ಭಾನುವಾರ ಬೆಳಿಗ್ಗೆ ಸೇನೆ ಹಾಗೂ ರಾಷ್ಟ್ರೀಯ ವಿಶೇಷ ಭದ್ರತಾ ಪಡೆ ದಾಳಿ ನಡೆಸಿದ್ದು, ಅಲ್ಲಿ ಎಂಟು ಮಂದಿ ಬಂದೂಕುಧಾರಿಗಳು ಹತರಾದರು. ಎಲ್ ಮೆಂಚೊ ಹಾಗೂ ಆತನ ಇಬ್ಬರು ಅಂಗರಕ್ಷಕರು ಅರಣ್ಯ ಪ್ರದೇಶಕ್ಕೆ ಓಡಿ ಹೋದರು. ಅಲ್ಲಿ ನಡೆದ ಗುಂಡಿನ ಚಕಮಕಿಯಲ್ಲಿ ಗಂಭೀರವಾಗಿ ಗಾಯಗೊಂಡ ಎಲ್ ಮೆಂಚೊನನ್ನು ಮೆಕ್ಸಿಕೊ ಸಿಟಿಗೆ ಕರೆದೊಯ್ಯುವ ಮಾರ್ಗ ಮಧ್ಯೆ ಮೃತಪಟ್ಟ' ಎಂದು ರಕ್ಷಣಾ ಕಾರ್ಯದರ್ಶಿ ರಿಕಾರ್ಡೊ ಟ್ರೆವಿಲ್ಲಾ ಸೋಮವಾರ ತಿಳಿಸಿದ್ದಾರೆ.

ದೇಶದ ಜನರು ಶಾಂತಿ, ಸುವ್ಯವಸ್ಥೆ ಕಾಪಾಡುವಂತೆ ಮೆಕ್ಸಿಕೊ ಅಧ್ಯಕ್ಷೆ ಕ್ಲಾಡಿಯಾ ಶೈನ್‌ಬಾಮ್ ಮನವಿ ಮಾಡಿದ್ದಾರೆ.

ಹತ್ತು ಸಾವಿರ ಯೋಧರ ನಿಯೋಜನೆ: 'ಎಲ್ ಮೆಂಚೊ' ಹತ್ಯೆ ಬಳಿಕ ಸಿಜೆಎನ್‌ಜಿ ಸಂಘಟನೆಯ 250ಕ್ಕೂ ಹೆಚ್ಚು ಸದಸ್ಯರು 20 ರಾಜ್ಯಗಳಲ್ಲಿ ರಸ್ತೆ ತಡೆ ನಡೆಸಿ, ವಾಹನಗಳಿಗೆ ಬೆಂಕಿ ಹಚ್ಚುವ ಮೂಲಕ ಹಿಂಸಾಚಾರ ನಡೆಸಿದ್ದಾರೆ. ಇದನ್ನು ಹತ್ತಿಕ್ಕಲು ಹತ್ತು ಸಾವಿರ ಯೋಧರನ್ನು ನಿಯೋಜಿಸಲಾಗಿದೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ಹಾಲಿಸ್ಕೊದಲ್ಲಿರುವ ಕಾರಾಗೃಹದ ಮೇಲೂ ಸಿಜೆಎನ್‌ಜಿ ಸದಸ್ಯರು ದಾಳಿ ನಡೆಸಿದ್ದು, ಈ ವೇಳೆ 23 ಕೈದಿಗಳು ಪರಾರಿಯಾಗಿದ್ದಾರೆ' ಎಂದಿದ್ದಾರೆ.

ಈ ವರ್ಷದ ಫಿಫಾ ವಿಶ್ವಕಪ್‌ನ ಆತಿಥ್ಯ ವಹಿಸಿರುವ ನಗರಗಳಲ್ಲಿ ಹಾಲಿಸ್ಕೊ ಒಂದು. ಈ ನಗರಕ್ಕೆ ಹೆಚ್ಚುವರಿಯಾಗಿ 2,500 ಯೋಧರನ್ನು ಕಳುಹಿಸಲಾಗಿದೆ. ಭಾನುವಾರದಿಂದ ಒಟ್ಟು ಹತ್ತು ಸಾವಿರ ಯೋಧರನ್ನು ನಿಯೋಜಿಸಲಾಗಿದೆ.

ಮೆಕ್ಸಿಕೊದ ಹಾಲಿಸ್ಕೊ ರಾಜ್ಯದ ಪೋರ್ಟೊ ವಲ್ಲಾರ್ಟಾದ ವಾಣಿಜ್ಯ ಮಳಿಗೆಯೊಂದರ ಪಾರ್ಕಿಂಗ್ ಸ್ಥಳದಲ್ಲಿ ನಿಲ್ಲಿಸಿದ್ದ ವಾಹನಗಳು ಬೆಂಕಿಯಿಂದ ಸುಟ್ಟು ಕರಕಲಾಗಿವೆ —ಎಎಫ್‌ಪಿ ಚಿತ್ರ

ಎಲ್ ಮೆಂಚೊ ಪ್ರೇಯಸಿಯ ಜಾಡು ಹಿಡಿದು...

ಮೆಕ್ಸಿಕೊದ ಕುಖ್ಯಾತ ಪಾತಕಿ ಎಲ್ ಮೆಂಚೊನನ್ನು ಪತ್ತೆ ಮಾಡಲು ಭದ್ರತಾ ಪಡೆಗಳು ಆತನ ಹಣದ ವಹಿವಾಟನ್ನಾಗಲಿ, ಮಾದಕವಸ್ತುಗಳ ಜಾಡನ್ನಾಗಲಿ ಅನುಸರಿಸಲಿಲ್ಲ. ಬದಲಾಗಿ, ಆತನ ಪ್ರೇಯಸಿಯ ಹಿಂದೆ ಬಿದ್ದರು.

ಭದ್ರತಾ ಪಡೆಯ ಯೋಧರು ಆಕೆಯ ಮೇಲೆ ನಿಗಾ ಇಟ್ಟಿದ್ದರು. ಆಕೆ ಸಂಚರಿಸಿದ ಹಾದಿಯನ್ನೇ ಹಿಂಬಾಲಿಸಿದರು. ಆಕೆ ಹಾಲಿಸ್ಕೊ ರಾಜ್ಯದ ಅರಣ್ಯ ಪ್ರದೇಶದ ಪರ್ವತಗಳ ನಡುವೆ ಇದ್ದ ಮನೆಯೊಳಗೆ ಹೋದಳು. ಅಲ್ಲಿ ಎಲ್ ಮೆಂಚೊ ಶುಕ್ರವಾರದಿಂದ ಅಡಗಿ ಕುಳಿತಿದ್ದ. ಈ ವೇಳೆ, ಯೋಧರು ದಾಳಿ ನಡೆಸಿದ್ದು, ಪ್ರತಿಯಾಗಿ ಆತನ ಸಹಚರರು ಸಹ ಗುಂಡಿನ ದಾಳಿ ನಡೆಸಿದರು. ಇದು ಯಶಸ್ವಿ ಕಾರ್ಯಾಚರಣೆಯಾಗಿತ್ತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Drivers

ಡ್ರೈವರ್ ಬೇಕಾಗಿದ್ದಾರೆ
ಬೆಂಗಳೂರು
ಎಲೆಕ್ಟ್ರಿಕ್ ಬಸ್‌ಗಳಿಗಾಗಿ
ಕನಿಷ್ಠ ತಿಂಗಳ ಗಳಿಕೆ ₹ 30,000/-
ಗರಿಷ್ಠ ತಿಂಗಳ ಗಳಿಕೆ ₹ 40,000/-
ತಿಂಗಳ ಗಳಿಕೆ
₹ 23,150/-
ಇಎಸ್‌ಐ ಮತ್ತು ಪಿಎಫ್
ಉಚಿತ ವಸತಿ, ಬಸ್ ಪಾಸ್*
ಸಬ್ಸಿಡಿ ಕ್ಯಾಂಟೀನ್* ಡೈಲಿ ಬಾಟಾ*
ಅಪಘಾತ ವಿಮೆ 5 ಲಕ್ಷ
ರಜಾ ವೇತನ
ಪ್ರೋತ್ಸಾಹಕ ಧನ, ಭತ್ಯೆ, ಬೋನಸ್ ಇತ್ಯಾದಿ..
ಭಾರೀ ವಾಹನ ಚಾಲನ ಪರವಾನಗಿ ಕಡ್ಡಾಯ
ಕನಿಷ್ಠ 3 ವರ್ಷ ಅನುಭವ ಕಡ್ಡಾಯ
ಸಂಪರ್ಕಿಸಿ : 8438889961 / 8438889963

Hotel

ಮ್ಯಾನೇಜರ್, ಸೂಪರ್ ವೈಸರ್, ಹೋಟೆಲ್ ಮ್ಯಾನೇಜ್ ಮೆಂಟ್ ಅಭ್ಯರ್ಥಿಗಳು, ಬಿಸಿನೆಸ್ ಅಡ್ಮಿನಿಸ್ಟ್ರೇಷನ್ ಹಿನ್ನೆಲೆಯುಳ್ಳವರು ಹಾಗೂ ಅಡುಗೆಯವರು ಬೇಕಾಗಿದ್ದಾರೆ. ಸ್ಥಳ: ಕೆಫೆ ಮೈತ್ರಿ ಬೊಮ್ಮಸಂದ್ರ, ಬೆಂಗಳೂರು560099. ಸಂಪರ್ಕಿಸಿ: 08026601239/ 9741862781 Email: cafemythri@gmail.com

IT

EXPERIENCED H/W OS WINDOWS SERVER BASIC LINUX NET WORKING Engineer Send Resume 9663387726

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

Wanted

ರೋಗಿಗಳ ಆರೈಕೆಗೆ (20,000–25,000) ಮನೆಗೆಲಸಕ್ಕೆ (17,000–20,000) ಹೆಂಗಸರು / ಹುಡುಗಿಯರು ಬೇಕಾಗಿದ್ದಾರೆ. ಉಡುಪಿ– 9845276452

Part-Time Jobs

ಕರ್ನಾಟಕದ್ಯಾಂತ ಕಂಪನಿಗಳಿಗೆ ಮನೆಯಿಂದಲೇ ಕೆಲಸಕ್ಕೆ ಮಹಿಳೆಯರಿಗೆ, ವಿದ್ಯಾರ್ಥಿಗಳಿಗೆ, ಪುರುಷರಿಗೆ ಆದ್ಯತೆ. 19,000- 25,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 9964322833, 9742133993

General

ಉದ್ಯೋಗಾವಕಾಶಗಳು TVS, ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th, PUC, ITI, Degree. ಸಂಬಳ 16,000- 86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

ವೈಯಕ್ತಿಕ

Lost

ಕಳೆದಿದೆ
ಡಿ. ಯು. ಮಲ್ಲಿಕಾರ್ಜುನ ಆದ ನಾನು ನಂ29/5 ಅಥಶ್ರೀ, 38ನೇ ಅಡ್ಡರಸ್ತೆ 8ನೇ ಬ್ಲಾಕ್ ಜಯನಗರ ಬೆಂಗಳೂರು–560070 ಇಲ್ಲಿನ ನಿವಾಸಿಯಾಗಿದ್ದು, ನನ್ನ ಮೂಲ ಖಾತಾ ಪತ್ರ, ದಾಖಲೆ ಸಂಖ್ಯೆ/ಗುರುತಿನ ಸಂಖ್ಯೆ BDA/RO(8)/767/FE/AP/XI/16-17, ನಿವೇಶನ ಸಂಖ್ಯೆ 767 ಅಂಜನಾಪುರ ಮುಂದುವರೆದ ಬಡಾವಣೆ 11ನೇ ವಿಭಾಗ ಸಂಬಂಧಪಟ್ಟಂತೆ ಖಾತಾ ಪತ್ರ ಕಳೆದು ಹೋಗಿರುತ್ತದೆ. ಯಾರಿಗಾದರೂ ಸಿಕ್ಕಿದರೆ ಈ ನಂಬರ್‌ಗೆ ಕರೆ ಮಾಡಿ.
98802 92449 / 91649 66946

ಶಿಕ್ಷಣಕ್ಕೆ
ನಿಮ್ಮ ಜಾಹೀರಾತು ನೀಡಿಕೆಗಾಗಿ ಸಂಪರ್ಕಿಸಿ:
9845114560

ಪ್ರವಾಸ

Holiday Package Tours

ಭಾರತೀಯ ರೈಲ್ವೆಯ ಪ್ರವಾಸಿ ರೈಲು ವೈಷ್ಣೋದೇವಿ, ಅಮೃತಸರ, ಹರಿದ್ವಾರ, ಮಥುರಾ ಪ್ರವಾಸಕ್ಕೆ 13 ದಿನಗಳ ಪ್ರವಾಸವನ್ನು ಏರ್ಪಡಿಸಿದೆ. ಇದು ಏಪ್ರಿಲ್ 11 ರಂದು ಬೆಂಗಳೂರಿನಿಂದ ಪ್ರಾರಂಭವಾಗುತ್ತದೆ, 3AC ಊಟ ಮತ್ತು ವಸತಿಯೊಂದಿಗೆ 48,700 ರೂ . ಬುಕಿಂಗ್‌ಗಾಗಿ 7305858585 / (www.tourtimes.in) ಸಂಪರ್ಕಿಸಿ .

ಕಳೆದು ಹೋದ ಅಪ್ಪನ ಹುಡುಕಾಟದ ‘ಬೂಂಗ್’

ಲಕ್ಷ್ಮಿಪ್ರಿಯಾ ದೇವಿ ನಿರ್ದೇಶನದ ಮಣಿಪುರಿ ಚಿತ್ರ ‘ಬೂಂಗ್’ ಆಸ್ಕರ್‌ನಷ್ಟೇ ಜನಪ್ರಿಯವಾದ ಬ್ರಿಟಿಷ್ ಅಕಾಡೆಮಿ ಫಿಲ್ಮ್ ಅವಾರ್ಡ್(ಬಾಫ್ಟಾ) ಪಡೆದುಕೊಂಡಿದೆ. ಇದೀಗ ಅಂತರರಾಷ್ಟ್ರೀಯ ಮಟ್ಟದಲ್ಲಿ ಗಮನ ಸೆಳೆದಿದೆ. ಪುಟ್ಟ ಬಾಲಕನೊಬ್ಬ ಭಾರತ–ಮ್ಯಾನ್ಮಾರ್ ಗಡಿಯಲ್ಲಿ ಕಳೆದು ಹೋದ ಅಪ್ಪನನ್ನು ಹುಡುಕುವ ಕಥೆಯನ್ನು ಹೊಂದಿರುವ ಚಿತ್ರವನ್ನು ಫರಾನ್ ಅಖ್ತರ್ ಅವರು ಎಕ್ಸೆಲ್ ಎಂಟರ್‌ಟೇನ್‌ಮೆಂಟ್ ಮೂಲಕ ನಿರ್ಮಿಸಿದ್ದಾರೆ.

ಬಾಲಕ ಭೋಜೇಂದ್ರೊ ಬೂಂಗ್ ಸಿಂಗ್ ಇಂಫಾಲ್‌ನಲ್ಲಿ ತನ್ನ ತಾಯಿಯ ಜತೆ ವಾಸಿಸುತ್ತಿರುತ್ತಾನೆ. ಮ್ಯಾನ್ಮಾರ್‌ನ ಗಡಿಯಲ್ಲಿ ಪೀಠೋಪಕರಣದ ಅಂಗಡಿ ನಡೆಸಲೆಂದು ಹೋದ ಆತನ ತಂದೆ ಕಳೆದು ಹೋಗುತ್ತಾನೆ. ಆತ ಸತ್ತು ಹೋಗಿದ್ದಾನೆಂದು ಸುದ್ದಿಯಾಗುತ್ತದೆ. ಅಮ್ಮನಿಗೆ ಅಚ್ಚರಿಯ ಉಡುಗೊರೆ ನೀಡಬೇಕೆಂದು ಬೂಂಗ್ ಸಿಂಗ್ ತನ್ನ ಗೆಳೆಯನ ಜತೆ ಅಪ್ಪನನ್ನು ಹುಡುಕಿಕೊಂಡು ಗಡಿಯಲ್ಲಿ ಅಲೆಯುವುದು ಚಿತ್ರದ ಒಟ್ಟಾರೆ ಕಥೆ.

ಬಾಲಕನ ದೃಷ್ಟಿಕೋನದಿಂದ ಎರಡು ದೇಶಗಳ ನಡುವಿನ ಗಡಿ ಸಮಸ್ಯೆ, ವಲಸೆ, ಮಣಿಪುರದ ಹಿಂಸಾಚಾರ, ಸಮುದಾಯಗಳ ನಡುವಿನ ಸಂಘರ್ಷ, ರಾಜಕೀಯ ಸ್ಥಿತಿಗತಿಗಳನ್ನು ನಿರ್ದೇಶಕರು ಕಟ್ಟಿಕೊಟ್ಟಿದ್ದಾರೆ. ಸಂಘರ್ಷದ ನಾಡು ಮಣಿಪುರದಲ್ಲಿ ಶಾಂತಿ ನೆಲೆಸಬೇಕೆಂಬ ಸಂದೇಶವನ್ನು ಈ ಚಿತ್ರದ ಮೂಲಕ ನೀಡಿದ್ದಾರೆ. ಇದು ಲಕ್ಷ್ಮಿಪ್ರಿಯಾ ದೇವಿ ಚೊಚ್ಚಲ ನಿರ್ದೇಶನದ ಚಿತ್ರ. ಮೊದಲ ಯತ್ನದಲ್ಲಿಯೇ ಅವರು ಅತ್ಯುತ್ತಮ ಮನ್ನಣೆ ಪಡೆದಿದ್ದು, ಪ್ರಧಾನಿ ಮೋದಿ ಸೇರಿದಂತೆ ಅನೇಕರು ಚಿತ್ರತಂಡಕ್ಕೆ ಅಭಿನಂದಿಸಿದ್ದಾರೆ.

ಗುಗುನ್ ಕಿಪ್ಗೆನ್ ಮತ್ತು ಬಾಲಾ ಹಿಜಾಮ್ ಪ್ರಮುಖ ಪಾತ್ರಗಳಲ್ಲಿ ನಟಿಸಿರುವ ಈ ಮಕ್ಕಳ ಚಿತ್ರವು, ಅಂತರರಾಷ್ಟ್ರೀಯ ಮಟ್ಟದ ‘ಯುಟೋಪಿಯಾ–2’, ‘ಲಿಲೋ ಆ್ಯಂಡ್ ಸ್ಟಿಚ್‘ ಮುಂತಾದ ಜನಪ್ರಿಯ ಸಿನಿಮಾಗಳು ಎದುರು ಸ್ಪರ್ಧಿಸಿ ಪ್ರಶಸ್ತಿ ತನ್ನದಾಗಿಸಿಕೊಂಡಿದ್ದು ವಿಶೇಷ.

‘2023ರ ಮಣಿಪುರದ ಗಲಭೆ ಪ್ರಾರಂಭವಾಗುವ ಮೊದಲು ನಮ್ಮ ಸಿನಿಮಾ ಮುಕ್ತಾಯಗೊಂಡಿತ್ತು. ಬಹಳ ಸಮಸ್ಯೆಗಳಿಂದ ಕೂಡಿದ ನಾಡು ನಮ್ಮದು. ಎಲ್ಲರಿಂದಲೂ, ಎಲ್ಲವುಗಳಿಂದಲೂ ತಾತ್ಸಾರಕ್ಕೆ ಒಳಗಾದ ಪ್ರದೇಶ. ಮುಖ್ಯವಾಗಿ ಇಲ್ಲಿ ಶಾಂತಿ ನೆಲಸಬೇಕಿದೆ’ ಎಂದಿದ್ದಾರೆ ಲಕ್ಷ್ಮಿಪ್ರಿಯಾ ದೇವಿ.

ಸೆಲ್ವಿನ್ ದೇಸಾಯಿ, ಬಿಂಬಿಕಾ ಜೆ.ರಾವ್, ಆಹಾನ್ ಗೌಡ

ಸಿದ್ದಿ ಜನಾಂಗದ ‘ದೇವಸಸ್ಯ’

ಉತ್ತರ ಕನ್ನಡ ಜಿಲ್ಲೆಯಲ್ಲಿಯೇ ಹೆಚ್ಚಿನ ಸಂಖ್ಯೆಯಲ್ಲಿ ನೆಲೆಸಿರುವ ಸಿದ್ದಿ ಜನಾಂಗದ ಸಂಸ್ಕೃತಿ, ಆಚಾರ, ವಿಚಾರಗಳ ಕುರಿತಾದ ಕಥೆಯನ್ನು ಹೊಂದಿರುವ ‘ದೇವಸಸ್ಯ’ ಚಿತ್ರದ ಚಿತ್ರೀಕರಣ ಇತ್ತೀಚೆಗಷ್ಟೇ ಮುಕ್ತಾಯಗೊಂಡಿದೆ. ಕಾರ್ತೀಕ್ ಭಟ್ ನಿರ್ದೇಶನದ ಚಿತ್ರ ಕನ್ನಡ, ತೆಲುಗು, ಹಿಂದಿ ಸೇರಿದಂತೆ ಐದು ಭಾಷೆಗಳಲ್ಲಿ ತೆರೆ ಕಾಣಲಿದೆ.

‘1995ರ ಕಾಲಘಟ್ಟದಲ್ಲಿ ನಡೆಯುವ ನಮ್ಮ ಮಣ್ಣಿನ ಕಥೆಯನ್ನು ಈ ಚಿತ್ರದಲ್ಲಿ ಹೇಳಲಾಗುತ್ತಿದೆ. ಊರಲ್ಲಿ ಟ್ರ್ಯಾಕ್ಟರ್ ಓಡಿಸುತ್ತಿದ್ದ ಸಿದ್ದಿ ಸಮುದಾಯದ ಯುವಕ ಸೆಲ್ವಿನ್ ದೇಸಾಯಿ ಈ ಚಿತ್ರದ ಪ್ರಮುಖ ಪಾತ್ರಧಾರಿ. ಒಂದು ವಿಶಿಷ್ಟ ಗಿಡದ ಸುತ್ತ ಕಥೆ ಸಾಗುತ್ತದೆ. ಶಿರಸಿ ಸುತ್ತಮುತ್ತ ಚಿತ್ರೀಕರಣಗೊಂಡಿದೆ. ಚಿತ್ರದ ಪೋಸ್ಟ್ ಪ್ರೊಡಕ್ಷನ್ ಕೆಲಸಗಳು ಪ್ರಾರಂಭಗೊಂಡಿದ್ದು, ಶೀಘ್ರದಲ್ಲಿ ಚಿತ್ರ ತೆರೆಗೆ ಬರಲಿದೆ’ ಎಂದರು ನಿರ್ದೇಶಕ.

ರಂಗಭೂಮಿ ಕಲಾವಿದ ಆಹಾನ್ ಗೌಡಗೆ ಬಿಂಬಿಕಾ ಜೆ.ರಾವ್ ಜೋಡಿಯಾಗಿದ್ದಾರೆ. ಪ್ರಕಾಶ್ ಬೆಳವಾಡಿ, ಪ್ರಮೋದ್ ಶೆಟ್ಟಿ, ಅಯ್ಯಪ್ಪ ಶರ್ಮ, ಮಂಜುನಾಥ ಹೆಗಡೆ, ಗೀತಾ ಸಿದ್ದಿ ಮುಂತಾದವರು ಚಿತ್ರದಲ್ಲಿದ್ದಾರೆ. ಅನಂತ ಫಿಲ್ಮ್ಸ್ ಅಡಿಯಲ್ಲಿ ಅನಂತಮೂರ್ತಿ ಎಂ.ಹೆಗಡೆ ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ.

‘150ಕ್ಕೂ ಹೆಚ್ಚು ಸಿದ್ದಿಗಳು ಪಾತ್ರಧಾರಿಗಳಾಗಿಯೇ ನಟಿಸಿರುವುದು ಚಿತ್ರದ ವಿಶೇಷ. ಈ ಚಿತ್ರಕ್ಕಾಗಿ 95ರ ಕಾಲಘಟ್ಟದ ಹಳ್ಳಿಯೊಂದರ ಸೆಟ್ ಹಾಕಿ 83 ದಿನ ಚಿತ್ರೀಕರಿಸಲಾಗಿದೆ. ವಿಶೇಷವಾದ ಸಂಜೀವಿನಿ ಗಿಡವೇ ದೇವಸಸ್ಯ’ ಎಂದರು ನಿರ್ಮಾಪಕ.

ಯಶವಂತ್ ಛಾಯಾಚಿತ್ರಗ್ರಹಣ, ಹರಿ ಅಜಯ್ ಸಂಗೀತ ಸಂಯೋಜನೆ, ಶ್ರೀಕಾಂತ್ ಸಂಕಲನ ಈ ಚಿತ್ರಕ್ಕಿದೆ.

ತೆರೆಗೆ ಬರಲು ಸಜ್ಜಾದ ಶಿಖಂಡಿ

ಬಹುತೇಕ ಹೊಸಬರಿಂದ ಕೂಡಿರುವ ‘ಶಿಖಂಡಿ’ ಚಿತ್ರದ ಪೋಸ್ಟರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಗುರುಮೂರ್ತಿ ವಿ. ಕಥೆ ಬರೆದು ನಿರ್ದೇಶಿಸುತ್ತಿದ್ದಾರೆ. ಇವರು ಈ ಹಿಂದೆ ‘ಮಾರಕಾಸ್ತ್ರ’ ಚಿತ್ರವನ್ನು ನಿರ್ದೇಶಿಸಿದ್ದರು.

‘ಮಹಾಭಾರತದಲ್ಲಿ ಬರುವ ಶಿಖಂಡಿ ಪಾತ್ರವೇ ನಮ್ಮ ಚಿತ್ರದ ಕಥೆಗೆ ಸ್ಫೂರ್ತಿ. ಆತ ಪುನರ್ಜನ್ಮ ಪಡೆದು ತನ್ನ ಸೇಡನ್ನು ತೀರಿಸಿಕೊಳ್ಳುವುದನ್ನು ನಾವೆಲ್ಲ ಕೇಳಿದ್ದೇವೆ. ಈ ಅಂಶವನ್ನೇ ಪ್ರಧಾನವಾಗಿಟ್ಟುಕೊಂಡು ಈ ಚಿತ್ರದ ಕಥೆ ಹೆಣೆಯಲಾಗಿದೆ. ಸಸ್ಪೆನ್ಸ್, ಥ್ರಿಲ್ಲರ್, ಹಾರರ್, ಕಾಮಿಡಿ ಸೇರಿದಂತೆ ಎಲ್ಲಾ ಅಂಶಗಳು ಇರುವ ಕೌಟುಂಬಿಕ ಕಥಾಹಂದರದ ಚಿತ್ರವಿದು. ಚಿತ್ರೀಕರಣ ಮುಗಿದಿದ್ದು, ಮೇ ತಿಂಗಳಲ್ಲಿ ಚಿತ್ರ ಬಿಡುಗಡೆ ಆಲೋಚನೆ ಇದೆ’ ಎಂದರು ನಿರ್ದೇಶಕ.

ಪೋಲಾ ಪ್ರವೀಣ್ ಕುಮಾರ್ ಚಿತ್ರದ ನಿರ್ಮಾಪಕ. ಯುವರಾಜ್ ಗೌಡಗೆ ಖ್ಯಾತಿ ಜೋಡಿಯಾಗಿದ್ದಾರೆ. ನೀತು, ಚಾಂದಿನಿ, ರಘು ರಾಮನಕೊಪ್ಪ, ದೀಪಕ್ ಶೆಟ್ಟಿ, ವಿಜಯ್ ಚೆಂಡೂರ್ ಮುಂತಾದವರು ಚಿತ್ರದಲ್ಲಿದ್ದಾರೆ. ಸ್ವಾಮಿ ಛಾಯಾಚಿತ್ರಗ್ರಹಣ, ಮಂಜುಕವಿ ಸಂಗೀತ, ಪ್ರದ್ಯೋತನ್ ಹಿನ್ನೆಲೆ ಸಂಗೀತ ಚಿತ್ರಕ್ಕಿದೆ.

ಯುವರಾಜ್ ಗೌಡ,ಖ್ಯಾತಿ

ಯುವ ಕಾಂಗ್ರೆಸ್ ಅಧ್ಯಕ್ಷ ಚಿಬ್ ಬಂಧನ

ನಾಲ್ಕು ದಿನ ಪೊಲೀಸ್ ಕಸ್ಟಡಿಗೆ ಪ್ರಕರಣ ಕ್ರೈಂ ಬ್ರ್ಯಾಂಚ್‌ಗೆ ವರ್ಗ

ನವದೆಹಲಿ (ಪಿಟಿಐ): ಎ.ಐ ಶೃಂಗಸಭೆಯ ‘ಎಕ್ಸ್‌ಪೋ’ ನಡೆಯುತ್ತಿದ್ದ ಸಭಾಂಗಣದಲ್ಲಿ ಇತ್ತೀಚೆಗೆ ಪ್ರತಿಭಟನೆ ನಡೆಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಷ್ಟ್ರೀಯ ಯುವ ಕಾಂಗ್ರೆಸ್ ಘಟಕದ ಅಧ್ಯಕ್ಷ ಉದಯ್ ಭಾನು ಚಿಬ್ ಅವರನ್ನು ದೆಹಲಿ ಪೊಲೀಸರು ಮಂಗಳವಾರ ಬಂಧಿಸಿದ್ದಾರೆ.

‘ಅಂಗಿ ತೆಗೆದು ಪ್ರತಿಭಟನೆ ನಡೆಸಿದ ಪ್ರಕರಣದಲ್ಲಿ ಉದಯ್ ಪ್ರಮುಖ ಸಂಚುಕೋರರಾಗಿದ್ದು, ಭಾರತ್ ಮಂಟಪದಲ್ಲಿ ಕಾನೂನು ವಿರೋಧಿ ಸಭೆ ಸೇರಿ, ದೇಶ ವಿರೋಧಿ ಘೋಷಣೆ ಕೂಗುವ ಮೂಲಕ ಗಲಭೆಯಂತಹ ಪರಿಸ್ಥಿತಿ ನಿರ್ಮಿಸಲು ಪ್ರಚೋದಿಸಿದ್ದರು’ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಆರೋಪಿಯನ್ನು ಪಟಿಯಾಲಾ ನ್ಯಾಯಾಲಯದ ಮುಂದೆ ಹಾಜರು ಪಡಿಸಿದ್ದು, ನ್ಯಾಯಾಧೀಶರು ನಾಲ್ಕು ದಿನ ಪೊಲೀಸ್ ಕಸ್ಟಡಿಗೆ ಒಪ್ಪಿಸಿದರು. ಪ್ರಕರಣವನ್ನು ದೆಹಲಿ ಪೊಲೀಸರು ಕ್ರೈಂ ಬ್ರ್ಯಾಂಚ್‌ಗೆ ವರ್ಗಾಯಿಸಿದ್ದಾರೆ.

ಭದ್ರತೆ ಹೆಚ್ಚಳ: ಚಿಬ್ ಬಂಧನದ ಬೆನ್ನಲ್ಲೇ, ರಾಜಧಾನಿಯಾದ್ಯಂತ ಪ್ರತಿಭಟನೆ ನಡೆಯುವ ಸಾಧ್ಯತೆಯಿದ್ದ ಕಾರಣ ರಾಜಧಾನಿಯಲ್ಲಿ ಭದ್ರತೆ ಹೆಚ್ಚಿಸಲಾಗಿತ್ತು. ಚಿಬ್ ಅವರನ್ನು ತಿಲಕ್ ಮಾರ್ಗ್ ಪೊಲೀಸ್ ಠಾಣೆಗೆ ಕರೆತರಲಾಗಿತ್ತು. ಠಾಣೆಗೆ ಸಂಪರ್ಕಿಸುವ ರಸ್ತೆಯ ಪ್ರಮುಖ ವೃತ್ತಗಳಲ್ಲಿ ಬ್ಯಾರಿಕೇಡ್‌ಗಳನ್ನು ಅಳವಡಿಸಲಾಗಿತ್ತು. ಗಲಭೆ ನಿಗ್ರಹ ತಂಡ, ಅರೆಸೇನಾ ಪಡೆ ಸನ್ನದ್ಧ ಸ್ಥಿತಿಯಲ್ಲಿರಿಸಲಾಗಿತ್ತು ಎಂದು ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

ಚಿಬ್ ಬಂಧನದಿಂದ ಬಂಧಿತರ ಸಂಖ್ಯೆ 8ಕ್ಕೆ ಏರಿಕೆಯಾಗಿದೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಮಧ್ಯಪ್ರದೇಶದ ಗ್ವಾಲಿಯರ್‌ನ ಜಿತೇಂದ್ರ ಯಾದವ್, ರಾಜ್ ಗುಜ್ಜರ್ ಹಾಗೂ ಅಜಯ್ ಕುಮಾರ್, ಉತ್ತರ ಪ್ರದೇಶ ಯುವ ಕಾಂಗ್ರೆಸ್ ಕಾರ್ಯದರ್ಶಿ ರಿತಿಕ್ ಅಲಿಯಾಸ್ ಮೊಂಟಿ ಶುಕ್ಲಾ ಅವರನ್ನು ಈ ಹಿಂದೆ ಬಂಧಿಸಲಾಗಿತ್ತು.

ಆರೋಪಿಗಳ ವಿರುದ್ಧ ಪ್ರಕರಣ ದಾಖಲು: ಆರೋಪಿಗಳ ವಿರುದ್ಧ ಬಿಎನ್‌ಎಸ್ 196 ಸೆಕ್ಷನ್ (ವಿವಿಧ ಗುಂಪುಗಳ ನಡುವೆ ದ್ವೇಷ ಬಿತ್ತುವ ಕೆಲಸ), 197 (ದೇಶದ ಏಕೀಕರಣಕ್ಕೆ ಹಾನಿಕಾರಕ ಚಟುವಟಿಕೆ) ನಡೆಸಿದ ಪ್ರಕರಣ ದಾಖಲಿಸಲಾಗಿದೆ. ಈ ಎರಡೂ ಸೆಕ್ಷನ್‌ನ ಅಡಿಯಲ್ಲಿ ಮೂರು ವರ್ಷಗಳವರೆಗೂ ಜೈಲು ಶಿಕ್ಷೆ ವಿಧಿಸಬಹುದಾಗಿದೆ.

ಮುಖ್ಯಾಂಶಗಳು

- ಎ.ಐ ಶೃಂಗಸಭೆಯಲ್ಲಿ ಯುವ ಕಾಂಗ್ರೆಸ್ ಕಾರ್ಯಕರ್ತರ ಪ್ರತಿಭಟನೆ
- ದೆಹಲಿ ಪೊಲೀಸರಿಂದ ಇದುವರೆಗೆ 8 ಮಂದಿ ಬಂಧನ
- ದೆಹಲಿಯ ಪ್ರಮುಖ ಸ್ಥಳಗಳಲ್ಲಿ ಭದ್ರತೆ ಹೆಚ್ಚಳ

ಯುವ ಕಾಂಗ್ರೆಸ್ ಅಧ್ಯಕ್ಷ ಉದಯ್ ಭಾನು ಚಿಬ್ ಅವರನ್ನು ಮಂಗಳವಾರ ಪಟಿಯಾಲ ಹೌಸ್ ನ್ಯಾಯಾಲಯಕ್ಕೆ ಹಾಜರುಪಡಿಸಿದ ಬಳಿಕ ನಾಲ್ಕು ದಿನಗಳ ಕಾಲ ಪೊಲೀಸ್ ವಶಕ್ಕೆ ಒಪ್ಪಿಸಲಾಯಿತು — ಪಿಟಿಐ ಚಿತ್ರ

ಶಾಂತಿಯುತ ಪ್ರತಿಭಟನೆ

‘ನಾವು ದೇಶದ ಧ್ವನಿ. ಸರ್ವಾಧಿಕಾರಿಗಳಿಗೆ ಹೆದರುವುದಿಲ್ಲ. ಸಂವಿಧಾನಕ್ಕಾಗಿ ನಾವು ಹೋರಾಟ ನಡೆಸುತ್ತೇವೆ. ನಾವು ದೇಶಕ್ಕಾಗಿ ಬದುಕುತ್ತೇವೆ’....

ಯುವ ಕಾಂಗ್ರೆಸ್ ಅಧ್ಯಕ್ಷ ಉದಯ್ ಭಾನು ಚಿಬ್ ಬಂಧನದ ಬಳಿಕ ಪಕ್ಷದ ಕಾರ್ಯಕರ್ತರು ಈ ರೀತಿಯಾಗಿ ಘೋಷಣೆ ಕೂಗಿ, ಬೆಂಬಲ ವ್ಯಕ್ತಪಡಿಸಿದರು.

ಯುವ ಘಟಕದ ರಾಷ್ಟ್ರೀಯ ಅಧ್ಯಕ್ಷ ಹಾಗೂ ಕಾರ್ಯಕರ್ತರ ಬಂಧನ ಖಂಡಿಸಿ ದೇಶದಾದ್ಯಂತ ಶಾಂತಿಯುತವಾಗಿ ಪ್ರತಿಭಟನೆ ನಡೆಸಲು ಕಾರ್ಯಕರ್ತರಿಗೆ ಕರೆ ನೀಡಲಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಬಂಧನವನ್ನು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಕೂಡ ಖಂಡಿಸಿದ್ದು, ಪ್ರತಿಭಟನೆ ನಡೆಸಿದವರು ‘ಬಬ್ಬರ್‌ಶೇರ್ ಕಾಮ್ರೇಡ್ಸ್’ ಎಂದು ಹೊಗಳಿದ್ದಾರೆ.

> **ಶಾಂತಿಯುತವಾಗಿ ಪ್ರತಿಭಟಿಸುವುದು ಮೂಲ ಹಕ್ಕು. ನನ್ನ ಮಗನನ್ನು ಬಂಧಿಸಿರುವುದು ಸರ್ಕಾರದ ಸರ್ವಾಧಿಕಾರಿತನವನ್ನು ಬಿಂಬಿಸಿದೆ**
> **ರಜನಿ ಬಾಲಾ**, ಉದಯ್ ಭಾನು ಚಿಬ್ ತಾಯಿ

> **ರಾಹುಲ್ ಗಾಂಧಿ ಅವರೇ ‘ಸೂಪರ್ ಮಾಸ್ಟರ್ ಮೈಂಡ್’. ಅವರ ಆದೇಶದ ಮೇಲೆ ನಡೆಸಿದ ಪ್ರತಿಭಟನೆಯು ದೇಶದ ಮಾನ ಕೆಡಿಸಿತು**
> **ಗೌರವ್ ಭಾಟಿಯಾ**, ಬಿಜೆಪಿ ರಾಷ್ಟ್ರೀಯ ವಕ್ತಾರ

> **ಶಾಂತಿಯುತ ಪ್ರತಿಭಟನೆ ದೇಶದ ಪರಂಪರೆಯಾಗಿದ್ದು, ಅದು ನಮ್ಮ ರಕ್ತದಲ್ಲಿದೆ. ಯಾವುದಕ್ಕೂ ಭಯಪಡಲ್ಲ. ಸತ್ಯ ಹಾಗೂ ಸಂವಿಧಾನವು ನಮ್ಮ ಜೊತೆಗಿದೆ**
> **ರಾಹುಲ್ ಗಾಂಧಿ,** ಕಾಂಗ್ರೆಸ್ ನಾಯಕ

> **ಮೋದಿ ಹೇಡಿ. ತನ್ನ ನೀತಿ ಸಮರ್ಥಿಸಿಕೊಳ್ಳಲು ಭಯಪಡುವ ಅವರು ಸಂಸತ್‌ಗೆ ಹಾಜರಾಗುತ್ತಿಲ್ಲ. ನಮಗೆ, ಯುವಕರಿಗೆ ಹೆದರುತ್ತಿದ್ದಾರೆ.**
> **ಮಲ್ಲಿಕಾರ್ಜುನ ಖರ್ಗೆ**, ಎಐಸಿಸಿ ಅಧ್ಯಕ್ಷ

ಕ್ಷಮೆಯಾಚನೆಗೆ ಕಾಂಗ್ರೆಸ್ ಪಟ್ಟು

ಗೊಗೊಯಿ

ಗುವಾಹಟಿ: ಅಸ್ಸಾಂ ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ಗೌರವ್ ಗೊಗೊಯಿ ವಿರುದ್ಧ ಬಿಜೆಪಿಯು ‘ಪಾಕಿಸ್ತಾನ ನಂಟಿನ’ ಆರೋಪ ಹೊರಿಸಿದ ಬೆನ್ನಲ್ಲೇ, ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರು ಗೊಗೊಯಿ ಅವರನ್ನು ಮಂಗಳವಾರ ಭಾರತ-ಫಿಲಿಪ್ಪೀನ್ಸ್ ಫ್ರೆಂಡ್‌ಶಿಪ್ ಗ್ರೂಪ್‌ನ ಮುಖ್ಯಸ್ಥರನ್ನಾಗಿ ನೇಮಕ ಮಾಡಿದ್ದಾರೆ.

ಗೊಗೊಯಿ ಮತ್ತು ಕುಟುಂಬದ ವಿರುದ್ಧ ಪಾಕಿಸ್ತಾನ ನಂಟು ಆರೋಪಕ್ಕೆ ಸಂಬಂಧಿಸಿದಂತೆ ಬಿಜೆಪಿ ಮತ್ತು ಅಸ್ಸಾಂ ಮುಖ್ಯಮಂತ್ರಿ ಹಿಮಾಂತ ಬಿಸ್ವಾ ಶರ್ಮಾ ಅವರು ಕ್ಷಮೆಯಾಚಿಸಬೇಕು ಎಂದು ಕಾಂಗ್ರೆಸ್ ಒತ್ತಾಯಿಸಿದೆ.

‘ವಿವಿಧ ದೇಶಗಳೊಂದಿಗಿನ ರಾಜತಾಂತ್ರಿಕ ಸಂಬಂಧಗಳನ್ನು ಉತ್ತಮ ಪಡಿಸಲು ಓಂ ಬಿರ್ಲಾ ಅವರು ಮಂಗಳವಾರ ಸಂಸತ್ ಸದಸ್ಯರನ್ನು ಒಳಗೊಂಡ ಹಲವು ಸಂಸದೀಯ ಗುಂಪುಗಳನ್ನು ರಚಿಸಿದ್ದಾರೆ. ಗೌರವ್ ಗೊಗೊಯಿ ಅವರ ನೇಮಕವು ಅಸ್ಸಾಂನಲ್ಲಿ ಏಪ್ರಿಲ್ ತಿಂಗಳಿನಲ್ಲಿ ನಡೆಯಲಿರುವ ವಿಧಾನಸಭೆ ಚುನಾವಣೆಯನ್ನೂ ಗಮನದಲ್ಲಿ ಇಟ್ಟುಕೊಂಡು ನಡೆದಿದೆ ಎಂದು ಮೂಲಗಳು ತಿಳಿಸಿವೆ.

‘ಗೊಗೊಯಿ ಅವರಿಗೆ ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಇರುವ ವಿಶ್ವಾಸಾರ್ಹತೆಯನ್ನು ಅವರ ನೇಮಕವು ದೃಢಪಡಿಸುತ್ತದೆ ಎಂದು ಅಸ್ಸಾಂನ ಕಾಂಗ್ರೆಸ್ ಮುಖಂಡ ದೇಬಬ್ರತ ಸೈಕಿಯಾ ಹೇಳಿದ್ದಾರೆ. ಬಿಜೆಪಿಯ ಸುಳ್ಳಿನ ರಾಜಕೀಯಕ್ಕೆ ಸ್ಪೀಕರ್ ಸ್ಪಷ್ಟವಾದ ಉತ್ತರ ರವಾನಿಸಿದ್ದಾರೆ. ಬಿಜೆಪಿಯು ತನ್ನ ಆಧಾರ ರಹಿತ ಆರೋಪಕ್ಕೆ ಗೊಗೊಯಿ ಮತ್ತು ಅವರ ಪತ್ನಿಯ ಬೇಷರತ್ ಕ್ಷಮೆಯಾಚನೆ ಮಾಡಬೇಕು ಎಂದು ಅವರು ಒತ್ತಾಯಿಸಿದ್ದಾರೆ.

‘ಕಲಬೆರಕೆ ತುಪ್ಪ ಸಂಘಟಿತ ಅಪರಾಧ’: ಚಂದ್ರಬಾಬು

ಅಮರಾವತಿ (ಪಿಟಿಐ): ‘ಹಿಂದಿನ ವೈಎಸ್‌ಆರ್‌ಸಿಪಿ ಅವಧಿಯಲ್ಲಿ ಸುಮಾರು 60 ಲಕ್ಷ ಕೆ.ಜಿಯಷ್ಟು ಕಲಬೆರಕೆ ತುಪ್ಪ ಬಳಸಿ 20 ಕೋಟಿಗಿಂತಲೂ ಹೆಚ್ಚಿನ ಲಡ್ಡು ಪ್ರಸಾದ ತಯಾರಿಸಲಾಗಿದ್ದು, ಇದೊಂದು ಸಂಘಟಿತ ಅಪರಾಧ’ ಎಂದು ಆಂಧ್ರ ಪ್ರದೇಶದ ಮುಖ್ಯಮಂತ್ರಿ ಎನ್. ಚಂದ್ರಬಾಬು ನಾಯ್ಡು ಹೇಳಿದರು.

ಕಲಬೆರಕೆ ತುಪ್ಪಕ್ಕೆ ಸಂಬಂಧಿಸಿದಂತೆ ವಿಧಾನಸಭೆಯಲ್ಲಿ ಮಂಗಳವಾರ ನಡೆದ ವಿಶೇಷ ಸಭೆಯಲ್ಲಿ ಮಾತನಾಡಿದ ಅವರು, ‘ಕಲಬೆರಕೆ ತುಪ್ಪದ ಹಿಂದಿನ ಅಪರಾಧಿಗಳ ಕೂಟವು ವೆಂಕಟೇಶ್ವರ ಸ್ವಾಮಿಯ ಪ್ರಸಾದವನ್ನೇ ಅಪವಿತ್ರ ಗೊಳಿಸಿದೆ’ ಎಂದು ಆರೋಪಿಸಿದರು.

2019ರಿಂದ 2024ರ ಅವಧಿಯಲ್ಲಿ ಟಿಟಿಡಿಗೆ ಸುಮಾರು 59.71 ಲಕ್ಷ ಕೆ.ಜಿ. ಯಷ್ಟು ಕಲಬೆರಕೆ ತುಪ್ಪ ಪೂರೈಕೆ ಆಗಿರುವುದು ಪರಿಶೀಲನೆಯಲ್ಲಿ ದೃಢಪಟ್ಟಿದೆ. ತಿರುಮಲ ತಿರುಪತಿ ದೇವಸ್ಥಾನದ ಆಡಳಿತದ ಜವಾಬ್ದಾರಿ ಹೊಂದಿರುವ ವ್ಯಕ್ತಿಯು ಕಲಬೆರಕೆ ತುಪ್ಪವನ್ನು ಸಂಗ್ರಹಿಸಿಟ್ಟುಕೊಳ್ಳಲು ಸುಮಾರು ₹234.51 ಕೋಟಿ ಖರ್ಚು ಮಾಡಿರುವ ಅಂಶವೂ ತನಿಖೆಯಲ್ಲಿ ಬಹಿರಂಗಗೊಂಡಿದೆ. ಅಪರಾಧಿಗಳು ಪ್ರಸಾದದ ಹೆಸರಿನಲ್ಲಿ ‘ಅಪವಿತ್ರ ಸಂಪ್ರದಾಯ’ವನ್ನೇ ಆರಂಭಿಸಿದ್ದರು ಎಂದರು.

‘ರಾಷ್ಟ್ರೀಯ ಡೇರಿ ಅಭಿವೃದ್ಧಿ ಮಂಡಳಿ (ಎನ್‌ಡಿಡಿಬಿ) ನಡೆಸಿದ ಪರೀಕ್ಷೆಯಲ್ಲಿ ಲಡ್ಡು ಪ್ರಸಾದ ತಯಾರಿಕೆಗೆ ಬಳಸಿರುವುದು ಕಲಬೆರಕೆ ತುಪ್ಪ ಎನ್ನುವುದು ದೃಢಪಟ್ಟಿದೆ. ಈ ವರದಿ ಬಂದ ನಂತರವೇ ತುಪ್ಪದಲ್ಲಿ ಪ್ರಾಣಿಗಳ ಕೊಬ್ಬಿನ ಅಂಶವಿದೆ ಎಂದು ಮಾತನಾಡಿದ್ದೇನೆ’ ಎಂದು ಚಂದ್ರಬಾಬು ನಾಯ್ಡು ಹೇಳಿದರು.

ಶೀಘ್ರ ಹೊಸ ಪಕ್ಷ: ಶಶಿಕಲಾ

ರಾಮನಾಥಪುರ(ತಮಿಳುನಾಡು)(ಪಿಟಿಐ): ಹೊಸ ರಾಜಕೀಯ ಪಕ್ಷವನ್ನು ಸ್ಥಾಪಿಸಲಾಗುವುದು ಹಾಗೂ ಪಕ್ಷದ ಹೆಸರನ್ನು ಶೀಘ್ರವೇ ಪ್ರಕಟಿಸಲಾಗುವುದು ಎಂದು, ಎಐಎಡಿಎಂಕೆ ಪರಮೋಚ್ಚ ನಾಯಕಿಯಾಗಿದ್ದ ಜೆ.ಜಯಲಲಿತಾ ಅವರ ಆಪ್ತೆಯಾದ ವಿ.ಕೆ.ಶಶಿಕಲಾ ಅವರು ಮಂಗಳವಾರ ಘೋಷಿಸಿದ್ದಾರೆ.

ಸಮೀಪದ ಕಮುದಿಯಲ್ಲಿ ಹಮ್ಮಿಕೊಂಡಿದ್ದ ಜಯಲಲಿತಾ ಅವರ ಜನ್ಮದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ‘ರಾಜ್ಯ ರಾಜಕೀಯದಲ್ಲಿ ನಾವು ಹೊಸ ಅಧ್ಯಾಯ ಆರಂಭಿಸಲಿದ್ದೇವೆ’ ಎಂದರು.

‘ಹೊಸ ಪಕ್ಷದ ಹೆಸರನ್ನು ಶೀಘ್ರವೇ ಘೋಷಿಸಲಾಗುವುದು. ಈ ನಿರ್ಧಾರದಲ್ಲಿ ಯಾವುದೇ ಬದಲಾವಣೆ ಇಲ್ಲ. ನಮ್ಮ ವಿರೋಧಿಗಳನ್ನು ಹಾಗೂ ದ್ರೋಹ ಬಗೆದವರನ್ನು ಸೋಲಿಸುವುದೇ ನೂತನ ಪಕ್ಷದ ಗುರಿ’ ಎಂದು ಹೇಳಿದರು.

ಇದರೊಂದಿಗೆ, ಬರುವ ಏಪ್ರಿಲ್‌ನಲ್ಲಿ ನಡೆಯಲಿರುವ ರಾಜ್ಯ ವಿಧಾನಸಭೆ ಚುನಾವಣೆಯಲ್ಲಿ ಚತುಷ್ಕೋನ ಸ್ಪರ್ಧೆ ಸಾಧ್ಯತೆ ಹೆಚ್ಚಾಗಿದೆ. ಡಿಎಂಕೆ ನೇತೃತ್ವದ ‘ಜಾತ್ಯತೀತ ಪ್ರಗತಿಪರ ಮೈತ್ರಿಕೂಟ’, ಎಐಎಡಿಎಂಕೆ ನೇತೃತ್ವದ ಎನ್‌ಡಿಎ, ನಟ ವಿಜಯ್ ಅವರ ಟಿವಿಕೆ ಪಕ್ಷವಲ್ಲದೇ, ಶಶಿಕಲಾ ಅವರ ನೂತನ ಪಕ್ಷದಿಂದಾಗಿ ಈ ಚತುಷ್ಕೋನ ಸ್ಪರ್ಧೆ ಏರ್ಪಡಲಿದೆ.

ಅನಾವರಣ: ಉದ್ದೇಶಿತ ರಾಜಕೀಯ ಪಕ್ಷದ ಬಾವುಟವನ್ನು ಶಶಿಕಲಾ ಅವರು ಇದೇ ವೇಳೆ ಅನಾವರಣಗೊಳಿಸಿದರು. ದ್ರಾವಿಡ ನಾಯಕರಾದ ಸಿ.ಎನ್.ಅಣ್ಣಾದೊರೈ, ಎಐಎಡಿಎಂಕೆ ಸಂಸ್ಥಾಪಕ ಎಂ.ಜಿ.ರಾಮಚಂದ್ರನ್ ಹಾಗೂ ಜಯಲಲಿತಾ ಅವರ ಚಿತ್ರಗಳನ್ನು ಈ ಬಾವುಟ ಒಳಗೊಂಡಿದೆ. ಮೇಲ್ಭಾಗದಲ್ಲಿ ಕಪ್ಪು, ಮಧ್ಯದಲ್ಲಿ ಬಿಳಿ ಹಾಗೂ ಅದರ ಕೆಳಗೆ ಕೆಂಪು ಬಣ್ಣ ಹೊಂದಿದೆ.

‘ಕೇರಳಂ’ ಹೆಸರಿಗೆ ಸಂಪುಟ ಒಪ್ಪಿಗೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೇರಳ ರಾಜ್ಯದ ಹೆಸರನ್ನು ‘ಕೇರಳಂ’ ಎಂದು ಬದಲಾಯಿಸಲು ಕೇಂದ್ರ ಸಂಪುಟ ಮಂಗಳವಾರ ಒಪ್ಪಿಗೆ ನೀಡಿದೆ.

ಕೇರಳದ ಹೆಸರನ್ನು ಅಧಿಕೃತ ವಾಗಿ ‘ಕೇರಳಂ’ ಎಂದು ಬದಲಾಯಿಸುವಂತೆ ಕೇಂದ್ರವನ್ನು ಒತ್ತಾಯಿಸುವ ನಿರ್ಣಯ ವನ್ನು ಕೇರಳ ವಿಧಾನಸಭೆಯು 2023ರ ಆಗಸ್ಟ್ 9ರಂದು ಅಂಗೀಕರಿಸಿತ್ತು.

‘ಭಾಷೆಗಳ ಆಧಾರದಲ್ಲಿ 1956ರ ನ.1ರಂದು ರಾಜ್ಯಗಳನ್ನು ರಚಿಸಲಾಗಿತ್ತು. ಕೇರಳ ಪಿರವಿ ದಿನವನ್ನೂ ನ.1 ರಂದು ಆಚರಿಸಲಾಗುತ್ತದೆ. ರಾಜ್ಯವನ್ನು ಮಲಯಾಳ ಭಾಷೆಯಲ್ಲಿ ‘ಕೇರಳಂ’ ಎಂದೇ ಕರೆಯಲಾಗುತ್ತಿದೆ. ಆದರೆ, ಇತರ ಭಾಷೆಗಳಲ್ಲಿ ರಾಜ್ಯದ ಹೆಸರು ಇನ್ನೂ ಕೇರಳವಾಗಿದೆ. ಸಂವಿಧಾನದ 3ನೇ ವಿಧಿದಡಿ ‘ಕೇರಳಂ’ ಎಂದು ತಿದ್ದುಪಡಿ ಮಾಡಲು ಮತ್ತು ಸಂವಿಧಾನದ 8ನೇ ವಿಧಿಯಡಿದಲ್ಲಿ ಉಲ್ಲೇಖಿಸಿರುವ ಎಲ್ಲ ಭಾಷೆಗಳಲ್ಲಿ ‘ಕೇರಳಂ’ ಎಂದು ಮರು ನಾಮಕರಣ ಮಾಡಲು ತಕ್ಷಣ ಕ್ರಮ ಕೈಗೊಳ್ಳುವಂತೆ ವಿಧಾನಸಭೆ ಸರ್ವಾನುಮತದಿಂದ ಕೇಂದ್ರ ಸರ್ಕಾರ ವನ್ನು ಕೋರುತ್ತದೆ’ ಎಂದು ನಿರ್ಣಯ ತೆಗೆದುಕೊಂಡಿತ್ತು.

ಮೊದಲ ಬಾರಿ ಕಳುಹಿಸಿದ್ದ ನಿರ್ಣಯ ವನ್ನು ಪರಿಶೀಲಿಸಿದ್ದ ಕೇಂದ್ರ ಗೃಹ ಸಚಿವಾಲಯವು ಕೆಲ ತಾಂತ್ರಿಕ ಬದಲಾವಣೆ ಮಾಡುವಂತೆ ಹೇಳಿತ್ತು. ಹೀಗಾಗಿ, ಕೇರಳ ವಿಧಾನಸಭೆಯು 2024ರ ಜೂನ್ 24ರಂದು ಮತ್ತೊಮ್ಮೆ ನಿರ್ಣಯ ಅಂಗೀಕರಿಸಿತ್ತು.

ಮುಂದಿನ ಪ್ರಕ್ರಿಯೆ ಏನು?

‘ಕೇರಳ (ಹೆಸರು ಬದಲಾವಣೆ) ಮಸೂದೆ– 2026‘ಯನ್ನು ರಾಷ್ಟ್ರಪತಿ ಅವರು ಸಂವಿಧಾನದ 3ನೇ ವಿಧಿ ಅಡಿಯಲ್ಲಿ ಅಭಿಪ್ರಾಯ ವ್ಯಕ್ತಪಡಿಸಲು ಕೇರಳ ವಿಧಾನಸಭೆಗೆ ಕಳುಹಿಸುತ್ತಾರೆ. ವಿಧಾನಸಭೆಯ ಅಭಿಪ್ರಾಯ ಸ್ವೀಕರಿಸಿದ ಬಳಿಕ ಕೇಂದ್ರ ಸರ್ಕಾರವು ಮುಂದಿನ ಕ್ರಮ ಕೈಗೊಳ್ಳುತ್ತದೆ. ಮಸೂದೆಯನ್ನು ಸಂಸತ್ತಿನ ಉಭಯ ಸದನಗಳಲ್ಲಿ ಮಂಡಿಸಲು ರಾಷ್ಟ್ರಪತಿಗಳ ಶಿಫಾರಸನ್ನು ಪಡೆಯಲಾಗುತ್ತದೆ.

ಈ ಹಿಂದೆ ಹೆಸರು ಬದಲಾವಣೆ

ಈ ಹಿಂದೆ ಎರಡು ರಾಜ್ಯಗಳ ಹೆಸರನ್ನು ಬದಲಾಯಿಸಲಾಗಿತ್ತು. ಕ್ರಮವಾಗಿ ಉತ್ತರಾಂಚಲ, ಒರಿಸ್ಸಾ ರಾಜ್ಯಗಳ ಹೆಸರು ಉತ್ತರಾಖಂಡ ಮತ್ತು ಒಡಿಶಾ ಎಂದು ಬದಲಾಗಿತ್ತು. ಕೇಂದ್ರಾಡಳಿತ ಪ್ರದೇಶ ಪಾಂಡಿಚೇರಿಯ ಹೆಸರನ್ನು ಪುದುಚೇರಿ ಎಂದು ಬದಲಾಯಿಸಲಾಗಿತ್ತು.

ಪಶ್ಚಿಮ ಬಂಗಾಳ ಬೇಡಿಕೆಗಿಲ್ಲ ಮನ್ನಣೆ

ಕೇರಳ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರ ಒಪ್ಪಿಕೊಂಡಿದ್ದರೂ, ಪಶ್ಚಿಮ ಬಂಗಾಳದ ಬೇಡಿಕೆಗೆ ಈವರೆಗೆ ಮನ್ನಣೆ ನೀಡಿಲ್ಲ.

ರಾಜ್ಯದ ಹೆಸರನ್ನು ಬಂಗಾಳಿಯಲ್ಲಿ 'ಬಾಂಗ್ಲಾ', ಇಂಗ್ಲಿಷ್‌ನಲ್ಲಿ 'ಬಂಗಾಳ' ಮತ್ತು ಹಿಂದಿಯಲ್ಲಿ 'ಬಂಗಾಳಿ' ಎಂದು ಬದಲಾಯಿಸಬೇಕೆಂಬ ಪಶ್ಚಿಮ ಬಂಗಾಳ ಸರ್ಕಾರ 2018ರಲ್ಲಿ ಬೇಡಿಕೆ ಮುಂದಿಟ್ಟಿತ್ತು. ಆದರೆ, ವಿವಿಧ ಭಾಷೆಗಳಲ್ಲಿ ಮೂರು ಹೆಸರುಗಳನ್ನು ಹೊಂದುವುದನ್ನು ಸರಿಯಲ್ಲ ಎಂಬ ಕಾರಣಕ್ಕೆ ಕೇಂದ್ರ ಸರ್ಕಾರವು ಈ ಪ್ರಸ್ತಾವವನ್ನು ಅಂಗೀಕರಿಸಿಲ್ಲ.

ಕರಾವಳಿ ಗಸ್ತು ಪಡೆಯಿಂದ ಏಳು ಮಂದಿಯ ರಕ್ಷಣೆ

ಸಮುದ್ರದಲ್ಲಿ ಹೆಲಿಕಾಪ್ಟರ್ ಪತನ

ಸಮುದ್ರದಲ್ಲಿ ಪತನಗೊಂಡ ಹೆಲಿಕಾಪ್ಟರ್ ಅನ್ನು ಹೊರಗೆ ತರಲು ಕಾರ್ಯಾಚರಣೆ ನಡೆಸಿದ ಪೊಲೀಸರು — ಪಿಟಿಐ ಚಿತ್ರ

ಶ್ರೀ ವಿಜಯ ಪುರಂ (ಪಿಟಿಐ): ಉತ್ತರ ಹಾಗೂ ಮಧ್ಯ ಅಂಡಮಾನ್ ಜಿಲ್ಲೆಯ ರಂಗತ್‌ನಿಂದ ಹೊರಟಿದ್ದ ಪವನ್ ಹಂಸ್ ಸಂಸ್ಥೆಯ ಹೆಲಿಕಾಪ್ಟರ್‌ವೊಂದು ಮಂಗಳವಾರ ಸಮುದ್ರದಲ್ಲಿ ಪತನಗೊಂಡಿದ್ದು, ಹೆಲಿಕಾಪ್ಟರ್‌ನಲ್ಲಿದ್ದ 7 ಮಂದಿಯನ್ನು ರಕ್ಷಿಸಲಾಗಿದೆ.

ಮಾಯಾಬಂದರ್‌ನಲ್ಲಿ ಹೆಲಿಕಾಪ್ಟರ್ ಇಳಿಯಬೇಕಿತ್ತು. ಅದಕ್ಕೂ ಮುನ್ನ ಬೆಳಿಗ್ಗೆ 9.30ರ ಸುಮಾರಿಗೆ ಸಮುದ್ರದ ಮಧ್ಯೆ ಪತನಗೊಂಡಿದೆ ಎಂದು ಅಧಿಕಾರಿಗಳು ತಿಳಿಸಿದರು.

ಹೆಲಿಕಾಪ್ಟರ್‌ನಲ್ಲಿದ್ದ ಇಬ್ಬರು ಸಿಬ್ಬಂದಿ ಮತ್ತು ಐವರು ಪ್ರಯಾಣಿಕರನ್ನು ರಕ್ಷಿಸಿ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದರು.

‘ಹೆಲಿಕಾಪ್ಟರ್‌ನಲ್ಲಿ ತಾಂತ್ರಿಕ ದೋಷ ಉಂಟಾಗಿರಬಹುದು ಮತ್ತು ಪೈಲಟ್ ಸಮುದ್ರದ ಮೇಲೆ ಕ್ರಾಶ್ ಲ್ಯಾಂಡಿಂಗ್ ಮಾಡಿರಬಹುದು ಎಂದು ಪ್ರಾಥಮಿಕ ತನಿಖೆಯಲ್ಲಿ ತಿಳಿದುಬಂದಿದೆ’ ಎಂದು ಹೇಳಿದರು.

‘ಕರಾವಳಿ ಗಸ್ತು ಪಡೆಯ ಕ್ಷಿಪ್ರ ಪ್ರತಿಕ್ರಿಯೆಯಿಂದಾಗಿ ಎಲ್ಲಾ ಪ್ರಯಾಣಿಕರು ಮತ್ತು ಪೈಲಟ್‌ಗಳನ್ನು ರಕ್ಷಿಸಲು ಸಾಧ್ಯವಾಗಿದೆ’ ಎಂದು ಅಂಡಮಾನ್ ಮತ್ತು ನಿಕೋಬಾರ್ ದ್ವೀಪದ ಡಿಜಿಪಿ ಹರಗೋವಿಂದರ್ ಸಿಂಗ್ ಧಾಲೀವಾಲ್ ಅವರು ತಿಳಿಸಿದರು.

ನಾಗ್ಪುರದಲ್ಲಿ ಇಳಿದ ವಿಮಾನ

ನಾಗ್ಪುರ (ಪಿಟಿಐ): ಲಂಡನ್‌ನಿಂದ ಹೈದರಾಬಾದ್‌ಗೆ ಹೊರಟಿದ್ದ ಬ್ರಿಟಿಷ್ ಏರ್‌ವೇಸ್ ವಿಮಾನವು ಪ್ರತಿಕೂಲ ಹವಾಮಾನದ ಕಾರಣದಿಂದ ನಾಗ್ಪುರ ವಿಮಾನ ನಿಲ್ದಾಣದಲ್ಲಿ ಮಂಗಳವಾರ ಇಳಿಯಿತು ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ವಿಮಾನದಲ್ಲಿದ್ದ ಎಲ್ಲ ಪ್ರಯಾಣಿಕರನ್ನು ಕೆಳಗಿಳಿಸಲಾಗಿದೆ. ವಿಮಾನದಲ್ಲಿ ತಾಂತ್ರಿಕ ದೋಷ ಕಾಣಿಸಿಕೊಂಡ ಕಾರಣ ವಿಮಾನವು ನಾಗ್ಪುರ ನಿಲ್ದಾಣದಲ್ಲಿಯೇ ಇದೆ ಎಂದು ಹೇಳಿದರು.

ಅಸ್ಪಷ್ಟ ಗೋಚರತೆ ಮತ್ತು ಪ್ರತಿಕೂಲ ಹವಾಮಾನದಿಂದ ವಿಮಾನವು ಬೆಳಿಗ್ಗೆ 5.30ಕ್ಕೆ ನಾಗ್ಪುರ ವಿಮಾನ ನಿಲ್ದಾಣದಲ್ಲಿ ಇಳಿಯಿತು ಎಂದರು.

ಆಕ್ರಂದನ

ರಾಂಚಿ (ಪಿಟಿಐ): ಏರ್ ಆಂಬುಲೆನ್ಸ್ ದುರಂತದಲ್ಲಿ ಮೃತಪಟ್ಟ ಏಳು ಮಂದಿಯ ಮೃತದೇಹಗಳನ್ನು ಮಂಗಳವಾರ ಅವರವರ ಕುಟುಂಬಗಳಿಗೆ ಹಸ್ತಾಂತರಿಸಲಾಗಿದ್ದು, ಕುಟುಂಬಸ್ಥರ ಆಕ್ರಂದನ ಮುಗಿಲುಮುಟ್ಟಿತ್ತು.

‘ರಾಂಚಿ–ದೆಹಲಿ ವಲಯದಲ್ಲಿ ಏರ್ ಆಂಬುಲೆನ್ಸ್ ಆಗಿ ಕಾರ್ಯಾಚರಿಸುತ್ತಿದ್ದ ರೆಡ್‌ಬರ್ಡ್ ಏರ್‌ವೇಸ್ ಪ್ರೈವೆಟ್ ಲಿಮಿಟೆಡ್ ಕಂಪನಿಯ ‘ಬೀಚ್‌ಕ್ರಾಫ್ಟ್ ಸಿ90’ ವಿಮಾನವು ಜಾರ್ಖಂಡ್‌ನ ಚತ್ರಾ ಜಿಲ್ಲೆಯ ಸಿಮಾರಿಯಾ ಬಳಿ ಸೋಮವಾರ ಸಂಜೆ ಪತನಗೊಂಡಿತ್ತು. ಘಟನೆಯಲ್ಲಿ ಇಬ್ಬರು ಪೈಲಟ್‌ಗಳು ಸೇರಿದಂತೆ ವಿಮಾನದ ಒಳಗಿದ್ದ ಎಲ್ಲಾ ಏಳು ಮಂದಿಯೂ ಮೃತಪಟ್ಟಿದ್ದರು.

ಚತ್ರಾದಲ್ಲಿನ ಸದರ್ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಿದ ಬಳಿಕ ಮೃತದೇಹಗಳನ್ನು ಕುಟುಂಬಗಳಿಗೆ ಹಸ್ತಾಂತರಿಸಲಾಯಿತು.

ಶುಭಂ ಶತಕ; ಜಮ್ಮು–ಕಾಶ್ಮೀರ ಶುಭಾರಂಭ

ರಣಜಿ ಟ್ರೋಫಿ ಫೈನಲ್: ಹಸನ್, ಸಮದ್ ಅರ್ಧಶತಕ • ಪ್ರಸಿದ್ಧ ಕೃಷ್ಣಗೆ ಎರಡು ವಿಕೆಟ್

• ಗಿರೀಶ ದೊಡ್ಡಮನಿ

ಹುಬ್ಬಳ್ಳಿ: ಮೊದಲ ಬಾರಿ ರಣಜಿ ಟ್ರೋಫಿ ಫೈನಲ್ ಪಂದ್ಯ ಕಣ್ತುಂಬಿಕೊಳ್ಳುವ ಹುಬ್ಬಳ್ಳಿಗರ ಉತ್ಸಾಹಕ್ಕೆ ಬಿರುಬಿಸಿಲು ಅಡ್ಡಿಯಾಗಲಿಲ್ಲ. ಪ್ರಥಮ ಬಾರಿಗೆ ಪ್ರಶಸ್ತಿ ಸುತ್ತು ಪ್ರವೇಶಿಸಿರುವ ಜಮ್ಮು–ಕಾಶ್ಮೀರದ ಆಟಗಾರರು ಕರ್ನಾಟಕ ಬೌಲರ್‌ಗಳ ದಾಳಿಯ 'ಕಾವು' ಮೀರಿ ನಿಂತರು.

ಶುಭಂ ಪುಂದಿರ ಅವರ ಅಮೋಘ ಶತಕದ ಬಲದಿಂದ ಕಣಿವೆ ರಾಜ್ಯದ ತಂಡವು ಮಂಗಳವಾರ ಶುರುವಾದ ಫೈನಲ್ ಪಂದ್ಯದಲ್ಲಿ ಶುಭಾರಂಭ ಮಾಡಿತು. ದಿನದಾಟದ ಮುಕ್ತಾಯಕ್ಕೆ 87 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 284 ರನ್ ಗಳಿಸಿತು. ಆ ಮೂಲಕ ದೊಡ್ಡ ಮೊತ್ತ ಕಲೆಹಾಕಲು ಅಡಿಪಾಯ ನಿರ್ಮಿಸಿಕೊಂಡಿತು. ಕ್ರೀಸ್‌ನಲ್ಲಿ ಎಡಗೈ ಬ್ಯಾಟರ್ ಶುಭಂ (ಬ್ಯಾಟಿಂಗ್ 117; 221ಎ) ಮತ್ತು ಅಬ್ದುಲ್ ಸಮದ್ (ಬ್ಯಾಟಿಂಗ್ 52; 67ಎ) ಕ್ರೀಸ್‌ನಲ್ಲಿದ್ದಾರೆ. ಮುರಿಯದ ಮೂರನೇ ವಿಕೆಟ್ ಜೊತೆಯಾಟದಲ್ಲಿ 105 ರನ್ ಸೇರಿಸಿದ್ದಾರೆ.

ಅನುಭವಿ ವೇಗಿ ಪ್ರಸಿದ್ಧ ಕೃಷ್ಣ (16–5–36–2) ಅವರನ್ನು ಬಿಟ್ಟರೆ ಉಳಿದ ಬೌಲರ್‌ಗಳು ವಿಕೆಟ್ ಗಳಿಸುವಲ್ಲಿ ಯಶಸ್ವಿಯಾಗಲಿಲ್ಲ.

ಟಾಸ್ ಗೆದ್ದ ಪ್ರವಾಸಿ ಬಳಗವು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ಆರಂಭಿಕ ಜೋಡಿ ಕಮ್ರನ್ ಇಕ್ಬಾಲ್ ಮತ್ತು ಯಾವೆರ್ ಹಸನ್ ಅವರಿಬ್ಬರೂ ಮೊದಲ ಹತ್ತು ಓವರ್‌ಗಳಲ್ಲಿ ಎಚ್ಚರಿಕೆಯಿಂದ ಆಡಿದರು. ಈ ಅವಧಿಯಲ್ಲಿ ಕೇವಲ 18 ರನ್‌ಗಳು ಸೇರಿದ್ದವು.

ಇದೇ ಸಂದರ್ಭದಲ್ಲಿ ಪ್ರಸಿದ್ಧ ಹಾಕಿದ ಎಸೆತವನ್ನು ಪುಷ್ ಮಾಡಲು ಯತ್ನಿಸಿದ ಕಮ್ರನ್ (6 ರನ್) ಮೊದಲ ಸ್ಲಿಪ್‌ನಲ್ಲಿದ್ದ ಕೆ.ಎಲ್. ರಾಹುಲ್ ಅವರಿಗೆ ಕ್ಯಾಚ್ ಕೊಟ್ಟರು. ಆಗ ಕ್ರೀಸ್‌ಗೆ ಬಂದ 27 ವರ್ಷದ ಶುಭಂ ದಿನವಿಡೀ ತಮ್ಮ ತಾಳ್ಮೆ ಹಾಗೂ ಏಕಾಗ್ರ ಚಿತ್ತದ ಆಟದಿಂದ ಬೌಲರ್‌ಗಳನ್ನು ಕಾಡಿದರು. ಎರಡು ದೊಡ್ಡ ಜೊತೆಯಾಟಗಳಿಗೆ ಕಾರಣರಾದರು.

ಎರಡನೇ ವಿಕೆಟ್ ಜೊತೆಯಾಟದಲ್ಲಿ ಹಸನ್ (88;150ಎ) ಜೊತೆಗೆ 139 ರನ್ (244 ಎಸೆತ) ಸೇರಿಸಿದರು. ಊಟದ ವಿರಾಮದ ನಂತರದ 17ನೇ ಓವರ್‌ನಲ್ಲಿ ಪ್ರಸಿದ್ಧ ಹಾಕಿದ ಎಸೆತವನ್ನು ಆಡಲು ಹಸನ್ ಪ್ರಯತ್ನಿಸಿದರು. ಚೆಂಡು ಅವರ ಬ್ಯಾಟ್ ಅಂಚು ಸವರಿ ಸ್ಲಿಪ್‌ನಲ್ಲಿದ್ದ ರಾಹುಲ್ ಅವರಿಗೆ ಕ್ಯಾಚ್ ಆಯಿತು. ಕೆಳಮಟ್ಟದಲ್ಲಿ ಸಾಗಿಬಂದ ಚೆಂಡನ್ನು ಚಾಕಚಕ್ಯತೆಯಿಂದ ರಾಹುಲ್ ಬೊಗಸೆ ತುಂಬಿಕೊಂಡಿದ್ದು ಬ್ಯಾಟರ್ ಪಡೆದ ಯುಡಿಆರ್‌ಎಸ್ (ಅಂಪೈರ್ ತೀರ್ಪು ಮರುಪರಿಶೀಲನಾ ವ್ಯವಸ್ಥೆ) ಮನವಿಯಲ್ಲಿ ಸ್ಪಷ್ಟವಾಗಿತ್ತು.

ಮೂಲತಃ ಡೆಹ್ರಾಡೂನ್‌ನವರಾದ ಶುಭಂ ಕ್ರೀಸ್‌ಗೆ ಬಂದ ನಾಯಕ ಪಾರಸ್ ಡೋಗ್ರಾ ಅವರೊಂದಿಗೂ ಉತ್ತಮ ಜೊತೆಯಾಟವಾಡುವ ಲಕ್ಷಣ ತೋರಿದರು. ಡೋಗ್ರಾ ಕೂಡ ನಿಧಾನವಾಗಿಯೇ ರನ್ ಗಳಿಸಿದರು.

ಈ ಅವಧಿಯಲ್ಲಿ ಪ್ರಸಿದ್ಧ, ವೈಶಾಖ, ವಿದ್ಯಾಧರ್ ಅವರ ದಾಳಿಯು ಚುರುಕಾಗಿತ್ತು. ಸ್ಪಿನ್ನರ್ ಶ್ರೇಯಸ್ ಗೋಪಾಲ್ ಮತ್ತು ಶಿಖರ್ ಶೆಟ್ಟಿಯವರ ಪ್ರಯತ್ನಗಳಿಗೆ ತಕ್ಕ ಫಲ ಸಿಗಲಿಲ್ಲ. ಡೋಗ್ರಾ ಅವರ ಕ್ಯಾಚ್ ಕೈಚೆಲ್ಲಿ ಅನೀಶ್ ಒಂದು ಜೀವದಾನ ಕೂಡ ನೀಡಿದರು.

ಈ ನಡುವೆ ಪ್ರಸಿದ್ಧ ಹಾಕಿದ ಬೌನ್ಸರ್ ಡೋಗ್ರಾ ಅವರ ಭುಜಕ್ಕೆ ಬಡಿಯಿತು. ಕೆಲವು ಓವರ್‌ಗಳ ನಂತರ ವೈಶಾಖ ಬೌಲಿಂಗ್‌ನಲ್ಲಿ ಡೋಗ್ರಾ ಬಲಗೈ ಹೆಬ್ಬೆರಳಿಗೆ ಚೆಂಡು ಅಪ್ಪಳಿಸಿ ನೋವುಂಡರು. ಕೈಗವಸು ಹಾಕಿಕೊಳ್ಳಲೂ ಕಷ್ಟಪಟ್ಟರು. ಅದರಿಂದಾಗಿ ಅವರು ಪೆವಿಲಿಯನ್‌ಗೆ ಮರಳಿದರು.

ಇದೆಲ್ಲದರ ನಡುವೆ ತಣ್ಣಗೆ ಆಡುತ್ತಿದ್ದ ಶುಭಂ ಪ್ರಥಮ ದರ್ಜೆ ಕ್ರಿಕೆಟ್‌ನಲ್ಲಿ ನಾಲ್ಕನೇ ಹಾಗೂ ಈ ಋತುವಿನಲ್ಲಿ ಎರಡನೇ ಶತಕ ದಾಖಲಿಸಿದರು. ಶಿಖರ್ ಹಾಕಿದ 70ನೇ ಓವರ್‌ನಲ್ಲಿ ಸಿಕ್ಸರ್ ಎತ್ತಿದ ಅವರು ನೂರರ ಗಡಿ ದಾಟಿದರು. ಇನ್ನೊಂದೆಡೆ ಸಮದ್ ತಮ್ಮ ಎಂದಿನ ಶೈಲಿಯ ಬೀಸಾಟವಾಡಿದರು. 62 ಎಸೆತಗಳಲ್ಲಿ ಅರ್ಧಶತಕ ಹೊಡೆದರು. ಐದು ಬೌಂಡರಿ ಮತ್ತು ಒಂದು ಸಿಕ್ಸರ್ ಹೊಡೆದರು. ಇದರಿಂದಾಗಿ ತಂಡದ ಮೊತ್ತ ವೇಗ ಪಡೆಯಿತು.

ಜಮ್ಮು ಮತ್ತು ಕಾಶ್ಮೀರ ತಂಡದ ಶುಭಂ ಪುಂದಿರ (ಬಲ) ಶತಕ ಗಳಿಸಿ ಸಂಭ್ರಮಿಸಿದರು. ಅಬ್ದುಲ್ ಸಮದ್ ಇದ್ದಾರೆ
ಚಿತ್ರ: ಗೋವಿಂದರಾಜ ಜವಳಿ

ಸ್ಕೋರ್ ಕಾರ್ಡ್

ಜಮ್ಮು ಮತ್ತು ಕಾಶ್ಮೀರ: 2 ವಿಕೆಟ್‌ಗೆ 284 (87 ಓವರ್‌ಗಳಲ್ಲಿ)
ಕಮ್ರನ್ ಸಿ ರಾಹುಲ್ ಬಿ ಪ್ರಸಿದ್ಧ 6 (36ಎ, 4x1)
ಹಸನ್ ಸಿ ರಾಹುಲ್ ಬಿ ಪ್ರಸಿದ್ಧ 88 (150ಎ, 4x13)
ಶುಭಂ ಬ್ಯಾಟಿಂಗ್ 117 (221ಎ, 4x12, 6x2)
ಪಾರಸ್ ಗಾಯಗೊಂಡು ನಿವೃತ್ತಿ 9 (48ಎ, 4x1)
ಸಮದ್ ಬ್ಯಾಟಿಂಗ್ 52 (67ಎ, 4x5, 6x1)
ಇತರೆ: 12 (ಬೈ 2, ಲೆಗ್‌ಬೈ 8, ವೈಡ್ 2)
ವಿಕೆಟ್ ಪತನ: 1–18 (ಕಮ್ರನ್ ಇಕ್ಬಾಲ್; 10.2), 2–157 (ಯಾವೆರ್ ಹಸನ್; 50.6)
ಬೌಲಿಂಗ್: ವಿದ್ಯಾಧರ್ ಪಾಟೀಲ 16–0–66–0, ವೈಶಾಖ ವಿಜಯಕುಮಾರ್ 18–6–25–0, ಪ್ರಸಿದ್ಧ ಕೃಷ್ಣ 16–5–36–2, ಶ್ರೇಯಸ್ ಗೋಪಾಲ್ 17–1–79–0, ಶಿಖರ್ ಶೆಟ್ಟಿ 20–0–68–0

ಟಿಕೆಟ್ ಖರೀದಿಸಿ ಬಂದ ಪ್ರೇಕ್ಷಕರು

ಮೊದಲ ಬಾರಿ ರಣಜಿ ಟ್ರೋಫಿ ಫೈನಲ್ ಪಂದ್ಯಕ್ಕೆ ಆತಿಥ್ಯ ವಹಿಸಿರುವ ಹುಬ್ಬಳ್ಳಿಯ ಕೆಎಸ್‌ಸಿಎ ಮೈದಾನದಲ್ಲಿ ಮಂಗಳವಾರ ಐದು ಸಾವಿರ ಪ್ರೇಕ್ಷಕರು ಸೇರಿದ್ದರು. ₹100 ಮತ್ತು ₹200 ದರದ ಟಿಕೆಟ್‌ಗಳನ್ನು ಖರೀದಿಸಿ ಪಂದ್ಯ ವೀಕ್ಷಿಸಿದರು.

ಈ ಹಿಂದೆ ಇಲ್ಲಿ ನಡೆದಿದ್ದ ಯಾವುದೇ ರಣಜಿ ಪಂದ್ಯಗಳಿಗೆ ಈ ರೀತಿ ಟಿಕೆಟ್ ನಿಗದಿಪಡಿಸಿರಲಿಲ್ಲ. ಆದರೆ ಮೊದಲ ಸಲ ನಡೆಯುತ್ತಿರುವ ಫೈನಲ್ ಪಂದ್ಯಕ್ಕೆ ಟಿಕೆಟ್ ಮಾಡಿರುವುದರ ಕುರಿತು ಹಲವು ಪ್ರೇಕ್ಷಕರು ಅಚ್ಚರಿ ವ್ಯಕ್ತಪಡಿಸಿದರು.

'ಕರ್ನಾಟಕ ತಂಡದಲ್ಲಿ ಅಂತರರಾಷ್ಟ್ರೀಯ ಆಟಗಾರರು ಇದ್ದಾರೆ. ಅವರನ್ನು ನೋಡಲು ನಾವೆಲ್ಲರೂ ಬಂದಿದ್ದೇವೆ' ಎಂದು ಟಿಕೆಟ್ ಪಡೆಯುವ ಸಾಲಿನಲ್ಲಿದ್ದ ಶಿವಕುಮಾರ್ ಹೇಳಿದರು.

ಪೆವಿಲಿಯನ್‌ಗೆ ಜೋಶಿ ಹೆಸರು

ಪತ್ನಿ ಡಾ. ರವನೀತ್ ಅವರೊಂದಿಗೆ ಸುನಿಲ್ ಜೋಶಿ

• ಸತೀಶ ಬಿ

ಹುಬ್ಬಳ್ಳಿ: ಭಾರತ ಕ್ರಿಕೆಟ್ ತಂಡವನ್ನು ಪ್ರತಿನಿಧಿಸಿದ ಗದುಗಿನ ಸುನಿಲ್ ಜೋಶಿ ಅವರ ವೃತ್ತಿಜೀವನದಲ್ಲಿ ಮಂಗಳವಾರ ಅವಿಸ್ಮರಣೀಯ ದಿನವಾಯಿತು. ರಾಜನಗರದ ಕೆಎಸ್‌ಸಿಎ ಕ್ರೀಡಾಂಗಣದ ಪೆವಿಲಿಯನ್ ಬ್ಲಾಕ್‌ಗೆ ಸುನಿಲ್ ಜೋಶಿ ಅವರ ಹೆಸರು ನಾಮಕರಣ ಮಾಡಲಾಯಿತು. ರಣಜಿ ಫೈನಲ್ ಪಂದ್ಯದ ಊಟದ ವಿರಾಮದ ವೇಳೆ ನಡೆದ ಕಾರ್ಯಕ್ರಮದಲ್ಲಿ ಬಿಸಿಸಿಐ ಅಧ್ಯಕ್ಷ ಮಿಥುನ್ ಮನ್ಹಾಸ್ ಅವರು ನಾಮಫಲಕ ಅನಾವರಣ ಮಾಡಿದರು.

ಈ ವೇಳೆ ಮಾತನಾಡಿದ ಸುನಿಲ್ ಜೋಶಿ ಭಾವುಕರಾದರು. ತಮ್ಮ ತರಬೇತುದಾರರನ್ನು ಸ್ಮರಿಸಿದ ಅವರು, ಗದಗ, ಹುಬ್ಬಳ್ಳಿಯ ಮೈದಾನಗಳಲ್ಲಿ ಆಡಿದ ದಿನಗಳನ್ನು ಮೆಲುಕು ಹಾಕಿದರು.

'ಇಂತಹ ದಿನ ಬರುತ್ತದೆ ಎಂದು ನಾನು ಭಾವಿಸಿರಲಿಲ್ಲ. ಗದಗಿನಿಂದ ಹುಬ್ಬಳ್ಳಿಗೆ ಬಂದ 14 ವರ್ಷದ ಬಾಲಕ ಈ ಮಟ್ಟಕ್ಕೆ ಬರುತ್ತಾನೆ ಎಂದು ನಿರೀಕ್ಷಿಸಿರಲಿಲ್ಲ. ಸಹೋದರ ಅಶೋಕ ನನ್ನ ಮೇಲೆ ನಂಬಿಕೆ ಇಟ್ಟಿದ್ದ. ನನ್ನ ಪತ್ನಿ ಡಾ. ರವನೀತ್ ಜೋಶಿ ಸದಾ ಬೆಂಬಲವಾಗಿದ್ದಾರೆ. ಭಾರತ ತಂಡಕ್ಕೆ ಆಡುವುದಕ್ಕಿಂತ ದೊಡ್ಡ ಖುಷಿ ಬೇರೆ ಇಲ್ಲ' ಎಂದು ಜೋಶಿ ಹೇಳಿದರು.

'ಪೆವಿಲಿಯನ್ ಬ್ಲಾಕ್‌ಗೆ ನನ್ನ ಹೆಸರಿಡಲಾಗಿದೆ. ಅದರಿಂದ ಪ್ರೇರಣೆ ಪಡೆದು ಒಬ್ಬ ಗ್ರಾಮೀಣ ಭಾಗದ ಆಟಗಾರ ಕರ್ನಾಟಕ, ಭಾರತ ತಂಡಕ್ಕೆ ಆಡಿದರೆ ಅದಕ್ಕೆ ಸಾರ್ಥಕತೆ ಬರುತ್ತದೆ' ಎಂದರು.

'1992ರಲ್ಲಿ ಹುಬ್ಬಳ್ಳಿಯಲ್ಲಿ ನಡೆದ ರಣಜಿ ಪಂದ್ಯದಲ್ಲಿ ನಾನು ಪದಾರ್ಪಣೆ ಮಾಡಿದೆ. ಆ ಪಂದ್ಯದಲ್ಲಿ ವೆಂಕಟೇಶ ಪ್ರಸಾದ್ ಅವರೊಂದಿಗೆ ಅಜೇಯ ಜತೆಯಾಟವಾಡಿದ್ದೆ. ಇಂದಿಗೂ ಅವರೊಂದಿಗೆ ಅವಿನಾಭಾವ ಸಂಬಂಧ ಇದೆ' ಎಂದರು.

ಇಂದಿನ ಪಂದ್ಯ

ಶ್ರೀಲಂಕಾ V/s ನ್ಯೂಜಿಲೆಂಡ್
ತಾಣ: ಕೊಲಂಬೊ, ಆರಂಭ: ರಾತ್ರಿ 7
ಲೈವ್: ಸ್ಟಾರ್‌ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊ ಹಾಟ್‌ಸ್ಟಾರ್

ಸಂಕ್ಷಿಪ್ತ ಸುದ್ದಿ

ಲಂಕಾಕ್ಕೆ ಮಾಡು–ಮಡಿ ಪಂದ್ಯ

ಕೊಲಂಬೊ (ಪಿಟಿಐ): ಆತಿಥೇಯ ಶ್ರೀಲಂಕಾ ತಂಡದ ಪಾಲಿಗೆ ಬುಧವಾರ ನ್ಯೂಜಿಲೆಂಡ್ ವಿರುದ್ಧ ನಡೆಯಲಿರುವ ಟಿ20 ವಿಶ್ವಕಪ್ ಸೂಪರ್ ಎಂಟರ ಹಂತದ ಪಂದ್ಯ ಮಾಡು–ಮಡಿ ರೀತಿಯಲ್ಲಿದೆ. ಮಳೆಯ ಸಾಧ್ಯತೆಯಿಲ್ಲದ ಕಾರಣ ಎರಡೂ ತಂಡಗಳು ಈ ಹಂತದಲ್ಲಿ ಮೊದಲ ಗೆಲುವಿನ ಯತ್ನದಲ್ಲಿವೆ.

ನಿಧಾನಗತಿಯ ಬೌಲರ್‌ಗಳೆದುರು ಶ್ರೀಲಂಕಾದ ಬ್ಯಾಟಿಂಗ್ ಸುಧಾರಿಸಿಕೊಳ್ಳಬೇಕಾದ ಅಗತ್ಯವಿದೆ. ಪಾಕಿಸ್ತಾನ ವಿರುದ್ಧ ಸೂಪರ್ 8ರ ಹಂತದ ಮೊದಲ ಪಂದ್ಯದಲ್ಲಿ ಮಳೆಯ ಕಾರಣ ನ್ಯೂಜಿಲೆಂಡ್ ಒಂದು ಪಾಯಿಂಟ್ ಪಡೆದಿತ್ತು.

ಕಿವೀಸ್ ತಂಡದಲ್ಲಿ ನಾಯಕ ಮಿಚೆಲ್ ಸ್ಯಾಂಟ್ನರ್ ಸೇರಿದಂತೆ ಉತ್ತಮ ಸ್ಪಿನ್ನರ್ ಗಳಿದ್ದಾರೆ. ನ್ಯೂಜಿಲೆಂಡ್‌ನ ಆರಂಭ ಆಟಗಾರರಾದ ಫಿನ್ ಅಲೆನ್ ಮತ್ತು ಟಿಮ್ ಸೀಫರ್ಟ್ ಉತ್ತಮ ಲಯದಲ್ಲಿದ್ದು, ಅದನ್ನು ಮುಂದುವರಿಸುವ ತವಕದಲ್ಲಿದ್ದಾರೆ. ರಚಿನ್ ರವೀಂದ್ರ ಅವರೂ ಮತ್ತೊಂದು ಉತ್ತಮ ಇನಿಂಗ್ಸ್ ನಿರೀಕ್ಷೆಯಲ್ಲಿದ್ದಾರೆ.

ಸಚಿನ್‌ಗೆ ಔಟ್ ನೀಡಿದ್ದು ತಪ್ಪು: ವಿಷಾದಿಸಿದ ಬಕ್ನರ್

ನವದೆಹಲಿ (ಪಿಟಿಐ): ಸುಮಾರು 22 ವರ್ಷಗಳ ಹಿಂದೆ ಟೆಸ್ಟ್ ಪಂದ್ಯದಲ್ಲಿ ಭಾರತದ ಕ್ರಿಕೆಟ್ ತಾರೆ ಸಚಿನ್ ತೆಂಡೂಲ್ಕರ್ ಅವರಿಗೆ ಅಂಪೈರ್ ಸ್ಟೀವ್ ಬಕ್ನರ್ ಎಲ್‌ಬಿಡಬ್ಲ್ಯು 'ಔಟ್' ತೀರ್ಪು ನೀಡಿದ್ದರು. ಅದು ಭಾರತದ ಕ್ರಿಕೆಟ್ ಪ್ರೇಮಿಗಳ ಪಾಲಿಗೆ ಕರಾಳ ನೆನಪು. ಅಂದಿನ ಆ ಪ್ರಮಾದದ ತೀರ್ಪಿಗೆ ದಿಗ್ಗಜ ಅಂಪೈರ್ ಬಕ್ನರ್ ಈಗ ವಿಷಾದ ವ್ಯಕ್ತಪಡಿಸಿದ್ದಾರೆ. ತಮ್ಮ ತೀರ್ಪು ತಪ್ಪಾಗಿತ್ತು ಎಂದು ಒಪ್ಪಿಕೊಂಡಿದ್ದಾರೆ.

ಎರಡು ದಶಕಗಳಿಗೂ (1989–2009) ಹೆಚ್ಚು ಸಮಯ ಕಾರ್ಯನಿರ್ವಹಿಸಿದ್ದ ವೆಸ್ಟ್ ಇಂಡೀಸ್‌ನ ಬಕ್ನರ್ ಅವರು ಗೌರವಾನ್ವಿತ ಅಂಪೈರ್‌ಗಳಲ್ಲಿ ಒಬ್ಬರೆನಿಸಿದ್ದಾರೆ. 2009ರಲ್ಲಿ ನಿವೃತ್ತಿ ಪ್ರಕಟಿಸುವ ಮೊದಲು 128 ಟೆಸ್ಟ್ ಪಂದ್ಯಗಳಲ್ಲಿ ಕಾರ್ಯನಿರ್ವಹಿಸಿದ್ದರು.

ಮುಂದುವರಿದ ಭಾರತದ ದುಮ್ಮಾನ

ಹೋಬಾರ್ಟ್ (ಪಿಟಿಐ): ಈ ಬಾರಿಯ ಪ್ರೊ ಲೀಗ್ ಹಾಕಿ ಋತುವಿನಲ್ಲಿ ಭಾರತದ ನಿರಾಶಾದಾಯಕ ನಿರ್ವಹಣೆ ಎಗ್ಗಿಲ್ಲದೇ ಮುಂದುವರಿದಿದೆ. ಸ್ಪೇನ್ ವಿರುದ್ಧ ಮಂಗಳವಾರ ನಡೆದ ಹೋರಾಟದ ಪಂದ್ಯವನ್ನು ನಿಗದಿ ಅವಧಿಯಲ್ಲಿ 1–1 ಡ್ರಾ ಮಾಡಿಕೊಂಡರೂ, ಶೂಟೌಟ್‌ನಲ್ಲಿ 3–4ರಿಂದ ಸೋಲನುಭವಿಸಿತು.

ಭಾರತ ಪಂದ್ಯದ ಕೊನೆಯ ಕ್ಷಣದವರೆಗೆ 1–0 ಮುನ್ನಡೆ ಸಾಧಿಸುವಲ್ಲಿ ಯಶಸ್ವಿಯಾಗಿತ್ತು. 19ನೇ ನಿಮಿಷ ಮಣಿಂದರ್ ಅವರು ನಾಯಕ ಹಾರ್ದಿಕ್ ಸಿಂಗ್ ಒದಗಿಸಿದ ಪಾಸ್‌ನಲ್ಲಿ ಗೋಲು ಗಳಿಸಿ ತಂಡಕ್ಕೆ ಮುನ್ನಡೆ ಒದಗಿಸಿದ್ದರು. ಆದರೆ 59ನೇ ನಿಮಿಷ ಬ್ರೂನೊ ಫಾಂಟ್ ಗೋಲು ಹೊಡೆದು ಸಮಬಲ ಸಾಧಿಸಿದ್ದರಿಂದ ಫಲಿತಾಂಶ ನಿರ್ಧಾರಕ್ಕೆ ಶೂಟೌಟ್ ಅನಿವಾರ್ಯವಾಯಿತು.

ಆದರೆ ಶೂಟೌಟ್‌ನಲ್ಲಿ ಅಭಿಷೇಕ್ ಮತ್ತು ಹಾರ್ದಿಕ್ ಸಿಂಗ್ ಅವರು ಗುರಿತಪ್ಪಿದ್ದು ಭಾರತಕ್ಕೆ ದುಬಾರಿಯಾಯಿತು.

ದುರ್ಗಮವಾದ ಪಾಕಿಸ್ತಾನದ ನಾಕೌಟ್ ಹಾದಿ • ಲಿಯಾಮ್‌ಗೆ 3 ವಿಕೆಟ್

ಬ್ರೂಕ್ ಶತಕ; ಸೆಮಿಗೆ ಇಂಗ್ಲೆಂಡ್

ಪಲ್ಲೆಕೆಲೆ (ಪಿಟಿಐ): ನಾಯಕ ಹ್ಯಾರಿ ಬ್ರೂಕ್ (100;51ಎ, 4x10, 6x4) ಅವರು ಆಕರ್ಷಕ ಶತಕ ಬಾರಿಸಿ ಇಂಗ್ಲೆಂಡ್ ತಂಡವನ್ನು ಟಿ20 ವಿಶ್ವಕಪ್ ಸೆಮಿಫೈನಲ್‌ಗೆ ಮುನ್ನಡೆಸಿದರು. ಇಂಗ್ಲೆಂಡ್ ಮಂಗಳವಾರ ನಡೆದ ಸೂಪರ್ ಎಂಟರ ಹಂತದ ಪಂದ್ಯದಲ್ಲಿ ಪಾಕಿಸ್ತಾನವನ್ನು ಎರಡು ವಿಕೆಟ್‌ಗಳಿಂದ ಸೋಲಿಸಿತು.

ಈ ಗೆಲುವಿನೊಂದಿಗೆ ಇಂಗ್ಲೆಂಡ್ (2016ರಿಂದ) ಟಿ20 ವಿಶ್ವಕಪ್‌ನಲ್ಲಿ ಸತತ ಐದನೇ ಬಾರಿ ನಾಲ್ಕರ ಘಟ್ಟ ಪ್ರವೇಶಿಸಿದ ದಾಖಲೆ ಬರೆಯಿತು. ಇನ್ನೊಂದೆಡೆ ಪಾಕ್ ತಂಡದ ಸೆಮಿಫೈನಲ್ ಹಾದಿ ದುರ್ಗಮವಾಯಿತು. ನ್ಯೂಜಿಲೆಂಡ್ ವಿರುದ್ಧ ಈ ತಂಡದ ಮೊದಲ ಪಂದ್ಯ ಮಳೆಗೆ ಕೊಚ್ಚಿಹೋಗಿತ್ತು. ಇಂಗ್ಲೆಂಡ್ ಮೊದಲ ಪಂದ್ಯದಲ್ಲಿ ಜಂಟಿ ಆತಿಥೇಯ ಶ್ರೀಲಂಕಾ ವಿರುದ್ಧ ಸುಲಭ ಜಯಗಳಿಸಿತ್ತು.

165 ರನ್‌ಗಳ ಗುರಿ ಎದುರಿಸಿದ ಇಂಗ್ಲೆಂಡ್ ಒಂದು ಹಂತದಲ್ಲಿ 58 ರನ್‌ಗಳಾಗುಷ್ಟರಲ್ಲಿ 4 ವಿಕೆಟ್ ಕಳೆದುಕೊಂಡು ಸಂಕಷ್ಟದಲ್ಲಿತ್ತು. ಈ ವೇಳೆ ಬ್ರೂಕ್, ಸ್ಯಾಮ್ ಕರನ್ (16) ಜೊತೆಗೂಡಿ ಐದನೇ ವಿಕೆಟ್‌ಗೆ ಕ್ಷಿಪ್ರಗತಿಯಲ್ಲಿ 45 ರನ್ ಸೇರಿಸಿದ್ದರಿಂದ ತಂಡ ಗಮನಾರ್ಹವಾಗಿ ಚೇತರಿಸಿತು. ನಂತರ ಇನ್ನೊಬ್ಬ ಆಲ್‌ರೌಂಡರ್ ವಿಲ್ ಜಾಕ್ಸ್ (28, 23 ಎಸೆತ) ಜೊತೆ 52 ರನ್‌ಗಳ ನಿರ್ಣಾಯಕ ಜೊತೆಯಾಟದಲ್ಲಿ ಪಾಲ್ಗೊಂಡಿದ್ದು ಪಂದ್ಯವನ್ನು ಇಂಗ್ಲೆಂಡ್ ಕಡೆ ವಾಲಿಸಿತು. ಟಿ20 ವಿಶ್ವಕಪ್‌ನಲ್ಲಿ ಶತಕ ದಾಖಲಿಸಿದ ಯಾವುದೇ ತಂಡದ ಮೊದಲ ನಾಯಕ ಎಂಬ ಹಿರಿಮೆಗೂ ಬ್ರೂಕ್ ಪಾತ್ರರಾದರು.

ಬ್ರೂಕ್ ನಿರ್ಗಮನದ ನಂತರ ಇಂಗ್ಲೆಂಡ್ ಎರಡು ವಿಕೆಟ್ ಬೇಗ ಕಳೆದುಕೊಂಡಿತು. ಕೊನೆಯಲ್ಲಿ ಜೋಫ್ರಾ ಆರ್ಚರ್ ಗೆಲುವಿನ ಬೌಂಡರಿ ಬಾರಿಸಿದರು. ಇಂಗ್ಲೆಂಡ್ ಐದು ಎಸೆತಗಳಿರುವಂತೆ 8 ವಿಕೆಟ್‌ಗೆ 166 ರನ್ ಗಳಿಸಿತು.

ಇದಕ್ಕೆ ಮೊದಲು ಟಾಸ್ ಗೆದ್ದು ಬ್ಯಾಟಿಂಗ್ ಮಾಡಿದ ಪಾಕ್, ಸಾಹಿಬ್‌ಝಾದ ಫರ್ಹಾನ್ ಅವರ 63 ರನ್‌ಗಳ (45 ಎಸೆತ) ನೆರವಿನಿಂದ 9 ವಿಕೆಟ್‌ಗೆ 164 ರನ್ ಗಳಿಸಿತು.

ಇಂಗ್ಲೆಂಡ್‌ನ ಸ್ಪಿನ್ನರ್‌ಗಳು ಪಾಕ್ ಇನಿಂಗ್ಸ್‌ನ ಬಹುಪಾಲು ಪರಿಣಾಮಕಾರಿಯಾಗಿದ್ದರು. ಇದರ ನಡುವೆ ಮಿಂಚಿದ ಫರ್ಹಾನ್ ಅವರ ಇನಿಂಗ್ಸ್‌ನಲ್ಲಿ 7 ಬೌಂಡರಿಗಳ ಜೊತೆ 2 ಸಿಕ್ಸರ್‌ಗಳಿದ್ದವು. ಎಡಗೈ ಸ್ಪಿನ್ನರ್ ಲಿಯಾಮ್ ಡಾಸನ್, ಇಂಗ್ಲೆಂಡ್ ಬೌಲರ್‌ಗಳ ಪೈಕಿ ಪ್ರಭಾವಿಯೆನಿಸಿ 24 ರನ್ನಿಗೆ 3 ವಿಕೆಟ್ ಪಡೆದರು. 18ನೇ ಓವರಿನಲ್ಲಿ ಅವರು ಸತತವಾಗಿ 2 ವಿಕೆಟ್‌ಗಳನ್ನು ಪಡೆದಿದ್ದರಿಂದ ಪಾಕ್‌ಗೆ 175ರ ಗಡಿ ದಾಟಲು ಸಾಧ್ಯವಾಗಲಿಲ್ಲ.

ಸಂಕ್ಷಿಪ್ತ ಸ್ಕೋರು: ಪಾಕಿಸ್ತಾನ: 20 ಓವರುಗಳಲ್ಲಿ 9 ವಿಕೆಟ್‌ಗೆ 164 (ಸಾಹಿಬ್‌ಝಾದ ಫರ್ಹಾನ್ 63, ಬಾಬರ್ ಆಜಂ 25, ಫಖರ್ ಜಮಾನ್ 25, ಜೋಫ್ರಾ ಆರ್ಚರ್ 32ಕ್ಕೆ2, ಜೇಮಿ ಓವರ್ಟನ್ 26ಕ್ಕೆ2, ಲಿಯಾಮ್ ಡಾಸನ್ 24ಕ್ಕೆ3); ಇಂಗ್ಲೆಂಡ್: 19.1 ಓವರುಗಳಲ್ಲಿ 8 ವಿಕೆಟ್‌ಗೆ 166 (ಹ್ಯಾರಿ ಬ್ರೂಕ್ 100, ವಿಲ್ ಜಾಕ್ಸ್ 28; ಶಾಹೀನ್ ಶಾ ಅಫ್ರೀದಿ 30ಕ್ಕೆ4, ಉಸ್ಮಾನ್ ತಾರಿಖ್ 31ಕ್ಕೆ2, ಮೊಹಮ್ಮದ್ ನವಾಜ್ 26ಕ್ಕೆ2)
ಪಂದ್ಯದ ಆಟಗಾರ: ಹ್ಯಾರಿ ಬ್ರೂಕ್.

ಟಿ20 ವಿಶ್ವಕಪ್‌ನಲ್ಲಿ ಅತಿ ವೇಗದ ಶತಕ (ಎಸೆತಗಳಲ್ಲಿ)

ಎಸೆತ	ಬ್ಯಾಟರ್	ತಂಡ	ಎದುರಾಳಿ	ತಾಣ	ವರ್ಷ
47	ಕ್ರಿಸ್ ಗೇಲ್	ವೆಸ್ಟ್ ಇಂಡೀಸ್	ಇಂಗ್ಲೆಂಡ್	ವಾಂಖೆಡೆ	2016
50	ಕ್ರಿಸ್ ಗೇಲ್	ವೆಸ್ಟ್ ಇಂಡೀಸ್	ದಕ್ಷಿಣ ಆಫ್ರಿಕಾ	ಜೋಬರ್ಗ್	2007
50	ಹ್ಯಾರಿ ಬ್ರೂಕ್	ಇಂಗ್ಲೆಂಡ್	ಪಾಕಿಸ್ತಾನ	ಪಲ್ಲೆಕೆಲೆ	2026
51	ಬ್ರೆಂಡನ್ ಮೆಕ್ಕಲಂ	ನ್ಯೂಜಿಲೆಂಡ್	ಬಾಂಗ್ಲಾದೇಶ	ಪಲ್ಲೆಕೆಲೆ	2012

ಸೂಪರ್ ಎಂಟರ ಹಂತದ ಅಂಕಪಟ್ಟಿ (ಎರಡನೇ ಗುಂಪು)

ತಂಡ	ಪಂದ್ಯ	ಜಯ	ಸೋಲು	ರದ್ದು	ಅಂಕ	ಎನ್‌ಆರ್‌ಆರ್
ಇಂಗ್ಲೆಂಡ್	2	2	0	0	4	1.491
ಪಾಕಿಸ್ತಾನ	2	0	1	1	1	-0.461
ನ್ಯೂಜಿಲೆಂಡ್	1	0	0	1	1	0.000
ಶ್ರೀಲಂಕಾ	1	0	1	0	0	-2.550

ಐಸಿಸಿ ಪುರುಷರ ಟಿ20 ವಿಶ್ವಕಪ್ 2026

ಸ್ಪಿನ್‌ಗೆ ಅಭಿಷೇಕ್ ಅಭ್ಯಾಸ

ಚೆನ್ನೈ (ಪಿಟಿಐ): ದಕ್ಷಿಣ ಆಫ್ರಿಕಾ ಕೈಲಿ ಟಿ20 ವಿಶ್ವಕಪ್ ಸೂಪರ್ ಎಂಟರ ಹಂತದಲ್ಲಿ ಮುಖಭಂಗ ಅನುಭವಿಸಿದ ನಂತರ ಭಾರತ ತಂಡದವರು, ಜಿಂಬಾಬ್ವೆ ಎದುರಿನ ಪಂದ್ಯಕ್ಕೆ ಸಜ್ಜಾಗಲು ಮಂಗಳವಾರ ಇಲ್ಲಿ ಹೊನಲು ಬೆಳಕಿನಡಿ ಅಭ್ಯಾಸದಲ್ಲಿ ತೊಡಗಿದರು.

ವಿಕೆಟ್ ಕೀಪರ್‌ಗಳಾದ ಇಶಾನ್ ಕಿಶನ್, ಸಂಜು ಸ್ಯಾಮ್ಸನ್ ಜೊತೆ, ಟೂರ್ನಿಯಲ್ಲಿ ಪರದಾಡುತ್ತಿರುವ ತಿಲಕ್ ವರ್ಮಾ, ನಾಯಕ ಸೂರ್ಯಕುಮಾರ್ ಯಾದವ್ ಅವರೂ ನೆಟ್ಸ್‌ಗಿಳಿದರು. ಕಿಶನ್, ಸಂಜು ಅವರಿಗೆ ಅರ್ಷದೀಪ್ ಸಿಂಗ್ ಮತ್ತು ಸ್ಥಳೀಯ ನೆಟ್ ಬೌಲರ್‌ಗಳು ಬೌಲಿಂಗ್ ಮಾಡಿದರು.

ಈ ಟೂರ್ನಿಯಲ್ಲಿ ರನ್ ಬರ ಎದುರಿಸಿರುವ 25 ವರ್ಷ ವಯಸ್ಸಿನ ಅಭಿಷೇಕ್ (0,0,0, 15) ಅವರು ಎರಡನೇ ಬ್ಯಾಚಿನಲ್ಲಿ, ಹಾರ್ದಿಕ್ ಪಾಂಡ್ಯ ಮತ್ತು ಶಿವಂ ದುಬೆ ಜೊತೆ ಅಭ್ಯಾಸಕ್ಕೆ ಇಳಿದರು. ಅಭಿಷೇಕ್ ಶರ್ಮಾ ಅವರು ಆಫ್ ಸ್ಪಿನ್ ಎಸೆತಗಳನ್ನು ಎದುರಿಸಿದರು. ಅವರ ದೌರ್ಬಲ್ಯ ಅರಿತ ಎದುರಾಳಿ ತಂಡಗಳು ಆರಂಭದಲ್ಲೇ ಸ್ಪಿನ್ನರ್‌ಗಳನ್ನು ದಾಳಿಗಿಳಿಸಿ ಯಶಸ್ಸು ಕಂಡಿದ್ದವು.

ಅಕ್ಷರ್ ಅಭ್ಯಾಸ: ಎಡಗೈ ಸ್ಪಿನ್ನರ್ ಅಕ್ಷರ್ ಪಟೇಲ್ ಅವರು ಮಂಗಳವಾರ ಸುಮಾರು ಅರ್ಧ ಗಂಟೆ ನೆಟ್ಸ್‌ನಲ್ಲಿ ಕೌಶಲ ಹುರಿಗೊಳಿಸಿದರು. ಇದು– ಜಿಂಬಾಬ್ವೆ ಎದುರಿನ ಪಂದ್ಯದಲ್ಲಿ ಆಡುವ 11ರಲ್ಲಿ ಅವರು ಮರಳುವ ಸಾಧ್ಯತೆಗೆ ಉತ್ತರ ನೀಡುವ ರೀತಿಯಲ್ಲಿತ್ತು.

ದಕ್ಷಿಣ ಆಫ್ರಿಕಾ ಎದುರು ಅಹಮದಾಬಾದಿನಲ್ಲಿ ನಡೆದ ಸೂಪರ್ ಎಂಟರ ಹಂತದ ಮೊದಲ ಪಂದ್ಯದಲ್ಲಿ ವಾಷಿಂಗ್ಟನ್ ಸುಂದರ್ ಅವರಿಗೆ ಅವಕಾಶ ನೀಡಿ, ಉಪ ನಾಯಕ ಅಕ್ಷರ್ ಅವರನ್ನು ಕೈಬಿಡಲಾಗಿತ್ತು. ಇದು ಕ್ರಿಕೆಟ್ ಅಭಿಮಾನಿಗಳ ಅಚ್ಚರಿಗೆ ಕಾರಣವಾಗಿತ್ತು.

ಅಕ್ಷರ್ ಪಟೇಲ್ 'ಎಕ್ಸ್' ಚಿತ್ರ

ಹರಿಣಗಳ ಪಡೆಯಲ್ಲಿ ಬೀಸಾಟವಾಡುವ ಎಡಗೈ ಬ್ಯಾಟರ್‌ಗಳಾದ ಕ್ವಿಂಟನ್ ಡಿಕಾಕ್ ಮತ್ತು ರಿಕೆಲ್ಟನ್ ಅವರನ್ನು ಪವರ್‌ಪ್ಲೇ ಅವಧಿಯಲ್ಲಿ ನಿಯಂತ್ರಿಸಲು ವಾಷಿಂಗ್ಟನ್ ಅಸ್ತ್ರವಾಗಬಲ್ಲರು ಎಂಬ ಉದ್ದೇಶ ಇದರ ಹಿಂದಿತ್ತು. ಆದರೆ ಈ ವಿಕೆಟ್‌ಗಳನ್ನು ವೇಗದ ಬೌಲರ್ ಬೂಮ್ರಾ ಪಡೆದರು. ಸುಂದರ್ ಎರಡು ಓವರ್ ಅಷ್ಟೇ ಮಾಡಿದರು. ಭಾರತ 76 ರನ್‌ಗಳಿಂದ ಪಂದ್ಯ ಸೋತಿತ್ತು.

ಮುಂಬೈ ಸೆಮಿಗೆ

ಮುಂಬೈ (ಪಿಟಿಐ): ಕರ್ನಾಟಕ ವಿರುದ್ಧ 425 ರನ್‌ಗಳ ಮೊದಲ ಇನಿಂಗ್ಸ್ ಮುನ್ನಡೆ ಆಧಾರದಲ್ಲಿ ಮುಂಬೈ ತಂಡ ಕರ್ನಲ್ ಸಿ.ಕೆ.ನಾಯ್ಡು ಟ್ರೋಫಿ (23 ವರ್ಷದೊಳಗಿನವರ) ಕ್ರಿಕೆಟ್ ಟೂರ್ನಿಯ ಸೆಮಿಫೈನಲ್ ತಲುಪಿತು. ಈ ಕ್ವಾರ್ಟರ್ ಫೈನಲ್ ಪಂದ್ಯದ ಕೊನೆಯ ದಿನವಾದ ಮಂಗಳವಾರ ಸೋಲಿನ ಹಾದಿಯಲ್ಲಿದ್ದ ಕರ್ನಾಟಕ ಕೊನೆಗೂ ಹೋರಾಡಿ ಡ್ರಾ ಮಾಡಿಕೊಂಡಿತಷ್ಟೇ.

ಮಾ. 1 ರಿಂದ 4ವರೆಗೆ ನಡೆಯುವ ಸೆಮಿಫೈನಲ್‌ನಲ್ಲಿ ಮುಂಬೈ, ಮಹಾರಾಷ್ಟ್ರ ವಿರುದ್ಧ ಆಡಲಿದೆ. ಛತ್ತೀಸಗಢ ತಂಡವು ಇನ್ನೊಂದು ಸೆಮಿಫೈನಲ್‌ನಲ್ಲಿ ತಮಿಳುನಾಡು ವಿರುದ್ಧ ಆಡಲಿದೆ.

ಕರ್ನಾಟಕದ 240 ರನ್‌ಗಳಿಗೆ ಉತ್ತರವಾಗಿ ಸೋಮವಾರ 7 ವಿಕೆಟ್‌ಗೆ 616 ರನ್ ಗಳಿಸಿದ್ದ ಮುಂಬೈ ತಂಡ ಮೊದಲ ಇನಿಂಗ್ಸ್‌ನಲ್ಲಿ 665 ರನ್‌ಗಳಿಗೆ (210 ಓವರ್) ಆಲೌಟ್ ಆಯಿತು.

ಕರ್ನಾಟಕ ಒಂದು ಹಂತದಲ್ಲಿ 26 ಓವರುಗಳಾಗುವಷ್ಟರಲ್ಲಿ 81 ರನ್‌ಗಳಿಗೆ 7 ವಿಕೆಟ್ ಗಳಿಸಿ ಸೋಲಿನ ಅಪಾಯದಲ್ಲಿತ್ತು. ಧ್ರುವ್ ಪ್ರಭಾಕರ್ (ಔಟಾಗದೇ 31) ಮತ್ತು ಸಮಿತ್ ದ್ರಾವಿಡ್ (ಔಟಾಗದೇ 15) ಮುರಿಯದ ಎಂಟನೇ ವಿಕೆಟ್‌ಗೆ 29 ರನ್ ಸೇರಿಸಿ, ತಂಡ ಆಲೌಟ್ ಆಗುವುದನ್ನು ತಪ್ಪಿಸಿದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಕರ್ನಾಟಕ: 240; ಮುಂಬೈ 210 ಓವರುಗಳಲ್ಲಿ 665; ಎರಡನೇ ಇನಿಂಗ್ಸ್: ಕರ್ನಾಟಕ: 48 ಓವರುಗಳಲ್ಲಿ 7 ವಿಕೆಟ್‌ಗೆ 110 (ಧ್ರುವ್ ಪ್ರಭಾಕರ್ ಔಟಾಗದೇ 31).

ಆಸ್ಟ್ರೇಲಿಯಾಗೆ ಅಧಿಕಾರಯುತ ಜಯ

ಬ್ರಿಸ್ಬೇನ್ (ಪಿಟಿಐ): ವಿಶ್ವ ಚಾಂಪಿಯನ್ ಭಾರತ ಮಹಿಳಾ ತಂಡವನ್ನು 6 ವಿಕೆಟ್‌ಗಳಿಂದ ಮಣಿಸಿದ ಅಲಿಸಾ ಹೀಲಿ ಪಡೆಯು ಮೂರು ಪಂದ್ಯಗಳ ಏಕದಿನ ಸರಣಿಯಲ್ಲಿ 1–0 ಮುನ್ನಡೆ ಗಳಿಸಿತು.

ಅಲನ್ ಬಾರ್ಡರ್ ಫೀಲ್ಡ್‌ನಲ್ಲಿ ಮಂಗಳವಾರ ನಡೆದ ಮೊದಲ ಪಂದ್ಯದಲ್ಲಿ ಟಾಸ್ ಗೆದ್ದ ಭಾರತ ತಂಡದ ನಾಯಕಿ ಹರ್ಮನ್‌ಪ್ರೀತ್ ಕೌರ್ ಬ್ಯಾಟಿಂಗ್ ಆಯ್ದುಕೊಂಡರು. ಆದರೆ, ಸ್ಪಿನ್ನರ್ ಆ್ಯಷ್ಲೆ ಗಾರ್ಡನರ್ (33ಕ್ಕೆ3) ಹಾಗೂ ಮಧ್ಯಮ ವೇಗಿ ಮೆಗನ್ ಶೂಟ್ (42ಕ್ಕೆ2) ಅವರ ಪರಿಣಾಮಕಾರಿ ಬೌಲಿಂಗ್ ಎದುರು ಭಾರತ 48.3 ಓವರ್‌ಗಳಲ್ಲಿ 214 ರನ್‌ಗಳಿಗೆ ಕುಸಿಯಿತು.

ಗುರಿ ಬೆನ್ನಟ್ಟಿದ ಆತಿಥೇಯ ತಂಡಕ್ಕೆ ನಾಯಕಿ ಹೀಲಿ (50; 70ಎ, 4x4) ಹಾಗೂ ಫೋಬಿ ಲಿಚ್‌ಫೀಲ್ಡ್ (32; 32ಎ, 4x6) ಉತ್ತಮ ಆರಂಭ ಒದಗಿಸಿದರು. ಸ್ಪಿನ್ನರ್ ಶ್ರೀಚರಣಿ ಅವರು ಇನಿಂಗ್ಸ್‌ನ 10ನೇ ಓವರ್‌ನಲ್ಲಿ ಲಿಚ್‌ಫೀಲ್ಡ್ ಹಾಗೂ ಜಾರ್ಜಿಯಾ ವಾಲ್ (0; 1ಎ) ಅವರ ವಿಕೆಟ್ ಗಳಿಸಿದರು. ಆದರೆ, ವಿಕೆಟ್ ಕೀಪರ್ ಬೆತ್ ಮೂನಿ (76; 79ಎ, 4x5, 6x2) ಅವರೊಂದಿಗೆ 64 ರನ್ ಜೊತೆಯಾಟವಾಡಿದ ಹೀಲಿ ಪಂದ್ಯವನ್ನು ಆಸ್ಟ್ರೇಲಿಯಾದ ನಿಯಂತ್ರಣಕ್ಕೆ ತಂದರು.

ಹೀಲಿ ಔಟಾದ ಬಳಿಕ ಕ್ರೀಸ್‌ಗಿಳಿದ ಅನ್ನಾಬೆಲ್ ಸದರ್ಲೆಂಡ್ 44 ಎಸೆತಗಳಲ್ಲಿ ನಾಲ್ಕು ಬೌಂಡರಿ ಹಾಗೂ ಒಂದು ಸಿಕ್ಸರ್ ಸಹಿತ ಅಜೇಯ 48 ರನ್ ಸೂರೆ ಮಾಡಿದರು. ಆಸ್ಟ್ರೇಲಿಯಾ ತಂಡವು 38.2 ಓವರ್‌ಗಳಲ್ಲಿ 4 ವಿಕೆಟ್‌ಗೆ 214 ರನ್ ಪೇರಿಸಿ ಅಧಿಕಾರಯುತ ಜಯ ಸಾಧಿಸಿತು.

ಗಾರ್ಡನರ್

ಇದಕ್ಕೆ ಮೊದಲು, ಆಸ್ಟ್ರೇಲಿಯಾ ಬೌಲರ್‌ಗಳ ಸಾಂಘಿಕ ದಾಳಿಯ ಎದುರು ಅಲ್ಪ ಮೊತ್ತಕ್ಕೆ ಕುಸಿಯುವ ಅಪಾಯದಲ್ಲಿದ್ದ ಭಾರತ ತಂಡಕ್ಕೆ ಉಪನಾಯಕಿ ಸ್ಮೃತಿ ಮಂದಾನ (58; 68ಎ, 4x7) ಹಾಗೂ ಹರ್ಮನ್‌ಪ್ರೀತ್ (53; 84ಎ, 4x3) ಆಸರೆಯಾದರು. ಕೊನೆಯಲ್ಲಿ ಕಶ್ವಿ ಗೌತಮ್ 44 ಎಸೆತಗಳಲ್ಲಿ 43 ರನ್ ಗಳಿಸಿ, ತಂಡದ ಮೊತ್ತ 200ರ ಗಡಿ ದಾಟಲು ಕಾರಣರಾದರು. ಎರಡನೇ ಪಂದ್ಯ ಹೋಬಾರ್ಟ್‌ನಲ್ಲಿ ಶುಕ್ರವಾರ ನಡೆಯಲಿದೆ.

ಸಂಕ್ಷಿಪ್ತ ಸ್ಕೋರು: ಭಾರತ: 48.3 ಓವರ್ ಗಳಲ್ಲಿ 214 (ಸ್ಮೃತಿ ಮಂಧಾನ 58, ಹರ್ಮನ್‌ಪ್ರೀತ್ ಕೌರ್ 53, ಕಶ್ವಿ ಗೌತಮ್ 43; ಆ್ಯಷ್ಲೆ ಗಾರ್ಡನರ್ 33ಕ್ಕೆ3, ಮೆಗನ್ ಶೂಟ್ 42ಕ್ಕೆ2). ಆಸ್ಟ್ರೇಲಿಯಾ: 38.2 ಓವರ್‌ಗಳಲ್ಲಿ 4 ವಿಕೆಟ್‌ಗೆ 214 (ಅಲಿಸಾ ಹೀಲಿ 50, ಬೆತ್ ಮೂನಿ 76, ಅನ್ನಾಬೆಲ್ ಸದರ್ಲೆಂಡ್ ಔಟಾಗದೇ 48; ಶ್ರೀಚರಣಿ 41ಕ್ಕೆ2). ಪಂದ್ಯದ ಆಟಗಾರ್ತಿ: ಬೆತ್ ಮೂನಿ.

ಕುಟುಂಬ ತುರ್ತು: ರಿಂಕು ಸಿಂಗ್ ತವರಿಗೆ

ಚೆನ್ನೈ (ಪಿಟಿಐ): ಮಧ್ಯಮ ಕ್ರಮಾಂಕದ ಬ್ಯಾಟರ್ ರಿಂಕು ಸಿಂಗ್ ಅವರು ಮಂಗಳವಾರ, ಕುಟುಂಬದ ತುರ್ತು ಕಾರಣ ದಿಢೀರನೇ ತವರಿಗೆ ಮರಳಿದ್ದಾರೆ ಎಂದು ಬಿಸಿಸಿಐ ಮೂಲಗಳು ತಿಳಿಸಿವೆ.

ರಿಂಕು ಅವರು ಎಂ.ಎ. ಚಿದಂಬರಂ ಕ್ರೀಡಾಂಗಣದಲ್ಲಿ ಭಾರತ ತಂಡದ ತಾಲೀಮಿನಲ್ಲಿ ಕಾಣಲಿಲ್ಲ. ಉಳಿದ ಆಟಗಾರರು ಅಭ್ಯಾಸದಲ್ಲಿ ತೊಡಗಿದ್ದರು. ರಿಂಕು ಅವರ ತಂದೆ ಖಾನಚಂದ್ ಸಿಂಗ್ ಅವರನ್ನು ಗಂಭೀರ ಸ್ಥಿತಿಯಲ್ಲಿ ಗ್ರೇಟರ್ ನೊಯ್ಡಾದ ಆಸ್ಪತ್ರೆಗೆ ದಾಖಲಿಸಲಾಗಿದೆ. ಹೀಗಾಗಿ ಉತ್ತರಪ್ರದೇಶ ಅಲಿಗಢದ ರಿಂಕು ತವರಿಗೆ ಧಾವಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಇಂಗ್ಲೆಂಡ್, ವೇಲ್ಸ್ ಆತಿಥ್ಯದಲ್ಲಿ ಜೂನ್ 12ರಿಂದ ಐಸಿಸಿ ಮಹಿಳಾ ಟಿ20 ವಿಶ್ವಕಪ್

ಭಾರತಕ್ಕೆ ಪಾಕ್ ಮೊದಲ ಎದುರಾಳಿ

ನವದೆಹಲಿ: ಇಂಗ್ಲೆಂಡ್ ಮತ್ತು ವೇಲ್ಸ್ ಆತಿಥ್ಯದಲ್ಲಿ ಇದೇ ಜೂನ್ 12ರಂದು ಪ್ರಾರಂಭವಾಗುವ ಐಸಿಸಿ ಮಹಿಳಾ ಟಿ20 ವಿಶ್ವಕಪ್‌ನ 10ನೇ ಆವೃತ್ತಿಯಲ್ಲಿ ಒಟ್ಟು 12 ತಂಡಗಳು ಪ್ರಶಸ್ತಿಗಾಗಿ ಪೈಪೋಟಿ ನಡೆಸಲಿವೆ. ಭಾರತ ತಂಡವು ಪಾಕಿಸ್ತಾನ ವಿರುದ್ಧ ಅಭಿಯಾನ ಆರಂಭಿಸಲಿದೆ.

ಟೂರ್ನಿಯ ಸಂಪೂರ್ಣ ವೇಳಾಪಟ್ಟಿಯನ್ನು ಮಂಗಳವಾರ ಅಂತರರಾಷ್ಟ್ರೀಯ ಕ್ರಿಕೆಟ್ ಮಂಡಳಿ (ಐಸಿಸಿ) ಪ್ರಕಟಿಸಿದೆ.

ಜೂನ್ 12ರಂದು ನಡೆಯುವ ಉದ್ಘಾಟನಾ ಪಂದ್ಯದಲ್ಲಿ ಆತಿಥೇಯ ಇಂಗ್ಲೆಂಡ್ ತಂಡವು ಶ್ರೀಲಂಕಾ ವಿರುದ್ಧ ಸೆಣಸಲಿದೆ. ಜುಲೈ 5ರಂದು ಲಾರ್ಡ್ಸ್‌ನಲ್ಲಿ ಫೈನಲ್ ಪಂದ್ಯ ನಡೆಯಲಿದೆ ಎಂದು ಐಸಿಸಿ ಸಿಇಒ ಸಂಜೋಗ್ ಗುಪ್ತಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಟೂರ್ನಿಯಲ್ಲಿ ಇದೇ ಮೊದಲ ಬಾರಿ 12 ತಂಡಗಳು ಸ್ಪರ್ಧಿಸಲಿದೆ. ಈ ಹಿಂದಿನ ಆವೃತ್ತಿಯಲ್ಲಿ (2024) 10 ತಂಡಗಳು ಸ್ಪರ್ಧಿಸಿದ್ದು, ನ್ಯೂಜಿಲೆಂಡ್ ತಂಡ ಚಾಂಪಿಯನ್ ಆಗಿತ್ತು. ಈ ಬಾರಿ ಜೂನ್ 28ರವರೆಗೆ ಗುಂಪು ಹಂತದ ಪಂದ್ಯಗಳು, 30ರಂದು ಮತ್ತು ಜುಲೈ 2ರಂದು ಸೆಮಿಫೈನಲ್ ಪಂದ್ಯಗಳು (ಓವಲ್‌ನಲ್ಲಿ) ನಿಗದಿಯಾಗಿವೆ.

ನೇಪಾಳದಲ್ಲಿ ಕಳೆದ ತಿಂಗಳು ನಡೆದ ಅರ್ಹತಾ ಸುತ್ತಿನಲ್ಲಿ ಬಾಂಗ್ಲಾದೇಶ, ಐರ್ಲೆಂಡ್, ಸ್ಕಾಟ್ಲೆಂಡ್ ಮತ್ತು ನೆದರ್ಲೆಂಡ್ಸ್ ವಿಶ್ವಕಪ್ ಟೂರ್ನಿಗೆ ಟಿಕೆಟ್ ಕಾಯ್ದಿರಿಸಿದ ಅಂತಿಮ ನಾಲ್ಕು ತಂಡಗಳಾಗಿವೆ.

ICC WOMEN'S T20 WORLD CUP ENGLAND & WALES 2026

ಟಿ20 ಮಹಿಳಾ ವಿಶ್ವಕಪ್ ಭಾರತದ ವೇಳಾಪಟ್ಟಿ

ದಿನಾಂಕ	ಎದುರಾಳಿ	ತಾಣ
ಜೂನ್ 14	ಪಾಕಿಸ್ತಾನ	ಎಜ್‌ಬಾಸ್ಟನ್
ಜೂನ್ 17	ನೆದರ್ಲೆಂಡ್ಸ್	ಹೆಡಿಂಗ್ಲೆ
ಜೂನ್ 21	ದಕ್ಷಿಣ ಆಫ್ರಿಕಾ	ಓಲ್ಡ್ ಟ್ರಾಫರ್ಡ್
ಜೂನ್ 25	ಬಾಂಗ್ಲಾದೇಶ	ಓಲ್ಡ್ ಟ್ರಾಫರ್ಡ್
ಜೂನ್ 28	ಆಸ್ಟ್ರೇಲಿಯಾ	ಲಾರ್ಡ್ಸ್

ಜೂನ್ 14ಕ್ಕೆ ಭಾರತ ಮತ್ತು ಪಾಕ್ ತಂಡಗಳು ಎಜ್‌ಬಾಸ್ಟನ್‌ನಲ್ಲಿ ಮುಖಾಮುಖಿಯಾಗಲಿವೆ. ಭಾರತವು ಗುಂಪು ಹಂತದಲ್ಲಿ ಒಟ್ಟು ನಾಲ್ಕು ಪಂದ್ಯಗಳನ್ನು ಆಡಲಿದೆ.

ಎ ಗುಂಪಿನಲ್ಲಿ ಭಾರತ, ಆಸ್ಟ್ರೇಲಿಯಾ, ಪಾಕಿಸ್ತಾನ, ದಕ್ಷಿಣ ಆಫ್ರಿಕಾ, ಬಾಂಗ್ಲಾದೇಶ ಮತ್ತು ನೆದರ್ಲೆಂಡ್ಸ್ ತಂಡಗಳು ಸ್ಥಾನ ಪಡೆದಿವೆ. ಬಿ ಗುಂಪಿನಲ್ಲಿ ಇಂಗ್ಲೆಂಡ್, ನ್ಯೂಜಿಲೆಂಡ್, ಶ್ರೀಲಂಕಾ, ವೆಸ್ಟ್ ಇಂಡೀಸ್, ಐರ್ಲೆಂಡ್ ಮತ್ತು ಸ್ಕಾಟ್ಲೆಂಡ್ ತಂಡಗಳಿವೆ.

ಡಚ್ ತಂಡವು ಐಸಿಸಿ ಮಹಿಳಾ ಟಿ20 ವಿಶ್ವಕಪ್‌ನಲ್ಲಿ ಮೊದಲ ಸಲ ಅವಕಾಶ ಪಡೆದಿದೆ. ಆ ತಂಡವು ಬಾಂಗ್ಲಾದೇಶದ ವಿರುದ್ಧ ಅಭಿಯಾನವನ್ನು ಆರಂಭಿಸಲಿದೆ.